# ಧಮ್ಮಪದದಲ್ಲಿ ನೈತಿಕ ಮೌಲ್ಯಗಳು–ಒಂದು ವಿಮರ್ಶಾತ್ಮಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸುತ್ತಿರುವ
ಸಂಶೋಧನಾ ಮಹಾಪ್ರಬಂಧ


**ಸಂಶೋಧಕರು**

**ದಿವಾಕರ ಟಿ.ಎಸ್.** ಎಂ.ಎ., ಬಿ.ಇಡಿ.

ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ, ಮೈಸೂರು–570 006

**ಮಾರ್ಗದರ್ಶಕರು**

**ಡಾ.ಎಚ್.ಎಲ್.ಚಂದ್ರಶೇಖರ** ಎಂ.ಎ., ಪಿಎಚ್.ಡಿ.

ಸಹ ಪ್ರಾಧ್ಯಾಪಕರು (ನಿವೃತ್ತ)
ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ, ಮೈಸೂರು–570 006



## ತತ್ತ್ವಶಾಸ್ತ್ರ ಅಧ್ಯಯನ ವಿಭಾಗ

**ಮೈಸೂರು ವಿಶ್ವವಿದ್ಯಾನಿಲಯ**

ಮಾನಸ ಗಂಗೋತ್ರಿ, ಮೈಸೂರು–570 006

**2020**

# ವಿಷಯಾನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ | ಪುಟಸಂಖ್ಯೆ |
|---|---|---|
| 1 | ಸಂಶೋಧಕರ ಪ್ರಮಾಣ ಪತ್ರ | i |
| 2 | ಡಾಕ್ಟೊರಲ್ ಕಮಿಟಿ ದೃಢೀಕರಣ ಪತ್ರ | ii |
| 3 | ಮಾರ್ಗದರ್ಶಕರ ಪ್ರಮಾಣ ಪತ್ರ | iii |
| 4 | ಕೃತಜ್ಞತೆಗಳು | iv-v |
| 5 | ಪರಿವಿಡಿ | vi-viii |
| 6 | ಅಧ್ಯಾಯ–1 ಪೀಠಿಕೆ | 1–10 |
| 7 | ಅಧ್ಯಾಯ–2 ಬುದ್ಧನ ಜೀವನ ಮತ್ತು ವ್ಯಕ್ತಿತ್ವ | 11–26 |
| 8 | ಅಧ್ಯಾಯ–3 ಮೌಲ್ಯ ಪರಿಕಲ್ಪನೆ – ಒಂದು ನೋಟ | 27–45 |
| 9 | ಅಧ್ಯಾಯ–4 ಧಮ್ಮಪದ ಒಂದು ಸ್ಥೂಲ ನೋಟ | 46–74 |
| 10 | ಅಧ್ಯಾಯ–5 ಪ್ರಾಚೀನ ಮತ್ತು ಅರ್ವಾಚೀನ ಬೌದ್ಧಧರ್ಮಗಳು–ಒಂದು ಸ್ಥೂಲ ಪರಿಚಯ | 75–105 |
| 11 | ಅಧ್ಯಾಯ–6 ಧಮ್ಮಪದದ ನೈತಿಕ ಅಂಶಗಳು | 106–121 |
| 12 | ಅಧ್ಯಾಯ–7 ನೈತಿಕ ಅಂಶಗಳು–ಅಹಿಂಸೆ ಮತ್ತು ಇತರ ಮೌಲ್ಯಗಳು | 122–141 |
| 13 | ಅಧ್ಯಾಯ–8 ನೈತಿಕ ಅಂಶಗಳು–ಆತ್ಮನಿಗ್ರಹ | 142–171 |
| 14 | ಅಧ್ಯಾಯ–9 ನೈತಿಕ ಅಂಶಗಳು–ಅಪ್ರಮಾದ | 172–196 |
| 15 | ಅಧ್ಯಾಯ–10 ಸಂಸಾರ ಮತ್ತು ವೈರಾಗ್ಯ | 197–207 |
| 16 | ಅಧ್ಯಾಯ–11 ಅರಿಹಂತನ ಲಕ್ಷಣಗಳು | 208–246 |
| 17 | ಅಧ್ಯಾಯ–12 ಉಪಸಂಹಾರ | 247–263 |
| | ಗ್ರಂಥಋಣ | 264–271 |

# ಸಂಶೋಧಕರ ಪ್ರಮಾಣ ಪತ್ರ

**ಡಾ.ಎಚ್.ಎಲ್.ಚಂದ್ರಶೇಖರ**, ಸಹ ಪ್ರಾಧ್ಯಾಪಕರು (ನಿವೃತ್ತ), ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ **ದಿವಾಕರ ಟಿ.ಎಸ್.** ಆದ ನಾನು **"ಧಮ್ಮಪದದಲ್ಲಿ ನೈತಿಕ ಮೌಲ್ಯಗಳು– ಒಂದು ವಿಮರ್ಶಾತ್ಮಕ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದೇನೆ. ಈ ಪಿಎಚ್.ಡಿ. ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದಿಂದ ರಚಿಸಲ್ಪಟ್ಟುದ್ದಾಗಿದ್ದು, ಈ ಪ್ರಬಂಧವನ್ನು ಪೂರ್ಣವಾಗಿಯಾಗಲೀ, ಭಾಗಶಃವಾಗಿಯಾಗಲೀ ಈ ಮೊದಲು ಯಾವುದೇ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್., ಪಿಎಚ್.ಡಿ. ಅಥವಾ ಇನ್ನಾವುದೇ ತತ್ಸಮಾನ ಪದವಿಗಾಗಿ ಸಲ್ಲಿಸಿಲ್ಲವೆಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ಮೈಸೂರು

**ದಿವಾಕರ ಟಿ.ಎಸ್.**
ಸಂಶೋಧಕರು

ದಿನಾಂಕ:

**ಡಾ.ಎಚ್.ಎಲ್.ಚಂದ್ರಶೇಖರ**
ಮಾರ್ಗದರ್ಶಕರು

**ಡಾ.ಎಸ್.ವೆಂಕಟೇಶ್**
ಅಧ್ಯಕ್ಷರು

# ಡಾಕ್ಟೊರಲ್ ಕಮಿಟಿ ದೃಢೀಕರಣ ಪತ್ರ

ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧಕರಾದ **ದಿವಾಕರ ಟಿ.ಎಸ್.** ರವರು **"ಧಮ್ಮಪದದಲ್ಲಿ ನೈತಿಕ ಮೌಲ್ಯಗಳು–ಒಂದು ವಿಮರ್ಶಾತ್ಮಕ ಅಧ್ಯಯನ"** ಎಂಬ ವಿಷಯವನ್ನು ಕುರಿತು ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಆ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದರು. ಈ ಪ್ರಬಂಧದ ಬಗ್ಗೆ ಬಾಹ್ಯತಜ್ಞರು ಸೂಚಿಸಿದ್ದ ಕೆಲವು ತಿದ್ದುಪಡಿಗಳನ್ನು **ದಿವಾಕರ ಟಿ.ಎಸ್.** ರವರು ಪ್ರಸ್ತುತ ಪ್ರಬಂಧದಲ್ಲಿ ಸರಿಪಡಿಸಿರುತ್ತಾರೆಂದು ಡಾಕ್ಟೊರಲ್ ಕಮಿಟಿ ಈ ಮೂಲಕ ದೃಢೀಕರಿಸುತ್ತದೆ.

| **ಡಾಕ್ಟೊರಲ್ ಕಮಿಟಿ ಸದಸ್ಯರು** | **ಸಹಿ** |
|---|---|

1. **ಡಾ.ಎಸ್.ವೆಂಕಟೇಶ್**
   ಅಧ್ಯಕ್ಷರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
   ಮಾನಸಗಂಗೋತ್ರಿ, ಮೈಸೂರು

2. **ಡಾ.ಎಂ.ಡ್ಯಾನಿಯಲ್**
   ಸಹಾಯಕ ಪ್ರಾಧ್ಯಾಪಕರು
   ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
   ಮಾನಸಗಂಗೋತ್ರಿ, ಮೈಸೂರು

3. **ಡಾ.ಎಚ್.ಎಲ್.ಚಂದ್ರಶೇಖರ**
   ಸಹ ಪ್ರಾಧ್ಯಾಪಕರು (ನಿವೃತ್ತ)
   ಡಾಕ್ಟೊರಲ್ ಕಮಿಟಿ ಸದಸ್ಯರು
   ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
   ಮಾನಸಗಂಗೋತ್ರಿ, ಮೈಸೂರು

**ಡಾ.ಎಚ್.ಎಲ್.ಚಂದ್ರಶೇಖರ**
ಅಧ್ಯಕ್ಷರು
ಡಾಕ್ಟೊರಲ್ ಕಮಿಟಿ

ಸ್ಥಳ : ಮಾನಸ ಗಂಗೋತ್ರಿ
ದಿನಾಂಕ :

**ಡಾ.ಎಚ್.ಎಲ್.ಚಂದ್ರಶೇಖರ** ಎಂ.ಎ.,ಪಿಎಚ್.ಡಿ.
ಸಹ ಪ್ರಾಧ್ಯಾಪಕರು (ನಿವೃತ್ತ) ಮತ್ತು ಮಾರ್ಗದರ್ಶಕರು
ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು – 570 006.

---

# ಮಾರ್ಗದರ್ಶಕರ ಪ್ರಮಾಣ ಪತ್ರ

ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧಕರಾದ **ದಿವಾಕರ ಟಿ.ಎಸ್.** ರವರು ನನ್ನ ಮಾರ್ಗದರ್ಶನದಲ್ಲಿ **"ಧಮ್ಮಪದದಲ್ಲಿ ನೈತಿಕ ಮೌಲ್ಯಗಳು–ಒಂದು ವಿಮರ್ಶಾತ್ಮಕ ಅಧ್ಯಯನ"** ಎಂಬ ವಿಷಯವನ್ನು ಕುರಿತು ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಆ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧವು ಇವರ ಸ್ವಂತ ಪರಿಶ್ರಮದಿಂದ ರಚಿಸಲ್ಪಟ್ಟುದ್ದಾಗಿದ್ದು, ಅದನ್ನು ಅವರು ಪೂರ್ಣವಾಗಿಯಾಗಲೀ, ಭಾಗಶಃವಾಗಿಯಾಗಲೀ ಈ ಮೊದಲು ಎಂ.ಫಿಲ್., ಪಿಎಚ್.ಡಿ. ಅಥವಾ ತತ್ಸಮಾನ ಪದವಿಗಾಗಿ ಇನ್ನಾವುದೇ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲವೆಂದೂ ಹಾಗೂ ಅವರು 2012ರ ಜೂನ್ ತಿಂಗಳಲ್ಲಿ ನಡೆದ ಕೋರ್ಸ್‌ವರ್ಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಮಾನಸ ಗಂಗೋತ್ರಿ

**ಡಾ.ಎಚ್.ಎಲ್.ಚಂದ್ರಶೇಖರ**
ಮಾರ್ಗದರ್ಶಕರು

ದಿನಾಂಕ:

# ಕೃತಜ್ಞತೆಗಳು

ಮೊದಲಿಗೆ ನನಗೆ ಸಂಶೋಧನೆಯನ್ನು ಮಾಡಲು ಅವಕಾಶ ಮಾಡಿಕೊಟ್ಟಂತಹ ಜ್ಞಾನದೇಗುಲ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನನ್ನ ತುಂಬುಹೃದಯದ ಅನಂತ ನಮನಗಳು. ನನ್ನ ಸಂಶೋಧನೆಗೆ ರಾಷ್ಟ್ರೀಯ ಶಿಷ್ಯವೇತನವನ್ನು ನೀಡಿದ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೂ ನಾನು ಆಭಾರಿಯಾಗಿದ್ದೇನೆ.

ಮೈಸೂರು ವಿಶ್ವವಿದ್ಯಾನಿಲಯದ ಗೌರವಾನ್ವಿತ ಕುಲಪತಿಗಳು, ಕುಲಸಚಿವರು (ಆಡಳಿತ) ಹಾಗೂ ಕುಲಸಚಿವರು (ಪರೀಕ್ಷಾಂಗ) – ಇವರೆಲ್ಲರಿಗೂ ನನ್ನ ಅನಂತ ಕೃತಜ್ಞತೆಗಳು.

ಸಂಶೋಧನಾಕಾರ್ಯದಲ್ಲಿ ನನಗೆ ವಿಷಯದಲ್ಲಿ ಆಸಕ್ತಿ ಮೂಡಿಸಿ ಪ್ರೀತಿ ವಾತ್ಸಲ್ಯದಿಂದ ನನ್ನ ಎಲ್ಲ ತಪ್ಪುಗಳನ್ನೂ ತಿದ್ದಿ ಈ ಮಹಾಪ್ರಬಂಧವನ್ನು ರಚಿಸುವಲ್ಲಿ ಎಲ್ಲ ರೀತಿಯ ಸ್ಫೂರ್ತಿ, ಸಹಕಾರ ಹಾಗೂ ಮಾರ್ಗದರ್ಶನವನ್ನೂ ನೀಡಿದ ನನ್ನ ಅಚ್ಚುಮೆಚ್ಚಿನ ವಿದ್ಯಾಗುರುಗಳೂ ಹಾಗೂ ನನ್ನ ಮಾರ್ಗದರ್ಶಕರೂ ಆದ **ಡಾ.ಎಚ್.ಎಲ್.ಚಂದ್ರಶೇಖರ,** ಸಹ ಪ್ರಾಧ್ಯಾಪಕರು (ನಿವೃತ್ತ), ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು – ಇವರಿಗೆ ನಾನು ಹೃತ್ಪೂರ್ವಕವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಶ್ರೀಮತಿ ಬಿ.ಎಸ್.ಶೈಲಜ ಚಂದ್ರಶೇಖರರವರು, ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ಕಲಾ ಕಾಲೇಜು (ಸ್ನಾತಕೋತ್ತರ ವಿಭಾಗ), ಮೈಸೂರು ಹಾಗೂ ಕುಮಾರಿ ಎಚ್.ಸಿ.ಭಾರತಿರವರನ್ನೂ ಈ ಸುಸಂದರ್ಭದಲ್ಲಿ ಮನಃಪೂರ್ವಕವಾಗಿ ನೆನೆಯುತ್ತೇನೆ.

ತತ್ತ್ವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ.ಎಸ್.ವೆಂಕಟೇಶ್‌ರವರಿಗೂ, ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ.ಎಂ.ಡ್ಯಾನಿಯಲ್ ರವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಶೈಕ್ಷಣಿಕ ಜೀವನದ ಏಳಿಗೆಯನ್ನು ಬಯಸುತ್ತಿರುವ ನನ್ನ ತಾಯಿ ಶ್ರೀಮತಿ ಜಯಲಕ್ಷ್ಮಿ ಹಾಗೂ ನನ್ನ ತಂದೆ ಶ್ರೀ ಶಿವಮಲ್ಲು.ಎಂ.ರವರಿಗೂ ಅನಂತಾನಂತ ವಂದನೆಗಳು. ಹಾಗೆಯೇ ನನ್ನ ಸಹೋದರನಾದ ಚರಣ್ ಟಿ.ಎಸ್.ರವರಿಗೂ ಹಾಗೂ ಅಣ್ಣಂದಿರಾದ ಟಿ.ಜೆ.ಆನಂದ್, ಮಹೇಶ್ ಟಿ.ಎಂ., ಮಂಜುನಾಥ್, ನಾಗೇಶ್.ಬಿ. ಹಾಗೂ ಸುರೇಶ್.ಎಲ್.ರವರಿಗೂ ನನ್ನ ಅನಂತ ಕೃತಜ್ಞತೆಗಳು.

ಸಂಶೋಧನೆಯ ಪ್ರಾರಂಭದಿಂದಲೂ ನನಗೆ ಸಹಕಾರವನ್ನು ನೀಡುತ್ತಾ ಬಂದಿರುವ ಅತಿಥಿ ಉಪನ್ಯಾಸಕರಾದ ಡಾ.ಕೆ.ಎನ್.ಬಸವರಾಜುರವರಿಗೂ, ವಿಭಾಗದ ಪಿ.ಡಿ.ಎಫ್. ಸಂಶೋಧಕರಾದ ಡಾ.ಪಿ.ಅರುಳಪ್ಪರವರಿಗೂ ಹಾಗೂ ಡಾ.ಬಿ.ಆರ್.ನಾಗರಾಜುರವರಿಗೂ ನನ್ನ ಅನಂತ ಧನ್ಯವಾದಗಳು.

ವಿಭಾಗದ ಸಂಶೋಧಕ ಮಿತ್ರರಾದ ದಿನೇಶ್‌ರಾವ್.ಎಸ್., ನಾಗರಾಜನಾಯಕ.ಟಿ.ಎಂ., ಬಸವರಾಜು.ಆರ್., ಶಿವಣ್ಣ ಹಾಗೂ ವಿಭಾಗದ ಸಿಬ್ಬಂದಿ ವರ್ಗದವರಾದ ಶ್ರೀಯುತ ಕಾಳ ಮತ್ತು ಶ್ರೀಮತಿ ಬಿ.ಆರ್.ಆಶಾಕುಮಾರಿರವರಿಗೂ ನನ್ನ ಅನಂತ ಕೃತಜ್ಞತೆಗಳು.

ನನ್ನ ಸಂಶೋಧನಾ ಮಹಾಪ್ರಬಂಧವನ್ನು ಸ್ವಲ್ಪವೂ ಬೇಸರಗೊಳ್ಳದೇ ಬಹುತಾಳ್ಮೆಯಿಂದ, ಹಸನ್ಮುಖರಾಗಿ, ಅಂದವಾಗಿ ತಿದ್ದುಪಡಿ ಮಾಡಿಕೊಟ್ಟ ಆತ್ಮೀಯ ಸ್ನೇಹಿತರಾದ ಡಾ.ಎನ್.ಚಿನ್ನಸ್ವಾಮಿರವರಿಗೂ ಎಷ್ಟು ಧನ್ಯವಾದಗಳನ್ನು ಹೇಳಿದರೂ ಸಾಲದು.

ನನ್ನ ಪ್ರೀತಿಯ ಸ್ನೇಹಿತರಾದ ನಾಗರಾಜು.ಎಂ., ನಂದೀಶ್ ಕುಕ್ಕೂರು, ದುಂಡ, ಮಣಿಕಂಠ, ರಾಘು, ಮಹದೇವ ಟಿ.ಎ., ಶಂಕರ್.ಎಸ್., ಸುಂದರ್‌ನಾಯಕ್, ಬಸವರಾಜು.ಕೆ.ಎಲ್., ಪವನ್, ರಾಚನಾಯ್ಕ, ಚಂದ್ರಶೇಖರ್, ಪ್ರಸಾದ್ ಟಿ.ಎನ್., ಮೋಹನ್, ರಂಗಸ್ವಾಮಿ, ಪ್ರಮೋದ್.ಎಸ್., ಸುರ್ಫಾನ್ ಹಾಗೂ ದಿವಾಕರ್ ಕೆ.ಎನ್. ರವರಿಗೂ ನನ್ನ ಧನ್ಯವಾದಗಳು.

ಹಾಗೆಯೇ ಮೈಸೂರಿನ ಸ್ನೇಹಿತರಾದ ಮರಡಿಪುರ ರವಿಕುಮಾರ್, ಡಾ.ಮಣಿಕಂಠ.ಎಸ್., ಡಾ.ದಾಮೋದರ್, ನಾಗನಾಯಕ, ಡಾ.ದೊಡ್ಡರಾಜು.ಆರ್., ಮನೋಜ್, ಹರೀಶ್ ಕುಮಾರ್., ಸ್ವಾಮಿ, ಶೇಖರ್‌ರವರಿಗೂ ನನ್ನ ಧನ್ಯವಾದಗಳು.

ಅದೇ ರೀತಿ ನನ್ನ ಸಂಶೋಧನಾ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲ ಹಿರಿಯರಿಗೂ ಮತ್ತು ಸ್ನೇಹಿತರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನಾ ವಿಷಯಕ್ಕೆ ಪೂರಕವಾದ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಲು ಅವಕಾಶ ಮಾಡಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮಾನಸಗಂಗೋತ್ರಿ, ಮೈಸೂರು ಹಾಗೂ ಮಹಾಬೋಧಿ ಸೊಸೈಟಿ, ಮೈಸೂರು ಇವರಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ದಿನಾಂಕ: **ದಿವಾಕರ ಟಿ.ಎಸ್.**

# ಪರಿವಿಡಿ


| ಅಧ್ಯಾಯಗಳು | ಶೀರ್ಷಿಕೆ | ಪುಟಸಂಖ್ಯೆ |
|---|---|---|
| ಅಧ್ಯಾಯ–1 | ಪೀಠಿಕೆ | 1–10 |
| | ❖ ವಿಷಯದ ಮಹತ್ವ | |
| | ❖ ಉದ್ದೇಶ | |
| | ❖ ವಿಧಾನ | |
| | ❖ ಸಾಹಿತ್ಯ | |
| | ❖ ಅಧ್ಯಾಯೀಕರಣ | |
| ಅಧ್ಯಾಯ–2 | ಬುದ್ಧನ ಜೀವನ ಮತ್ತು ವ್ಯಕ್ತಿತ್ವ | 11–26 |
| | ❖ ಬುದ್ಧನ ಜೀವಿತಾವಧಿಯ ಪರಿಸ್ಥಿತಿ | |
| ಅಧ್ಯಾಯ–3 | ಮೌಲ್ಯ ಪರಿಕಲ್ಪನೆ – ಒಂದು ನೋಟ | 27–45 |
| | ❖ ಸುಖಧ್ಯೇಯವಾದ, ಪ್ರಯೋಜನವಾದ, ಕ್ಯಾಂಟನ ನಿರುಪಾಧಿಕ ವಿಧಿ, ಆಧ್ಯಾತ್ಮದ ನೈತಿಕತೆ | |
| | ❖ ಮೌಲ್ಯಗಳ ವರ್ಗೀಕರಣ | |
| | ❖ ಭೌತಿಕ ಮೌಲ್ಯಗಳು | |
| | ❖ ಆರ್ಥಿಕ ಮೌಲ್ಯಗಳು | |
| | ❖ ಸಾಮಾಜಿಕ ಮೌಲ್ಯಗಳು | |
| | ❖ ಬೌದ್ಧಿಕ ಮೌಲ್ಯಗಳು | |
| | ❖ ಭಾರತೀಯ ಮೌಲ್ಯ ಪರಿಕಲ್ಪನೆ | |

| | | |
|---|---|---|
| **ಅಧ್ಯಾಯ-4** | **ಧಮ್ಮಪದ – ಒಂದು ಸ್ಥೂಲ ನೋಟ** | **46–74** |
| | ❖ ಉಪಮೆಗಳು | |
| | ❖ ಸಾಹಿತ್ಯ ಮತ್ತು ಶೈಲಿ | |
| **ಅಧ್ಯಾಯ-5** | **ಪ್ರಾಚೀನ ಮತ್ತು ಅರ್ವಾಚೀನ ಬೌದ್ಧಧರ್ಮಗಳು – ಒಂದು ಸ್ಥೂಲ ಪರಿಚಯ** | **75–105** |
| | ❖ ಪ್ರಾಚೀನ ಬೌದ್ಧಧರ್ಮ | |
| | ಅ) ಜೀವನ ದುಃಖಮಯ | |
| | ಬಿ) ಈ ದುಃಖಕ್ಕೆ ಕಾರಣವೊಂದಿದೆ | |
| | ಇ) ಈ ದುಃಖವನ್ನು ನಾಶ ಮಾಡಲು ಸಾಧ್ಯವುಂಟು | |
| | ಈ) ಹಾಗೆ ನಾಶಗೊಳಿಸುವ ಒಂದು ಮಾರ್ಗವೂ ಉಂಟು | |
| | ❖ ಆರ್ಯ ಅಷ್ಟಾಂಗಿಕ ಮಾರ್ಗ | |
| | ❖ ಅರ್ವಾಚೀನ ಬೌದ್ಧಧರ್ಮ | |
| | ❖ ಪ್ರತೀತ್ಯ ಸಮುತ್ಪಾದ | |
| | ❖ ಕರ್ಮಸಿದ್ಧಾಂತ | |
| | ❖ ಕ್ಷಣಿಕವಾದ | |
| | ❖ ನೈರಾತ್ಮ್ಯವಾದ | |
| **ಅಧ್ಯಾಯ-6** | **ಧಮ್ಮಪದದ ನೈತಿಕ ಅಂಶಗಳು** | **106–121** |
| | ❖ ಇಚ್ಛಾ ಸ್ವಾತಂತ್ರ್ಯ | |
| | ❖ ಆತ್ಮವಿಮರ್ಶೆ | |
| | ❖ ತ್ರಿಕರಣ | |

| | | |
|---|---|---|
| **ಅಧ್ಯಾಯ–7** | **ನೈತಿಕ ಅಂಶಗಳು – ಅಹಿಂಸೆ ಮತ್ತು ಇತರ ಮೌಲ್ಯಗಳು** | **122–141** |
| | ❖ ಸತ್ಯ | |
| | ❖ ದಾನ | |
| | ❖ ಅಪರಿಗ್ರಹ | |
| | ❖ ಹಿರಿಯರ ಸೇವೆ | |
| **ಅಧ್ಯಾಯ–8** | **ನೈತಿಕ ಅಂಶಗಳು – ಆತ್ಮನಿಗ್ರಹ** | **142–171** |
| **ಅಧ್ಯಾಯ–9** | **ನೈತಿಕ ಅಂಶಗಳು – ಅಪ್ರಮಾದ** | **172–196** |
| | ❖ ಅಪ್ರಮಾದ | |
| **ಅಧ್ಯಾಯ–10** | **ಸಂಸಾರ ಮತ್ತು ವೈರಾಗ್ಯ** | **197–207** |
| | ❖ ವೈರಾಗ್ಯ | |
| | ❖ ಪ್ರಜ್ಞೆ ಮತ್ತು ವಿವೇಕ | |
| | ❖ ಪುಣ್ಯಗ್ರಂಥಗಳ ಅಧ್ಯಯನ ಮತ್ತು ಆಚರಣೆ | |
| **ಅಧ್ಯಾಯ–11** | **ಅರಿಹಂತನ ಲಕ್ಷಣಗಳು** | **208–246** |
| | ❖ ಸತ್ಪುರುಷ | |
| | ❖ ಭಿಕ್ಷು ಮತ್ತು ಅರಿಹಂತನ ಲಕ್ಷಣ | |
| | ❖ ಸಾಮಾಜಿಕ ಅಂಶಗಳು | |
| **ಅಧ್ಯಾಯ–12** | **ಉಪಸಂಹಾರ** | **247–263** |
| | **ಗ್ರಂಥಋಣ** | **264–271** |

# ಅಧ್ಯಾಯ–1

# ಪೀಠಿಕೆ

# ಅಧ್ಯಾಯ–1

# ಪೀಠಿಕೆ

## ವಿಷಯದ ಮಹತ್ವ

ಭಾರತೀಯ ತತ್ತ್ವಶಾಸ್ತ್ರವು ಭೌತಾತೀತ ಶಾಸ್ತ್ರವಷ್ಟೇ ಅಲ್ಲ, ಮೌಲ್ಯಗಳ ಶಾಸ್ತ್ರವೂ ಹೌದು. ತತ್ತ್ವ, ಅದನ್ನು ತಿಳಿಯುವ ವಿಧಾನ, ಅದನ್ನು ತಿಳಿಯುವುದರಿಂದ ನಮಗಾಗುವ ಪ್ರಯೋಜನ ಮತ್ತು ಅದನ್ನು ತಿಳಿಯಲು ನಾವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯಗಳು – ಈ ಎಲ್ಲ ವಿಷಯಗಳ ಬಗ್ಗೆ ಭಾರತೀಯ ದರ್ಶನಗಳು ಪ್ರತಿಪಾದಿಸುತ್ತವೆ. ಈ ದರ್ಶನಗಳ ಭೌತಾತೀತ ನಿಲುವುಗಳಲ್ಲಿ ಏನೇ ಭಿನ್ನಾಭಿಪ್ರಾಯವಿದ್ದರೂ ಪ್ರತಿಯೊಂದು ದರ್ಶನವೂ ಸತ್ಯ ಸಾಕ್ಷಾತ್ಕಾರಕ್ಕೆ ಅಗತ್ಯವಾದ ಮೌಲ್ಯಗಳ ಒಂದು ಚೌಕಟ್ಟನ್ನೇ ನಮ್ಮ ಮುಂದಿಡುತ್ತದೆ. ಭಾರತೀಯ ಮೌಲ್ಯಮೀಮಾಂಸೆಯನ್ನು ಕುರಿತು ಸ್ಥೂಲವಾಗಿ ಮೂರು ದೃಷ್ಟಿಕೋನಗಳುಂಟು. ಮೊದಲನೆಯದು, ದೇವರು ಮತ್ತು ಯಾವುದೇ ಆಧ್ಯಾತ್ಮದ ಲೇಪನವಿಲ್ಲದ ಅರ್ಥಕಾಮಗಳ ಸಾಧನೆಯಷ್ಟೇ ಬದುಕಿನ ಗುರಿಯೆಂದು ಸಾರುವ ದೃಷ್ಟಿಕೋನ. ಈ ದೃಷ್ಟಿಕೋನವನ್ನು ಚಾರ್ವಾಕರು ಪ್ರತಿನಿಧಿಸುತ್ತಾರೆ. ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಇವರನ್ನು ಸುಖಧ್ಯೇಯವಾದಿಗಳು (Hedonists) ಎಂದು ಕರೆಯುತ್ತಾರೆ. ಇವರಲ್ಲಿ ಕೆಲವರು ಧರ್ಮವನ್ನು ಅಂಗೀಕರಿಸುವುದಿಲ್ಲವಾದರೆ ಮತ್ತೆ ಕೆಲವರು ಧರ್ಮಕ್ಕೆ ಒಂದು ಸ್ಥಾನವನ್ನು ನೀಡುತ್ತಾರೆ. ಆದರೆ ಧರ್ಮವನ್ನು ಕುರಿತ ಅವರ ಪರಿಕಲ್ಪನೆ ವೇದದ ಆಧಾರವನ್ನಾಗಲೀ ಅಥವಾ ಯಾವುದೇ ಸಂತನ ಹೇಳಿಕೆಯ ಬುನಾದಿಯನ್ನಾಗಲೀ ಪಡೆಯುವುದಿಲ್ಲ. ಅವರ ಪ್ರಕಾರ ಧರ್ಮವೆಂದರೆ ಸಮಾಜದಲ್ಲಿ ಬದುಕಲು ಮನುಷ್ಯ–ಮನುಷ್ಯರಲ್ಲಿ ಇರಬೇಕಾದ ಒಂದು ವ್ಯಾವಹಾರಿಕ ಸಂಬಂಧವಷ್ಟೆ. ಒಂದು ಸಾಮಾಜಿಕ ಒಪ್ಪಂದದ ಆಧಾರದ ಮೇಲೆ ಅವರ ಧರ್ಮ ಪರಿಕಲ್ಪನೆಯು ನಿಂತಿದೆ. ಇನ್ನು ಎರಡನೆಯ ದೃಷ್ಟಿಕೋನ ವೇದ

ಉಪನಿಷತ್ತುಗಳು ಆಧಾರವನ್ನು ಹೊಂದಿದುದು. ಇದನ್ನು ವೈದಿಕ ದೃಷ್ಟಿಕೋನವೆಂದು ನಾವು ಕರೆಯುಬಹುದು. ಈ ವೈದಿಕ ದೃಷ್ಟಿಕೋನವನ್ನೇ ಆರು ವೈದಿಕ ದರ್ಶನಗಳು ತಮ್ಮ ನೀತಿಶಾಸ್ತ್ರದಲ್ಲಿ ಅಳವಡಿಸಿಕೊಳ್ಳುವುದು. ಇನ್ನು ಕೊನೆಯದು ಸುಖಧ್ಯೇಯವಾದವೂ ಅಲ್ಲ, ವೈದಿಕ ದೃಷ್ಟಿಕೋನವೂ ಅಲ್ಲ. ಈ ದೃಷ್ಟಿಕೋನವನ್ನು ಹೊಂದಿರುವವರು ಬದುಕಿನ ಗುರಿ ಅರ್ಥಕಾಮಗಳೆಂಬ ವಾದವನ್ನು ಸಾರಾಸಗಟಾಗಿ ತಿರಸ್ಕರಿಸುವರಲ್ಲದೇ ಜೀವನಕ್ಕೆ ಒಂದು ಗುರಿ ಇದ್ದು ಆ ಗುರಿಯನ್ನು ಹೊಂದಲು ಮನುಷ್ಯನು ಕೆಲವು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ಸಾರುತ್ತಾರೆ. ಇವರು ವೈದಿಕರಂತೆ ಆಸ್ತಿಕರೂ ಆಗಿರಲಿಲ್ಲ. ಸುಖಧ್ಯೇಯವಾದಿಗಳಂತೆ ಬದುಕಿನ ಗುರಿ **ಇಂದ್ರಿಯಸುಖ**ವೊಂದೇ ಎಂದೂ ಸಾರಲಿಲ್ಲ. ಇವರು ಒಂದು ತೆರನಾದ ಆಧ್ಯಾತ್ಮ ಮತ್ತು ನಾಸ್ತಿಕತೆ – ಇವೆರಡರ ಸಮನ್ವಯವನ್ನು ಪ್ರತಿನಿಧಿಸಿದರು. ಈ ವರ್ಗದಲ್ಲಿ ಜೈನರು ಮತ್ತು ಬೌದ್ಧರು ಬರುತ್ತಾರೆ. ಚಾರ್ವಾಕರಂತೆ ಜೈನಬೌದ್ಧರು ವೇದದ ಪ್ರಾಮಾಣ್ಯವನ್ನು ಅಂಗೀಕರಿಸುವುದಿಲ್ಲವಾದರೂ ಬದುಕಿಗೆ ಒಂದು ಆಧ್ಯಾತ್ಮಿಕ ಗುರಿ ಇದೆ ಎಂದು ಸಾರುವಲ್ಲಿ ಚಾರ್ವಾಕರಿಗಿಂತಲೂ ಭಿನ್ನರಾಗಿದ್ದಾರೆ. ಒಂದು ವಿಶೇಷವೆಂದರೆ ಜೈನ ಬೌದ್ಧರು ಈ ವಿಷಯದಲ್ಲಿ ಎಷ್ಟೇ ಸಾಮ್ಯವನ್ನು ಹೊಂದಿದ್ದರೂ ಸಾರ್ವತ್ರಿಕತೆಯ ವಿಷಯದಲ್ಲಿ ಬೌದ್ಧರೇ ಜೈನರಿಗಿಂತಲೂ ಹೆಚ್ಚು ವಿಶಾಲವಾಗಿದ್ದಾರೆ. ಜೈನರು ತಮ್ಮ ಮೌಲ್ಯಪ್ರತಿಪಾದನೆಯಲ್ಲಿ ಕಟ್ಟುನಿಟ್ಟಾಗಿದ್ದಾರೆ. ಆದರೆ ಬೌದ್ಧರು ಎಲ್ಲರೂ ಸುಲಭವಾಗಿ ಪಾಲಿಸಬಹುದಾದ ಮೌಲ್ಯಗಳನ್ನು ನಮ್ಮ ಮುಂದಿಡುತ್ತಾರೆ.

ಮೌಲ್ಯಗಳನ್ನು ಕುರಿತು ಅನೇಕ ಸಾಧುಸಂತರು ನಮ್ಮ ಭಾರತೀಯ ಇತಿಹಾಸದಲ್ಲಿ ಸಂದೇಶಗಳನ್ನು ನೀಡಿರುವರಾದರೂ ಕೆಲವು ವೇಳೆ ಇಲ್ಲಿ ಮೌಲ್ಯಗಳು ಜನಸಾಮಾನ್ಯನ ಆಚರಣೆಗೆ ಕಷ್ಟವಾಗುತ್ತವೆ. ಎಂದರೆ ಈ ಮೌಲ್ಯಗಳು ಮಾನವ ಬದುಕಿಗೆ ಅಷ್ಟು ಹತ್ತಿರವಲ್ಲವೆನಿಸುತ್ತವೆ. ಈ ನಿಟ್ಟಿನಲ್ಲಿ ಧಮ್ಮಪದದಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳು

ಮಾನವೀಯ ಬದುಕಿಗೆ ಬಹಳ ಹತ್ತಿರವಾದುವು, ಮಾನವನು ಆಚರಿಸಲು ಬಹಳ ಸುಲಭವಾದವು. ಧಮ್ಮಪದವೆಂದರೆ ಧರ್ಮದ ಪಥವೆಂದರ್ಥ. ಬದುಕಿನ ಗುರಿಯಾದ ನಿರ್ವಾಣಕ್ಕೆ ಕೊಂಡೊಯ್ಯುವ ಮಾರ್ಗವನ್ನು ಸರಳ ಶೈಲಿಯಲ್ಲಿ ಸೂಚಿಸುವುದರಿಂದ ಈ ಗ್ರಂಥಕ್ಕೆ ಧಮ್ಮಪದವೆಂದು ಹೆಸರು ಬಂದಿದೆ.

## ಉದ್ದೇಶ

ಪ್ರಸ್ತುತ ಧಮ್ಮಪದದಲ್ಲಿ ಪ್ರತಿಪಾದಿತವಾಗಿರುವ ಸಾರ್ವಕಾಲಿಕ ಮೌಲ್ಯಗಳನ್ನು ವರ್ಗೀಕರಿಸಿ, ವಿಶ್ಲೇಷಿಸಿ ಮತ್ತು ವಿಮರ್ಶಿಸಿ ಅವುಗಳನ್ನು ವ್ಯವಸ್ಥಿತವಾಗಿ ಮಂಡಿಸುವುದು ಈ ಸಂಶೋಧನಾ ಪ್ರಬಂಧದ ಉದ್ದೇಶ. ಈ ಮೌಲ್ಯಗಳು ಹೇಗೆ ಈ ತಾಂತ್ರಿಕ ಯುಗದಲ್ಲೂ ಪ್ರಸ್ತುತವೆಂಬುದನ್ನು ತೋರಿಸುವುದು ಪ್ರಬಂಧದ ಗುರಿಯಾಗಿರುತ್ತದೆ.

## ವಿಧಾನ

ಹಾಗೆ ಮಾಡುವಲ್ಲಿ ನಾವು ಅನುಸರಿಸುವ ವಿಧಾನವು ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ ಮತ್ತು ವಿವರಣಾತ್ಮಕವಾಗಿರುತ್ತದೆ. ಯಾವುದೇ ವಿಷಯದ ನಿರೂಪಣೆಯು ಒಂದು ವಿಧಾನವನ್ನು ಅವಲಂಬಿಸಿರುತ್ತದೆ. ಎಂದರೆ ಸಂಶೋಧನಾ ವಿಧಾನವು ಸಂಶೋಧನಾ ವಿಷಯದ ಸ್ವರೂಪದಿಂದ ನಿರ್ಧಾರಿತವಾಗಿರುತ್ತದೆ. ವಿಶ್ಲೇಷಣೆಯೆಂದರೆ ವಿಷಯದ ವಸ್ತು ಮತ್ತು ವಿಶೇಷಣಗಳ ವಿಂಗಡಣೆಯೆಂದರ್ಥ. ವಿಷಯದ **ಅದು** ಮತ್ತು **ಏನು** ಎಂಬುದರ ಸ್ಪಷ್ಟ ವಿಂಗಡಣೆಯೇ ವಿಶ್ಲೇಷಣೆ. **ಅದು** ಎಂಬುದು ನಮ್ಮ ಪ್ರಬಂಧದ ವಿಷಯವಾದರೆ ಆ ವಿಷಯವು ಒಳಗೊಂಡಿರುವ ಅಂಶಗಳು **ಏನು** ಎಂಬುದರ ಪರಿಧಿಯೊಳಗೆ ಬರುತ್ತವೆ. **ಅದು** ಎಂಬುದಕ್ಕೆ ಮಾಹಿತಿಯನ್ನು ನಾವು ಧಮ್ಮಪದವನ್ನು ಕುರಿತಂತೆ ಕೆಳಗೆ ಕಾಣಿಸಲಾಗಿರುವ

ಗ್ರಂಥಗಳಿಂದ ಪಡೆದುಕೊಳ್ಳುತ್ತೇವೆ. ಈ ಮಾಹಿತಿಯನ್ನು ಸೂಕ್ತವಾಗಿ ವಿಂಗಡಿಸಿ, ವಿಶ್ಲೇಷಿಸಿ, ಪರಿಕಲ್ಪನೆಗಳಾಗಿ ಪರಿವರ್ತಿಸಿ ವಿಷಯವನ್ನು ವ್ಯವಸ್ಥಿತವಾಗಿ ಮಂಡಿಸುವುದು ನಮ್ಮ ಗುರಿ.

**ಸಾಹಿತ್ಯ**

ಈ ಪ್ರಬಂಧವು ಕೆಳಕಂಡ ಪ್ರಾಥಮಿಕ ಸಾಹಿತ್ಯದ ಆಧಾರವನ್ನು ಹೊಂದಿದೆ.

1. S.Radhakrishnan, **The Dhammapada**, Oxford University Press, London, 1950.
2. F. Max Muller, **The Dhammapada**, Motilal Banarsidass Publishers Private Limited, Delhi, 2013.
3. K.R.Norman, **The Word of the Doctrine (Dhammapada)**, The Pali Text Society, Oxford, 2004.
4. Venerable Sri Acharya Buddharakkhita, **Dhammapada**, Buddha Vacana Trust, Maha Bodhi Society, Bangalore, 1986
5. ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತಿ ಸ್ವಾಮಿಗಳು, **ಧಮ್ಮಪದ**, ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, 1997.
6. ಬಿ.ವಿ.ರಾಜಾರಾಂ (ಅನು), **ಧಮ್ಮಪದ**, ಬುದ್ಧ ವಚನ ಟ್ರಸ್ಟ್, ಮಹಾ ಬೋಧಿ, ಸೊಸೈಟಿ, ಬೆಂಗಳೂರು, 2004

ಉಳಿದ ಗ್ರಂಥಗಳನ್ನು ಪ್ರಬಂಧದ ಕೊನೆಯಲ್ಲಿನ ಗ್ರಂಥಋಣದಲ್ಲಿ ಕಾಣಿಸಲಾಗಿದೆ.

## ಅಧ್ಯಾಯೀಕರಣ

ಪ್ರಬಂಧವು **ಪೀಠಿಕಾಧ್ಯಾಯ**ವನ್ನೂ ಒಳಗೊಂಡಂತೆ 12 ಅಧ್ಯಾಯಗಳಿಂದ ಕೂಡಿದೆ. ಈ ಪೀಠಿಕಾಧ್ಯಾಯವು ವಿಷಯದ ಮಹತ್ವ, ಪ್ರಬಂಧದ ಉದ್ದೇಶ, ವಿಧಾನ, ಸಾಹಿತ್ಯ ಮತ್ತು ಅಧ್ಯಾಯೀಕರಣಗಳ ಬಗ್ಗೆ ವಿವರಿಸುತ್ತದೆ.

ಇನ್ನು **ಎರಡನೇ** ಅಧ್ಯಾಯವು ಬುದ್ಧನ ಜೀವನ ಮತ್ತು ವ್ಯಕ್ತಿತ್ವವನ್ನು ಕುರಿತು ವಿವರಿಸುತ್ತದ್ತೆ, ಅದು ಬುದ್ಧನ ವಂಶ, ಆತನ ಜೀವನದ ಆಗುಹೋಗುಗಳು ಮತ್ತು ಅವು ಹೇಗೆ ಆತನ ಪರಿವ್ರಾಜಕ ಜೀವನಕ್ಕೆ ಇಂಬುಕೊಟ್ಟವು ಎಂಬುದನ್ನು ವಿವರಿಸುತ್ತದೆ. ಅಲ್ಲದೇ ಸಿದ್ಧಾರ್ಥನು ಬುದ್ಧನಾಗಿ ಆತನು ಹೇಗೆ ಇತರರನ್ನು ಪ್ರಭಾವಿಸಿದನು ಎಂಬುದನ್ನೂ ಇಲ್ಲಿ ಹೊರತರಲಾಗಿದೆ. ಈ ಅಧ್ಯಾಯದಲ್ಲಿ ಬುದ್ಧನ ಜೀವಿತಾವಧಿಯ ಪರಿಸ್ಥಿತಿಯನ್ನು ವಿಶ್ಲೇಷಿಸಲಾಗಿದೆಯಲ್ಲದೇ ಹೇಗೆ ಅದು ಬುದ್ಧನ ಅವತಾರಕ್ಕೆ ಎಡೆಮಾಡಿಕೊಟ್ಟಿತೆಂಬುದನ್ನೂ ಸ್ಪಷ್ಟಪಡಿಸಲಾಗಿದೆ. ಬುದ್ಧನ ಕಾಲದಲ್ಲಿದ್ದ ಸಾಮಾಜಿಕ ಧೋರಣೆಗಳು, ಮನುಷ್ಯನನ್ನು ಗೊಂದಲಕ್ಕೆ ಸಿಲುಕಿಸುವ ಶುಷ್ಕ ಭೌತಾತೀತ ಚರ್ಚೆಗಳು ಮತ್ತು ಕಂದಾಚಾರಗಳನ್ನು ವಿವರಿಸಲಾಗಿದೆಯಲ್ಲದೇ ಬುದ್ಧನು ಹೇಗೆ ನೈಸರ್ಗಿಕ ನಿಯಮವನ್ನು ಸ್ಥಾಪಿಸಲು ಯತ್ನಿಸಿದ ಎಂಬುದನ್ನು ತೋರಿಸಲಾಗಿದೆ. ಒಟ್ಟಾರೆ ಈ ಅಧ್ಯಾಯದ ತಿರುಳು ಬುದ್ಧನು ಯಾವುದನ್ನೂ ನಾಶ ಮಾಡಲು ಬರಲಿಲ್ಲ, ಬದಲಾಗಿ ಒಬ್ಬ ಪ್ರಾಮಾಣಿಕ ಸತ್ಯಾನ್ವೇಷಕನಾಗಿದ್ದ ಎಂಬುದು.

**ಮೂರನೇ** ಅಧ್ಯಾಯವು ಮೌಲ್ಯಗಳನ್ನು ಕುರಿತ ಅಧ್ಯಾಯ. ಇಲ್ಲಿ ಸುಖಧ್ಯೇಯವಾದ, ಅಲ್ಲದೇ ಪ್ರಬಂಧದ ವಿಷಯವು ಧಮ್ಮಪದದ ನೈತಿಕ ಮೌಲ್ಯಗಳಾದ್ದರಿಂದ ಈ ವಿಷಯದ ಚರ್ಚೆಗೆ ಪೂರ್ವಭಾವಿಯಾಗಿ ಮೌಲ್ಯವೆಂದರೇನು ಅದರ ಉಗಮವು ಯಾವ ಅಂಶಗಳನ್ನು

ಅವಲಂಬಿಸಿದೆ ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಮೌಲ್ಯಗಳನ್ನು ಕುರಿತ ವಿವಿಧ ಸಿದ್ಧಾಂತಗಳೇನು ಮತ್ತು ಮೌಲ್ಯಗಳು ಎಷ್ಟು ವಿಧ ಎಂಬ ಬಗ್ಗೆ ಚರ್ಚಿಸಲಾಗಿದೆ.

**ನಾಲ್ಕನೆಯ** ಅಧ್ಯಾಯವು ಧಮ್ಮಪದವನ್ನು ಕುರಿತ ಒಂದು ವಿಹಂಗಮ ನೋಟವನ್ನು ನೀಡುತ್ತದೆ. ಅದರ ಅಧ್ಯಾಯಗಳ ಸಂಖ್ಯೆ, ಪ್ರತಿ ಅಧ್ಯಾಯದ ಗಾಥೆಗಳ ಸಂಖ್ಯೆ ಮತ್ತು ಈ ಅಧ್ಯಾಯಗಳ ಸಾರ – ಇವುಗಳನ್ನು ಇಲ್ಲಿ ಹೊರತರಲಾಗಿದೆ. ಅಷ್ಟೇ ಅಲ್ಲದೆ ಗ್ರಂಥದ ಕಾಲ, ಗ್ರಂಥದ ಶೀರ್ಷಿಕೆಯನ್ನು ಕುರಿತು ವಿವಿಧ ವಿದ್ವಾಂಸರು ನೀಡುವ ಅಭಿಪ್ರಾಯಗಳನ್ನು ಹಾಗೂ ಸಾಹಿತ್ಯ ಮತ್ತು ಶೈಲಿಯನ್ನು ಕುರಿತೂ ಇಲ್ಲಿ ವಿವರಿಸಲಾಗಿದೆ. ಧಮ್ಮಪದದಲ್ಲಿ ಬಳಸಲಾಗಿರುವ ಉಪಮೆಗಳ ವೈವಿಧ್ಯ, ಅದರಲ್ಲಿ ಬಳಸಲಾಗಿರುವ ಸ್ವಾರಸ್ಯಕರ ಶಬ್ದಗಳ ಪ್ರಯೋಗ ಮತ್ತು ಒಗಟಿನ ರೂಪದ ಗಾಥೆಗಳು – ಇವೆಲ್ಲವೂ ಈ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ.

**ಐದನೆಯ** ಅಧ್ಯಾಯವು ಬೌದ್ಧಧರ್ಮದ ಒಂದು ಸ್ಥೂಲ ಪರಿಚಯವನ್ನು ನೀಡುತ್ತದೆ. ಈ ಪರಿಚಯದಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಬೌದ್ಧಧರ್ಮಗಳೆರಡೂ ಬರುತ್ತವೆ. ಇಲ್ಲಿ ಪ್ರಾಚೀನ ಬೌದ್ಧಧರ್ಮದ ಚತುರಾರ್ಯ ಸತ್ಯಗಳ ವಿವರಣೆಯನ್ನು ನೀಡಲಾಗಿದೆ. ಅಲ್ಲದೇ ಈ ಅಧ್ಯಾಯದಲ್ಲಿ ಪ್ರಾಚೀನ ಬೌದ್ಧಧರ್ಮದ ತಾತ್ತ್ವಿಕ ಪರಿಣಾಮಗಳಾಗಿರುವ ಕಾರ್ಯಕಾರಣವಾದ, ಕರ್ಮಸಿದ್ಧಾಂತ, ಕ್ಷಣಿಕವಾದ ಮತ್ತು ನೈರಾತ್ಮ್ಯವಾದಗಳನ್ನು ಕುರಿತೂ ಚರ್ಚಿಸಲಾಗಿದೆ.

ಮುಂದೆ ಆರರಿಂದ ಹತ್ತನೆಯ ಅಧ್ಯಾಯದವರೆಗೆ ನಮ್ಮ ಪ್ರಬಂಧದ ಪ್ರಮುಖ ವಿಷಯವಾದ ಧಮ್ಮಪದದಲ್ಲಿ ಅಡಕವಾಗಿರುವ ನೈತಿಕ ಮೌಲ್ಯಗಳ ಚರ್ಚೆಯು ಬರುತ್ತದೆ. **ಆರನೇ** ಅಧ್ಯಾಯದಲ್ಲಿ ಧಮ್ಮಪದದ ಮೂಲಭೂತ ನೈತಿಕ ಅಂಶಗಳ ವಿವರಣೆ ಇದೆ.

ಬುದ್ಧನ ನೀತಿಶಾಸ್ತ್ರವು ನಿರ್ವಾಣವೆಂಬ ಆಧ್ಯಾತ್ಮಿಕ ಗುರಿಯಿಂದ ಪ್ರೇರಿತವಾದುದು. ನಿರ್ವಾಣದ ಸಂಬಂಧವಿಲ್ಲದ ನೈತಿಕತೆಗೆ ಯಾವ ಅರ್ಥವೂ ಇಲ್ಲವೆಂಬುದು ಈ ಅಧ್ಯಾಯದ ತಿರುಳು. ಇಲ್ಲಿ ಇಚ್ಛಾ ಸ್ವಾತಂತ್ರ್ಯ, ನೈತಿಕತೆಯಲ್ಲಿ ಆತ್ಮವಿಮರ್ಶೆಯ ಸ್ಥಾನ ಮತ್ತು ತ್ರಿಕರಣಗಳ ಶುದ್ಧಿಗಳ ಬಗ್ಗೆ ಪ್ರಸ್ತಾಪವಿದೆ.

**ಏಳನೇ** ಅಧ್ಯಾಯವು ಅಹಿಂಸೆ ಮತ್ತು ಇತರ ಮೌಲ್ಯಗಳನ್ನು ಕುರಿತು ವಿಶದೀಕರಿಸುತ್ತದೆ. ಹಿಂಸೆಯು ಕ್ರೋಧ ಮತ್ತು ವೈರಗಳನ್ನು ಒಳಗೊಂಡಿರುವುದರಿಂದ ಬುದ್ಧನ ಪ್ರಕಾರ ಇವು ಅಪಮೌಲ್ಯಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ಬುದ್ಧನು ಪ್ರಾಣಿಹಿಂಸೆಯನ್ನು ಒಳಗೊಂಡಿರುವ ಯಜ್ಞಯಾಗಾದಿಗಳನ್ನು ವಿಮರ್ಶೆಗೆ ಒಳಪಡಿಸುತ್ತಾನೆ. ಇದಲ್ಲದೇ ಈ ಅಧ್ಯಾಯದಲ್ಲಿ ದುರಭಿಮಾನ, ರಾಗದ್ವೇಷಗಳನ್ನು ಕುರಿತ ಬುದ್ಧನ ಟೀಕೆಯಿದೆ. ಈ ಅಧ್ಯಾಯವು ಸತ್ಯ, ದಾನ, ಅಪರಿಗ್ರಹ ಮತ್ತು ಹಿರಿಯರ ಸೇವೆಗಳೆಂಬ ಮೌಲ್ಯಗಳ ಹಿರಿಮೆಗರಿಮೆಗಳ ಬಗ್ಗೆಯೂ ವಿವರಿಸುತ್ತದೆ.

**ಎಂಟನೆಯ** ಅಧ್ಯಾಯವು ಆತ್ಮನಿಗ್ರಹವನ್ನು ಕುರಿತು ಚರ್ಚಿಸುತ್ತದೆ. ಅದು ಕಾಮನಿಗ್ರಹ, ಮನೋನಿಗ್ರಹ ಮತ್ತು ಇಂದ್ರಿಯನಿಗ್ರಹಗಳ ಅವಶ್ಯಕತೆಯ ಬಗ್ಗೆ ವಿವರಿಸುತ್ತದೆ. ಬುದ್ಧನು ಆತ್ಮನಿಗ್ರಹಕ್ಕೆ ಪ್ರಾಮುಖ್ಯತೆಯನ್ನು ನೀಡುವನಾದರೂ ಆಧ್ಯಾತ್ಮಿಕ ಬದುಕಿಗೆ ಅಗತ್ಯವಾದ ಭೌತಿಕ ಮೌಲ್ಯಗಳನ್ನು ತಿರಸ್ಕರಿಸುವುದಿಲ್ಲ. ಮೌಲ್ಯಗಳ ಚೌಕಟ್ಟಿನಲ್ಲಿ ಹಣ ಸಂಪಾದನೆಯನ್ನು ತಿರಸ್ಕರಿಸುವುದಿಲ್ಲ ಎಂಬ ವಿಷಯದಲ್ಲಿ ಬುದ್ಧನು ಹೇಗೆ ಪ್ರಾಯೋಗಿಕನೆಂಬ ಅಂಶವು ಈ ಅಧ್ಯಾಯದಲ್ಲಿ ಹೊರತರಲ್ಪಟ್ಟಿದೆ.

ಇನ್ನು **ಒಂಭತ್ತನೇ** ಅಧ್ಯಾಯವು ಅಪ್ರಮಾದವೆಂಬ ಮೌಲ್ಯದ ಬಗ್ಗೆ ಚರ್ಚಿಸುತ್ತದೆ. ಈ ಅಧ್ಯಾಯವು ಹೆಚ್ಚು ಕಡಿಮೆ ಅಪ್ರಮಾದವಗ್ಗವೆಂಬ ಎರಡನೇ ಅಧ್ಯಾಯದ ತಿರುಳು.

ಮನುಷ್ಯನು ಬದುಕಿನಲ್ಲಿ ಹೇಗೆ ಎಚ್ಚರವಾಗಿರಬೇಕೆಂಬುದನ್ನು ಈ ಅಧ್ಯಾಯವು ವಿವರಿಸುತ್ತದೆ.

**ಹತ್ತನೆಯ** ಅಧ್ಯಾಯವು ಸಂಸಾರದ ಸ್ವರೂಪವನ್ನು ಮತ್ತು ಮನುಷ್ಯನಿಗೆ ವೈರಾಗ್ಯದ ಅಗತ್ಯವನ್ನು ಸ್ಪಷ್ಟಪಡಿಸುತ್ತದೆ. ಹೇಗೆ ಸಂಸಾರಕ್ಕೆ ಅವಿದ್ಯೆಯೇ ಕಾರಣ ಮತ್ತು ಸಾವಿನ ನಿಶ್ಚಿತತೆಯ ಅರಿವು ಆಧ್ಯಾತ್ಮಿಕ ಪ್ರಗತಿಗೆ ಕಾರಣವೆಂಬುದನ್ನು ಇಲ್ಲಿ ವಿವರಿಸಲಾಗಿದೆ. ಇದಲ್ಲದೇ ಪ್ರಜ್ಞೆ ಮತ್ತು ವಿವೇಕಗಳ ಹಾಗೂ ಪುಣ್ಯಗ್ರಂಥಗಳ ಹಿರಿಮೆಯನ್ನು ಈ ಅಧ್ಯಾಯವು ಸಂಕ್ಷಿಪ್ತವಾಗಿ ವಿವರಿಸುತ್ತದೆ.

**ಹನ್ನೊಂದನೆ**ಯ ಅಧ್ಯಾಯವು ಅರಿಹಂತನ ಲಕ್ಷಣಗಳನ್ನು ಮತ್ತು ಭಿಕ್ಷುವಿನ ರೀತಿ–ನೀತಿಗಳನ್ನು ಪ್ರಸ್ತುತಪಡಿಸುತ್ತದೆ. ಅಲ್ಲದೇ ಈ ಅಧ್ಯಾಯವು ಜಾತಿಪದ್ಧತಿಯನ್ನು ಕುರಿತು ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಗೆ ಪೂರ್ವಭಾವಿಯಾಗಿ ವರ್ಣಧರ್ಮವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ಹೇಗೆ ಬುದ್ಧನ ಸಾಮಾಜಿಕ ಚಿಂತನೆಯು ವರ್ಣಧರ್ಮದ ಪರಿಮಿತಿಯನ್ನು ಮೀರುತ್ತದೆ ಎಂಬುದನ್ನು ತೋರಿಸಲು ಯತ್ನಿಸಲಾಗಿದೆ. ಬುದ್ಧನು ಬ್ರಾಹ್ಮಣ ಪರಿಕಲ್ಪನೆಯನ್ನು ಉಳಿಸಿಕೊಳ್ಳುವನಾದರೂ ಅದು ವೈದಿಕ ಅರ್ಥದಲ್ಲಿ ಅಲ್ಲ ಎಂಬುದು ಈ ಅಧ್ಯಾಯದ ತಿರುಳು. ಆತನ ಪ್ರಕಾರ ಬ್ರಾಹ್ಮಣನೆಂದರೆ ಅರಿಹಂತ ಎಂದರ್ಥ. ಅದಕ್ಕೆ ಯಾವುದೇ ಜಾತೀಯವಾದ ಇಂಗಿತವಿಲ್ಲ.

**ಹನ್ನೆರಡನೇ** ಅಧ್ಯಾಯವು ಮೊದಲ ಹನ್ನೊಂದು ಅಧ್ಯಾಯಗಳ ಸಾರಾಂಶವನ್ನು ನೀಡುವುದಲ್ಲದೇ ಧಮ್ಮಪದದಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳು ಹೇಗೆ ಸಾರ್ವಕಾಲಿಕವಾದುವು ಎಂಬುದನ್ನು ಪ್ರಸ್ತುತಪಡಿಸುತ್ತದೆ.

ಒಟ್ಟಾರೆ ಈ ಎಲ್ಲ ಅಧ್ಯಾಯಗಳನ್ನೂ ಕೆಳಕಂಡಂತೆ ಕ್ರೋಢೀಕರಿಸಬಹುದು.

**ಅಧ್ಯಾಯ –1** **ಪೀಠಿಕೆ:** ವಿಷಯದ ಮಹತ್ವ – ಪ್ರಬಂಧದ ಉದ್ದೇಶ – ವಿಧಾನ – ಸಾಹಿತ್ಯ – ಅಧ್ಯಾಯೀಕರಣ

**ಅಧ್ಯಾಯ–2** **ಬುದ್ಧನ ಜೀವನ ಮತ್ತು ವ್ಯಕ್ತಿತ್ವ:** ಬುದ್ಧನ ಜೀವಿತಾವಧಿಯ ಪರಿಸ್ಥಿತಿ

**ಅಧ್ಯಾಯ–3** **ಮೌಲ್ಯ ಪರಿಕಲ್ಪನೆ ಒಂದು ನೋಟ:** ಭಾರತೀಯ ಮೌಲ್ಯ ಪರಿಕಲ್ಪನೆ

**ಅಧ್ಯಾಯ–4** **ಧಮ್ಮಪದ ಒಂದು ಸ್ಥೂಲನೋಟ:** ಉಪಮೆಗಳು – ಸಾಹಿತ್ಯ ಮತ್ತು ಶೈಲಿ

**ಅಧ್ಯಾಯ–5** **ಪ್ರಾಚೀನ ಮತ್ತು ಅರ್ವಾಚೀನ ಬೌದ್ಧಧರ್ಮಗಳು – ಒಂದು ಸ್ಥೂಲ ಪರಿಚಯ** : ಪ್ರಾಚೀನ ಬೌದ್ಧಧರ್ಮ – ಚತುರಾರ್ಯ ಸತ್ಯಗಳು – ಆರ್ಯ ಅಷ್ಟಾಂಗಿಕ ಮಾರ್ಗ – ಅರ್ವಾಚೀನ ಬೌದ್ಧಧರ್ಮ – ಕಾರ್ಯಕಾರಣವಾದ – ಕರ್ಮ ಸಿದ್ಧಾಂತ – ಕ್ಷಣಿಕ ವಾದ – ನೈರಾತ್ಮ್ಯವಾದ

**ಅಧ್ಯಾಯ–6** **ಧಮ್ಮಪದದ ನೈತಿಕ ಅಂಶಗಳು:** ಇಚ್ಛಾ ಸ್ವಾತಂತ್ರ್ಯ – ಆತ್ಮ ವಿಮರ್ಶೆ – ತ್ರಿಕರಣ ಶುದ್ಧಿ

**ಅಧ್ಯಾಯ–7** **ನೈತಿಕ ಅಂಶಗಳು – ಅಹಿಂಸೆ ಮತ್ತು ಇತರ ಮೌಲ್ಯಗಳು:** ಅಹಿಂಸೆ – ಸತ್ಯ – ದಾನ – ಅಪರಿಗ್ರಹ – ಹಿರಿಯರ ಸೇವೆ

**ಅಧ್ಯಾಯ–8** **ನೈತಿಕ ಅಂಶಗಳು – ಆತ್ಮನಿಗ್ರಹ**

**ಅಧ್ಯಾಯ–9** **ನೈತಿಕ ಅಂಶಗಳು – ಅಪ್ರಮಾದ**

**ಅಧ್ಯಾಯ–10 ಸಂಸಾರ ಮತ್ತು ವೈರಾಗ್ಯ:** ಸಂಸಾರ – ಅವಿದ್ಯೆ – ವೈರಾಗ್ಯ – ಪ್ರಜ್ಞೆ ಮತ್ತು ವಿವೇಕ – ಪುಣ್ಯಗ್ರಂಥಗಳ ಅಧ್ಯಯನ

**ಅಧ್ಯಾಯ–11 ಅರಿಹಂತನ ಲಕ್ಷಣಗಳು:** ಸತ್ಪುರುಷ – ಸಾಮಾಜಿಕ ಅಂಶಗಳು – ವರ್ಣಧರ್ಮ ಒಂದು ಪರಿಶೀಲನೆ

**ಅಧ್ಯಾಯ–12 ಉಪಸಂಹಾರ:** ಸಾರಾಂಶ ಮತ್ತು ಧಮ್ಮಪದದ ಸಾಮಾಜಿಕ ಪ್ರಸ್ತುತತೆ

# ಅಧ್ಯಾಯ–2

# ಬುದ್ಧನ ಜೀವನ ಮತ್ತು ವ್ಯಕ್ತಿತ್ವ

## ಅಧ್ಯಾಯ–2

# ಬುದ್ಧನ ಜೀವನ ಮತ್ತು ವ್ಯಕ್ತಿತ್ವ

ಬೌದ್ಧಧರ್ಮವು ಮಾನವ ಬದುಕನ್ನು ಕುರಿತ ಅಮೂರ್ತ ಚಿಂತನೆಯ ಮೂರ್ತ ರೂಪವಾಗಿದೆ. ಅದು ಆಲೋಚನೆ ಮತ್ತು ಬದುಕುಗಳ ಅದ್ಭುತ ಸಾಮರಸ್ಯದ ಪ್ರತೀಕ. ಪ್ರಾಚೀನ ಬೌದ್ಧಧರ್ಮದ ಯಶಸ್ಸಿಗೆ ಕಾರಣ ಬುದ್ಧನ ಮಹಾನ್ ವ್ಯಕ್ತಿತ್ವ ಮತ್ತು ಆತನು ನಡೆಸಿದ ಉದಾತ್ತ ಜೀವನ. ಆತನಲ್ಲಿ ಆಧ್ಯಾತ್ಮಿಕ ವೈರಾಗ್ಯ, ಉದಾತ್ತ ಆದರ್ಶ ಮತ್ತು ಮನುಕುಲವನ್ನು ಕುರಿತ ಕಳಕಳಿಯನ್ನು ಕಾಣಬಹುದು. ಬುದ್ಧ ಎಂದರೆ ಜ್ಞಾನಿಯೆಂದರ್ಥ. ಗೌತಮ ಸಿದ್ಧಾರ್ಥನು ಈ ಬಿರುದನ್ನು ಜ್ಞಾನ ಪ್ರತಿಭೆಯ ನಂತರ ಪಡೆದುಕೊಂಡದ್ದು. ಆತನು ಕ್ರಿ.ಪೂ.567ರಲ್ಲಿ ಜನಿಸಿದನು. ಆತನ ಮೂಲನಾಮ ಸಿದ್ಧಾರ್ಥನೆಂದು. ಯಾರು ತನ್ನ ಗುರಿಯನ್ನು ಸಾಧಿಸಿರುವನೋ ಆತನೇ ಸಿದ್ಧಾರ್ಥ.[1] ಗೌತಮ ಅಥವಾ ಗೋತಮ ಎಂಬುದು ಆತನ ವಂಶದ ಹೆಸರು. ಆತನ ಜನ್ಮಸ್ಥಳಶಾಕ್ಯದ ರಾಜಧಾನಿಯಾದ ಕಪಿಲವಸ್ತು (ಹಿಮಾಲಯದ ಇಳಿಜಾರು). ಆತನ ತಾಯಿ ಮಾಯಾದೇವಿಯಾದರೆ ತಂದೆಯು ಶುದ್ಧೋದನ. ಆತನು ಶಾಕ್ಯರಾಜ್ಯದ ರಾಜಕುಮಾರನಾಗಿದ್ದ. ಆತನನ್ನು ಬೆಳೆಸಿದವಳು ಶುದ್ಧೋದನನ 2ನೇ ಹೆಂಡತಿಯಾದ ಮಹಯಾಪತಿ.[2] ಏಕೆಂದರೆ ಗೌತಮನ ಸ್ವಂತ ತಾಯಿ ಆತನನ್ನು ಹಡೆದ ಏಳೇ ದಿನಕ್ಕೆ ತೀರಿಕೊಳ್ಳುತ್ತಾಳೆ. ಗೌತಮನು ತನ್ನ ಸಂಬಂಧಿಯಾದ ಯಶೋಧರೆಯನ್ನು ವಿವಾಹವಾಗಿ ಆಕೆಯಿಂದ ರಾಹುಲನೆಂಬ ಮಗನನ್ನು ಪಡೆದ. ರಾಹುಲನು ಅನಂತರ ಗೌತಮನ ಶಿಷ್ಯನಾಗುತ್ತಾನೆ. ಸಿದ್ಧಾರ್ಥನು ಬದುಕಿನ ನಶ್ವರತೆ ಮತ್ತು ಅನಿಶ್ಚಿತತೆಗಳಿಂದ ಕಂಗೆಡುತ್ತಾನೆ. ಬದುಕಿನ ಕರಾಳ ಮುಖಗಳು ಆತನನ್ನು ಚಿಂತಾಕ್ರಾಂತನನ್ನಾಗಿಸುತ್ತದೆ. ಕಪಿಲ ವಸ್ತುವಿನ ಮಾರ್ಗದಲ್ಲಿ ಆತನು ಕಾಣುವ ನಾಲ್ಕು

ದೃಶ್ಯಗಳು ಆತನ ಮನಸ್ಸನ್ನು ಕದಡಿ ಬದುಕಿನ ಅರ್ಥವನ್ನು ಕಂಡುಕೊಳ್ಳಲು ಪ್ರೇರೇಪಿಸುತ್ತದೆ. ಬೆನ್ನು ಬಾಗಿದ ವೃದ್ಧ, ರೋಗಿಷ್ಟ, ರೋಧಿಸುವ ಸಂಬಂಧಿಗಳಿಂದ ಹಿಂಬಾಲಿಸಲ್ಪಟ್ಟ ಶವದ ದೃಶ್ಯಗಳು ಆತನ ಮನಃಶಾಂತಿಯನ್ನು ನಾಶ ಮಾಡುತ್ತವೆ. ಮೂಲತಃ ಬದುಕಿನ ಕಷ್ಟಗಳಿಗೆ ಸಿದ್ಧಾರ್ಥನು ಅತಿ ಸಂವೇದನಾಶೀಲನಾಗಿದ್ದವನು.[3] ಅನಂತರ ಆತನು ಕಾಣುವ ಸನ್ಯಾಸಿಯು ಬದುಕಿನ ರಹಸ್ಯವನ್ನು ಕಂಡುಕೊಳ್ಳಲು ಅವನನ್ನು ಪ್ರಚೋದಿಸುತ್ತಾನೆ. ಬುದ್ಧನಿಗಾದ ಈ ರೀತಿಯೇ ದೃಶ್ಯಾನುಭಾವಗಳು ಅವನ ವೈಯಕ್ತಿಕ ಸಮಸ್ಯೆಗಳು ಮಾತ್ರ ಆಗಿರಲಿಲ್ಲ. ಅದು ಇಡೀ ಮನುಕುಲವನ್ನು ಕಾಡುವ ಸಾರ್ವತ್ರಿಕ ಸಮಸ್ಯೆಯಾಗಿತ್ತು.[4] ಬದುಕನ್ನು ಕುರಿತು ಈ ಮೊದಲು ಆತನ ಮನಸ್ಸಿನಲ್ಲಿ ಆಳವಾಗಿ ನೆಲೆಯೂರಿದ್ದ ಅಭಿಪ್ರಾಯವೆಲ್ಲವೂ ಸಡಿಲಗೊಂಡವು. ಪ್ರಾಪಂಚಿಕ ವಿಷಯಗಳ ಶೂನ್ಯತೆಯ ಅರಿವು ಆತನಿಗಾಯಿತು.

ಬುದ್ಧನು ತನ್ನ ಅರಮನೆಯ ಸಿರಿವಂತಿಕೆಯನ್ನು ತೊರೆದು ದುಃಖಕಾರಣವನ್ನು ವಿಶ್ಲೇಷಿಸಲು ಹೊರಟ. ಆಗಿನ ಕಾಲದಲ್ಲಿ ಸತ್ಯಾನ್ವೇಷಕರು ದುಃಖಮುಕ್ತರಾಗಲು ಪರಿವ್ರಾಜಕ ಜೀವನವನ್ನು ನಡೆಸುತ್ತಿದ್ದರು.[5] ಜ್ಞಾನಾಕಾಂಕ್ಷಿಯು ತನ್ನ ಅನ್ವೇಷಣೆಯನ್ನು ಲೌಕಿಕ ವಿಷಯಗಳ ನಿರಾಕರಣೆಯಿಂದ ಪ್ರಾರಂಭಿಸಬೇಕಿತ್ತು. ಈ ಪ್ರಾಚೀನ ನಿಯಮಕ್ಕೆ ಅನುಸಾರವಾಗಿ ಸಿದ್ಧಾರ್ಥನು ದೇಹದಂಡನೆಯ ಮಾರ್ಗವನ್ನು ಅನುಸರಿಸಿದನು. ತನ್ನ ದುಬಾರಿ ವಸ್ತ್ರವನ್ನು ತ್ಯಜಿಸಿ, ಪೀತ ವಸ್ತ್ರವನ್ನು ಧರಿಸಿ ಭಿಕ್ಷು ಜೀವನವನ್ನು ಪ್ರಾರಂಭಿಸಿದನು. ಇದು ಬಹುತೇಕ ಆತನ 29ನೇ ವಯಸ್ಸಿನಲ್ಲಿ ಪ್ರಾರಂಭವಾದದ್ದು. ಗಾಢವಾದ ತಾತ್ತ್ವಿಕ ಚಿಂತನೆಯ ಮೂಲಕ ಆತನು ಆಧ್ಯಾತ್ಮಿಕ ಶಾಂತಿಯನ್ನು ಪಡೆದುಕೊಳ್ಳಲು ಯತ್ನಿಸಿದ. ಆದರೆ ಈ ಶುಷ್ಕ ತಾತ್ತ್ವಿಕ ಚಿಂತನೆಯ ಮೂಲಕ ಆತನಿಗೆ ಯಶಸ್ಸು ಲಭಿಸಲಿಲ್ಲ. ಮಾನಸಿಕ ಅಶಾಂತಿಗೆ ಈ ರೀತಿಯ ಸೂಕ್ಷ್ಮ ಚಿಂತನೆಗಳು ಮದ್ದಲ್ಲ. ಈ ದುಃಖ ಮುಕ್ತಿಗೆ ಇರುವ ಮತ್ತೊಂದು ಮಾರ್ಗವೆಂದರೆ ದೇಹದಂಡನೆ.[6] ಗೌತಮನು 5 ಜನ ದೇಹದಂಡಕರೊಂದಿಗೆ

ಉರುವೇಲದ ಅರಣ್ಯದಲ್ಲಿ ಏಕಾಂತ ಜೀವನವನ್ನು ನಡೆಸಲು ಪ್ರಾರಂಭಿಸಿ ಅಲ್ಲಿ ಉಪವಾಸ ಮತ್ತು ಅತಿಯಾದ ದೇಹದಂಡನೆಯ ಮಾರ್ಗವನ್ನು ಅನುಸರಿಸಿದನು. ಆದರೆ ಇದರಿಂದ ಆತನಿಗೆ ಯಾವ ಶಾಂತಿಯೂ ದೊರೆಯಲಿಲ್ಲ. ದೇಹವನ್ನು ದಂಡಿಸಿದಷ್ಟೂ ಸತ್ಯವು ಆತನಿಂದ ದೂರವಾಗುತ್ತಿದೆ ಎಂದು ಆತನಿಗನಿಸಿತು.[7] ಗೌತಮನು ತನ್ನ ಯತ್ನದಲ್ಲಿ ಹತಾಶೆಗೊಂಡು ಒಂದು ರಾತ್ರಿ ಅತಿಯಾದ ಉಪವಾಸದಿಂದ ಪ್ರಜ್ಞೆ ತಪ್ಪಿ ಸಾಯುವ ಸ್ಥಿತಿಗೆ ಬಂದ. ಆತನಿಗೆ ಸತ್ಯವೇನೆಂಬುದು ಇನ್ನೂ ಸಮಸ್ಯೆಯಾಗಿಯೇ ಉಳಿದಿತ್ತು. ಬದುಕು ಆತನಿಗೆ ಒಂದು ಪ್ರಶ್ನೆಯಾಗಿತ್ತು.

ಗೌತಮನು ಈ ರೀತಿ ಸತತವಾಗಿ 6 ವರ್ಷಗಳ ಕಾಲ ತೀವ್ರವಾದ ದೇಹದಂಡನೆಯ ಮಾರ್ಗವನ್ನು ಅನುಸರಿಸಿದ. ಈ ಮಾರ್ಗದ ವ್ಯರ್ಥತೆಯ ಅರಿವು ಆತನಿಗಾಯಿತು. ಸಿರಿವಂತಿಕೆ, ದರ್ಶನಗಳಲ್ಲಿನ ಪಾಂಡಿತ್ಯ ಮತ್ತು ಅತಿಯಾದ ದೇಹದಂಡನೆ – ಇವೆಲ್ಲವೂ ಸಿದ್ಧಾರ್ಥನಿಂದ ವಿಮರ್ಶಿಸಲ್ಪಟ್ಟು ಆತನಿಗೆ ಈ ಎಲ್ಲಾ ಮಾರ್ಗಗಳಲ್ಲೂ ಕೊರತೆಯು ಅಥವಾ ಶೂನ್ಯತೆ ಎದ್ದು ಕಂಡಿತು.[8] ನಿಗ್ರಹಿಸಲ್ಪಟ್ಟ ಶರೀರದೊಂದಿಗೆ, ವಿನಯದಿಂದ ಕೂಡಿದ ಮನಸ್ಸಿನೊಂದಿಗೆ ಮತ್ತು ಏಕಾಂತತೆಗೆ ಹೊಂದಿಕೊಂಡ ಹೃದಯದೊಂದಿಗೆ ಆತನು ಅರಣ್ಯದಲ್ಲಿ ಜ್ಞಾನವನ್ನು ಅರಸಲು ಪ್ರಾರಂಭಿಸಿದ, ಧ್ಯಾನವಿಧಾನಕ್ಕೆ ಮೊರೆಹೋದ.[9] ಬುದ್ಧನ ಏಕಾಗ್ರತೆಯನ್ನು ವಿಮುಖಗೊಳಿಸಲು ಮಾರನು (ಕ್ಷುದ್ರದೇವತೆ) ಅನೇಕ ವ್ಯರ್ಥ ಪ್ರಯತ್ನಗಳನ್ನು ಮಾಡಿದನೆಂದು ಪ್ರತೀತಿ. ಬೋಧಿವೃಕ್ಷದ ಕೆಳಗೆ ಪೂರ್ವಾಭಿಮುಖವಾಗಿ ಕುಳಿತು ಪರಮಜ್ಞಾನವನ್ನು ಪಡೆಯುವವರೆಗೆ ತಾನು ಆ ಸ್ಥಳವನ್ನು ಬಿಟ್ಟು ಕದಲುವುದಿಲ್ಲವೆಂದು ಸಂಕಲ್ಪಿಸಿದ. ಸಿದ್ಧಾರ್ಥನು ಹಾಗೆ ಏಳು ವಾರಗಳನ್ನು ಕಳೆದ. ಈ ಗಾಢವಾದ ಧ್ಯಾನಸ್ಥಿತಿಯಲ್ಲಿ ಆತನಿಗೆ ಹೊಸ ಬೆಳಕೊಂದು ಗೋಚರಿಸಿತು. ಆತನು ತನ್ನ ಗುರಿಯನ್ನು

ಸಾಧಿಸಿದ ಮತ್ತು ಬುದ್ಧನೆನಿಸಿಕೊಂಡ. "When the mind grapples with a great and intricate problem, it makes its advances, it secures its positions step by step, with but little realization of the gains it has made, until suddenly, with an effect of abrupt illumination, it realizes its victory. So it would seem it happened to Gautama.[10]

ಬುದ್ಧನು ತಾನು ಕಂಡ ಸತ್ಯವನ್ನು ತನ್ನಲ್ಲೇ ಅಡಗಿಸಿಕೊಳ್ಳದೇ ತನ್ನ ಉಳಿದ ಬದುಕನ್ನು ಮನುಕುಲದ ಉದ್ಧಾರಕ್ಕೆ ಮುಡಿಪಾಗಿರಿಸಿದ. ಮನುಕುಲದ ಬಗ್ಗೆ ಆತನಿಗಿದ್ದ ತೀವ್ರ ಕಾಳಜಿಯು 'ಲೋಕಕ್ಕೆ ಶಾಂತಿ ದೊರೆಯುವುದಾದರೆ ಅದರ ಪ್ರತಿಯೊಬ್ಬ ವ್ಯಕ್ತಿಯ ದುಃಖವನ್ನು ಭರಿಸಲೂ ನಾನು ಸಿದ್ಧ' ಎಂಬ ಆತನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಆತನು ಬರಿಯ ಹೇಳಿಕೆ ಅಥವ ಉಪನ್ಯಾಸಗಳಿಂದ ತೃಪ್ತನಾಗಲಿಲ್ಲ. ಸಮಸ್ತ ಜೀವಿಗಳ ಉದ್ಧಾರವನ್ನು ತನ್ನ ಜೀವನದ ಉಸಿರಾಗಿಸಿಕೊಂಡ. ಕಾಲಕ್ರಮದಲ್ಲಿ ಬೌದ್ಧಮತವು ವಿಶ್ವಧರ್ಮವಾಗಿ ಪರಿಣಮಿಸಿ ಈಗಲೂ ಅದರ ಅನುಚರರು ಏಷಿಯಾದ ಬಹುದೂರದ ಭಾಗಗಳಲ್ಲಿ ನೆಲೆಸಿರುವರು. ಆಧ್ಯಾತ್ಮಿಕ ಇತಿಹಾಸದಲ್ಲಿ ಬುದ್ಧನದು ಬಹು ಉದಾತ್ತ ವ್ಯಕ್ತಿತ್ವ. ಮಾನವೀಯ ಬದುಕಿನ ಪಾಠಗಳಿಗೆ ಆತನ ಜೀವನವು ಸ್ಫೂರ್ತಿದಾಯಕ.

ಯಾವುದೇ ಭೌತಾತೀತ ಸೂಕ್ಷ್ಮ ಚರ್ಚೆಗಳಿಗೆ ಹೋಗದೇ ಬುದ್ಧನು ಜನರಿಗೆ ನೀತಿಮಾರ್ಗವನ್ನು ಬೋಧಿಸಿದ. ಮುಖದಲ್ಲಿ ತಾಂಡವಾಡುತ್ತಿದ್ದ ಮೃದುತ್ವ ಮತ್ತು ಶಾಂತತೆಗಳು, ಆತನು ನಡೆಸಿದ ಬದುಕಿನ ಘನತೆ, ಆತನು ತೋರಿಸಿದ ಪ್ರೀತಿಯಲ್ಲಿನ ಪ್ರಾಮಾಣಿಕತೆ, ಆತನ ಜ್ಞಾನ – ಇವೆಲ್ಲವೂ ಜನರ ಹೃದಯಗಳನ್ನು ಗೆದ್ದವು. ಆತನ ಮೊದಲ ಶಿಷ್ಯರು ಈ ಮೊದಲು ತಾನು ಯಾರೊಂದಿಗೆ ಕಠಿಣ ತಪಸ್ಸನ್ನು ಮಾಡುತ್ತಿದ್ದನೋ

ಆ ಐದು ಮಂದಿಯಾಗಿದ್ದರು. ಅವರಿಗೆ ಆತನು ಧರ್ಮಚಕ್ರಪ್ರವರ್ತನವನ್ನು ಕುರಿತ ಸಂದೇಶವನ್ನು ನೀಡಿದ. ಅವರು ಆತನ ಬೋಧನೆಯನ್ನು ಒಪ್ಪಿಕೊಂಡು ಸಂಘದ ಪ್ರಥಮ ಸದಸ್ಯರಾದರು.[11] ಕ್ರಮೇಣ ಸದಸ್ಯರ ಸಂಖ್ಯೆ ಹೆಚ್ಚುತ್ತಾ ಬಂದಿತು. ನೂತನ ಧರ್ಮವನ್ನು ಪ್ರಚಾರಪಡಿಸಲು ದಿಕ್ಕುದಿಕ್ಕುಗಳಿಗೆ ಸಂಘದ ಸದಸ್ಯರನ್ನು ಕಳುಹಿಸಲಾಯಿತು. ಬೌದ್ಧಧರ್ಮಕ್ಕೆ ಮತಾಂತರಗೊಂಡ ಪ್ರಾಚೀನ ಶಿಷ್ಯರೆಂದರೆ ಸಾರಿಪುತ್ತ ಮತ್ತು ಮೊಗಲ್ಲಾನ.[12] ಇವರು ರಾಜಗೃಹದ ಕಠಿಣ ತಪಸ್ವಿಗಳಾಗಿದ್ದರು. ಅನಂತರ ಇವರು ಐದು ತಪಸ್ವಿಗಳಲ್ಲಿ ಒಬ್ಬರಾದ ಅಸಜ್ಜಿಯಿಂದ ಬೌದ್ಧಧರ್ಮ ಉಪದೇಶವನ್ನು ಪಡೆದರು.[13] ಬೌದ್ಧಧರ್ಮದ ಇತರ ಪ್ರಸಿದ್ಧ ಶಿಷ್ಯರೆಂದರೆ ಉಪಾಲಿ, ಕಶ್ಯಪ ಮತ್ತು ಆನಂದ. ಬುದ್ಧನ ಮರಣಾನಂತರ ಪ್ರಥಮ ಸಭೆಯಲ್ಲಿ ವಿನಯಪಿಟಕವನ್ನು ಘೋಷಿಸಿದ್ದು ಉಪಾಲಿಯೇ.[14] ಕಶ್ಯಪನು ಈ ಪ್ರಥಮ ಸಭೆಯ ಅಧ್ಯಕ್ಷನಾಗಿದ್ದನು. ಆ ಕಾಲದಲ್ಲಿ ಈತನ ಪ್ರಾಮುಖ್ಯತೆ ಎಷ್ಟಿತ್ತೆಂದರೆ ಈತನು ಬರುವವರೆಗೆ ಬುದ್ಧನ ಶರೀರದ ಅಂತ್ಯಕ್ರಿಯೆಯನ್ನು ತಡೆಹಿಡಿಯಲಾಗಿತ್ತು.[15] ಆನಂದನು ಬುದ್ಧನ ಹತ್ತಿರದ ಸಂಬಂಧಿಯೇ ಆಗಿದ್ದು ಆತನು ಮರಣ ಕಾಲದಲ್ಲಿ ಬುದ್ಧನನ್ನು ಬಹಳ ಪ್ರೀತಿಯಿಂದ ಮತ್ತು ಎಚ್ಚರಿಕೆಯಿಂದ ನೋಡಿಕೊಂಡಿದ್ದನು. ಆನಂತರ ಅನೇಕ ಬ್ರಾಹ್ಮಣ ಗುರುಗಳು ಬೌದ್ಧಧರ್ಮಕ್ಕೆ ಮತಾಂತರಗೊಂಡರು.[16] ಬುದ್ಧನು 12 ವರ್ಷಗಳ ಬಳಿಕ ತನ್ನ ತಂದೆಯ ಆಸ್ಥಾನಕ್ಕೆ ಪುನಃ ತೆರಳಿದಾಗ ಆತನ ಉದ್ದೇಶ ತನ್ನ ತಂದೆತಾಯಿಗಳನ್ನು ಹಾಗೂ ಹೆಂಡತಿ ಮಗನನ್ನು ತನ್ನ ಧರ್ಮಕ್ಕೆ ಸೇರಿಸುವುದಾಗಿತ್ತು. ಅನೇಕ ಜನಸಾಮಾನ್ಯರು ಮತ್ತು ಕೆಲವು ಸ್ತ್ರೀಯರು ಬುದ್ಧನ ಶಿಷ್ಯರಾದರು. ಸುಭದ್ರ ಎಂಬುವವನು ಬುದ್ಧನ ಕೊನೆಯ ಶಿಷ್ಯನಾಗಿದ್ದನು.[17] ಕೊನೆಯ ದಿನಗಳಲ್ಲಿ ಶಿಷ್ಯರಿಗೆ ಇದ್ದಿರಬಹುದಾದ ಸಂದೇಹಗಳನ್ನು ಬುದ್ಧ ನಿವಾರಿಸಿದನು. ಆತನು ನೀಡಿದ ಕೊನೆಯ ಉಪದೇಶವೆಂದರೆ "ಸೋದರರೇ ನಾನೀಗ ಹೊರಡುತ್ತಿದ್ದೇನೆ, ಈ ಪ್ರಪಂಚದಲ್ಲಿ ಎಲ್ಲವೂ ನಶ್ವರ, ನಿಮ್ಮ ಮುಕ್ತಿಯನ್ನು ನೀವೇ

ಕಂಡುಕೊಳ್ಳಿ" ಎಂಬುದಾಗಿತ್ತು.[18] ಬುದ್ಧನು ತನ್ನ 80ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದನೆಂದು ಹೇಳುತ್ತಾರೆ. ಬುದ್ಧನನ್ನು ಶಾಕ್ಯಮುನಿ ಮತ್ತು ತಥಾಗತನೆಂದೂ ಕರೆಯುತ್ತಾರೆ. ಶಾಕ್ಯಮುನಿಯೆಂದರೆ, ಶಾಕ್ಯರಲ್ಲಿ ಮುನಿಯಾದವನೆಂದರ್ಥ. ತಥಾಗತನೆಂದರೆ ಸತ್ಯದಲ್ಲಿ ನೆಲೆಸಿದವನೆಂದರ್ಥ.[19]

ಬುದ್ಧನ ಜೀವನವನ್ನು ಕುರಿತಂತೆ ಇನ್ನೂ ಕೆಲವು ಸಂಗತಿಗಳು **ಲಲಿತವಿಸ್ತರ**ದಲ್ಲೂ ಮತ್ತು **ಜಾತಕ ಕಥೆ**ಗಳಲ್ಲೂ ಇವೆಯಾದರೂ ಇವೆಲ್ಲವೂ ದಂತಕತೆಗಳ ರೂಪದಲ್ಲೇ ಇವೆ.[20] ಇದೇನೇ ಇರಲಿ ಬುದ್ಧನ ಜೀವನವನ್ನು ಕುರಿತ ವಿವರಗಳನ್ನು ನೀಡುವ ಗ್ರಂಥಗಳು ಬುದ್ಧನು ಗತಿಸಿದ 200 ವರ್ಷಗಳ ನಂತರ ರಚಿಸಲ್ಪಟ್ಟವು. ಇವುಗಳಲ್ಲಿ ಕೆಲವು ಅಂಶಗಳನ್ನು ಮಾತ್ರ ಪ್ರಮಾಣವೆಂದು ಸ್ವೀಕರಿಸಬಹುದಾದರೂ ಇನ್ನು ಕೆಲವು ಅಂಶಗಳು ದಂತಕತೆಗಳ ರೂಪದಲ್ಲಿವೆ.[21] ಬುದ್ಧನ ಅನುಚರರು ಆತನ ಬದುಕನ್ನು ಅನೇಕ ಪವಾಡಗಳ ರೂಪದಲ್ಲಿ ಚಿತ್ರಿಸಿರಬಹುದು. ಇವು ನಮ್ಮ ಹೃದಯ ಮತ್ತು ಕಲ್ಪನೆಗಳಿಗೆ ಎಷ್ಟೇ ಸ್ಪಂದಿಸಿದರೂ ಇವುಗಳನ್ನು ನಾವು ಪ್ರಮಾಣವೆಂದು ಸ್ವೀಕರಿಸಲು ಸಾಧ್ಯವಿಲ್ಲ.[22]

## ಬುದ್ಧನ ಜೀವಿತಾವಧಿಯ ಪರಿಸ್ಥಿತಿ

ಪ್ರತಿಯೊಂದು ಚಿಂತನೆಯೂ ಆಗಿನ ಕಾಲದಲ್ಲಿ ಪ್ರಚಲಿತವಿದ್ದ ಸಾಮಾಜಿಕ ಧೋರಣೆಯನ್ನು, ರೀತಿ ನೀತಿಗಳನ್ನು ಪ್ರತಿನಿಧಿಸುತ್ತದೆ. ಈ ಸಾಮಾಜಿಕ ಧೋರಣೆಯನ್ನಾಗಲೀ, ರೀತಿನೀತಿಗಳನ್ನಾಗಲೀ ತಿಳಿಯದೇ ನಾವು ಆ ಚಿಂತನೆಯನ್ನು ಅರಿಯಲು ಸಾಧ್ಯವಿಲ್ಲ. ಆಗ ಭಾರತದಲ್ಲಿ ಒಂದೇ ಒಂದು ಸಾಮ್ರಾಜ್ಯವಿರಲಿಲ್ಲ. ಅದು ಸಣ್ಣ ಸಣ್ಣ ರಾಜ್ಯಗಳಾಗಿ ಒಡೆಯಲ್ಪಟ್ಟು ಅವುಗಳನ್ನು ವಿವಿಧ ರಾಜರುಗಳು ಆಳುತ್ತಿದ್ದರು. ಸಂಸ್ಕೃತವು ಪವಿತ್ರ ಭಾಷೆಯೆಂದು ಅಂಗೀಕೃತವಾಗಿದ್ದರೂ ಇತರ ಹಲವಾರು ಭಾಷೆಗಳು

ಬಳಕೆಯಲ್ಲಿದ್ದವು. ವೇದವು ಈಗಾಗಲೇ ಅತ್ಯುನ್ನತ ಮಟ್ಟದ ಪವಿತ್ರತೆಯನ್ನು ಹೊಂದಿತ್ತು. ಆಗಾಗಲೇ ಜನರ ರೀತಿನೀತಿಗಳನ್ನು ವಿವರಿಸುವ ಮನುಸ್ಮೃತಿಯು ಜನಪ್ರಿಯವಾಗಿತ್ತು. ಷಡ್ದರ್ಶನಗಳು ಅಷ್ಟು ವ್ಯವಸ್ಥಿತವಾಗಿ ಇನ್ನೂ ರೂಪುಗೊಂಡಿರಲಿಲ್ಲ. ಆದರೆ ಅವು ರೂಪುಗೊಳ್ಳಲು ಅಗತ್ಯವಾದ ಜಿಜ್ಞಾಸೆಯು ಜೀವಂತವಾಗಿತ್ತು. ಭೌತಾತೀತ ಸೂಕ್ಷ್ಮತೆಗಳು ಮತ್ತು ದೇವತಾಶಾಸ್ತ್ರೀಯ ಚರ್ಚೆಗಳು ಜನರ ಮನಸ್ಸನ್ನು ಆವರಿಸಿ, ಅವರ ನೈತಿಕ ಬದುಕು ಅಲಕ್ಷಿತವಾಗಿ ಕುಂಠಿತವಾಗಿ ಹೋಗಿತ್ತು.[23] ವಿವಿಧ ರೀತಿಯ ಸಿದ್ಧಾಂತಗಳು ಪ್ರಚಲಿತವಾಗಿದ್ದವು. ಪ್ರಪಂಚ ಮತ್ತು ಆತ್ಮಗಳು ಅಂತವೋ ಅಥವಾ ಅನಂತವೋ ಅಥವಾ ಎರಡೂ ಅಲ್ಲವೋ ಅಥವಾ ಎರಡು ಆಗಿವೆಯೋ, ಸತ್ಯ ಮತ್ತು ತೋರಿಕೆಗಳಿಗೆ ಇರುವ ವ್ಯತ್ಯಾಸವೇನು, ಈ ಪ್ರಪಂಚದಾಚೆ ಸತ್ಯವೆಂಬುದು ಏನಾದರೂ ಇದೆಯೋ, ಮರಣಾನಂತರ ಆತ್ಮವು ಅಸ್ತಿತ್ವದಲ್ಲಿರುತ್ತದೆಯೇ, ತನ್ನಗಿಷ್ಟ ಬಂದಂತೆ ನಡೆಯುವ ಇಚ್ಛಾ ಸ್ವಾತಂತ್ರ್ಯವು ಮನುಷ್ಯನಿಗಿದೆಯೇ – ಈ ಎಲ್ಲ ಪ್ರಶ್ನೆಗಳೂ ಆಗಿನ ಕಾಲದ ಮನಸ್ಸನ್ನು ತುಂಬಿಹೋಗಿದ್ದವು. ಕೆಲವರು ದೇವರೇ ಅಂತಿಮ ಸತ್ಯವೆಂದು ಸಾರಿದರೆ, ಇನ್ನು ಕೆಲವರು ಮನುಷ್ಯನೇ ಅಂತಿಮ ಸತ್ಯವೆಂದು ಘೋಷಿಸಿದರು. ಕೆಲವರು ವ್ಯವಸ್ಥಿತವಾದ ತಾತ್ವಿಕ ಸಿದ್ಧಾಂತವನ್ನು ತರ್ಕಬದ್ಧವಾಗಿ ಹೆಣೆದರೆ, ಇನ್ನು ಕೆಲವರು ಅವುಗಳನ್ನು ಖಂಡಿಸುವ ಕಾರ್ಯಗಳಲ್ಲಿ ತೊಡಗಿದರು. ವೈದಿಕ ಸಂಪ್ರದಾಯಕ್ಕಿಂತಲೂ ವಿಭಿನ್ನವಾದ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡವು. ಉದಾಹರಣೆಗೆ ದಿಗಂಬರರು ಮತ್ತು ಶ್ರಮಣರು. ಇವರಾರೂ ಬ್ರಾಹ್ಮಣ ವೈದಿಕ ಸಂಪ್ರದಾಯಕ್ಕೆ ಸೇರಿದವರಲ್ಲ. ಅನೇಕರು ದೇಹವನ್ನು ದಂಡಿಸುವ ಮೂಲಕ ಶಾಂತಿಯನ್ನು ಅರಸಲು ಪ್ರಯತ್ನಿಸುತ್ತಿದ್ದರು. ಇನ್ನು ಅನೇಕರು ತಾರ್ಕಿಕರಾಗಿದ್ದರೂ ಚಾರ್ವಾಕರೂ ಮತ್ತು ಸಂದೇಹವಾದಿಗಳೂ ಆಗಿದ್ದರು. ಒಂದು ಕಲ್ಲಿನ ಕಂಬವನ್ನು ಕೂಡ ತನ್ನ ಮಾತಿನಿಂದ ಅಲುಗಾಡಿಸಬಲ್ಲನೆಂದು ಜಂಭ ಕೊಚ್ಚಿಕೊಳ್ಳುವ ಸಚ್ಚಕನಂತಹ

ಅಹಂಕಾರಿಗಳೂ ಇದ್ದರು.[24] ಒಟ್ಟಾರೆ ಅದೊಂದು ಗೊಂದಲಮಯ ಯುಗವಾಗಿತ್ತು. ಇಲ್ಲಿ ಯಾವುದೇ ಸಿದ್ಧಾಂತಗಳಿಗೆ ಪರಸ್ಪರ ಹೊಂದಾಣಿಕೆಯಿರಲಿಲ್ಲ, ಎಲ್ಲವೂ ಅಸ್ಪಷ್ಟವಾಗಿದ್ದವು. ಮಹಾಸತ್ಯಗಳು ಈ ರೀತಿ ಅಸ್ಪಷ್ಟ ಭೌತಾತೀತ ಶಾಸ್ತ್ರದಲ್ಲಿ ಮುಚ್ಚಿಹೋಗಿದ್ದವು. ಯಾರು ಸತ್ಯವನ್ನು ಕಾಣಲಾರರೋ ಅಂತಹವರು ವಿಚಿತ್ರ ಕಲ್ಪನೆಗಳ ಮಾರ್ಗವನ್ನು ಹಿಡಿಯುತ್ತಾರೆ.[25] ಬುದ್ಧನು ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಎಲ್ಲ ರೀತಿಯ ಗೊಂದಲಮಯ ಸಿದ್ಧಾಂತಗಳನ್ನೂ ಪರಿಶೀಲಿಸಿ ಭೌತಾತೀತ ಚಿಂತನೆಗಳ ವ್ಯರ್ಥತೆಯನ್ನು ಮನಗಂಡ. ಆಲೋಚನೆಯಲ್ಲಿನ ಅನಿಶ್ಚಿತತೆ ಮತ್ತು ಗೊಂದಲಗಳು ಮಾನವನ ನೈತಿಕ ಬದುಕಿಗೆ ಹಾನಿಕಾರಕ. ಆಲೋಚನೆಯಲ್ಲಿನ ಅರಾಜಕತೆಯು ನೈತಿಕತೆಯ ಅರಾಜಕತೆಗೆ ದಾರಿ ಮಾಡಿಕೊಡುತ್ತದೆ.[26] ಬುದ್ಧನು ಇಂತಹ ಭೌತಾತೀತ ಚರ್ಚೆಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ತೀರ್ಮಾನಿಸಿದ. ಬೌದ್ಧಧರ್ಮದಲ್ಲಿ ನಾವು ಕಾಣುವ ಭೌತಾತೀತ ಶಾಸ್ತ್ರವು ಮೂಲ ಧಮ್ಮವಲ್ಲ. ಬದಲಾಗಿ ಅದು ಅನಂತರ ಬೌದ್ಧಧರ್ಮಕ್ಕೆ ಸೇರಿಸಲ್ಪಟ್ಟಿತು (ಅಭಿಧಮ್ಮ). ಬೌದ್ಧಧರ್ಮವು ಮೂಲತಃ ಒಂದು ನೀತಿಶಾಸ್ತ್ರವೇ ಹೊರತು ಭೌತಾತೀತ ಶಾಸ್ತ್ರವಲ್ಲ.[27]

ಆಗಿನ ಕಾಲದಲ್ಲಿ ಮನುಷ್ಯನಿಗೆ ದೇವತೆಗಳನ್ನು ಸೃಷ್ಟಿಸುವ ಅದ್ಭುತ ಪರಿಕಲ್ಪನೆಗಳಿದ್ದವು. ದೇವತೆಗಳು ಮತ್ತು ಭೂತಗಳು ಮನುಷ್ಯನನ್ನು ಕ್ರಮವಾಗಿ ಉದ್ಧರಿಸುವ ಮತ್ತು ತೊಂದರೆಗೊಳಿಸುವ ಶಕ್ತಿಗಳನ್ನು ಹೊಂದಿದ್ದವು. ಇಂತಹ ಶಕ್ತಿಗಳೇ ಮಾನವ ಬದುಕನ್ನು ನಿಯಂತ್ರಿಸುತ್ತಿದ್ದವು. ಬಹುತೇಕ ಆಗಿನ ಕಾಲದಲ್ಲಿ ವೈದಿಕ ವಿಧಿವಿಧಾನಗಳೇ ಮಾನವ ಬದುಕನ್ನು ರೂಪಿಸುತ್ತಿತ್ತು. ಮನುಷ್ಯನು ದೇವಾನುದೇವತೆಗಳನ್ನು ತನ್ನ ಅಚ್ಚಿನಲ್ಲೇ ರೂಪಿಸಿಕೊಳ್ಳುತ್ತಿದ್ದ. ಅದ್ಭುತ ಶಕ್ತಿಯ ಜೊತೆಗೆ ದೇವತೆಗೆ ಜನಸಾಮಾನ್ಯನಂತೆ ಕೋಪವೂ ಇತ್ತು, ದೌರ್ಬಲ್ಯವು ಇತ್ತು. ಈ ದೇವತೆ ತನ್ನನ್ನು ಆಶ್ರಯಿಸಿದವರನ್ನು ಉದ್ಧರಿಸುತ್ತಿದ್ದ, ಇಲ್ಲದಿದ್ದರೆ ಅವರ ಮೇಲೆ ಹಗೆ ಸಾಧಿಸುತ್ತಿದ್ದ. ಬೇರೆ ರೀತಿ ಹೇಳಬೇಕೆಂದರೆ ಈ ದೇವತೆಯ

ಮಾನವನ ಲೌಕಿಕ ವ್ಯವಹಾರಗಳಲ್ಲಿ ಅತಿಯಾಗಿ ಹಸ್ತಕ್ಷೇಪ ಮಾಡುತ್ತಿದ್ದ. ಧೂಮಕೇತುಗಳು ಈ ದೇವತೆಯ ಕೋಪದ ಲಾಂಛನವಾಗಿತ್ತು.[28] ಪಾಪದ ಪ್ರಪಂಚವನ್ನು ಎಚ್ಚರಿಸಲು ಧೂಮಕೇತುಗಳು ಗೋಚರಿಸುತ್ತಿದ್ದವೆಂದು ಮನುಷ್ಯನು ನಂಬಿದ. ದೈವ ನಿಯಮದ ಉಲ್ಲಂಘನೆಯೇ ಪಾಪವಾಗಿತ್ತು. ದೇವರನ್ನು ಪ್ರೀತಿಗೊಳಿಸುವುದು ಪುಣ್ಯವಾಗಿತ್ತು.

ದೇವರನ್ನು ಅರ್ಚಿಸುವುದರೊಂದಿಗೆ ಹೊಂದಿಕೊಂಡಿದ್ದ ಕ್ರೂರಆಚಾರಗಳು ಬುದ್ಧನ ಅಂತರಾತ್ಮವನ್ನು ಕಲಕಿದವು. ದೈವದಲ್ಲಿನ ಈ ಮೂಢನಂಬಿಕೆಯಿಂದ ಮನುಷ್ಯನ ನೈತಿಕ ವ್ಯಕ್ತಿತ್ವಕ್ಕೆ ಸಾಕಷ್ಟು ಹಾನಿಯಾಗಿತ್ತು. ನೈತಿಕತೆಗೂ ಮತ್ತು ಮತಧಾರ್ಮಿಕತೆಗೂ ಇರುವ ಗೊಂದಲದಿಂದಾಗಿ ಕೆಡುಕಿನ ವಾತಾವರಣವು ತಾಂಡವವಾಡುತ್ತಿದ್ದು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕಂದಾಚಾರಗಳು ಮನುಷ್ಯನಲ್ಲಿ ಅಲ್ಪಸ್ವಲ್ಪ ಉಳಿದಿದ್ದ ಆಧ್ಯಾತ್ಮಿಕ ಕಿಡಿಯನ್ನೂ ಆರಿಸಿಬಿಟ್ಟಿದ್ದವು. ಬುದ್ಧನು ಇಂತಹ ವಿಕೃತ ನಿಲುವುಗಳನ್ನು ಹೋಗಲಾಡಿಸಲು ಪ್ರಾರಂಭಿಸಿದ.

ಬುದ್ಧನು ಈ ಅತಿನೈಸರ್ಗಿಕತೆಗೆ ಬದಲಾಗಿ ನೈಸರ್ಗಿಕ ನಿಯಮವನ್ನು ಸ್ಥಾಪಿಸಲು ಯತ್ನಿಸಿದ. ಪ್ರತಿಯೊಬ್ಬ ಮಾನವನೂ ಯಾವುದೇ ಪುರೋಹಿತನ ಅಥವಾ ದೇವರ ಮಧ್ಯವರ್ತಿತ್ವವಿಲ್ಲದೇ ತನ್ನ ಮುಕ್ತಿಯನ್ನು ತಾನೇ ಪಡೆದುಕೊಳ್ಳಬಲ್ಲ ಎಂದು ಸಾರಿ ತನ್ಮೂಲಕ ಮಾನವನ ಘನತೆಯನ್ನು ಎತ್ತಿ ಹಿಡಿದ.[29] ಬೋಧಿಚರ್ಯಾವತಾರದಲ್ಲಿ ಹೀಗೆ ಹೇಳಲಾಗಿದೆ, "ನಮ್ಮ ಸುಖ ಮತ್ತು ದುಃಖಕ್ಕೆ ಮತ್ತೊಬ್ಬ ಕಾರಣನೆಂದು ಹೇಳುವುದು ಮೂರ್ಖತನ".[30] ಇದರಿಂದಾಗಿ ಈ ದೃಶ್ಯ ಪ್ರಪಂಚವು ತನ್ನ ವಿವರಣೆಗಾಗಿ ಯಾವುದೇ ದೇವರನ್ನು ಅವಲಂಬಿಸಿಲ್ಲವೆಂಬ ನಿಲುವು ಸ್ಥಾಪಿತವಾಯಿತು. ಉಪನಿಷತ್ತುಗಳು ಜನಸಾಮಾನ್ಯನಿಗೆ ನಿಲುಕದ ಗ್ರಂಥಗಳಾಗಿದ್ದವು. ಅವುಗಳ ಬೋಧನೆ, ಮೂಢನಂಬಿಕೆಯ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿತ್ತು. ತಪಸ್ಸಿನ ಮೂಲಕ ದೇವರನ್ನು ಒಲಿಸುವ ಮನುಷ್ಯರು ಅಂದೂ

ಇದ್ದರು. ದೇಹದಂಡನೆಯ 22 ವಿಧಾನಗಳನ್ನು ಮತ್ತು ವಸ್ತ್ರವನ್ನು ಧರಿಸುವ 13 ವಿಧಾನಗಳನ್ನು ಬುದ್ಧನು ತನ್ನ ಒಂದು ಸಂವಾದದಲ್ಲಿ ಉಲ್ಲೇಖಿಸುತ್ತಾನೆ.[31] ನೈಜ ವೈರಾಗ್ಯದ ಸೌಂದರ್ಯಕ್ಕೆ ಮೌಢ್ಯದ ತೀವ್ರತೆಯಿಂದಾಗಿ ಗ್ರಹಣ ಬಡಿದಿತ್ತು.[32] ಜನಸಾಮಾನ್ಯರು ಹೊರಗಿನ ಆಚಾರಗಳಿಗೆ ಅಂಟಿಕೊಂಡಿದ್ದರು. ದೇಶವು ಜನರನ್ನು ದೈವದ ಬಳಿ ಒಯ್ಯುವೆನೆಂದು ಹೇಳಿಕೊಳ್ಳುವ ಸ್ವಘೋಷಿತ ಪುರೋಹಿತರಿಂದ ತುಂಬಿತ್ತು. ಬುದ್ಧನಿಗೆ ಪ್ರವಾದಿಯ (Prophet) ಬಗ್ಗೆ ಗೌರವವಿತ್ತಾದರೂ ಪುರೋಹಿತರ (Priest) ಬಗ್ಗೆ ಗೌರವವಿರಲಿಲ್ಲ. ಪ್ರವಾದಿಗೆ ಕಾಂಚನದ ಬಗ್ಗೆ ಮೋಹವಿರಲಿಲ್ಲ. ಪುರೋಹಿತನಿಗೆ ಆ ಮೋಹವಿತ್ತು. ಹಣವನ್ನು ಸಂಗ್ರಹಿಸುವ ಮೂಲಕ ಅವನು ತನ್ನಲ್ಲಿ ಆಂತರಿಕವಾಗಿ ಹುದುಗಿದ್ದ ಆಧ್ಯಾತ್ಮಿಕ ಶಕ್ತಿಯನ್ನು ಕಳೆದುಕೊಂಡಿದ್ದ. ಇತರರಿಗೆ ಬೋಧಿಸುವ ಅಧಿಕಾರವು ಅವನಿಗೆ ಹೊರಟು ಹೋಗಿತ್ತು. ತಾನೊಂದು ದೊಡ್ಡ ಪ್ರವಾದಿಯೆಂದು ಘೋಷಿಸಿಕೊಳ್ಳುತ್ತ ತನಗೆ ದೈವಬಲವಿದೆಯೆಂದು ನಟಿಸುತ್ತ ಜನರನ್ನು ಮೋಸಗೊಳಿಸಲು ಪ್ರಾರಂಭಿಸಿದ. ನಿರ್ದಿಷ್ಟ ಯಜ್ಞವನ್ನು ಮಾಡಿ ತನಗಿಂತಿಷ್ಟು ದೇಣಿಗೆಯನ್ನು ನೀಡಿದರೆ ಪಾಪಗಳು ಕಳೆಯುವುದೆಂದು ಜನರಿಗೆ ಹೇಳಲು ಪ್ರಾರಂಭಿಸಿದ. ಹಣದ ಮೂಲಕ ಮುಕ್ತಿಯ ವ್ಯವಸ್ಥೆಯು ಮನುಷ್ಯನ ಹೃದಯವನ್ನು ಸ್ಪಂದಿಸಲಿಲ್ಲ.[33] ಮನುಷ್ಯನಿಗೆ ಧರ್ಮವು ಕೇವಲ ಆಚರಣೆಗಳು ವಿಧಿನಿಷೇಧಸಂಸ್ಕಾರಗಳು ಮತ್ತು ದೇಹದಂಡನೆಗಳಾಗಿ ಉಳಿದುಹೋದವು. ಬುದ್ಧನು ಈ ಆಚರಣೆಗಳಲ್ಲಿ ಪೊಳ್ಳುತನವನ್ನು ಕಂಡ.

ಕಂದಾಚಾರಗಳನ್ನೂ ನಿರ್ಮೂಲಗೊಳಿಸಿ ಶುದ್ಧ ನೈತಿಕತೆಗೆ ಭದ್ರಬುನಾದಿಯನ್ನು ಒದಗಿಸುವುದು ಬುದ್ಧನ ಗುರಿಯಾಯಿತು. ಗ್ರೀಕ್ ಪ್ರಪಂಚದಲ್ಲಿ ಪ್ಲೇಟೋ ಮತ್ತು ಅರಿಸ್ಟಾಟಲ್‌ರ ಭೌತಾತೀತ ಶಾಸ್ತ್ರವನ್ನು ಹೇಗೆ ಸ್ಟೋಯಿಕರ ಮತ್ತು ಎಫಿಕ್ಯುರಿಯನ್‌ರ ನೈತಿಕ ಮೌಲ್ಯಗಳು ಆಕ್ರಮಿಸಿಕೊಂಡವೋ ಹಾಗೆಯೇ ಪ್ರಾಚೀನ ಭಾರತದಲ್ಲೂ ನಡೆಯಿತು.[34]

ತತ್ವಶಾಸ್ತ್ರದ ಬುನಾದಿಗಳು ಅಲುಗಾಡಿಸಲ್ಪಟ್ಟು ಆ ಸ್ಥಾನವನ್ನು ನೈತಿಕ ಮೌಲ್ಯಗಳು ಆಕ್ರಮಿಸಿಕೊಂಡವು. ನೀತಿಶಾಸ್ತ್ರವನ್ನು ಭೌತಾತೀತಶಾಸ್ತ್ರವೆಂಬ ಅಥವಾ ದೇವತಾಶಾಸ್ತ್ರವೆಂಬ ಮರಳಿನ ಮೇಲೆ ಕಟ್ಟಿದಲ್ಲಿ ಅದಕ್ಕೆ ಸ್ವಾಯತ್ತವಿರುವುದಿಲ್ಲ. ಬುದ್ಧನು ನೀತಿಶಾಸ್ತ್ರವನ್ನು ವಸ್ತುಸ್ಥಿತಿಯೆಂಬ ದೃಢವಾದ ಬಂಡೆಯ ಮೇಲೆ ಕಟ್ಟಲು ಪ್ರಾರಂಭಿಸಿದ.[35] ಆತನ ದೃಷ್ಟಿಯೆಲ್ಲವೂ ದೈವಸೇವೆಯಿಂದ ಮನುಜ ಸೇವೆಯೆಡೆಗೆ ಸಾಗಿತು. ಆತನ ಉದ್ದೇಶ ಪುರೋಹಿತಶಾಹಿ, ಕಂದಾಚಾರಗಳಿಗಿಂತಲೂ ಸ್ವತಂತ್ರವಾದ ಒಂದು ಶುದ್ಧ ಧರ್ಮವನ್ನು ಸ್ಥಾಪಿಸುವುದಾಗಿತ್ತು. ಮುಕ್ತಿಯು ಸಂದೇಹಾಸ್ಪದವಾದ ಮೂಢ ಆಚಾರಗಳನ್ನು ಅವಲಂಬಿಸುವುದರಲ್ಲಿ ಇಲ್ಲವೆಂದು ಆತನು ಸ್ಪಷ್ಟಪಡಿಸಿದ. ಆತನ ಪ್ರಕಾರ ಅದು ಅವಲಂಬಿಸುವುದು ಪರಿಪೂರ್ಣವಾದ ಶೀಲವನ್ನು. ನೈತಿಕ ನಿಯಮವು ಯಾವುದೋ ಅಸಾಧಾರಣವಾದ ಮನಸ್ಸಿನ ಸೃಷ್ಟಿಯಲ್ಲ, ಯಾವುದೋ ಧರ್ಮಗ್ರಂಥದಲ್ಲಿ ಅಡಕವಾಗಿರುವ ತತ್ವವಲ್ಲ. ಅದು ನಿಸರ್ಗದ ವಸ್ತುಗಳಲ್ಲಿ ಅಂತರ್ಗತವಾಗಿರುವಂತಹುದು. ಈ ಸತ್ಯವನ್ನು ಕುರಿತ ಅಜ್ಞಾನವೇ ನಮ್ಮೆಲ್ಲ ದುಃಖಗಳಿಗೂ ಕಾರಣ. ಹೀಗೆ ಪ್ರಾಚೀನ ಬೌದ್ಧಧರ್ಮದಲ್ಲಿ ಎದ್ದುಕಾಣುವ ಮೂರು ಅಂಶಗಳೆಂದರೆ, ನೈತಿಕ ಪ್ರಾಮಾಣಿಕತೆ, ಯಾವುದೇ ದೇವತಾಶಾಸ್ತ್ರೀಯ ಮನೋಧರ್ಮದ ಅಭಾವ ಮತ್ತು ಭೌತಾತೀತ ಚರ್ಚೆಗಳನ್ನು ಕುರಿತ ಉಪೇಕ್ಷೆ.[36]

ಹೀಗೆ ಬುದ್ಧನ ಯುಗವು ಆತ್ಮ ವಿಶ್ಲೇಷಣೆ ಮತ್ತು ಆತ್ಮಪರೀಕ್ಷೆಯ ಯುಗವಾಗಿತ್ತು. ಅದುವರೆಗೆ ಪ್ರಶ್ನಿಸದೇ ಸತ್ಯವೆಂದು ಸ್ವೀಕೃತವಾಗಿದ್ದ ಎಲ್ಲ ಅಂಶಗಳನ್ನೂ ಮನುಷ್ಯನು ಪರಿಶೀಲನೆಯ ದೃಷ್ಟಿಯಿಂದ ವಿಮರ್ಶಿಸಲು ಪ್ರಾರಂಭಿಸಿದ. ಬುದ್ಧನು ವಿಮರ್ಶಾತ್ಮಕ ಸ್ಫೂರ್ತಿಯನ್ನು ಬೆಳೆಸಿಕೊಂಡನಷ್ಟೇ ಅಲ್ಲ, ಆ ವಿಮರ್ಶೆಗೆ ಒಂದು ಎಲ್ಲೆಯನ್ನೂ ನಿಗದಿಪಡಿಸಿದ. ಸಂದೇಹವಾದಿಯಂತೆ ಆತನು ಎಲ್ಲವನ್ನೂ ನಿರಾಕರಿಸಲು ಹೋಗಲಿಲ್ಲ.[37]

ಸಾಂಪ್ರದಾಯಿಕ ನಂಬಿಕೆಗಳನ್ನು ಆತನು ಪುನರ್‌ವಿಮರ್ಶೆಗೆ ಒಳಪಡಿಸಿದ. ಆತನ ಉದ್ದೇಶ ಈ ದಿಸೆಯಲ್ಲಿ ರಚನಾತ್ಮಕವಾಗಿತ್ತೇ ಹೊರತು, ಎಲ್ಲವನ್ನೂ ಖಂಡಿಸುವ ವಿನಾಶಕಾರೀ ಧೋರಣೆಯಾಗಿರಲಿಲ್ಲ. ಕಾಲವು ಬದಲಿಸಿತ್ತು, ವಿವೇಕವು ಜಾಗೃತವಾಗಿತ್ತು, ಸಾಂಪ್ರದಾಯಿಕ ಧರ್ಮವು ನಂಬಲು ಅಸಾಧ್ಯವಾಗಿತ್ತು. ಅದೇ ರೀತಿ ಯಾವುದನ್ನೂ ಒಪ್ಪಿಕೊಳ್ಳದ ಸಂದೇಹವಾದಿಯ ಧೋರಣೆಯನ್ನು ಸ್ವೀಕರಿಸುವುದೂ ಅಸಾಧ್ಯವಾಗಿತ್ತು. ಆಗಿನ ಕಾಲದ ಚಿಂತಕರು ಮಾನವನ ಆಕಾಂಕ್ಷೆಗಳಿಗೆ ಅನುಸಾರವಾಗಿ ಬದುಕನ್ನು ನಡೆಸಲು ಇನ್ನೂ ವಿಶಾಲವಾದ ಸಿದ್ಧಾಂತಗಳನ್ನು ರೂಪಿಸಲು ಸಿದ್ಧರಾಗುತ್ತಿದ್ದರು. ಹಾಗೆ ಮಾಡುವಲ್ಲಿ ಅವರು ತಮ್ಮ ಸಾಮಗ್ರಿಯನ್ನು ಪ್ರಸ್ತುತ ಅನುಭವದಿಂದ ತೆಗೆದುಕೊಂಡರು. ಬುದ್ಧನು ಈ ವಿಚಾರಯುಗದ ವಕ್ತಾರನಾಗಿ ಅವತರಿಸಿದನು. ಜನಪ್ರಿಯ ನಂಬಿಕೆಗಳಿಗೆ ವಿರುದ್ಧವಾದ ಪ್ರತಿಕ್ರಿಯೆಗಳಿಂದ ಆತನು ಬಹಳವಾಗಿ ಪ್ರಭಾವಿತನಾದನು. ಈ ಪ್ರತಿಕ್ರಿಯೆಗಳ ಪ್ರವಾಹವನ್ನು ಮತ್ತೂ ತೀವ್ರಗೊಳಿಸಿದನೆಂದು ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅಂದಿನ ಕಾಲದ ಸ್ಫೂರ್ತಿಯಲ್ಲಿ ಆತನು ಒಬ್ಬ ಪ್ರವಾದಿಯಾಗಿದ್ದ. ಹೆಗಲ್ ಜೀನಿಯಸ ಬಗ್ಗೆ ಈ ರೀತಿ ಬರೆಯುತ್ತಾನೆ, "ಒಂದು ಕಟ್ಟಡ ನಿರ್ಮಾಣದಲ್ಲಿ ಕೊನೆಯ ಕಲ್ಲನ್ನು ಇರಿಸುವವನು ಜೀನಿಯಸ್. ಈ ನಿರ್ಮಾಣದಲ್ಲಿ ಅನೇಕ ಕೈಗಳು ಅವನಿಗೆ ಸಹಕರಿಸುತ್ತವೆ. ಆದರೆ ಕಟ್ಟಡವು ಪೂರ್ಣತೆ ಪಡೆಯುವುದು ಆತನ ಕೈಗಳಲ್ಲಿ ಮಾತ್ರ". ಬುದ್ಧನು ಅಂತಹ ಒಬ್ಬ ಜೀನಿಯಸ್ ಆಗಿದ್ದನು.[38] ಬುದ್ಧನಿಗೂ ಆತನ ಪೂರ್ವಜರಿಗೂ ಇದ್ದ ಸಂಬಂಧವನ್ನು ಸಾಕ್ರಟೀಸ್ ಮತ್ತು ಸೋಫಿಸ್ಟರಿಗೂ ಇದ್ದ ಸಂಬಂಧಕ್ಕೆ ನಾವು ಹೋಲಿಸಬಹುದು. ಆತನ ಚಿಂತನೆಯು ಆಗ ಪ್ರಚಲಿತವಿದ್ದ ವಿವಿಧ ವಿರೋಧಾಭಾಸಾತ್ಮಕವಾದ ಚಿಂತನೆಗಳನ್ನು ಕುರಿತ ವಿಮರ್ಶೆಯಿಂದ ಉದ್ಭವವಾದುದು.

ಎಸ್.ರಾಧಾಕೃಷ್ಣನ್ ಪ್ರಕಾರ ಬುದ್ಧನು ಒಬ್ಬ ವಿಚಾರವಾದಿ ಆಗಿರಲಿಲ್ಲ. ಬೇನ್ ಎಂಬಾತನು ತನ್ನ "History of English Rationalism in the 19th Century" (Vol-1) ಎಂಬ ಗ್ರಂಥದಲ್ಲಿ ವಿಚಾರವಾದಕ್ಕೆ ಹೀಗೆ ವ್ಯಾಖ್ಯೆ ನೀಡುತ್ತಾನೆ, **"ಧಾರ್ಮಿಕ ನಂಬಿಕೆಗಳನ್ನು ನಾಶಮಾಡಲು ವಿಚಾರವನ್ನು ಬಳಸುವ ನಮ್ಮ ಮನಸ್ಸಿನ ಅಭ್ಯಾಸವೇ ವಿಚಾರವಾದ"**.[39] ಈ ಅರ್ಥದಲ್ಲಿ ಬುದ್ಧನು ವಿಚಾರವಾದಿ ಆಗಿರಲಿಲ್ಲ. ಬುದ್ಧನು ಯಾವುದನ್ನೂ ನಾಶಮಾಡಲು ಬರಲಿಲ್ಲ. ಆತನು ಒಬ್ಬ ಪ್ರಾಮಾಣಿಕ ಸತ್ಯಾನ್ವೇಷಕನಾಗಿದ್ದನು. ಯಾವುದೇ ಪೂರ್ವಗ್ರಹದೊಂದಿಗೆ ಆತನು ಸತ್ಯಾನ್ವೇಷಣೆಯಲ್ಲಿ ತೊಡಗಲಿಲ್ಲ. ಸತ್ಯವನ್ನು ಅಥವಾ ಅನುಭವವನ್ನು ಯಾವುದೇ ಅತಿಮಾನುಷ ಅಥವಾ ಧಾರ್ಮಿಕ ಗ್ರಂಥದ ಸಂಬಂಧವಿಲ್ಲದೇ ಆತನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿದನು ಎಂಬರ್ಥದಲ್ಲಿ ಆತನೊಬ್ಬ ವಿಚಾರವಾದಿಯಾಗಿದ್ದ. ಈ ವಿಷಯದಲ್ಲಿ ಆತನಿಗೂ ಆಧುನಿಕ ವಿಜ್ಞಾನಿಗೂ ಯಾವುದೇ ವ್ಯತ್ಯಾಸವಿರಲಿಲ್ಲ. ನೈಸರ್ಗಿಕ ಘಟನೆಗಳನ್ನು ವ್ಯಾಖ್ಯಾನಿಸುವಲ್ಲಿ ವಿಜ್ಞಾನಿಗಳು ಯಾವುದೇ ಅತಿಮಾನುಷ ತತ್ವಗಳಿಗೆ ಮೊರೆ ಹೋಗುವುದಿಲ್ಲ. ಬುದ್ಧನೂ ಕೂಡ ನೈಸರ್ಗಿಕ ವ್ಯವಸ್ಥೆಯನ್ನು ವಿವರಿಸುವಲ್ಲಿ ಅತಿಮಾನುಷ ಶಕ್ತಿ ಮೊರೆ ಹೋಗುವುದನ್ನು ಸಹಿಸಲಿಲ್ಲ.[40]

ಬುದ್ಧನ ಕಾಲದಲ್ಲಿ ಜನರು ಎಲ್ಲ ರೀತಿಯ ನಂಬಿಕೆಗಳಲ್ಲೂ ಶ್ರದ್ಧೆಯನ್ನು ಕಳೆದುಕೊಂಡು ಬಿಟ್ಟಿದ್ದರು. ಆದ್ದರಿಂದ ಬುದ್ಧನು ತನ್ನ ಕಾಲದಲ್ಲಿ ಜನರಿಗೆ ನಿರ್ದಿಷ್ಟ ನಂಬಿಕೆಯನ್ನು ತಳೆಯಲು ಬೋಧಿಸಲು ನಿರಾಕರಿಸಿದ. ಆತನು ಇಂತಹ ವಿಷಯದಲ್ಲಿ ನಂಬಿಕೆಯನ್ನಿಡಿ ಎಂದು ಜನರಿಗೆ ಹೇಳಲೇ ಇಲ್ಲ. ಏಕೆಂದರೆ ಜನರಿಗೆ ನಂಬಿಕೆಯಲ್ಲೇ ವಿಶ್ವಾಸಗಳು ಹೊರಟುಹೋಗಿದ್ದವು. ಆದ್ದರಿಂದಲೇ ಆತನು ಅನುಭವ ಮತ್ತು ವಿಚಾರ ಮಾರ್ಗಕ್ಕೆ ಮೊರೆ ಹೋದುದು. ಶುದ್ಧ ವಿಚಾರದ ಚೌಕಟ್ಟಿನಲ್ಲಿ ಒಂದು ಧರ್ಮವನ್ನು

ಸ್ಥಾಪಿಸಲು ಯತ್ನಿಸಿದ. ಹೀಗೆ ಮಾಡುವಲ್ಲಿ ಆತನು ತನ್ನನ್ನು ಪ್ರವಾದಿ ಎಂದು ಘೋಷಿಸಿಕೊಳ್ಳಲಿಲ್ಲ.[41] ಆತನೊಬ್ಬ ಜಿಜ್ಞಾಸು ಆಗಿದ್ದ. ಎದುರಾಳನ್ನು ಸತ್ಯದ ಬಗ್ಗೆ ಖಚಿತಪಡಿಸುವ ಮೂಲಕ ಅವರನ್ನು ಮುಕ್ತಿಗೆ ಕರೆದೊಯ್ದ. ತನ್ನ ಅನುಭವವನ್ನು ತನ್ನ ಅನುಚರರ ಮುಂದಿಟ್ಟು ಅದನ್ನು ಶಿಷ್ಯರೇ ಖುದ್ದಾಗಿ ಪರಿಶೀಲಿಸಲು ಬೋಧಿಸಿದ. ಆತನೇ ಒಂದು ಕಡೆ ಹೇಳುವಂತೆ ಆತನ ಸಿದ್ಧಾಂತವು ಗಾಳಿಸುದ್ದಿಯನ್ನು ಆಧರಿಸಿರಲಿಲ್ಲ. ಬದಲಾಗಿ ಅದು 'ಬಾ' ಮತ್ತು 'ನೋಡು' ಎಂಬುದನ್ನು ಆಧರಿಸಿತ್ತು. ಬುದ್ಧನೇನೂ ಮನುಷ್ಯರನ್ನು ಮರುಳು ಮಾಡಲಿಲ್ಲ. ಬದಲಾಗಿ ತನ್ನಂತೆ ಅವರು ಹೇಗೆ ಮುಕ್ತರಾಗಬಹುದು ಎಂಬುದನ್ನು ಬೋಧಿಸಿದ.[42] ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದಂತೆ ಬುದ್ಧನು ಮಾರ್ಗದಾತನಾಗಿದ್ದನೇ ಹೊರತು ಮೋಕ್ಷದಾತನಾಗಿರಲಿಲ್ಲ.[43] ಬುದ್ಧನು ಈ ವಿಷಯದಲ್ಲಿ ಯಾರಿಗೂ ಹೀಗೆ ಮಾಡಿ ಎಂದು ಹೇಳಲೇ ಇಲ್ಲ. ಆತನೊಬ್ಬ ಅದ್ಭುತ ಮನೋವಿಜ್ಞಾನಿಯಾಗಿದ್ದ. ಎಲ್ಲ ರೀತಿಯ ಅಸಂಬದ್ಧ ಚರ್ಚೆಗಳಿಂದ ತನ್ನ ನಿಲುವನ್ನು ದೂರಗೊಳಿಸಿ ಅದನ್ನು ಅನುಭವದ ಭದ್ರ ಬುನಾದಿಯ ಮೇಲೆ ಇರಿಸಿದ. ಆತನ ಪ್ರಕಾರ ವ್ಯಕ್ತಿಯು ವಸ್ತುಗಳನ್ನು ಅವು ಇದ್ದಂತೆ ತಿಳಿದಿದ್ದರೆ ಆತನು ನೆರಳಿನ ಹಾದಿಯನ್ನು ಹಿಡಿಯುವುದಿಲ್ಲ. ಬದಲಾಗಿ ಒಳಿತಿನ ಹಾದಿಯನ್ನು ಹಿಡಿಯುತ್ತಾನೆ.[44] ಒಟ್ಟಾರೆ ಆತನ ಪ್ರಕಾರ ನಮ್ಮೆಲ್ಲರ ಅರಿವು ಅನುಭವವನ್ನು ಆಧರಿಸಿರಬೇಕು.

## ಅಡಿ ಟಿಪ್ಪಣಿಗಳು

1. Radhakrishnan, ***Indian Philosophy***, ***Volume 1***, The Macmillan Company, New York, 1958, ಪು.347
2. ಅದೇ ಪು.347
3. ಅದೇ ಪು.347
4. ಅದೇ ಪು.348
5. ಅದೇ ಪು.348
6. ಅದೇ ಪು.348
7. ಅದೇ ಪು.348
8. ಅದೇ ಪು.349
9. ಅದೇ ಪು.349
10. H.G. Wells, ***The Outline of History***, Cassell and Company Ltd., London, 1956, ಪು.390
11. Radhakrishnan, ಪೂರ್ವೋಕ್ತ, ಪು.350
12. ಅದೇ ಪು.350
13. ಅದೇ ಪು.350
14. ಅದೇ ಪು.350
15. ಅದೇ ಪು.350
16. ಅದೇ ಪು.350
17. ಅದೇ ಪು.350
18. ಅದೇ ಪು.350–351
19. ಅದೇ ಪು.351
20. ಅದೇ ಪು.351
21. ಅದೇ ಪು.351
22. ಅದೇ ಪು.351
23. ಅದೇ ಪು.352
24. ಅದೇ ಪು.353
25. ಅದೇ ಪು.353
26. ಅದೇ ಪು.353
27. ಅದೇ ಪು.353

28. ಅದೇ ಪು.354

29. ಅದೇ ಪು.355

30. ಅದೇ ಪು.355

31. ಅದೇ ಪು.356

32. ಅದೇ ಪು.356

33. ಅದೇ ಪು.356

34. ಅದೇ ಪು.357

35. ಅದೇ ಪು.357

36. ಅದೇ ಪು.358

37. ಅದೇ ಪು.358

38. ಅದೇ ಪು.359

39. ಅದೇ ಪು.359

40. ಅದೇ ಪು.359

41. ಅದೇ ಪು.359

42. ಅದೇ ಪು.359–360

43. Dr.B.R.Ambedkar, ***The Buddha and His Dhamma***, Buddha Bhoomi Publication, Nagpur, 1997, ಪು.218

44. Radhakrishnan, ಪೂರ್ವೋಕ್ತ, ಪು.360

**********

# ಅಧ್ಯಾಯ–3

# ಮೌಲ್ಯ ಪರಿಕಲ್ಪನೆ – ಒಂದು ನೋಟ

# ಅಧ್ಯಾಯ–3

# ಮೌಲ್ಯ ಪರಿಕಲ್ಪನೆ – ಒಂದು ನೋಟ

ಶಿಕ್ಷಣದ ಕಾರ್ಯಗಳು ಸ್ಥೂಲವಾಗಿ ಎರಡು. ಒಂದು, ಅದು ಬುದ್ಧಿಗೆ ತರಪೇತು ನೀಡಿ ವಿಷಯದ ಬಗ್ಗೆ ಆಸಕ್ತಿಕುತೂಹಲಗಳನ್ನು ಕೆರಳಿಸುತ್ತದೆ. ಎರಡು, ಅದು ಆಧುನಿಕವಾಗಿದ್ದು ನಮ್ಮ ಸಂಕೀರ್ಣ ಸಮಾಜದ ಪ್ರಸ್ತುತ ಅಗತ್ಯಗಳನ್ನು ಪೂರೈಸುವಲ್ಲಿ ನೆರವಾಗುತ್ತದೆ. ವಿಜ್ಞಾನವು ಜಗತ್ತನ್ನು ಖಚಿತವಾಗಿ ವಿವರಿಸುವ ಮೂಲಕ ಅದರ ಬಗ್ಗೆ ನಮ್ಮ ಕುತೂಹಲವನ್ನು ಕೆರಳಿಸುವುದಷ್ಟೇ ಅಲ್ಲ, ತಂತ್ರಜ್ಞಾನವನ್ನು ನೀಡುವ ಮೂಲಕ ನಮ್ಮ ಸಮಕಾಲೀನ ಅಗತ್ಯಗಳನ್ನೂ ಪೂರೈಸುತ್ತದೆ. ಅದೊಂದು ಕ್ರಾಂತಿಕಾರಕ ಶಕ್ತಿಯಾಗಿದ್ದು, ಅದರಿಂದ ನಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸಿದೆ. ಬದುಕಲು ಅದು ನಮಗೆ ಹೊಸಹೊಸ ಅವಕಾಶಗಳನ್ನು ಕಲ್ಪಿಸಿದೆ. ಆದ್ದರಿಂದ ಶಿಕ್ಷಣದಲ್ಲಿ ತಕ್ಕಡಿಯ ತಟ್ಟೆ ವಿಜ್ಞಾನದೆಡೆಗೇ ಓಲಬೇಕೆಂದು ಮತ್ತು ಅದನ್ನು ಬಿಟ್ಟು ಪ್ರಪಂಚದಲ್ಲಿ ಇನ್ನಾವ ವಿಷಯವೂ ಅಧ್ಯಯನಯೋಗ್ಯವಲ್ಲವೆಂದು ಕೆಲವರ ಮತ.

ಆದರೆ ವಿಜ್ಞಾನವು ಮನುಷ್ಯನ ಅದ್ಭುತ ಸಾಧನೆಯಾದರೂ ಅದರ ಪರಿಮಿತಿಗಳನ್ನು ನಾವು ಮರೆಯುವಂತಿಲ್ಲ. ಮೊದಲನೆಯದಾಗಿ ಅದು ನಿಖರವಾಗಿದ್ದರೂ ಅಪೂರ್ಣ. ಇದಕ್ಕೆ ಕಾರಣ, ಅದರ ಅಧ್ಯಯನವೆಲ್ಲವೂ ಬುದ್ಧೀಂದ್ರಿಯಗಳಿಗೆ ಮಾತ್ರ ಸೀಮಿತವೆಂಬುದು. ಬುದ್ಧೀಂದ್ರಿಯಗಳು ನೀಡುವ ಜ್ಞಾನವು ಅಪೂರ್ಣವಷ್ಟೇ ಅಲ್ಲ, ಕೆಲವು ವೇಳೆ ಅವು ವಸ್ತುಸ್ಥಿತಿಯನ್ನು ವಿಕೃತವಾಗಿ ತೋರಿಸುತ್ತವೆ. ಆದ್ದರಿಂದಲೇ ಸಾಕ್ರಟೀಸನು "ವಸ್ತುವನ್ನು ಬರಿಯ ಕಣ್ಣುಗಳಿಂದ ನೋಡಿದರೆ ಎಲ್ಲಿ ತನ್ನ ಅಂತರ್ದೃಷ್ಟಿಯು ಕುರುಡಾಗುವುದೋ" ಎಂದು ಭಯಪಟ್ಟದ್ದು. ಅಲ್ಲದೇ ವಿಜ್ಞಾನದ ಆಟವು ಸಾಗದ ಕ್ಷೇತ್ರಗಳು ಈ ಜಗತ್ತಿನೊಳಗೇ ಇವೆ. ಉದಾಹರಣೆಗೆ ಪರಮಾಣು ಮತ್ತು

ಜೀವಕೋಶಗಳಷ್ಟೇ ಜಗತ್ತಿನ ಅವಿಭಾಜ್ಯ ಅಂಗವಾದ ಕಲೆಯ ಬಗ್ಗೆ ವಿಜ್ಞಾನವು ಏನನ್ನೂ ಹೇಳಲಾರದು. Robert Bridges ಎಂಬ ಕವಿಯು ತನ್ನ **The Testament of Beauty** ಎಂಬ ಕೃತಿಯಲ್ಲಿ ಸಾರುವಂತೆ ವಿಜ್ಞಾನವು ಅಳತೆ ಮಾಡಬಲ್ಲದು ಮತ್ತು ವಿಶ್ಲೇಷಣೆ ಮಾಡಬಲ್ಲದು. ಆದರೆ ಅದು ಸೌಂದರ್ಯವನ್ನು ಮತ್ತು ಮನುಷ್ಯನ ಉದಾತ್ತಭಾವನೆಗಳನ್ನು ಗ್ರಹಿಸಲಾರದು. ಎರಡನೆಯದಾಗಿ, ವಿಜ್ಞಾನವನ್ನು ಆಧುನಿಕವೆನ್ನುವುದೇ ತಪ್ಪು. 19ನೇ ಶತಮಾನದ ಒಬ್ಬ ಮಹಾನ್ ಶಿಕ್ಷಣತಜ್ಞರಾದ ಸರ್ ರಿಚರ್ಡ್ ಲಿವಿಂಗ್‌ಸ್ಟನ್ ಪ್ರಕಾರ ನಾವು ಯಾವುದನ್ನು ಆಧುನಿಕವೆನ್ನುತ್ತೇವೋ ಅದು ಕೇವಲ ಅರೆಆಧುನಿಕ. ಅದಕ್ಕಿಂತಲೂ ಆಧುನಿಕವಾದುದು ಡಾರ್ವಿನ್, ಫಾರಾಡೆ ಮತ್ತು ರುದರ್‌ಫೋರ್ಡ್‌ರಿಗೆ ಸಹಸ್ರಾರು ವರ್ಷಗಳ ಮೊದಲೇ ಇತ್ತು. **ಎಂದರೆ ಒಂದು ವಿಷಯವು ಕಾಲದಲ್ಲಿ ಎಷ್ಟೇ ಪ್ರಾಚೀನವಾಗಿದ್ದರೂ ಸ್ಫೂರ್ತಿಯಲ್ಲಿ ಆಧುನಿಕವಾಗಿರಬಹುದು**.[1] ಇಲ್ಲದಿದ್ದರೆ ಜಗತ್ತಿನಲ್ಲಿ ಚಿರಸ್ಥಾಯಿಯಾಗಿ ಉಳಿದಿರುವ ಪ್ರಾಚೀನಕಾವ್ಯಗಳೆಲ್ಲವೂ ಇಂದು ಅಸಂಗತವಾಗಿ ಬಿಡುತ್ತಿದ್ದವು. ಕೊನೆಯದಾಗಿ ವಿಜ್ಞಾನವು ಮಾರಕಾಸ್ತ್ರವನ್ನು ಸೃಷ್ಟಿಸುವ ಮೂಲಕ ಜನರನ್ನು ಯುದ್ಧಕ್ಕೆ ಪ್ರಚೋದಿಸುತ್ತದೆ. ಅದು ಯುದ್ಧ ಮಾಡುವ ವಿಧಾನವನ್ನು ಬೋಧಿಸಬಲ್ಲದು. ಆದರೆ ಯುದ್ಧಕ್ಕೆ ಕಾರಣವನ್ನಾಗಲಿ ಅದನ್ನು ತಡೆಗಟ್ಟುವ ವಿಧಾನವನ್ನಾಗಲೀ ಅದು ತಿಳಿಸದು. ಕಾರಣ, ಅದು ತನ್ನ ಕಾರ್ಯಗಳಿಗೆ ನಮ್ಮನ್ನು ಅವಲಂಬಿಸಿದೆ. ಅದರ ಪದಕೋಶದಲ್ಲಿ ಒಳಿತುಕೆಡುಕುಗಳೆಂಬ ಶಬ್ದಗಳಿಲ್ಲ. ಆದರೂ ಅದು ಪರೋಕ್ಷವಾಗಿ ಮನುಷ್ಯನನ್ನು ಅಧಿಕಾರಲಾಲಸೆಗೆ ಪ್ರಚೋದಿಸುತ್ತದೆ. ಒಬ್ಬ ವ್ಯಕ್ತಿ ಅಥವಾ ಒಂದು ದೇಶದಿಂದ ಆಗುವ ಹಾನಿಯು ಅವನ ಬಡತನ ಅಥವಾ ಅಧಿಕಾರವನ್ನು ಅವಲಂಬಿಸಿದೆ.

ವ್ಯಕ್ತಿಯು ಬಡವನಾಗಿದ್ದರೆ ಅವನಿಂದ ಇತರರಿಗೆ ಆಗುವ ಕೇಡು ಕಡಿಮೆ. ಅವನ ಸಿರಿಯು ಹೆಚ್ಚುತ್ತಿದ್ದಂತೆ ಅವನ ಕೇಡಿನ ಸಾಮರ್ಥ್ಯವೂ ಹೆಚ್ಚುತ್ತದೆ.

ಆದ್ದರಿಂದ ನಮಗೆ ವಿಜ್ಞಾನವೇನೋ ಬೇಕು. ಆದರೆ ಅದರ ಜೊತೆಗೆ ಅದರ ಶಕ್ತಿಯನ್ನು ಹೇಗೆ ಮಾನವಕಲ್ಯಾಣಕ್ಕಾಗಿ ಬಳಸಬಹುದೆಂಬ ನೈತಿಕ ಶಿಕ್ಷಣವೂ ಬೇಕು. ಶುಷ್ಕವಿಜ್ಞಾನವು ಮನುಷ್ಯನನ್ನು ಪ್ರಾಕೃತನಿಗಿಂತಲೂ ನೀಚಮಟ್ಟಕ್ಕೆ ಇಳಿಸುತ್ತದೆ. ನಮಗೆ ಅಗತ್ಯವಿರುವುದು ವಿಜ್ಞಾನದ ಆಟದ ಬೊಂಬೆಗಳಷ್ಟೇ ಅಲ್ಲ, ವಿಚಾರ, ಸದ್ಗುಣ ಮತ್ತು ಸೌಂದರ್ಯಗಳೆಂಬ ಶಾಶ್ವತಮೌಲ್ಯಗಳು. ಈ ಮೌಲ್ಯಗಳ ನೆಲೆಗಟ್ಟಿಲ್ಲದೇ ಮತ್ತು ಮನುಷ್ಯನಲ್ಲಿ ಮನುಷ್ಯತ್ವವು ಮೂಡದೇ ದಿಟವಾಗಿ ಬರಿಯ ವಿಜ್ಞಾನದಿಂದ ಜಗತ್ತಿಗೆ ಯಾವ ನೆಮ್ಮದಿಯೂ ಇಲ್ಲ.

ಈಗ ಮೌಲ್ಯವೆಂದರೇನು ಎಂಬ ಪ್ರಶ್ನೆಯೇಳುತ್ತದೆ. ಸಾಮಾನ್ಯವಾಗಿ ನಾವು ನಮ್ಮ ದೈನಂದಿನ ಜೀವನದಲ್ಲಿ ಮೌಲ್ಯವೆಂಬ ಶಬ್ದವನ್ನು ಬಳಸುತ್ತಲೇ ಇರುತ್ತೇವೆ. ಮೌಲ್ಯಶಬ್ದವು ನಮಗೆ ದಿನನಿತ್ಯದ ಬಳಕೆಯಾಗಿದೆ. ಹಾಗಾದರೆ ಮೌಲ್ಯವೆಂದರೇನು? ಕೆಲವರ ಪ್ರಕಾರ ಯಾವ ಕೆಲಸವು ವ್ಯಕ್ತಿಗೆ ಗರಿಷ್ಠ ಪ್ರಮಾಣದಲ್ಲಿ ಇಂದ್ರಿಯಸುಖವನ್ನು ನೀಡುವುದೋ ಮತ್ತು ಯಾವುದು ಅವನ ಸ್ವಾರ್ಥಬಯಕೆಯನ್ನು ನೀಗಿಸುವುದೋ ಅದೇ ಮೌಲ್ಯ.[2] ಈ ವಾದವನ್ನು ಭಾರತೀಯ ತತ್ತ್ವಶಾಸ್ತ್ರದಲ್ಲಿ ಚಾರ್ವಾಕರು ಮತ್ತು ಪಾಶ್ಚಾತ್ಯರಲ್ಲಿ Epicurus (ಕ್ರಿ.ಪೂ.342–270) ಎಂಬ ಗ್ರೀಕ್ ತಾತ್ವಿಕನು ಪ್ರತಿಪಾದಿಸುತ್ತಾರೆ. ಈ ವಾದವನ್ನು **ಸುಖಧ್ಯೇಯ**ವಾದವೆಂದು (Hedonism) ಕರೆಯುತ್ತಾರೆ. ಆದರೆ, ಈ ವಾದದಲ್ಲಿ ಕೆಲವು ದೋಷಗಳುಂಟು. ಮೊದಲನೆಯದಾಗಿ ಅದು ಒಳಿತು ಮತ್ತು ಇಂದ್ರಿಯ ಸುಖವನ್ನು (Pleasure) ಏಕೀಕರಿಸುತ್ತದೆ. ಆದರೆ ಮನುಷ್ಯನಿಗೆ ಇಂದ್ರಿಯ ಸುಖವನ್ನು ನೀಡುವುದೆಲ್ಲಾ ಒಳಿತಲ್ಲ. ಆರಂಭದಲ್ಲಿ ಹಿತವಿರುವ ಅನೇಕ ಕೆಲಸಗಳು

ಅಂತ್ಯದಲ್ಲಿ ದುಃಖಕರವಾಗಿ ಪರಿಣಮಿಸುತ್ತವೆ. ಒಳಿತೆಂಬುದು ಇಂದ್ರಿಯ ಸುಖಕ್ಕಿಂತಲೂ ವಿಶಾಲ ಕಲ್ಪನೆ. ಎರಡನೆಯದಾಗಿ ಒಬ್ಬನಿಗೆ ಪರಹಿಂಸೆಯು ಹಿತವಾದ್ದರಿಂದ ಅದನ್ನೇ ಮೌಲ್ಯವೆನ್ನಬೇಕಾಗುತ್ತದೆ. ಆದರೆ, ಪ್ರಪಂಚದಲ್ಲಿ ಯಾವ ನಾಗರಿಕ ಜನಾಂಗವೂ ಕ್ರೌರ್ಯರತಿಯನ್ನು (Sadism) ಮೌಲ್ಯವೆನ್ನುವುದಿಲ್ಲ. ಮೂರನೆಯದಾಗಿ ಈ ವಾದವನ್ನು ಸಾರ್ವತ್ರಿಕವಾಗಿ ಬಳಸಲು ಸಾಧ್ಯವಿಲ್ಲ. ಏಕೆಂದರೆ ಸಮಾಜದಲ್ಲಿ ಎಲ್ಲರೂ ಸ್ವಾರ್ಥಿಗಳಾದರೆ ಅದು ಪರಸ್ಪರ ಘರ್ಷಣೆ ಮತ್ತು ಸರ್ವನಾಶದಲ್ಲಿ ಕೊನೆಗೊಳ್ಳುತ್ತದೆ.[3] ಅಂತಹ ಸಮಾಜವು ಪ್ರಗತಿಪರವೆನಿಸುವುದಿಲ್ಲ. ಕೊನೆಯದಾಗಿ ಈ ವಾದವು ವ್ಯಕ್ತಿ ಮತ್ತು ಸಮಾಜಗಳ ನಡುವೆ ಯಾವಾಗಲೂ ದ್ವಂದ್ವವಿದೆಯೆಂಬ ತಪ್ಪು ಕಲ್ಪನೆಯನ್ನು ಆಧರಿಸಿದೆ. ಅದು ಇಡೀ ಸಮಾಜದ ಉದ್ಧಾರ ಸಾಧ್ಯವಿಲ್ಲದಿದ್ದರೂ ವ್ಯಕ್ತಿಯ ಉದ್ಧಾರ ಸಾಧ್ಯವೆನ್ನುವಂತೆ ತೋರುತ್ತದೆ. ಇದು ತಪ್ಪು. ವ್ಯಕ್ತಿ ಸಮಾಜಗಳಿಗೆ ಗಾಢವಾದ ನಂಟಿದೆ. ವ್ಯಕ್ತಿಯ ಹಿತ ಸಮಾಜದ ಹಿತದಲ್ಲಿದೆ. ಸಮಾಜವು ಉದ್ಧಾರವಾದರೆ ಮಾತ್ರ ವ್ಯಕ್ತಿಯ ಉದ್ಧಾರ ಸಾಧ್ಯ.[4]

ಆದ್ದರಿಂದ ಕೆಲವರು ಮೌಲ್ಯದ ಪರಿಧಿಯನ್ನು ಮನುಷ್ಯನ ಸ್ವಾರ್ಥಹಿತಕ್ಕೆ ಮಾತ್ರ ಸೀಮಿತಗೊಳಿಸದೇ, ಅದನ್ನು ಸಮಾಜದ ಇತರ ಸದಸ್ಯರಿಗೂ ವಿಸ್ತರಿಸಿದರು. ಅವರ ಪ್ರಕಾರ ಯಾವ ಕೆಲಸವು ಸಮಾಜದ ಗರಿಷ್ಠ ಸಂಖ್ಯೆಯ ಸದಸ್ಯರನ್ನು ಗರಿಷ್ಠ ಪ್ರಮಾಣದಲ್ಲಿ ಸುಖವಾಗಿಸುವುದೋ ಅದೇ ಮೌಲ್ಯ ಅಥವಾ ಒಳಿತು. ಈ ವಾದಕ್ಕೆ **ಪ್ರಯೋಜನವಾದ** (Utilitarianism) ಎಂದು ಹೆಸರು.[5] ಈ ವಾದವನ್ನು ಬ್ರಿಟಿಷ್ ತಾತ್ತ್ವಿಕರಾದ ಜಿರೆಮಿ ಬೆಂಥ್ಯಾಮ್ (ಕ್ರಿ.ಶ.1748–1832) ಮತ್ತು ಜೆ.ಎಸ್.ಮಿಲ್ (ಕ್ರಿ.ಶ.1806–1873) ಅಂಗೀಕರಿಸುತ್ತಾರೆ. ವ್ಯಕ್ತಿ ಮತ್ತು ಸಮಾಜಕ್ಕೆ ಗಾಢವಾದ ನಂಟಿದ್ದು, ವ್ಯಕ್ತಿಯ ಹಿತ ಸಮಾಜದ ಹಿತದಲ್ಲಿದೆಯೆಂಬ

ವಿಷಯದಲ್ಲಿ ಈ ವಾದವು ಸತ್ತ್ವಯುತ. ಆದರೆ ಈ ವಾದವೂ ದೋಷಪೂರಿತ. ಏಕೆಂದರೆ ಅದು ಸುಖವನ್ನು ಲೌಕಿಕತೆಗೆ ಸೀಮಿತಗೊಳಿಸುವುದಷ್ಟೇ ಅಲ್ಲ ಅದನ್ನು ಪರಿಮಾಣದ ದೃಷ್ಟಿಯಿಂದ ನೋಡುತ್ತದೆ. ಎಂದರೆ ಗರಿಷ್ಠ ಸಂಖ್ಯೆಯಲ್ಲಿ ಐಹಿಕವಸ್ತುಗಳನ್ನು ಹೊಂದಿರುವವನೇ ಸುಖಿಯೆಂದು ಅದರ ವಾದ. ಆದರೆ ಒಳಿತು ಮತ್ತು ಅದರ ಪರಿಣಾಮವಾದ ಸುಖವು ಒಂದು ಗುಣಾತ್ಮಕ ಪರಿಕಲ್ಪನೆ. ಅದನ್ನು ಎಣಿಕೆಗೆ ಅಥವಾ ಅಳತೆಗೆ ಒಳಪಡಿಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯು ಗರಿಷ್ಠ ಸಂಖ್ಯೆಯಲ್ಲಿ ಐಹಿಕ ಅಥವಾ ಪ್ರಾಪಂಚಿಕ ವಸ್ತುಗಳನ್ನು ಹೊಂದಿದ್ದರೂ ಅವನು ನಡೆಸುತ್ತಿರುವ ಜೀವನವು ನೈತಿಕವಾಗಿ ಹೇಯವಾಗಿರಬಹುದು. ಆದ್ದರಿಂದ ಒಳಿತೆಂಬುದು ನಾವು ನಡೆಸುವ ಜೀವನಮಟ್ಟಕ್ಕೆ ಸಂಬಂಧಿಸಿದೆಯೇ ಹೊರತು ನಾವು ಹೊಂದಿರುವ ಪ್ರಾಪಂಚಿಕ ವಸ್ತುಗಳಿಗಲ್ಲ.

ಈ ಕಾರಣದಿಂದ ಕೆಲವರು ಮೌಲ್ಯಪರಿಕಲ್ಪನೆಯನ್ನು ಅದು ನೀಡಬಹುದಾದ ಐಹಿಕಸುಖದ ಪರಿಣಾಮದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿದರು. ಅವರ ಪ್ರಕಾರ ಮೌಲ್ಯವೆಂಬುದು ನಮ್ಮ ಜೀವನಮಟ್ಟಕ್ಕೆ ಸಂಬಂಧಿಸಿದುದೇ ಹೊರತು, ನಾವು ಹೊಂದಿರುವ ಭೋಗವಸ್ತುಗಳಿಗಲ್ಲ. ಮೌಲ್ಯವು ಸುಖಕ್ಕೆ ಅಧೀನವಾದರೆ, ಅದು ತನ್ನ ಶ್ರೇಷ್ಠತೆಯನ್ನು ಕಳೆದುಕೊಳ್ಳುತ್ತದೆ. ಲೌಕಿಕ ಗುರಿಗೆ, ಸ್ವಾರ್ಥಸುಖಕ್ಕೆ ಮನುಷ್ಯನು ನೀತಿವಂತನಾಗುವುದು ಅವನ ಘನತೆಗೆ ಕಡಿಮೆ. ಪ್ರಾಣಿಗಳು ಮಾತ್ರ ಕ್ರಿಯೆಗಳಿಂದ ಆಸೆಗಳನ್ನು ಪೂರೈಸಿಕೊಳ್ಳುವುದು. ಮನುಷ್ಯನಾದರೋ ವಿಚಾರಶೀಲ. ನೀತಿಗೋಸ್ಕರ ನೀತಿವಂತನಾಗುವುದು ಅವನಿಗೆ ಅಸಾಧ್ಯವೇನೂ ಅಲ್ಲ. ಆದ್ದರಿಂದ, ಅವನು ನೀತಿಯನ್ನು ಅದಕೋಸ್ಕರವೇ ಪಾಲಿಸಬೇಕು. ಅವನು **ಏಕೆ** ನೀತಿವಂತನಾಗಬೇಕೆಂಬುದು ಇಲ್ಲಿ ಅಪ್ರಸ್ತುತ. ಈ ವಾದವನ್ನು ಜರ್ಮನ್

ತಾತ್ತ್ವಿಕನಾದ ಇಮ್ಯಾನುಯಲ್ ಕ್ಯಾಂಟ್ (ಕ್ರಿ.ಶ.1724–1804) ಮಂಡಿಸುತ್ತಾನೆ. ಆತನ ಪ್ರಕಾರ ನಾವು ನೈತಿಕ ಒಳಿತನ್ನು ಅದು ನೀಡುವ ಪರಿಣಾಮದ ದೃಷ್ಟಿಯಿಂದ ನೋಡಬಾರದು. ನಮ್ಮ ನೈತಿಕತೆಯು ಅದರ ಪರಿಣಾಮವೇನೇ ಇರಲಿ ಅದಕ್ಕೋಸ್ಕರವಾಗಿಬೇಕು. ನಾವು ಯಾವುದೇ ಫಲಾಪೇಕ್ಷೆಯಿಲ್ಲದೇ ನೀತಿವಂತ ಅಥವಾ ಕರ್ತವ್ಯನಿಷ್ಠರಾಗಬೇಕು. ತನ್ನೀ ನೈತಿಕ ಸಿದ್ಧಾಂತವನ್ನು ಕ್ಯಾಂಟನು ತನ್ನ "Groundwork of the Metaphysics of Morals" (1785) ಮತ್ತು **"**The Critique of Practical Reason**"** (1788) ಎಂಬ ಗ್ರಂಥಗಳಲ್ಲಿ ಮಂಡಿಸುತ್ತಾನೆ. ಮನುಷ್ಯನ ಉದ್ದೇಶ ತನ್ನ ಕರ್ತವ್ಯವನ್ನು ಆಚರಿಸುವುದಷ್ಟೆ. ಆತನು ತನ್ನ **"**Groundwork of the Metaphysics of Morals" ನಲ್ಲಿ ಹೀಗೆ ಬರೆಯುತ್ತಾನೆ, **"Act as if the maxim of thy action were to become by thy will a universal law of nature**". ಕ್ಯಾಂಟನು ತನ್ನೀ ಈ ನೈತಿಕ ಸಿದ್ಧಾಂತವನ್ನು ನಿರುಪಾಧಿಕ ವಿಧಿ (Categorical Imperative) ಎಂದು ಕರೆಯುತ್ತಾನೆ.[6]

ಕ್ಯಾಂಟನ ನಿರುಪಾಧಿಕ ವಿಧಿಯು ಭಾರತೀಯ ತತ್ತ್ವಶಾಸ್ತ್ರದ ಪ್ರಭಾಕರ ಮೀಮಾಂಸ ಮತ್ತು ಭಗವದ್ಗೀತೆಯ ನಿಷ್ಕಾಮಕರ್ಮಯೋಗಗಳನ್ನು ಹೋಲಿಕೊಂಡಂತೆ ತೋರಿದರೂ ಕ್ಯಾಂಟನ ಸಿದ್ಧಾಂತಕ್ಕೂ ಈ ಭಾರತೀಯ ನೈತಿಕ ಸಿದ್ಧಾಂತಗಳಿಗೂ ಕೆಲವು ವ್ಯತ್ಯಾಸಗಳಿವೆ. ಭಗವದ್ಗೀತೆಯ ನಿಷ್ಕಾಮಕರ್ಮಯೋಗಕ್ಕೆ ಮೋಕ್ಷವೆಂಬ ಆಧ್ಯಾತಿಕ ಉದ್ದೇಶವಿದ್ದರೆ ಕ್ಯಾಂಟನ ನಿರುಪಾಧಿಕ ವಿಧಿಗೆ ಲೌಕಿಕವಾಗಲಿ ಆಧ್ಯಾತ್ಮಿಕವಾಗಲಿ ಯಾವ ಉದ್ದೇಶವೂ ಇಲ್ಲ.[7] ಕ್ಯಾಂಟನ ಪ್ರಕಾರ ನಾವು ನೀತಿಗೋಸ್ಕರ ನೀತಿವಂತರಾಗಬೇಕೇ ಹೊರತು ಇನ್ನಾವ ಉದ್ದೇಶಕ್ಕೂ ಅಲ್ಲ. ಆದರೆ ಭಗವದ್ಗೀತೆಯ ಪ್ರಕಾರ ಕರ್ಮಕ್ಕೆ ಲೌಕಿಕವಲ್ಲದಿದ್ದರೂ ಅಲೌಕಿಕ ಗುರಿಯಿದೆ. ಅದೇ ಮೋಕ್ಷ.

ಹಾಗೆಯೇ ಕ್ಯಾಂಟನ ನೀತಿ ಪರಿಕಲ್ಪನೆಯು ಶುದ್ಧ ವಿಚಾರಾಧಾರಿತವಾದುದು. ಆದರೆ ಪ್ರಭಾಕರರ ನೀತಿ ಅಥವಾ ಧರ್ಮಪರಿಕಲ್ಪನೆಯು ಶ್ರುತಿ (ವೇದ) ಆಧಾರಿತವಾದುದು.[8] ವೇದದ ಕರ್ಮಕಾಂಡವು ಪ್ರಭಾಕರರಿಗೆ ಪ್ರಮಾಣ.

ಆದರೆ ಕ್ಯಾಂಟನ ವಾದದಲ್ಲಿ ದೋಷವುಂಟು. ಅದು ಮನೋವೈಜ್ಞಾನಿಕವಾಗಿ ಅಸಮರ್ಪಕ. ನೀತಿ ಸಮಸ್ಯೆಯನ್ನು ಕುರಿತಂತೆ ಕ್ಯಾಂಟನದು ತಪ್ಪು ದೃಷ್ಟಿಕೋನ. ಅದು ಮನುಷ್ಯನ ಉದ್ದೇಶಪೂರ್ಣ ಸ್ವಭಾವವನ್ನು ಕಡೆಗಣಿಸಿ, ಅವನನ್ನು ಒಂದು ಯಂತ್ರವೆಂದು ಬಗೆಯುತ್ತದೆ. ನಾವು ಮಾಡುವ ಯಾವುದೇ ಕೆಲಸಕ್ಕೆ ನಾವು **ಏಕೆ** ಎಂಬ ಪ್ರಶ್ನೆಯನ್ನು ಕೇಳಿಯೇ ತೀರುತ್ತೇವೆ. ನೀತಿ ಅಥವಾ  ಮೌಲ್ಯವೇನೂ ಇದಕ್ಕೆ ಹೊರತಲ್ಲ. ಅದಕ್ಕೂ ಒಂದು ಗುರಿಯುಂಟು. ಈ ಗುರಿಯು ಲೌಕಿಕ ಅಥವಾ ಆಧ್ಯಾತ್ಮಿಕ–ಈ ಎರಡರಲ್ಲಿ ಯಾವುದೇ ಆಗಿರಬಹುದು. ವಾಸ್ತವವಾಗಿ ಮೌಲ್ಯದ ಅಂತಿಮಗುರಿ **ಆಧ್ಯಾತ್ಮಿಕ**ವಷ್ಟೆ. ಮನುಷ್ಯನಿಗೆ ಬದುಕಲು ಅರ್ಥಕಾಮಗಳು ಬೇಕು. ಆದರೆ, ಅದೇ ಅವನ ಜೀವನದ ಅಂತಿಮ ಗುರಿಯಲ್ಲ. ಜೀವನದ ಪರಮಗುರಿ, ತೃಷ್ಣೆಯಿಲ್ಲದ ಶಾಂತಸ್ಥಿತಿಯ ಪ್ರಾಪ್ತಿ. ವಾಸ್ತವವಾಗಿ ಮೌಲ್ಯವು ಅರ್ಥಪೂರ್ಣವಾಗುವುದು ಈ ಆಧ್ಯಾತ್ಮಿಕ ಹಂತದಲ್ಲೇ. ಯಾವುದು ನಮ್ಮೊಳಗಿನ ರಾಗದ್ವೇಷಗಳನ್ನು ನಂದಿಸಿ ನಮಗೆ ಆಂತರಿಕ ಶಾಂತಿಯನ್ನು ನೀಡುವುದೋ ಅದೇ ನೀತಿ ಅಥವಾ ಮೌಲ್ಯ.

ಮೌಲ್ಯದ ಉಗಮವು ಕೆಲವು ಅಂಶಗಳನ್ನು ಅವಲಂಬಿಸಿದೆ. ಮೊದಲನೆಯದಾಗಿ ಮೌಲ್ಯಮಾಪನ ಮಾಡಲು ಒಂದು ವಸ್ತು ಅಥವಾ ವಿಷಯವಿರಬೇಕು. ವಿಷಯವೇ ಇಲ್ಲದೇ ಮೌಲ್ಯಮಾಪನವು ಸಾಧ್ಯವಿಲ್ಲ. ಜಗತ್ತಿನಲ್ಲಿರುವ ಅಥವಾ ಸಂಭವಿಸುವ ಯಾವುದೇ ಘಟನೆಗೆ ವಸ್ತುವೆಂದು ಹೆಸರು.[9] ಎರಡನೆಯದಾಗಿ ವಿಚಾರ ಮತ್ತು ಸಂವೇದನಾಶೀಲತೆಯುಳ್ಳ

ವ್ಯಕ್ತಿಯಿರಬೇಕು. ಮೂಢನ ಅಸ್ತಿತ್ವದಲ್ಲಿ ಮೌಲ್ಯವು ಅರ್ಥಪೂರ್ಣವಾಗುವುದಿಲ್ಲ. ವಿಚಾರಶೀಲನು ವಸ್ತುಸ್ಥಿತಿಯ ಸಂಪರ್ಕಕ್ಕೆ ಬಂದು ತನ್ನ ಅಗತ್ಯಗಳು ಹಾಗೂ ಮನೋವೈಜ್ಞಾನಿಕ ಆಕಾಂಕ್ಷೆಗಳಿಗೆ ಅನುಗುಣವಾಗಿ ಅದರ ಮೌಲ್ಯವನ್ನು ನಿರ್ಧರಿಸಬೇಕು.[10] ಕೊನೆಯದಾಗಿ ಮೌಲ್ಯವನ್ನು ನಿರ್ಧರಿಸಲು ವ್ಯಕ್ತಿಯು ತನ್ನದೇ ಆದ ಮಾನದಂಡಗಳನ್ನು ಹೊಂದಿರಬೇಕು. ವ್ಯಕ್ತಿಯು ಈ ಮಾನದಂಡಗಳನ್ನು ತನ್ನ ಸಂಪ್ರದಾಯ, ಶಿಕ್ಷಣ, ಸಮಾಜ ಇಲ್ಲವೇ ಧರ್ಮದಿಂದ ಪಡೆದುಕೊಳ್ಳುತ್ತಾನೆ. ಈ ಮಾನದಂಡಗಳೇನೂ ಸ್ಥಿರವಲ್ಲ. ಅವು ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ, ಮತ್ತು ದೇಶದಿಂದ ದೇಶಕ್ಕೆ ಬದಲಿಸುತ್ತಿರುತ್ತವೆ.[11] ವಸ್ತುಸ್ಥಿತಿಯನ್ನು ಈ ಮಾನದಂಡಗಳೊಂದಿಗೆ ಹೋಲಿಸಬೇಕು. ಅದಕ್ಕೂ ಮತ್ತು ಮಾನದಂಡಕ್ಕೂ ಹೊಂದಿಕೆಯಿದ್ದರೆ ಆ ವಸ್ತುವಿಗೆ ಮೌಲ್ಯವಿದೆಯೆಂದರ್ಥ. ಹಾಗಿಲ್ಲದೇ ವಿರೋಧವಿದ್ದರೆ ವಸ್ತುವಿಗೆ ಮೌಲ್ಯವಿಲ್ಲವೆಂದರ್ಥ.[12]

ಮೌಲ್ಯಪರಿಕಲ್ಪನೆಯ ಪರಿಧಿ ವಿಸ್ತಾರವಾದುದು ಹಾಗೂ ಅದರ ಪರಿಧಿ ಸೀಮಿತವಲ್ಲ. ಏಕೆಂದರೆ ಯಾವುದು ನಮ್ಮ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸಬಲ್ಲವೋ ಅವೆಲ್ಲವೂ ಮೌಲ್ಯಗಳೇ. ಹೀಗಾಗಿ ಮೌಲ್ಯಗಳನ್ನು ಭೌತಿಕ, ಆರ್ಥಿಕ, ಸಾಮಾಜಿಕ, ಮಾನಸಿಕ ಮೌಲ್ಯ ಮತ್ತು ಆಧ್ಯಾತ್ಮಿಕ ಮೌಲ್ಯಗಳೆಂದು ವಿಂಗಡಿಸುವುದು ವಾಡಿಕೆ.[13]

**ಭೌತಿಕ ಮೌಲ್ಯಗಳು (Physical Values)** ಮನುಷ್ಯನ ದೇಹ ಮತ್ತು ಇಂದ್ರಿಯಗಳಿಗೆ ಸಂಬಂಧಿಸಿವೆ. ಪ್ರಾಣರಕ್ಷಣೆಗೆ ಏನೇನು ಅಗತ್ಯವೋ ಅವೆಲ್ಲವೂ ಭೌತಿಕಮೌಲ್ಯಗಳು. ಆಹಾರ, ವಸತಿ ಮತ್ತು ಬಟ್ಟೆಗಳು ಭೌತಿಕ ಮೌಲ್ಯಗಳು. ವಾಸ್ತವವಾಗಿ ನಮ್ಮ ಶರೀರವೇ ಒಂದು ಭೌತಿಕ ಮೌಲ್ಯ. ಆದರೆ ಅದೊಂದು ಸಾಧನಭೂತ ಮೌಲ್ಯ (Instrumental Value). ಏಕೆಂದರೆ

ನಾವು ಅದರ ಮೂಲಕ ಇತರ ಮೌಲ್ಯಗಳನ್ನು ಪಡೆಯುತ್ತೇವೆ. ಯಾವುದು ಇನ್ನೊಂದು ಮೌಲ್ಯವನ್ನು ಪಡೆಯಲು ನಮಗೆ ಸಾಧನವೋ ಅದೇ ಸಾಧನಭೂತ ಮೌಲ್ಯ. ಆರೋಗ್ಯವೂ (Health) ಒಂದು ಭೌತಿಕ ಮೌಲ್ಯ. ಇದು ಅಂತಸ್ಥ (Intrinsic Value) ಮತ್ತು ಸಾಧನಭೂತ ಮೌಲ್ಯವೆರಡೂ (Instrumental Value) ಹೌದು. ಯಾವುದು ಅದಕ್ಕೋಸ್ಕರ ಮೌಲ್ಯವುಳ್ಳದ್ದಾಗಿದೆಯೋ ಮತ್ತು ಇನ್ನಾವ ಮೌಲ್ಯಕ್ಕೂ ಸಾಧನವಲ್ಲವೋ ಅದೇ ಅಂತಸ್ಥ ಮೌಲ್ಯ. ಆರೋಗ್ಯವನ್ನು ನಾವು ಅದಕ್ಕೋಸ್ಕರ ಆನಂದಿಸುತ್ತೇವಷ್ಟೇ ಅಲ್ಲ, ಅದರ ಮೂಲಕ ನಾವು ಇತರ ಮೌಲ್ಯಗಳನ್ನೂ ಕೂಡ ಸಂಪಾದಿಸುತ್ತೇವೆ.[14] ಹಾಗೆಯೇ ನಮಗೆ ಹಿತವನ್ನು ನೀಡುವ ವಿವಿಧ ಬಣ್ಣ ಹಾಗೂ ಶಬ್ದಗಳೂ ಭೌತಿಕ ಮೌಲ್ಯಗಳು. ಆದರೆ ಅವು ಅಂತಸ್ಥ ಮೌಲ್ಯಗಳು. ಏಕೆಂದರೆ ನಾವು ಅವುಗಳನ್ನು ಅವುಗಳಿಗೋಸ್ಕರ ಆನಂದಿಸುತ್ತೇವೆಯೇ ಹೊರತು ಅವುಗಳನ್ನು ಇನ್ನಾವುದೋ ಮೌಲ್ಯಗಳಿಗೋಸ್ಕರ ಆನಂದಿಸುವುದಿಲ್ಲ.

**ಇನ್ನು ಆರ್ಥಿಕ ಮೌಲ್ಯಗಳ** ಬಗ್ಗೆ ವಿವರಿಸಬೇಕೆಂದರೆ ಕೆಲವು ಸಲ ಮನುಷ್ಯನ ಬಳಿ ಕೆಲವು ವಸ್ತುಗಳು ಅಗತ್ಯಕ್ಕಿಂತಲೂ ಹೆಚ್ಚು ಇರುತ್ತವೆ. ಇನ್ನು ಕೆಲವು ವಸ್ತುಗಳು ಅಗತ್ಯವೆನಿಸುವಷ್ಟು ಅವನ ಬಳಿ ಇರುವುದೇ ಇಲ್ಲ. ಅಂತಹ ಸಂದರ್ಭದಲ್ಲಿ ಆತನಿಗೆ ಅಗತ್ಯವಿರುವ ಪದಾರ್ಥಗಳನ್ನು ಇನ್ನೊಬ್ಬರಿಂದ ಪಡೆದು ಅವರಿಗೆ ತನ್ನ ಬಳಿ ಹೆಚ್ಚಾಗಿ ಇರುವ ವಸ್ತುಗಳನ್ನು ನೀಡುತ್ತಾನೆ. ಎಂದರೆ ಅವನು ವಸ್ತುವೊಂದನ್ನು ಇನ್ನೊಂದು ವಸ್ತುವಿಗೆ ವಿನಿಮಯ ಮಾಡಿಕೊಳ್ಳುತ್ತಾನೆ. ವಸ್ತುಗಳ ಈ ವಿನಿಮಯಕ್ಕೆ Barter System ಎಂದು ಹೆಸರು. ಪ್ರಾಚೀನಕಾಲದಲ್ಲಿ ಈ ವ್ಯವಸ್ಥೆಯು ಪ್ರಚಲಿತವಾಗಿತ್ತು. ಈಗ ಇದರ ಬದಲು ಹಣದ ಬಳಕೆ ಪ್ರಚಲಿತವಾಗಿದೆ. ಎಂದರೆ ಈಗ ನಾವು ವಸ್ತು–ವಸ್ತುಗಳಿಗೆ ಬದಲು ಹಣ–ವಸ್ತುವನ್ನು ವಿನಿಮಯ ಮಾಡಿಕೊಳ್ಳುತ್ತೇವೆ.

ಆದ್ದರಿಂದ ಹಣವು ಒಂದು ಆರ್ಥಿಕ ಮೌಲ್ಯ.[15] ಆದರೆ ಇದೊಂದು ಸಾಧನಭೂತಮೌಲ್ಯ. ಅದು ಅದಕ್ಕೋಸ್ಕರ ಮೌಲ್ಯವುಳ್ಳದ್ದಲ್ಲ. ಅದು ಇನ್ನೊಂದು ವಸ್ತುವನ್ನು ಪಡೆಯಲು ಸಾಧನ ಮಾತ್ರ. ಪ್ರಪಂಚದಲ್ಲಿ ನಾವು ಹಣದಿಂದ ಕೊಳ್ಳಬಹುದಾದ ವಸ್ತುಗಳು ಅನೇಕ. ಆದರೆ ಇನ್ನು ಕೆಲವು ವಸ್ತುಗಳನ್ನು–ಉದಾಹರಣೆಗೆ ಸ್ನೇಹ, ನಿಷ್ಠೆ, ಪ್ರಾಮಾಣಿಕತೆಯೇ ಮುಂತಾದ ವಸ್ತುಗಳನ್ನು ಹಣದಿಂದ ಕೊಳ್ಳಲು ಸಾಧ್ಯವೇ ಇಲ್ಲ.

ಮೂರನೆಯದು **ಸಾಮಾಜಿಕ ಮೌಲ್ಯಗಳು**. ಸಮಾಜದ ಸದಸ್ಯರು ತಮ್ಮ ಸಾಂಘಿಕ ಪ್ರಯತ್ನಗಳಿಂದ ಕೆಲವು ಮೌಲ್ಯಗಳನ್ನು ಸೃಷ್ಟಿಸಲು ಸಮರ್ಥರಾಗುತ್ತಾರೆ. ಅಂತಹ ಮೌಲ್ಯಗಳಿಗೆ ಸಾಮಾಜಿಕ ಮೌಲ್ಯಗಳೆಂದು ಹೆಸರು. ಉದಾಹರಣೆಗೆ ಸಮಾಜವು ತನ್ನ ಸದಸ್ಯರಿಗೆ ನೀಡುವ ಸೌಲಭ್ಯಗಳು ಸಾಮಾಜಿಕ ಮೌಲ್ಯಗಳು. ಸಮಾಜದ ಸದಸ್ಯರಲ್ಲಿ ಸಹಕಾರ ಹೆಚ್ಚಿದಷ್ಟೂ ಇಂತಹ ಮೌಲ್ಯಗಳು ಅಧಿಕ ಹಾಗೂ ಗುಣಾತ್ಮಕವಾಗಿರುತ್ತವೆ. ಆದ್ದರಿಂದ ವ್ಯಕ್ತಿಯು ಸಾಮಾಜಿಕ ಹಿತದೃಷ್ಟಿಯಿಂದ ತನ್ನ ವೈಯಕ್ತಿಕ ಹಿತವನ್ನು ತ್ಯಜಿಸಲು ಸಿದ್ಧನಿರಬೇಕು. ಏಕೆಂದರೆ ವೈಯಕ್ತಿಕ ಹಿತವು ಸಾಮಾಜಿಕ ಹಿತದಲ್ಲಿದೆ.[16]

ಮನುಷ್ಯನಲ್ಲಿ ಬೌದ್ಧಿಕ, ಧಾರ್ಮಿಕ ಮತ್ತು ಐಚ್ಛಿಕ ಎಂಬ ಮೂರು ಅಂಶಗಳುಂಟು. ಈ ಅಂಶಗಳಿಗೆ ಅನುಸಾರವಾಗಿ ತಾತ್ತ್ವಿಕರು ಪ್ರಕಾರ **ಸತ್ಯ (Truth)**, **ಸೌಂದರ್ಯ (Beauty)** ಮತ್ತು **ಸದ್ಗುಣ (Goodness)** ಗಳೆಂಬ ಮೂರು ಬೌದ್ಧಿಕ ಮೌಲ್ಯಗಳನ್ನು ಗುರುತಿಸುತ್ತಾರೆ. ಸಾಮಾನ್ಯವಾಗಿ ನಾವು ಸತ್ಯವನ್ನು ಕುರಿತು ಅಲೋಚಿಸುತ್ತೇವೆ, ಸೌಂದರ್ಯವನ್ನು ಭಾವಿಸುತ್ತೇವೆ ಅಥವಾ ಅನುಭವಿಸುತ್ತೇವೆ ಮತ್ತು ಒಳಿತನ್ನು ಮಾಡಲು ಇಚ್ಛಿಸುತ್ತೇವೆ.[17]

ಸತ್ಯ, ಸದ್ಗುಣ ಮತ್ತು ಸೌಂದರ್ಯಗಳೆಂಬ ಬೌದ್ಧಿಕ ಮೌಲ್ಯಗಳು ಪರಸ್ಪರಾವಲಂಬಿಗಳು. ಮೊದಲನೆಯದಾಗಿ ಸತ್ಯವು ಸದ್ಗುಣ ಅಥವಾ ಒಳಿತನ್ನು ಅವಲಂಬಿಸಿದೆ. ಏಕೆಂದರೆ ಸತ್ಯದ ಜ್ಞಾನವು ಅರ್ಥಪೂರ್ಣವಾಗುವುದು ಅದು ಆಚರಣೆಗೆ ಬಂದಾಗ ಮಾತ್ರ. ಅನುಷ್ಠಾನವಿಲ್ಲದ ವೇದಾಂತ ನಿಷ್ಪ್ರಯೋಜಕ. ಹಾಗೆಯೇ ಸದ್ಗುಣವೂ ಕೂಡ ಸತ್ಯವನ್ನೇ ಅವಲಂಬಿಸಿದೆ. ಏಕೆಂದರೆ ನಿರ್ದಿಷ್ಟ ಸನ್ನಿವೇಶದಲ್ಲಿ ನಾವು ನಿಜವಾಗಿಯೂ ಒಳ್ಳೆಯವರಾಗಬೇಕಿದ್ದರೆ ನಾವು ಆ ಸನ್ನಿವೇಶದ ಸರಿಯಾದ ಜ್ಞಾನವನ್ನು ಪಡೆದಿರಬೇಕು. ಇಲ್ಲದಿದ್ದರೆ ನಮ್ಮ ಒಳ್ಳೆಯತನ ಅವೈಚಾರಿಕವಾಗುತ್ತದೆ ಇಲ್ಲವೇ ಅರ್ಥಹೀನ ಭಾವೋದ್ವೇಗವಾಗುತ್ತದೆ. ಇದು ಅಪಾಯಕಾರಿ. ವಾಸ್ತವವಾಗಿ ಸಾಕ್ರಟೀಸ್ "ಜ್ಞಾನವೇ ಸದ್ಗುಣ ಮತ್ತು ಸದ್ಗುಣವೇ ಜ್ಞಾನ" ಎಂದು ಹೇಳುವಾಗ ಸತ್ಯಸದ್ಗುಣಗಳ ಈ ಪರಸ್ಪರಾವಲಂಬನೆಯನ್ನೇ ಒತ್ತಿನುಡಿದುದು.

ಎರಡನೆಯದಾಗಿ ಸದ್ಗುಣವು ಸೌಂದರ್ಯವನ್ನು ಅವಲಂಬಿಸಿದೆ. ಒಬ್ಬನ ಒಳ್ಳೆಯತನಕ್ಕೆ ಅರ್ಥ ಬರುವುದು ಅವನು ಅದರಲ್ಲಿ ಆಂತರಿಕ ಆನಂದವನ್ನು ಕಂಡುಕೊಂಡಾಗ ಮಾತ್ರ. ಅವನು ಒಳಿತಿನ ಬಗ್ಗೆ ಕಲಾತ್ಮಕ ದೃಷ್ಟಿಯನ್ನು ಬೆಳೆಸಿಕೊಳ್ಳದೇ ಅವನು ಶಾಶ್ವತವಾಗಿ ಒಳ್ಳೆಯವನಾಗಲಾರ. ಕಲಾತ್ಮಕತೆಯಿಲ್ಲದ ಒಳ್ಳೆಯ ಜೀವನ ನೀರಸವಾಗುತ್ತದೆ. ಹಾಗೆಯೇ ಸೌಂದರ್ಯವೂ ಸದ್ಗುಣವನ್ನು ಅವಲಂಬಿಸಿದೆ. ಏಕೆಂದರೆ ಮನುಷ್ಯನನ್ನು ನೈತಿಕವಾಗಿ ಉನ್ನತಗೊಳಿಸದ ಯಾವ ಕಲೆಯೂ ಕಲೆಯೆನಿಸಿಕೊಳ್ಳುವಿವುದಿಲ್ಲ. ಒಂದು ಕಲಾಕೃತಿಯು ಜೀವನದ ಮೇಲೆ ನೈತಿಕವಾಗಿ ಒಳ್ಳೆಯ ಪರಿಣಾಮ ಬೀರಿದಾಗ ಮಾತ್ರ ಅದು ನಿಜವಾದ ಕಲೆಯೆನಿಕೊಳ್ಳುವುದು. ಪ್ಲೇಟೋನಂತಹ ಮಹೋನ್ನತ ತಾತ್ವಿಕರು ಈ ಅಂಶವನ್ನೇ ಒತ್ತಿಹೇಳುವುದು.

ಮೂರನೆಯದಾಗಿ ಸೌಂದರ್ಯವು ಸತ್ಯವನ್ನು ಅವಲಂಬಿಸಿದೆ. ಯಾವುದೇ ಕಲಾಕೃತಿಯು ಸುಂದರವೆನೆಸಿಕೊಳ್ಳಬೇಕಾದರೆ ಅದು ಸತ್ಯಕ್ಕೆ ಸನಿಹವಾಗಿರಬೇಕು. ವಾಸ್ತವಿಕತೆಗೆ ದೂರವಾದ ಕಲೆಯು ಕಪೋಲಕಲ್ಪನೆಯಾಗುತ್ತದೆ, ಇಲ್ಲವೇ ಕುರೂಪವಾಗುತ್ತದೆ. ಹಾಗೆಯೇ ಸತ್ಯವೂ ಕೂಡ ಸೌಂದರ್ಯವನ್ನು ಅವಲಂಬಿಸಿದೆ. ಏಕೆಂದರೆ ನಮ್ಮ ಜೀವನದ ಅನೇಕ ಸತ್ಯಗಳು ಭಾವನಾತ್ಮಕವಾದವು. ಇವುಗಳನ್ನು ಸುಂದರವಾದ ಕಲಾಮಾಧ್ಯಮದ ಹೊರತಾಗಿ ಸಾಮಾನ್ಯ ಭಾಷೆ ಇಲ್ಲವೇ ತರ್ಕದ ಮೂಲಕ ತೃಪ್ತಿಕರವಾಗಿ ವ್ಯಕ್ತಪಡಿಸಲು ಸಾಧ್ಯವೇ ಇಲ್ಲ. ಜೀವನದ ಆಳವಾದ ಸತ್ಯಗಳು ತಮ್ಮ ಅಭಿವ್ಯಕ್ತಿಗೆ ಕಲಾ ಮಾಧ್ಯಮವನ್ನು ಅವಲಂಬಿಸಿರುವುದರಿಂದ ಸತ್ಯವು ಸೌಂದರ್ಯವನ್ನು ಅವಲಂಬಿಸಿದೆ.

ಒಟ್ಟಿನಲ್ಲಿ ಸತ್ಯವು ಸದ್ಗುಣ ಸೌಂದರ್ಯಗಳನ್ನು, ಸದ್ಗುಣವು ಸತ್ಯಸೌಂದರ್ಯಗಳನ್ನು, ಸೌಂದರ್ಯವು ಸತ್ಯ ಸದ್ಗುಣಗಳನ್ನು ಅವಲಂಬಿಸಿದೆ. ಬೇರೆ ರೀತಿ ಹೇಳಬೇಕೆಂದರೆ ಅಂತಿಮ ಸತ್ಯವು ಸದ್ಗುಣಗಳ ಸಾಕಾರವಷ್ಟೇ ಅಲ್ಲ, ಸುಂದರವೂ ಹೌದು. ಅದರಲ್ಲಿ ಅಸತ್ಯದ, ದುರ್ಗುಣದ ಮತ್ತು ಕುರೂಪದ ಛಾಯೆಯಿಲ್ಲ. ಅದರ ಈ ಪರಿಪೂರ್ಣ ಸ್ವಭಾವದಿಂದಲೇ ಅದನ್ನು ಸತ್ಯ, ಶಿವ ಮತ್ತು ಸುಂದರನೆಂದು ಕರೆಯುವುದು.

## ಭಾರತೀಯ ಮೌಲ್ಯ ಪರಿಕಲ್ಪನೆ

ಭಾರತೀಯ ತತ್ತ್ವಶಾಸ್ತ್ರದಲ್ಲಿ ಮೌಲ್ಯಗಳಿಗೆ ಪುರುಷಾರ್ಥಗಳೆಂದು ಹೆಸರು. ಏಕೆಂದರೆ ಈ ಮೌಲ್ಯಗಳನ್ನು ಅರಸುವುದು ವಿಚಾರಶೀಲನಾದ ಪುರುಷ ಅಥವಾ ಮನುಷ್ಯನು ಮಾತ್ರ.[18] ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಮೌಲ್ಯಗಳುಂಟು. ಒಬ್ಬನು ಆಚರಿಸಬೇಕಾದ ನೈತಿಕ ಮತ್ತು ಧಾರ್ಮಿಕ ಕರ್ತವ್ಯವು ಧರ್ಮ. ಉದಾಹರಣೆಗೆ

ಪಂಚಮಹಾಯಜ್ಞಗಳು ಧರ್ಮದ ಅವಿಭಾಜ್ಯ ಅಂಗಗಳು. ಹಾಗೆಯೇ ಕೆಲವೊಂದು ಸಂದರ್ಭಗಳಲ್ಲಿ ಮಾತ್ರ ಆಚರಿಸಬೇಕಾದ ಕರ್ಮಗಳು ನೈಮಿತ್ತಿಕ ಕರ್ಮಗಳು. ಉದಾಹರಣೆಗೆ ಪರ್ವದಿನಗಳಲ್ಲಿ ಆಚರಿಸಬೇಕಾದ ಶ್ರಾದ್ಧ ಹಾಗೂ ತರ್ಪಣಗಳು ನೈಮಿತ್ತಿಕ ಕರ್ಮಗಳು.[19] ಸಾಮಾನ್ಯವಾಗಿ ಧರ್ಮವು ಇತರ ಮೌಲ್ಯಗಳನ್ನು ಪಡೆಯಲು ಸಾಧನವಾದ್ದರಿಂದ ಅದೊಂದು ಸಾಧನಭೂತ ಮೌಲ್ಯ.

ಅರ್ಥವೆಂದರೆ ಹಣ. ಹಣವನ್ನು ಧರ್ಮದಿಂದ ಮಾತ್ರ ಸಂಪಾದಿಸಬೇಕು. ಅರ್ಥವೂ ಒಂದು ಸಾಧನಭೂತಮೌಲ್ಯ. ಏಕೆಂದರೆ ಅದು ಕಾಮವನ್ನು ಪಡೆಯಲು ಸಾಧನ. ಮನುಷ್ಯನ ಸಹಜ ಬಯಕೆಗಳ ತೃಪ್ತಿಯೇ ಕಾಮ. ಕಾಮವು ಒಂದು ಅಂತಸ್ಥಮೌಲ್ಯವೇ ಹೊರತು ಸಾಧನಭೂತಮೌಲ್ಯವಲ್ಲ. ಏಕೆಂದರೆ ಇಲ್ಲಿ ಮನುಷ್ಯನು ಏಕೆ ತನ್ನ ಸಹಜ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುವನೆಂಬ ಪ್ರಶ್ನೆಯೇಳುವುದಿಲ್ಲ. ಕಾಮದ ತೃಪ್ತಿ ಅದಕ್ಕೋಸ್ಕರವೇ ಹೊರತು ಅದರಿಂದ ಇನ್ನಾವ ವಸ್ತುವನ್ನು ಪಡೆಯಲೂ ಅಲ್ಲ. ಮೋಕ್ಷವೆಂಬುದು ಪರಮಪುರುಷಾರ್ಥ. ವೇದಾಂತದ ಪ್ರಕಾರ ಮನುಷ್ಯನು ತನ್ನ ನಿಜವಾದ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮೋಕ್ಷ. ಭಾರತೀಯ ದರ್ಶನದಲ್ಲಿ ಮೋಕ್ಷ ಪರಿಕಲ್ಪನೆಯು ವಿವಿಧ ರೀತಿಯದಾಗಿದೆ.

ನೈತಿಕ ಹಾಗೂ ಧಾರ್ಮಿಕ ಕರ್ತವ್ಯಗಳ ಆಚರಣೆಯೇ ಧರ್ಮವೆಂದು ನಾವೀಗಾಗಲೇ ಹೇಳಿದ್ದೇವೆ. ಭಾರತೀಯ ಧರ್ಮ ಪರಿಕಲ್ಪನೆಯು ನೈತಿಕ ಕರ್ತವ್ಯಗಳಿಗೆ ಪ್ರಾಧಾನ್ಯ ನೀಡುತ್ತದೆ. ವಾಸ್ತವವಾಗಿ ನೈತಿಕ ಶುದ್ಧಿಯಿಲ್ಲದೇ ಮನುಷ್ಯನು ಧಾರ್ಮಿಕ ಕರ್ತವ್ಯಗಳನ್ನು ಆಚರಿಸಲು ಯೋಗ್ಯನಲ್ಲ. ಕಳ್ಳತನದಿಂದ ಸಂಪಾದಿಸಿದ ಹಣದಿಂದ ಬ್ರಾಹ್ಮಣನು ಮಾಡುವ ಯಜ್ಞವು ಫಲಕಾರಿಯಲ್ಲ. ರಾಮಾಯಣದಲ್ಲಿ ಭರತನು "ಧರ್ಮವೇ ಇಲ್ಲದವನಿಗೆ ರಾಜಧರ್ಮದಿಂದ

ಪ್ರಯೋಜನವಾದರೂ ಏನು?" ಎಂದು ಹೇಳುತ್ತಾನೆ.[20] ಮಹಾಭಾರತವು ಇನ್ನೂ ಒಂದು ಮಟ್ಟ ಮೇಲೆ ಹೋಗಿ ನೈತಿಕತೆಯನ್ನು ಧಾರ್ಮಿಕತೆಗಿಂತಲೂ ಮೇಲಿರಿಸುತ್ತದೆ. ಅದರ ಪ್ರಕಾರ ಸಾವಿರ ಅಶ್ವಮೇಧಯಾಗಗಳನ್ನು ಮಾಡುವುದೂ ಒಂದೇ, ಒಂದು ಸತ್ಯವನ್ನು ಹೇಳುವುದೂ ಒಂದೇ.[21] ಯಾಜ್ಞವಲ್ಕ್ಯರು ತಮ್ಮ ಯಾಜ್ಞವಲ್ಕ್ಯಸ್ಮೃತಿಯಲ್ಲಿ ಮನುಷ್ಯನಿಗೆ ಅಹಿಂಸೆ, ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವಿಕೆ), ಶೌಚ, ಇಂದ್ರಿಯನಿಗ್ರಹ, ದಾನ, ದಮಾ (ಆತ್ಮ ನಿಗ್ರಹ), ದಯಾ ಮತ್ತು ಕ್ಷಾಂತಿ ಎಂಬ ನೈತಿಕ ಕರ್ತವ್ಯಗಳನ್ನು ವಿಧಿಸುತ್ತಾರೆ.[22] ಇವುಗಳಲ್ಲಿ ಕೆಲವು (ಉದಾ: ದಮಾ, ಕ್ಷಾಂತಿ) ವ್ಯಕ್ತಿಯ ಪೂರ್ಣತೆಗಾಗಿ ಅಥವಾ ಅವನ ಆತ್ಮಶಿಸ್ತಿಗಾಗಿ ವಿಧಿಸಲ್ಪಟ್ಟವು. ಇನ್ನು ಕೆಲವು ಸಮಾಜದ ಇತರ ಸದಸ್ಯರ ಪ್ರಯೋಜನಕ್ಕೆಂದು ವಿಧಿಸಲ್ಪಟ್ಟವು. ಉದಾಹರಣೆಗೆ ದಾನವನ್ನಾಗಲೀ ದಯೆಯನ್ನಾಗಲೀ–ಅದರಿಂದ ಪ್ರಯೋಜನ ಪಡೆಯುವ ಬೇರೆಯವರು ಇಲ್ಲದೇ ಅನುಸರಿಸಲು ಸಾಧ್ಯವಿಲ್ಲ. ಆದರೂ ನಾವು ಈ ವ್ಯತ್ಯಾಸಕ್ಕೆ ಅನುಚಿತ ಪ್ರಾಧಾನ್ಯವನ್ನು ನೀಡಬಾರದು. ಏಕೆಂದರೆ ವ್ಯಕ್ತಿಗೆಂದು ವಿಧಿಸಲ್ಪಟ್ಟ ಶಿಸ್ತನ್ನು ಪಾಲಿಸುವುದರ ಮೂಲಕ ಮನುಷ್ಯನು ಪರೋಕ್ಷವಾಗಿ ಸಮಾಜದ ಉಳಿದವರ ಮೇಲೆ ಪ್ರಭಾವ ಬೀರುತ್ತಾನೆ. ಆತನು ತನ್ನ ನಡುವಳಿಕೆಯಿಂದ ಇತರರಿಗೆ ಒಂದು ಮಾದರಿಯಾಗುತ್ತಾನೆ. ಹಾಗೆಯೇ ಅವನು ದಾನ ಅಹಿಂಸೆಯೇ ಮುಂತಾದ ಧರ್ಮಗಳನ್ನು ಬೇರೆಯವರಿಗೋಸ್ಕರವಷ್ಟೇ ಅಲ್ಲದೇ ತನಗೋಸ್ಕರವೂ ಆಚರಿಸುತ್ತಿದ್ದಾನೆ. ಏಕೆಂದರೆ ಅವನು ಅವುಗಳ ಆಚರಣೆಯಿಂದ ಹೆಚ್ಚು ಹೆಚ್ಚು ಆತ್ಮನಿಗ್ರಹವನ್ನು ಸಂಪಾದಿಸುತ್ತಿದ್ದಾನೆ.[23]

ಧರ್ಮವು ಅರ್ಥ ಮತ್ತು ಕಾಮಗಳಿಗೆ ಸಾಧನ. ಧರ್ಮದ ಮೂಲಕ ಮಾತ್ರ ಒಬ್ಬನು ಅರ್ಥಕಾಮಗಳನ್ನು ಸಂಪಾದಿಸಬೇಕು. ಭಾರತೀಯ ತತ್ತ್ವಶಾಸ್ತ್ರವು ಪುರುಷಾರ್ಥಗಳ ಚೌಕಟ್ಟಿನಲ್ಲಿ

ಅರ್ಥಕಾಮಗಳನ್ನು ತಿರಸ್ಕರಿಸುತ್ತಿಲ್ಲ. ಬದಲಾಗಿ ತುಂಬು ಜೀವನದಲ್ಲಿ ಅವುಗಳ ಪಾತ್ರವನ್ನು ಮತ್ತು ಮನುಷ್ಯನಲ್ಲಿ ಸಹಜವಾಗಿ ರೂಢವಾಗಿರುವ ಬಯಕೆಗಳನ್ನು ಗುರುತಿಸುತ್ತಿದೆ. ಅದರ ಪ್ರಕಾರ ಇವುಗಳಿಲ್ಲದೇ ಮನುಷ್ಯನ ವ್ಯಕ್ತಿತ್ವವು ಪೂರ್ಣವಾಗಲಾರದು. ಆದರೆ ಮನುಷ್ಯನು ಅವುಗಳನ್ನು ಧರ್ಮದಿಂದ ಮಾತ್ರ ಸಾಧಿಸಬೇಕು. ಗೀತೆಯಲ್ಲಿ ಕೃಷ್ಣನು ಹೀಗೆ ಹೇಳುತ್ತಾನೆ, **"ಧರ್ಮಾವಿರುದ್ಧಾಃ ಕಾಮೋಸ್ಮಿ ಭರತರ್ಷಭ" "ನಾನು ಧರ್ಮಕ್ಕೆ ವಿರುದ್ಧವಲ್ಲದ ಕಾಮನಾಗಿದ್ದೇನೆ"** ಎಂದು ಇದರ ಅರ್ಥ.[24] ಇದು ಭಾರತೀಯ ತತ್ವಚಿಂತನೆಯಲ್ಲಿ ಕಾಮದ ಪ್ರಾಮುಖ್ಯವನ್ನು ಸ್ಪಷ್ಟಪಡಿಸುತ್ತದೆ. ಏಕೆಂದರೆ ಜೀವನ ನಿರ್ವಹಣೆಗೆ ಮತ್ತು ಪ್ರಾಪಂಚಿಕ ಪ್ರಗತಿಗೆ ಬಯಕೆಯು ಅನಿವಾರ್ಯ. ಆದ್ದರಿಂದ ಮೂಲತಃ ಬಯಕೆಯು ಅನೈತಿಕವಲ್ಲ. ಆದರೆ ಅದು ಧರ್ಮದಿಂದ ಮಾತ್ರ ನಿಯಂತ್ರಿತವಾಗಿರಬೇಕು. ಧರ್ಮದ ಚೌಕಟ್ಟಿನೊಳಗೆ ಮಾತ್ರ ಅದನ್ನು ಪೂರೈಸಿಕೊಳ್ಳಬೇಕು. ಆದರೆ ಪೂರ್ವಮಿಮಾಂಸಾ ದರ್ಶನದ ಪ್ರಭಾಕರರ ಪ್ರಕಾರ ಧರ್ಮವು ಸಾಧನ ಭೂತಮೌಲ್ಯವಲ್ಲ. ಅದೊಂದು ಅಂತಸ್ಥಮೌಲ್ಯ. ಈ ದೃಷ್ಟಿಯನ್ನು ಸಮರ್ಥಿಸಲು ಅವರು ಎರಡು ಕಾರಣಗಳನ್ನು ನೀಡುತ್ತಾರೆ.

1. ಧರ್ಮವು ಅರ್ಥಕಾಮಗಳಿಗೆ ಸಾಧನವಾದಲ್ಲಿ ನಾವು ಅದನ್ನು ಅರ್ಥಕಾಮಗಳಿಗೆ ಅಧೀನಗೊಳಿಸಿದಂತಾಗಿ ಅದು ತನ್ನ ಶ್ರೇಷ್ಠತೆಯನ್ನು ಕಳೆದುಕೊಳ್ಳುತ್ತದೆ. ಸಾಧನಕ್ಕಿಂತಲೂ ಸಾಧ್ಯವೇ ಶ್ರೇಷ್ಠ.
2. ಯಾವುದೋ ಪ್ರಾಪಂಚಿಕ ಉದ್ದೇಶಕ್ಕೆಂದು ಮನುಷ್ಯನು ಧಾರ್ಮಿಕನಾಗುವುದು ಅವನ ಘನತೆಗೆ ಕಡಿಮೆ. ಕ್ರಿಯೆಯಿಂದ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುವುದು

ಪ್ರಾಣಿಗಳು ಮಾತ್ರ. ಮನುಷ್ಯನು ದಿಟವಾಗಿ ಶ್ರೇಷ್ಠಜೀವಿ. ನೀತಿಗೋಸ್ಕರ ನೀತಿವಂತನಾಗುವುದು ಅವನಿಗೆ ಅಸಾಧ್ಯವೇನಲ್ಲ.

ಕ್ಯಾಂಟನ ನಿರುಪಾಧಿಕ ವಿಧಿಯನ್ನು ಹೋಲುವ ಪ್ರಭಾಕರರ ಈ ವಾದದಲ್ಲಿ ಕೆಳಕಂಡ ದೋಷಗಳಿವೆ.

1. ಧರ್ಮವು ಅರ್ಥಕಾಮಗಳಿಗೆ ಸಾಧನವಾದರೂ ಅದೇನೂ ನಿಕೃಷ್ಟವಲ್ಲ. ಏಕೆಂದರೆ ಅದು ಅರ್ಥಕಾಮಗಳನ್ನು ನಿಯಂತ್ರಿಸುತ್ತದೆಯೇ ಹೊರತು ಅದೇ ಅರ್ಥಕಾಮಗಳಿಂದ ನಿಯಂತ್ರಿಸಲ್ಪಟ್ಟಿಲ್ಲ. ಎಂದರೆ ಅದು ಅರ್ಥಸಂಪಾದನೆ ಮತ್ತು ಕಾಮತೃಪ್ತಿಗೆ ಪರಿಮಿತಿಯನ್ನು ಒಡ್ಡುತ್ತದೆ. ಆದ್ದರಿಂದ ಅದು ಅರ್ಥಕಾಮಗಳಿಗಿಂತಲೂ ಶ್ರೇಷ್ಠ.

2. ಪ್ರಭಾಕರರ ವಾದವು ಮನೋವೈಜ್ಞಾನಿಕವಾಗಿ ಅಸಮರ್ಪಕ. ಏಕೆಂದರೆ, ಅದು ಮನುಷ್ಯನ ಉದ್ದೇಶಪೂರಿತ ಬದುಕನ್ನು ಅಲಕ್ಷಿಸುತ್ತದೆ. ಮೂಲತಃ ಮನುಷ್ಯನ ಬದುಕಿಗೆ ಮತ್ತು ಅವನು ಮಾಡುವ ಯಾವುದೇ ಕೆಲಸಕ್ಕೆ ಉದ್ದೇಶವಿರುತ್ತದೆ. ಉದ್ದೇಶವಿಲ್ಲದ ಮಾನವ ಬದುಕನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಧರ್ಮ ಅಥವಾ ನೀತಿ ಇದಕ್ಕೆ ಹೊರತಲ್ಲ. ಮನುಷ್ಯನು ಧಾರ್ಮಿಕತೆಯಿಂದಲೂ ಕೆಲವು ಫಲಗಳನ್ನು ನಿರೀಕ್ಷಿಸುತ್ತಾನೆ. ಈ ಫಲಗಳು ಪ್ರಾಪಂಚಿಕವಾಗಿರಬಹುದು ಇಲ್ಲವೇ ಆಧ್ಯಾತ್ಮಿಕವಾಗಿರಬಹುದು.

ವೇದಾಂತಿಗಳೂ ಪ್ರಭಾಕರರನ್ನು ಖಂಡಿಸುತ್ತಾರೆ. ಅವರ ಪ್ರಕಾರ ಧರ್ಮವು ಮೋಕ್ಷಕ್ಕೆ ಸಾಧನ. ಮನುಷ್ಯನಿಗೆ ಮುಕ್ತಿ ದೊರೆಯಬೇಕಿದ್ದಲ್ಲಿ ಅವನ ಮನಸ್ಸು ಸ್ವಾರ್ಥ ಮತ್ತು ಅಹಂಕಾರಗಳಿಂದ ಮುಕ್ತವಾಗಿರಬೇಕು. ಚಿತ್ತಶುದ್ಧಿಯಿಲ್ಲದೇ ಅವನಿಗೆ ಮೋಕ್ಷ ದೊರೆಯಲಾರದು.

ಈ ಚಿತ್ತಶುದ್ಧಿಯು ಧರ್ಮದಿಂದ ಮಾತ್ರ ಸಾಧ್ಯ. ಆದ್ದರಿಂದ ಧರ್ಮವು ಮೋಕ್ಷಕ್ಕೆ ಪರೋಕ್ಷ ಸಾಧನ. ಅದು ಮನುಷ್ಯನ ಮನಸ್ಸನ್ನು ಶುದ್ಧಿಗೊಳಿಸಿ ಅವನು ಮುಕ್ತಿಹೊಂದಲು ಯೋಗ್ಯನನ್ನಾಗಿ ಮಾಡುತ್ತದೆ.

ಇದೇನೇ ಇರಲಿ ಬೌದ್ಧರೂ ಕೂಡ ಮೌಲ್ಯವನ್ನು ಒಪ್ಪಿಕೊಳ್ಳುವರಾದರೂ ಮತ್ತು ಆ ಮೌಲ್ಯಕ್ಕೆ ಒಂದು ಆಧ್ಯಾತ್ಮಿಕ ಗುರಿಯಿದೆ ಎಂದು ಪ್ರತಿಪಾದಿಸುವರಾದರೂ, ಈ ಗುರಿಯು ವೇದಾಂತಿಗಳ ಪರಿಕಲ್ಪನೆಗಿಂತಲೂ ಭಿನ್ನವಾದುದು. ಬೌದ್ಧರ ಪ್ರಕಾರ ಆತ್ಮಸಾಕ್ಷಾತ್ಕಾರವು ನೀತಿಯ ಗುರಿಯಾಗಲಾರದು. ಅವರ ದೃಷ್ಟಿಯಲ್ಲಿ ನಿರ್ವಾಣವೇ ನೀತಿಯ ಆತ್ಯಂತಿಕ ಗುರಿ. ನಿರ್ವಾಣವೆಂದರೆ ತೃಷ್ಣೆಯಿಲ್ಲದ ಒಂದು ಶಾಂತಸ್ಥಿತಿ ಎಂದರ್ಥ. ಇಲ್ಲಿ ದೇವರ ಮತ್ತು ಆತ್ಮದ ಪ್ರಸ್ತಾಪವು ಬರುವುದಿಲ್ಲ. ಬೌದ್ಧರ ನೀತಿ ಪರಿಕಲ್ಪನೆಯು ಅವರ ಆರ್ಯಅಷ್ಟಾಂಗಿಕ ಮಾರ್ಗದಲ್ಲಿ ಅಡಗಿದೆ. ಇದರ ಪಾಲನೆಯು ನಿರ್ವಾಣಕ್ಕೆ ಒಯ್ಯುತ್ತದೆ. ಚಾರ್ವಾಕರಂತೆ ಬೌದ್ಧರು ಧರ್ಮವನ್ನು ಇಂದ್ರಿಯ ಸುಖಕ್ಕೆ ಸಾಧನವನ್ನಾಗಿಸುವುದಿಲ್ಲ. ಹಾಗೆಯೇ ವೇದಾಂತಿಗಳಂತೆ ಆತ್ಮ ಸಾಕ್ಷಾತ್ಕಾರದ ಸಾಧನವನ್ನಾಗಿಸುವುದಿಲ್ಲ. ಕ್ಯಾಂಟನಂತೆ ಮೌಲ್ಯಕ್ಕೋಸ್ಕರ ಮೌಲ್ಯವೆಂಬ ಪರಿಕಲ್ಪನೆಯು ಅವರಲ್ಲಿಲ್ಲ. ಅವರ ಪ್ರಕಾರ ಮೌಲ್ಯ, ನೀತಿ ಅಥವಾ ಧಮ್ಮದ ಗುರಿಯು ನಿರ್ವಾಣ ಪ್ರಾಪ್ತಿಯಷ್ಟೆ. ಹಾಗೆಯೇ ಬೌದ್ಧರ ನೀತಿ ಪರಿಕಲ್ಪನೆಯು ಮೀಮಾಂಸಕ ಮತ್ತು ವೇದಾಂತಿಗಳಂತೆ ವೇದಾಧಾರಿತವಲ್ಲ. ಅದು ವಿಚಾರದ ಆಧಾರವನ್ನು ಒಳಗೊಂಡದ್ದು. ವೈಚಾರಿಕತೆಯ ನೆಲೆಗಟ್ಟನ್ನು ಅವರ ಧಮ್ಮಪರಿಕಲ್ಪನೆಯು ಹೊಂದಿದೆ ಎಂಬುದು ಈ ಸಂದರ್ಭದಲ್ಲಿ ನಾವು ಉಲ್ಲೇಖಿಸುವುದು ಅಗತ್ಯ.

## ಅಡಿ ಟಿಪ್ಪಣಿಗಳು


1. Richard Livingstone, ***Some Tasks for Education***, Oxford University Press, London, 1959
2. Satischandra Chatterjee and Dhirendramohan Datta, ***An Introduction to Indian Philosophy***, Rupa Publication India, New Delhi, 2012 ಪು.12; B.A.G. Fuller, ***A History of Philosophy***, Oxford and IBH Publishing Co., New Delhi, 1955 ಪು.238
3. Dr.G.Srinivasan, ***Recent Trends in Western Philosophy***, The Bangalore Printing and Publishing Co. Ltd., Bangalore, 1981 ಪು.87-88
4. Dr.G.Srinivasan, ಅದೇ, ಪು.87–88
5. B.A.G. Fuller, ಪೂರ್ವೋಕ್ತ, ಪು.391-392
6. ಅದೇ ಪು. 246-247ರಲ್ಲಿ ಉಲ್ಲೇಖಿತ
7. ಅದೇ ಪು. 124-125
8. M.Hiriyanna, ***Outlines of Indian Philosophy***, George Allen and Unwin Private Ltd., Bombay, 1976, ಪು.329
9. Dr.G.Srinivasan, ಪೂರ್ವೋಕ್ತ, ಪು.71
10. ಅದೇ ಪು.71
11. ಅದೇ ಪು.71
12. ಅದೇ ಪು.71–72
13. ಮೌಲ್ಯಗಳನ್ನು ಕುರಿತ ಇನ್ನೂ ವಿಸ್ತಾರವಾದ ವರ್ಗೀಕರಣಕ್ಕೆ ನೋಡಿ K.R.Sreenivasa Iyengar, ***The Metaphysics of Value (Vol. I)***, University of Mysore, Mysore, 1942, ಪು.241–242
14. ಅದೇ ಪು.246
15. ಹೆಚ್ಚಿನ ವಿವರಣೆಗಳಿಗಾಗಿ ನೋಡಿ, ಅದೇ ಪು.279–282
16. ಅದೇ ಪು.335–336
17. ಅದೇ ಪು.365

18. M.Hiriyanna, ***Indian Conception of Values***, Kavyalaya Publishers, Mysore, 1975, ಪು.6–7
19. ಅದೇ ಪು.155
20. ಅದೇ ಪು.194
21. ಅದೇ ಪು.188
22. ಅದೇ ಪು.193
23. ಅದೇ ಪು.193–194
24. ಶ್ರೀಮದ್ಭಗವದ್ಗೀತಾ, ಜ್ಞಾನವಿಜ್ಞಾನಯೋಗ, 11ನೇ ಶ್ಲೋಕ

**********

# ಅಧ್ಯಾಯ–4

# ಧಮ್ಮಪದ ಒಂದು ಸ್ಥೂಲ ನೋಟ

## ಅಧ್ಯಾಯ–4

# ಧಮ್ಮಪದ – ಒಂದು ಸ್ಥೂಲ ನೋಟ

ಧಮ್ಮಪದವು ಪಾಳೀ ಬೌದ್ಧ ಸಾಹಿತ್ಯಕ್ಕೆ ಸೇರಿದ ಗ್ರಂಥ. ಬೌದ್ಧಸಾಹಿತ್ಯದಲ್ಲಿ ಅದರ ಸ್ಥಾನವು ಇನ್ನೂ ನಿರ್ಧಾರಿತವಾಗಬೇಕಿದೆ. ವಿನಯಪಿಟಕ, ಸುತ್ತಪಿಟಕ ಮತ್ತು ಅಭಿಧಮ್ಮಪಿಟಕಗಳಲ್ಲಿ ಧಮ್ಮಪದವು ಸುತ್ತಪಿಟಕಕ್ಕೆ ಸೇರಿದುದು. ಸುತ್ತಪಿಟಕವು ದೀರ್ಘ ನಿಕಾಯ, ಮಜ್ಝಿಮ ನಿಕಾಯ, ಸಂಯುಕ್ತ ನಿಕಾಯ, ಅಂಗುತ್ತರ ನಿಕಾಯ ಮತ್ತು ಖುದ್ದಕ ನಿಕಾಯ ಎಂಬ ಐದು ನಿಕಾಯಗಳನ್ನು ಹೊಂದಿದ್ದು ಧಮ್ಮಪದವು ಖುದ್ದಕನಿಕಾಯದ ಎರಡನೇ ಗ್ರಂಥವಾಗಿದೆ. ಸುತ್ತಪಿಟಕದ ಬೇರೆ ರೀತಿಯ ವಿಂಗಡಣೆಯೂ ಇದೆ.[1]

ಒಟ್ಟಾರೆ ಧಮ್ಮಪದವು ಸುತ್ತಪಿಟಕಕ್ಕೆ ಸೇರಿದ್ದು ಎಂಬುದು ಖಚಿತ. ಇದರ ಅನೇಕ ಶ್ಲೋಕ ಅಥವಾ ಗಾಥೆಗಳಿಗೂ ಮಹಾಭಾರತದ ಅನೇಕ ಶ್ಲೋಕಗಳಿಗೂ ಹೋಲಿಕೆಯಿರುವುದು ಸ್ಪಷ್ಟ.[2] ಧಮ್ಮಪದವು 26 ಅಧ್ಯಾಯಗಳಿಂದ ಕೂಡಿದ್ದು ಅದರಲ್ಲಿ 423 ಗಾಥೆ ಅಥವಾ ಶ್ಲೋಕಗಳಿವೆ. ಪ್ರತಿಯೊಂದು ಗಾಥೆಗೂ ಒಂದೊಂದು ಕಥೆಯ ಹಿನ್ನೆಲೆಯಿದೆ. ಧಮ್ಮಪದವನ್ನು ಕುರಿತು ಬುದ್ಧಘೋಷನ ಒಂದು ಪಾಳೀ ವ್ಯಾಖ್ಯಾನವಿದೆ. ಬುದ್ಧಘೋಷನ ಕಾಲವು ಕ್ರಿ.ಶ. 5ನೇ ಶತಮಾನದ ಪೂರ್ವಾರ್ಧವೆಂದು ಹೇಳಲಾಗಿದೆ.[3] ಈ ಗ್ರಂಥದ ಶ್ಲೋಕಗಳನ್ನು ವಿವರಿಸುವಲ್ಲಿ ವ್ಯಾಖ್ಯಾನಕಾರನು ಹೆಚ್ಚು ಕಡಿಮೆ ಪ್ರತಿಯೊಂದು ಶ್ಲೋಕಕ್ಕೂ ಅದರ ಅರ್ಥವನ್ನು ವಿವರಿಸಲು ಒಂದು ಕಥೆಯನ್ನು ಹೇಳುತ್ತಾನೆ. ಈ ಕಥೆಯನ್ನು ಸ್ವತಃ ಬುದ್ಧನೇ ತನ್ನ ಶಿಷ್ಯರಿಗೆ ಬೋಧನೆಯ ಸಂದರ್ಭದಲ್ಲಿ ಅಥವಾ ಅವರೊಡನೆ ಚರ್ಚೆಯ ಸಂದರ್ಭದಲ್ಲಿ ಹೇಳಿದನೆಂದು ನಂಬಲಾಗಿದೆ.[4]

ಧಮ್ಮಪದದ ನಿರ್ದಿಷ್ಟ ಕಾಲವನ್ನು ನಿರ್ಧರಿಸುವುದು ಕಷ್ಟವೇ ಸರಿ. ತ್ರಿಪಿಟಕಗಳ ಕಾಲವನ್ನು ನಿರ್ಧರಿಸುವಲ್ಲಿ ಬೌದ್ಧರಿಗೇನೂ ಸಮಸ್ಯೆಯಿಲ್ಲ. ಅವುಗಳ ಕಾಲ ಪ್ರಥಮ

ಸಮಾವೇಶವೆಂಬುದು ಅವರ ನಿಲುವು. ಬೌದ್ಧರ ಪ್ರಥಮ ಸಮಾವೇಶವು ಬುದ್ಧನ ನಿರ್ವಾಣದ ನಂತರ ಜರುಗಿತು. ಬುದ್ಧನ ನಿರ್ವಾಣ ಕಾಲ ಕ್ರಿ.ಪೂ.477. ಅನಂತರ ಅದೇ ಕ್ರಿ.ಪೂ.477ರಲ್ಲಿ ಅಜಾತಶತ್ರುವಿನ ಆಶ್ರಯದಲ್ಲಿ ಮಹಾಕಶ್ಯಪ, ಆನಂದ ಮತ್ತು ಉಪಾಲಿ ಎಂಬ ಬೌದ್ಧ ಬಿಕ್ಕುಗಳ ನೇತೃತ್ವದಲ್ಲಿ ರಾಜಗೃಹದಲ್ಲಿ ಪ್ರಥಮ ಸಮಾವೇಶವು ಜರುಗಿತು. ಈ ಸಮಾವೇಶದಲ್ಲಿ ಬುದ್ಧನ ಎಲ್ಲ ಬೋಧನೆಗಳನ್ನೂ ತ್ರಿಪಿಟಕಗಳ ಮೂಲಕ ಕ್ರೋಢೀಕರಿಸಲಾಯಿತು. ಹೆಚ್ಚು ಕಡಿಮೆ ಇದೇ ಧಮ್ಮಪದದ ಕಾಲವೆಂದು ನಂಬಲಾಗಿದೆ.[5] ಅನಂತರ ಕ್ರಿ.ಶ.5ನೇ ಶತಮಾನದಲ್ಲಿ ಬಂದ ಅದರ ವ್ಯಾಖ್ಯಾನಕಾರನಾದ ಬುದ್ಧಘೋಷನು ಇದೇ ನಿಲುವನ್ನು ತಳೆಯುತ್ತಾನೆ.

ಧಮ್ಮಪದ ಎಂಬ ಶೀರ್ಷಿಕೆಯನ್ನು ವಿವಿಧ ರೀತಿಯಲ್ಲಿ ಅರ್ಥೈಸಲಾಗಿದೆ. ಇದೊಂದು ಸಂದಿಗ್ಧವಾದ ಪದ. ಮೂಲತಃ ಬೌದ್ಧರೇ ಈ ಶೀರ್ಷಿಕೆಯ ಸಂದಿಗ್ಧತೆಯನ್ನು ಒಪ್ಪಿಕೊಳ್ಳುತ್ತಾರೆ.[6] ಧಮ್ಮ ಎಂಬ ಶಬ್ದಕ್ಕೆ ಅನೇಕ ಅರ್ಥಗಳಿವೆ. ಒಂದು ಅರ್ಥದಲ್ಲಿ ಅದು ಬುದ್ಧನು ಬೋಧಿಸಿದ ಧರ್ಮ ಅಥವಾ ನೀತಿನಿಯಮಗಳನ್ನು ಸೂಚಿಸುತ್ತದೆ. ಇದನ್ನು ಪ್ರತಿಯೊಬ್ಬ ಬೌದ್ಧನೂ ಪಾಲಿಸಬೇಕೆಂಬ ಧ್ವನಿ ಇದೆ.[7] ಮತ್ತೊಂದು ಅರ್ಥದಲ್ಲಿ ಧಮ್ಮವು ಸದ್ಗುಣ ಅಥವಾ ಸಾಕ್ಷಾತ್ಕಾರವೆಂಬ ಅರ್ಥವನ್ನು ಸೂಚಿಸುತ್ತದೆ.[8]

ಹಾಗೆಯೇ ಪದಶಬ್ದಕ್ಕೂ ಅನೇಕ ಅರ್ಥಗಳಿವೆ. ಅಭಿಧಾನ ಪದೀಪಿಕಾದಲ್ಲಿ ಈ ಶಬ್ದಕ್ಕೆ ಸ್ಥಳ, ರಕ್ಷಣೆ, ನಿರ್ವಾಣ, ಕಾರಣ, ಶಬ್ದ, ವಸ್ತು, ಭಾಗ, ಪಾದ ಮತ್ತು ಪಥ ಎಂಬ ಅರ್ಥಗಳನ್ನು ನೀಡಲಾಗಿದೆ. ಆದ್ದರಿಂದ ಧಮ್ಮಪದವೆಂಬ ಶಬ್ದಸಮುಚ್ಚಯವು ಧರ್ಮದ ಪಥಗಳೆಂಬ ಅರ್ಥವನ್ನು ನೀಡಿದ್ದಿರಬಹುದು. ಈ ಅನುವಾದವನ್ನು Gogerly ಎಂಬಾತನು ಮಾಡಿದನು. ಒಂದು ಸಣ್ಣ ವ್ಯತ್ಯಾಸವೆಂದರೆ ಆತನು ಏಕವಚನಕ್ಕೆ ಬದಲಾಗಿ ಬಹುವಚನವನ್ನು ಪ್ರಯೋಗಿಸಿ "The Foot steps of Religion" ಎಂದು ಕರೆದನು.[9]

ಆದರೆ Spence Hardy ಎಂಬಾತನು "The Paths of Religion" ಎಂದು ಸ್ವತಂತ್ರ ಅನುವಾದವನ್ನು ನೀಡಿದನು.[10] ಆದರೆ **ಪದ** ಶಬ್ದವು ಪಥವನ್ನು ಸೂಚಿಸುವುದಿಲ್ಲವೆಂದು Childers ಅಭಿಪ್ರಾಯಪಡುತ್ತಾನೆ.[11] ಆದರೆ ಮ್ಯಾಕ್ಸ್‌ಮುಲ್ಲರ್ ಪ್ರಕಾರ ಪದವೆಂಬುದು ಪಥವೆಂಬ ಅರ್ಥವನ್ನು ಸೂಚಿಸುತ್ತದೆ. ಆತನ ದೃಷ್ಟಿಯಲ್ಲಿ foot step ಮತ್ತು path ಇವೆರಡೂ ಒಂದೇ.[12] ಉದಾಹರಣೆಗೆ **ಅಪ್ಪಮಾದೋ ಅಮತಪದಂ** ಎಂಬ ಸಾಲಿನಲ್ಲಿ ಪದಶಬ್ದವು ಅಮರತೆಗೆ ಪಥ ಎಂಬ ಅರ್ಥವನ್ನು ಸೂಚಿಸುತ್ತದೆ. ಪುನಃ **ಪಮಾದೋ ಮಚ್ಚುನೋಪದಜ್** ಎಂಬ ಸಾಲಿನಲ್ಲೂ ಮೃತ್ಯುವಿಗೆ ದಾರಿ ಎಂಬರ್ಥವಿದೆ.[13] ಹೀಗೆ ಪದಶಬ್ದವು ಪಥವೆಂಬ ಅರ್ಥವನ್ನು ಸೂಚಿಸುತ್ತದೆ. ಧಮ್ಮಪದದ ವ್ಯಾಖ್ಯಾನಕಾರನೂ ಇದೇ ಅಭಿಪ್ರಾಯವನ್ನು ತಳೆಯುವನೆಂದು ತೋರುತ್ತದೆ.[14]

ಆದರೆ M.L.Feer ಎಂಬಾತನು ಪದಶಬ್ದಕ್ಕೆ **'ಬುನಾದಿ'** ಎಂಬ ಅರ್ಥವನ್ನು ನೀಡುತ್ತಾನೆ.[15] ಎಂದರೆ ಧರ್ಮದ ಬುನಾದಿಯೇ ಧಮ್ಮಪದ. ಆದರೆ ಕ್ರಮೇಣ ಧಮ್ಮಪದಶಬ್ದವು **"**ಧರ್ಮದ ವಾಕ್ಯಗಳು**"** ಎಂಬರ್ಥವನ್ನು ತಳೆಯುತ್ತಾ ಬಂತು. ಇಲ್ಲಿ ಪದವೆಂದರೆ ಒಂದು ಶ್ಲೋಕ ಅಥವಾ ಶ್ಲೋಕದ ಒಂದು ಸಾಲೆಂದರ್ಥ. ಇದಕ್ಕೆ ಆಧಾರವಾಗಿ ಕೆಳಕಂಡ ಶ್ಲೋಕಗಳನ್ನು ಉಲ್ಲೇಖಿಸಬಹುದು.

**ಸಹಸ್ಸಂ ಅಪಿ ಚೆ ವಾಚಾ ಅನತ್ಥ ಪದಸಂಹಿತಾ**

**ಏಕಜ್ ಅತ್ಥಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ**

**ಸಹಸ್ಸಂ ಅಪಿ ಚೆ ಗಾಥಾ ಅನತ್ಥ ಪದಸಂಹಿತಾ**

**ಏಕಜ್ ಗಾಥಾಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ**

**ಯೋ ಚ ಗಾಥಾಸತಜ್ ಭಾಸೆ ಅನತ್ಥ ಪದಸಂಹಿತಾ**

**ಏಕಜ್ ಧಮ್ಮಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ**[16]

ಅರ್ಥಶೂನ್ಯವಾದ ನೂರು ಗಾಥೆಗಳನ್ನು ಪಠಿಸುವುದಕ್ಕಿಂತಲೂ, ಕೇಳಿದರೆ ಉಪಶಾಂತಿಯನ್ನು ಕೊಡುವ ಒಂದು ಧರ್ಮದ ಗಾಥೆ ಶ್ರೇಯಸ್ಕರವಾದುದು. ಪ್ರೊಫೆಸರ್ Fausboll ಇದೇ ಅಭಿಪ್ರಾಯವನ್ನು ತಳೆಯುತ್ತಾರೆ. ಅವರು ಧಮ್ಮಪದ ಶಬ್ದವನ್ನು "ಧರ್ಮವನ್ನು ಕುರಿತ ಶ್ಲೋಕಗಳ ಸಂಗ್ರಹ" ಎಂದು ಅರ್ಥೈಸುತ್ತಾರೆ. ಇದಕ್ಕೆ ಆಧಾರವಾಗಿ ಅವರು ಮೇಲಿನ ಶ್ಲೋಕಗಳನ್ನಷ್ಟೇ ಅಲ್ಲ, ಕೆಳಕಂಡ ಶ್ಲೋಕಗಳನ್ನೂ ಉಲ್ಲೇಖಿಸುತ್ತಾರೆ.[17]

**ಕೋ ಇಮಜ್ ಪಠವಿಜ್ ವಿಜೆಸ್ಸತಿ**

**ಯಮಲೋಕಜ್ ಚ ಇಮಜ್ ಸದೇವಕಜ್?**

**ಕೋ ಧಮ್ಮಪದಜ್ ಸುದೇಸಿತಜ್**

**ಕುಸಲೋ ಪುಪ್ಫಂ ಇವ ಪಚೆಸ್ಸತಿ?**

**ಸೇಖೋ ಪಠವಿಜ್ ವಿಜೆಸ್ಸತಿ**

**ಯಮಲೋಕಜ್ ಚ ಇಮಙ್ ಸದೇವಕಙ್**

**ಸೇಖೋ ಧಮ್ಮಪದಜ್ ಸುದೇಸಿತಜ್**

**ಕುಸಲೋ ಪುಪ್ಫಜ್ ಇವ ಪಚೆಸ್ಸತಿ**[18]

ಬುದ್ಧಘೋಷನೂ ಕೂಡ ಅನೇಕ ನಿಯಮಗಳನ್ನು ಕುರಿತ ಶ್ಲೋಕಗಳನ್ನು ಉಲ್ಲೇಖಿಸುವಾಗ ಬಹುವಚನವನ್ನು ಪ್ರಯೋಗಿಸುತ್ತಾನೆ (ಧಮ್ಮಪದನೀ).[19]

26 ಅಧ್ಯಾಯಗಳುಳ್ಳ ಧಮ್ಮಪದದ ಗಾಥೆಯಲ್ಲಿರುವ ಸಾಲುಗಳ ಸಂಖ್ಯೆಯಲ್ಲಿ ವೈವಿಧ್ಯತೆಯಿದೆ. ಹೀಗೆ ಛಂದೋವೈವಿಧ್ಯವಿದ್ದರೂ ಬಹುತೇಕ ಗಾಥೆಗಳು 2 ಸಾಲುಗಳಿಂದ ಕೂಡಿವೆ. ಮೊದಲ ಅಧ್ಯಾಯದ ಹೆಸರು **ಯಮಕವಗ್ಗ**. ಈ ಅಧ್ಯಾಯದಲ್ಲಿ 20 ಶ್ಲೋಕಗಳಿವೆ. ಅವುಗಳಲ್ಲಿ 3 ಸಾಲುಗಳುಳ್ಳ 4 ಶ್ಲೋಕಗಳು,[20] 4 ಸಾಲುಗಳುಳ್ಳ 1 ಶ್ಲೋಕವು[21] ಮತ್ತು 6 ಸಾಲುಗಳುಳ್ಳ 1 ಶ್ಲೋಕವಿದೆ.[22] ಈ ಅಧ್ಯಾಯವು ಹೇಗೆ ನಮ್ಮೆಲ್ಲ ನಡೆನುಡಿಗಳಿಗೂ ಮನಸ್ಸೇ ಮೂಲವೆಂಬುದನ್ನು ವಿವರಿಸುತ್ತದೆ.

ಇನ್ನು ಎರಡನೇ ಅಧ್ಯಾಯದ ಹೆಸರು **ಅಪ್ಪಮಾದವಗ್ಗ**. ಈ ಅಧ್ಯಾಯದಲ್ಲಿ ಕೇವಲ 12 ಶ್ಲೋಕಗಳಿದ್ದು ಇದರಲ್ಲಿ 3 ಸಾಲಿನ 1 ಶ್ಲೋಕವಿದೆ.[23] ಪ್ರತಿ ಶ್ಲೋಕವೂ ಒಂದು ಮೌಲ್ಯವನ್ನು ಪ್ರತಿಪಾದಿಸಿ ಆ ಮೌಲ್ಯವನ್ನು ಪಾಲಿಸುವುದರಿಂದ ಉಂಟಾಗುವ ಆಧ್ಯಾತ್ಮಿಕ ಪ್ರಯೋಜನವಷ್ಟೇ ಅಲ್ಲದೇ ಅದಕ್ಕೆ ಸಂವಾದಿಯಾದ ಅಪಮೌಲ್ಯದ ಅಪಾಯವನ್ನೂ ಒತ್ತಿನುಡಿಯುತ್ತದೆ. ಉದಾಹರಣೆಗೆ **ಅಪ್ರಮಾದ**ವೆಂಬ ಮೌಲ್ಯ. ಇದು ಮನುಷ್ಯನನ್ನು ಅಮರತೆಗೆ ಒಯ್ದರೆ **ಪ್ರಮಾದ** ಅಥವಾ **ಎಚ್ಚರವಿಲ್ಲದಿರುವಿಕೆ** ಮನುಷ್ಯನನ್ನು ಮೃತ್ಯುಪಥಕ್ಕೆ ಒಯ್ಯುತ್ತದೆ.[24] ಇದೇ ರೀತಿ ಧ್ಯಾನ, ಧರ್ಮ, ದಮ ಅಥವಾ ಆತ್ಮ ನಿಗ್ರಹ, ಕಾಮತ್ಯಾಗ ಮುಂತಾದ ಮೌಲ್ಯಗಳ ಪ್ರಸ್ತಾಪವಿದೆ. ಒಟ್ಟಾರೆ ಎರಡನೇ ಅಧ್ಯಾಯವು ಮನುಷ್ಯನು ಜೀವನದಲ್ಲಿ ಬೆಳೆಸಿಕೊಳ್ಳಬೇಕಾದ ಚಚ್ಚರ ಅಥವಾ ಅಪ್ರಮಾದ ಎಂಬ ಮೌಲ್ಯದ ಹಿರಿಮೆಯ ಬಗ್ಗೆ ವಿವರಿಸುತ್ತದೆ.

ಮೂರನೇ ಅಧ್ಯಾಯವಾದ **ಚಿತ್ತವಗ್ಗದಲ್ಲಿ** 11 ಶ್ಲೋಕಗಳಿವೆ. ಅದು ಮನಸ್ಸಿನ ಚಂಚಲ ಸ್ವಭಾವವನ್ನು ಕುರಿತು ಚರ್ಚಿಸುತ್ತದೆ. ಈ ಅಧ್ಯಾಯದಲ್ಲಿ 4 ಸಾಲಿನ 1 ಶ್ಲೋಕವಿದೆ.[25]

ನಾಲ್ಕನೇ ಅಧ್ಯಾಯವಾದ **ಪುಷ್ಪವಗ್ಗ**ದಲ್ಲಿ 16 ಶ್ಲೋಕಗಳಿವೆ. ಈ ಅಧ್ಯಾಯವನ್ನು **ಪುಷ್ಪವಗ್ಗ**ವೆಂದು ಕರೆಯಲು ಕಾರಣ ಇಡೀ ಅಧ್ಯಾಯವು ಹೂವುಗಳನ್ನು ಕುರಿತ ಉಪಮೆಗಳಿಂದ ಕೂಡಿವೆ. ಈ ಅಧ್ಯಾಯದಲ್ಲಿ 4 ಸಾಲುಗಳ 4 ಶ್ಲೋಕಗಳಿವೆ.[26]

ಧಮ್ಮಪದದ ಐದನೇ ಅಧ್ಯಾಯವನ್ನು **ಬಾಲವಗ್ಗ**ವೆಂದು ಕರೆಯುತ್ತಾರೆ. ಈ ಅಧ್ಯಾಯದಲ್ಲಿ 17 ಶ್ಲೋಕಗಳಿದ್ದು. ಇಲ್ಲಿ 3 ಸಾಲುಗಳ 2 ಶ್ಲೋಕಗಳಿವೆ. ಈ ಅಧ್ಯಾಯವು ಮೂರ್ಖರ ನಡುವಳಿಕೆಯನ್ನು ವಿವರಿಸುತ್ತದೆ.[27]

ಆರನೇ ಅಧ್ಯಾಯವನ್ನು **ಪಂಡಿತವಗ್ಗ**ವೆಂದು ಕರೆಯುತ್ತಾರೆ. ಈ ಅಧ್ಯಾಯವು ಮನುಷ್ಯನು ಯಾರ ಸಹವಾಸವನ್ನು ಮಾಡಬೇಕೆಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಅಧ್ಯಾಯದಲ್ಲಿ 3 ಸಾಲುಗಳ 2 ಶ್ಲೋಕಗಳಿವೆ[28] ಮತ್ತು 4 ಸಾಲುಗಳ 2 ಶ್ಲೋಕಗಳಿವೆ.[29]

ಧಮ್ಮಪದದ ಏಳನೇ ಅಧ್ಯಾಯದ ಹೆಸರು **ಅರ್ಹನ್ತವಗ್ಗ** ಎಂದು. ಈ ಅಧ್ಯಾಯದಲ್ಲಿ 10 ಶ್ಲೋಕಗಳಿವೆ. ಹಿಂದಿನ ಯಾವುದೇ ಅಧ್ಯಾಯಗಳಲ್ಲಿನಂತೆ ಈ ಅಧ್ಯಾಯದಲ್ಲೂ 3 ಸಾಲಿನ ಎರಡು ಶ್ಲೋಕಗಳಿವೆ.[30] ಈ ಅಧ್ಯಾಯಕ್ಕೆ **ಅರ್ಹನ್ತವಗ್ಗ** ಎಂಬ ಹೆಸರು ಬರಲು ಕಾರಣ, ಅದು ಮುಕ್ತನ ಲಕ್ಷಣಗಳನ್ನು ವಿವರಿಸುತ್ತದೆ. ಬೌದ್ಧಜೈನಧರ್ಮಗಳಲ್ಲಿ **ಅರ್ಹನ್ತ** ಎಂಬುದು ಮುಕ್ತನಿಗೆ ಇನ್ನೊಂದು ಹೆಸರು.

ಧಮ್ಮಪದದ ಎಂಟನೇ ಅಧ್ಯಾಯದ ಹೆಸರು **ಸಹಸ್ಸವಗ್ಗ** ಎಂದು. ಈ ಅಧ್ಯಾಯದಲ್ಲಿ 16 ಶ್ಲೋಕಗಳಿವೆ. ಈ ಶ್ಲೋಕಗಳಲ್ಲಿ 3 ಸಾಲಿನ 2 ಶ್ಲೋಕಗಳು[31] ಮತ್ತು 4 ಸಾಲಿನ 1 ಶ್ಲೋಕವಿದೆ.[32] ಉಳಿದೆಲ್ಲವೂ 2 ಸಾಲಿನ ಶ್ಲೋಕಗಳು. ಈ ಅಧ್ಯಾಯದ ವಿಷಯ **ಮಾತು.** ಅದು ಎಲ್ಲವನ್ನೂ **ಸಹಸ್ರ**ದ ಪರಿಭಾಷೆಯಲ್ಲಿ ವಿವರಿಸುತ್ತದೆ. ಆದ್ದರಿಂದಲೇ ಅಧ್ಯಾಯದ ಹೆಸರು **ಸಹಸ್ಸವಗ್ಗ**. ಯಾವ ಮಾತು ವ್ಯರ್ಥ ಮತ್ತು ಯಾವ ಮಾತು ಉಪಯುಕ್ತ ಎಂಬ ಬಗ್ಗೆ ಈ ಅಧ್ಯಾಯದ ಮೊದಲ ಕೆಲವು ಶ್ಲೋಕಗಳು ಚರ್ಚಿಸುತ್ತವೆ.

ಧಮ್ಮಪದದ ಒಂಭತ್ತನೇ ಅಧ್ಯಾಯವನ್ನು **ಪಾಪವಗ್ಗ**ವೆಂದು ಕರೆಯಲಾಗಿದೆ. ಇದು ಪುಣ್ಯಪಾಪಗಳನ್ನು ಕುರಿತು ವಿವೇಚಿಸುವುದರಿಂದ ಈ ಅಧ್ಯಾಯವನ್ನು ಪಾಪವಗ್ಗವೆಂದು ಕರೆಯುತ್ತಾರೆ. ಈ ಅಧ್ಯಾಯದಲ್ಲಿ 3 ಸಾಲುಗಳ 2 ಶ್ಲೋಕಗಳು[33] ಮತ್ತು 4 ಸಾಲುಗಳ 2 ಶ್ಲೋಕಗಳಿವೆ.[34]

17 ಶ್ಲೋಕಗಳನ್ನು ಒಳಗೊಂಡಿರುವ ಹತ್ತನೇ ಅಧ್ಯಾಯವನ್ನು **ದಂಡವಗ್ಗ** ಎಂದು ಕರೆಯುತ್ತಾರೆ. ಈ ಅಧ್ಯಾಯವು ಹಿಂಸಾಮಾರ್ಗವನ್ನು ಖಂಡಿಸುತ್ತದೆ. ಈ ಅಧ್ಯಾಯದಲ್ಲಿ 4 ಸಾಲುಗಳ 2 ಶ್ಲೋಕಗಳು[35] ಮತ್ತು 6 ಸಾಲುಗಳ 1 ಶ್ಲೋಕವಿದೆ.[36]

ಹನ್ನೊಂದನೇ ಅಧ್ಯಾಯವಾದ **ಜರಾವಗ್ಗ**ದಲ್ಲಿ ಹನ್ನೊಂದು ಶ್ಲೋಕಗಳಿವೆ. ಒಂದು ಶ್ಲೋಕವು 4 ಸಾಲುಗಳುಳ್ಳದ್ದು,[37] ಮತ್ತೊಂದು 3 ಸಾಲುಗಳುಳ್ಳದ್ದಾಗಿದೆ.[38] ಈ ಅಧ್ಯಾಯವು ಮನುಷ್ಯನಿಗೆ ಅನಿವಾರ್ಯ ಹಂತವಾದ ಮುಪ್ಪಿನ ದುಃಖವನ್ನು ಮನದಟ್ಟು ಮಾಡಿಕೊಡುತ್ತದೆ.

**ಅತ್ತವಗ್ಗ**ವೆಂಬ ಹನ್ನೆರಡನೇ ಅಧ್ಯಾಯದಲ್ಲಿ ಆತ್ಮವಿಶ್ಲೇಷಣೆಯನ್ನು ಕುರಿತ ಮಾಹಿತಿಗಳಿವೆ. 10 ಶ್ಲೋಕಗಳುಳ್ಳ ಈ ಅಧ್ಯಾಯದಲ್ಲಿ 3 ಸಾಲುಗಳುಳ್ಳ 2 ಶ್ಲೋಕಗಳಿವೆ.[39]

**ಲೋಕವಗ್ಗ**ವೆಂಬ ಹದಿಮೂರನೇ ಅಧ್ಯಾಯದಲ್ಲಿ 12 ಶ್ಲೋಕಗಳಿವೆ. ಈ ಅಧ್ಯಾಯದಲ್ಲಿ 4 ಸಾಲುಗಳುಳ್ಳ 1 ಶ್ಲೋಕವಿದೆ.[40] ದೈನಂದಿನ ಜೀವನದಲ್ಲಿ ಮನುಷ್ಯನು ನಡೆದುಕೊಳ್ಳಬೇಕಾದ ವಿಧಾನದ ಬಗ್ಗೆ ವಿವರಿಸುವುದರಿಂದ ಈ ಅಧ್ಯಾಯಕ್ಕೆ **ಲೋಕವಗ್ಗ**ವೆಂದು ಹೆಸರು. ಎಂದರೆ ಈ ಅಧ್ಯಾಯವು ಮನುಷ್ಯನು ಪ್ರಪಂಚದಲ್ಲಿ ಬದುಕಬೇಕಾದ ವಿಧಾನದ ಬಗ್ಗೆ ಚರ್ಚಿಸುತ್ತದೆ.

ಹದಿನಾಲ್ಕನೇ ಅಧ್ಯಾಯದಲ್ಲಿ 18 ಶ್ಲೋಕಗಳಿವೆ. ಈ ಅಧ್ಯಾಯದಲ್ಲಿ 4 ಸಾಲುಗಳುಳ್ಳ 1 ಶ್ಲೋಕವು,[41] 3 ಸಾಲುಗಳುಳ್ಳ 1 ಶ್ಲೋಕವಿದೆ.[42] ಇದನ್ನು **ಬುದ್ಧವಗ್ಗ**ವೆಂದು ಕರೆಯುತ್ತಾರೆ. ಇಲ್ಲಿ ಬುದ್ಧ ಎಂದರೆ ಜ್ಞಾನಿಯ ಲಕ್ಷಣಗಳನ್ನು ವಿವರಿಸಲಾಗಿದೆ.

ಹದಿನೈದನೇ ಅಧ್ಯಾಯದಲ್ಲಿ 12 ಶ್ಲೋಕಗಳಿದ್ದು ಇದನ್ನು **ಸುಖವಗ್ಗ**ವೆಂದು ಕರೆಯುತ್ತಾರೆ. ಬುದ್ಧನು ಈ ಅಧ್ಯಾಯದಲ್ಲಿ ವೈರಿಗಳಲ್ಲೂ ನಾವು ಅವೈರತ್ವವನ್ನು

ಸಾಧಿಸಬೇಕೆಂಬ ಸಂದೇಶವನ್ನು ನೀಡುತ್ತಾನೆ. ಈ ಅಧ್ಯಾಯದಲ್ಲಿ 3 ಸಾಲುಗಳ್ಳುಳ್ಳ 1 ಶ್ಲೋಕವು[43] ಮತ್ತು 4 ಸಾಲುಗಳುಳ್ಳ 1 ಶ್ಲೋಕವಿದೆ.[44]

ಹದಿನಾರನೇ ಅಧ್ಯಾಯದಲ್ಲಿ 12 ಶ್ಲೋಕಗಳಿದ್ದು, ಇದನ್ನು **ಪ್ರಿಯವಗ್ಗ**ವೆಂದು ಕರೆಯುತ್ತಾರೆ. ಈ ಅಧ್ಯಾಯವು ಮನುಷ್ಯನ ಪ್ರಿಯಾಪ್ರಿಯಗಳ ಬಗ್ಗೆ ಚರ್ಚಿಸುತ್ತದೆ. ಎಂದರೆ ಅದು ಮನುಷ್ಯನಿಗೆ ಯಾವುದು ಹಿತ ಮತ್ತು ಯಾವುದು ಅಹಿತ ಎಂಬುದನ್ನು ಪ್ರತಿಪಾದಿಸುತ್ತದೆ.

ಹದಿನೇಳನೇ ಅಧ್ಯಾಯದಲ್ಲಿ 14 ಶ್ಲೋಕಗಳಿದ್ದು, ಇದನ್ನು **ಕ್ರೋಧವಗ್ಗ**ವೆಂದು ಕರೆಯುತ್ತಾರೆ.ಇಲ್ಲಿ ಬುದ್ಧನು ಕ್ರೋಧದ ಅಪಾಯವನ್ನು ನಮಗೆ ಮನಗಾಣಿಸಿ ಅದರ ಮಾರ್ಗವನ್ನು ಬಿಡಬೇಕೆಂದು ಆತನು ಉಪದೇಶಿಸುತ್ತಾನೆ. ಈ ಅಧ್ಯಾಯದಲ್ಲಿ 4 ಸಾಲುಗಳ 1 ಶ್ಲೋಕ[45] ಮತ್ತು 3 ಸಾಲುಗಳ 1 ಶ್ಲೋಕವಿದೆ.[46]

ಧಮ್ಮಪದದ ಹದಿನೆಂಟನೇ ಅಧ್ಯಾಯದ ಹೆಸರು **ಮಲವಗ್ಗ**. ಈ ಅಧ್ಯಾಯದಲ್ಲಿ 21 ಶ್ಲೋಕಗಳಿವೆ. ಆಂತರಿಕ ಕಶ್ಮಲಗಳನ್ನು ತೊಳೆಯುವ ವಿಧಾನವನ್ನು ವಿವರಿಸುವುದರಿಂದ ಈ ಅಧ್ಯಾಯಕ್ಕೆ **ಮಲವಗ್ಗ**ವೆಂದು ಹೆಸರು. ಈ ಅಧ್ಯಾಯದಲ್ಲಿ 3 ಸಾಲುಗಳ 2 ಶ್ಲೋಕಗಳಿವೆ.[47]

ಹತ್ತೊಂಬತ್ತನೇ ಅಧ್ಯಾಯವನ್ನು ಧರ್ಮಸ್ಥವರ್ಗವೆಂದು ಕರೆಯುತ್ತಾರೆ. ಇದರಲ್ಲಿ 17 ಶ್ಲೋಕ ಅಥವಾ ಗಾಥೆಗಳಿವೆ. ಇವುಗಳಲ್ಲಿ 3 ಸಾಲಿನ 1 ಗಾಥೆಯಿದೆ.[48] ಈ ಅಧ್ಯಾಯವು ಧರ್ಮಸ್ಥನ ಲಕ್ಷಣಗಳನ್ನು ವಿವರಿಸುತ್ತದೆ.

ಇಪ್ಪತ್ತನೇ ಅಧ್ಯಾಯವನ್ನು **ಮಗ್ಗವಗ್ಗ**ವೆಂದು ಕರೆಯುತ್ತಾರೆ. ಇದರಲ್ಲಿ 17 ಗಾಥೆಗಳಿವೆ. ಅವುಗಳಲ್ಲಿ ಎರಡು 4 ಸಾಲಿನ ಗಾಥೆಗಳು[49] ಮತ್ತು ಒಂದು 3 ಸಾಲಿನ

ಗಾಥೆಗಳಿವೆ.[50] ಅಷ್ಟಾಂಗ ಮಾರ್ಗದ ಹಿರಿಮೆಯ ಬಗ್ಗೆ ವಿವರಿಸುವುದರಿಂದ ಈ ಅಧ್ಯಾಯವನ್ನು ಬಹುಶಃ ಮಾರ್ಗವಗ್ಗವೆಂದು ಕರೆದ್ದಿರಬಹುದು.

ಇಪ್ಪತ್ತೊಂದನೇ ಅಧ್ಯಾಯವನ್ನು **ಪಕ್ಕಿಣ್ಣಕವಗ್ಗ** (ಪಕೀರ್ಣಕ ವಗ್ಗ) ಎಂದು ಕರೆಯುತ್ತಾರೆ. ಈ ಅಧ್ಯಾಯದ ಶೀರ್ಷಿಕೆಯ ಅರ್ಥ ಅಷ್ಟು ಸ್ಪಷ್ಟವಿಲ್ಲ. ಸಂಕೀರ್ಣ ಎಂದರೆ ವಿವಿಧ ರೀತಿಯ  ಮೌಲ್ಯಗಳನ್ನು ಕುರಿತು ಪ್ರತಿಪಾದಿಸುತ್ತವ ಕಾರಣ ಈ ಅದ್ಯಾಯಕ್ಕೆ ಪಕ್ಕಿಣ್ಣಕವಗ್ಗ ಎಂಬ ಹೆಸರು ಬಂದಿದ್ದಿರಬಹುದು. ಇದರಲ್ಲಿ 16 ಗಾಥೆಗಳಿದ್ದು ಅವುಗಳಲ್ಲಿ 2 ಗಾಥೆಗಳು ಮೂರು ಸಾಲುಗಳುಳ್ಳದ್ದಾಗಿವೆ.[51]

ಇಪ್ಪತ್ತೆರಡನೇ ಅಧ್ಯಾಯವನ್ನು **ನಿರಯವಗ್ಗ**ವೆಂದು ಕರೆಯುತ್ತಾರೆ. ನಿರಯವೆಂದರೆ ನರಕವೆಂದರ್ಥ. ಇದರಲ್ಲಿ 14 ಗಾಥೆಗಳಿದ್ದು 4 ಸಾಲಿನ ಗಾಥೆಗಳು 4 ಇದ್ದು[52] ಒಂದು 3 ಸಾಲಿನ ಗಾಥೆಯಿದೆ.[53]

ಇಪ್ಪತ್ತಮೂರನೇ ಅಧ್ಯಾಯವನ್ನು **ನಾಗವಗ್ಗ** (ನಾಗವರ್ಗ)ವೆಂದು ಕರೆಯುತ್ತಾರೆ. ಈ ಅಧ್ಯಾಯದಲ್ಲಿ 13 ಶ್ಲೋಕಗಳಿದ್ದು, ಏಳು ಗಾಥೆಗಳು 4 ಸಾಲುಗಳುಳ್ಳದ್ದಾಗಿವೆ.[54] ಇಲ್ಲಿ **'ಮಹಾನಾಗ'** ಎಂದರೆ ಬುದ್ಧನೆಂದರ್ಥ. ಬೌದ್ಧಧರ್ಮದಲ್ಲಿ ಬುದ್ಧನನ್ನು ಮಹಾನಾಗನೆಂದು ಕರೆಯುವ ರೂಢಿಯುಂಟು.

ಇಪ್ಪತ್ತನಾಲ್ಕನೇ ಅಧ್ಯಾಯವನ್ನು **ತನ್ಹಾವಗ್ಗ** ಎಂದು ಕರೆಯುತ್ತಾರೆ. ತೃಷ್ಣೆಯ ಅಪಾಯವನ್ನು ಇದು ವಿವರಿಸುವುದರಿಂದಲೇ ಈ ಅಧ್ಯಾಯವನ್ನು ತನ್ಹಾವಗ್ಗವೆಂದು ಕರೆಯುವುದು. ಈ ಅಧ್ಯಾಯದಲ್ಲಿ 26 ಗಾಥೆಗಳಿದ್ದು, ಇವುಗಳಲ್ಲಿ ಎಂಟು 4 ಸಾಲಿನ ಶ್ಲೋಕಗಳು,[55] ಒಂದು 3 ಸಾಲಿನ ಶ್ಲೋಕವಿದೆ.[56]

ಇಪ್ಪತ್ತೈದನೇ ಅಧ್ಯಾಯವನ್ನು **ಬಿಕ್ಕುವಗ್ಗ** ಎಂದು ಕರೆಯುತ್ತಾರೆ. ಇದರಲ್ಲಿ 23 ಗಾಥೆಗಳಿವೆ. ಇವುಗಳಲ್ಲಿ 3 ಸಾಲಿನ ಗಾಥೆಗಳು ಎರಡು[57] ಮತ್ತು 4 ಸಾಲಿನ ಒಂದು ಗಾಥೆಯಿದೆ.[58] ಬಿಕ್ಕುವಿನ ಲಕ್ಷಣಗಳನ್ನು ಅಥವಾ ಆತನ ಪಾರಿವ್ರಾಜಕ ನಿಯಮಗಳನ್ನು ವಿವರಿಸುವುದರಿಂದ ಇದನ್ನು ಬಿಕ್ಕುವರ್ಗವೆಂದು ಕರೆಯುತ್ತಾರೆ.

ಇಪ್ಪತ್ತಾರನೇ ಅಧ್ಯಾಯದಲ್ಲಿ 40 ಗಾಥೆಗಳಿವೆ. ಇವುಗಳಲ್ಲಿ ನಾಲ್ಕು 3 ಸಾಲಿನ ಗಾಥೆಗಳು[59] ಮತ್ತು 4 ಸಾಲಿನ ಒಂದು ಗಾಥೆಯಿದೆ.[60] ಈ ಅಧ್ಯಾಯವನ್ನು **ಬ್ರಾಹ್ಮಣವಗ್ಗ**ವೆಂದು ಕರೆಯುತ್ತಾರೆ. ಎಲ್ಲ ಅಧ್ಯಾಯಗಳಿಗಿಂತಲೂ ಈ ಅಧ್ಯಾಯವೇ ದೊಡ್ಡ ಅಧ್ಯಾಯವಾಗಿದ್ದು ಇದು ನಿಜವಾದ ಬ್ರಾಹ್ಮಣನ ಲಕ್ಷಣಗಳನ್ನು ವಿವರಿಸುತ್ತದೆ.

**ಉಪಮೆಗಳು**

ಬುದ್ಧನ ಉದ್ದೇಶ ತನ್ನ ಸಂದೇಶವನ್ನು ಜನಸಾಮಾನ್ಯನಿಗೆ ತಲುಪಿಸುವುದಾಗಿತ್ತು. ಆತನಿಗೆ ಎಲ್ಲ ರೀತಿಯ ವಾದವಿವಾದಗಳೂ ಅಸಹನೀಯವಾಗಿದ್ದವು. ಅನಂತರದ ಬೌದ್ಧಧರ್ಮದಲ್ಲಿ ಕಾಣಬರುವ ತರ್ಕವಿತರ್ಕಗಳು ಬುದ್ಧನ ಯಾವ ಬೋಧನೆಯಲ್ಲೂ ನಾವು ಕಾಣಲು ಸಾಧ್ಯವಿಲ್ಲ. ತನ್ನ ಬದುಕು ಮತ್ತು ಬೋಧನೆಗಳೆರಡರ ಸರಳತೆಯಿಂದಾಗಿ ಆತನು ವಿದ್ವಾಂಸ ಮತ್ತು ಜನಸಾಮಾನ್ಯರಿಬ್ಬರಿಗೂ ಹತ್ತಿರವಾಗಿದ್ದ. ಆತನ ಸಂದೇಶಗಳಲ್ಲಿ ಕ್ಲಿಷ್ಟತೆಯಿಲ್ಲ, ಪೂರ್ವಪಕ್ಷ ಸಿದ್ಧಾಂತಗಳಿಲ್ಲ. ಸರಿಯಾದುದನ್ನು ಎಲ್ಲರಿಗೂ ಅರ್ಥವಾಗುವ ಆಡುಭಾಷೆಯಲ್ಲಿ ಉಪಮೆ ದೃಷ್ಟಾಂತಗಳ ಮೂಲಕ ತಲುಪಿಸುವ ಕಲೆಯು ಆತನಿಗಿತ್ತು. ಮೂಲತಃ ಆತನು ಬುದ್ಧನಾದುದರಿಂದಲೇ (ಜ್ಞಾನಿ) ಆತನಿಗೆ ಈ ಕಲೆಯು ಮೈಗೂಡಿತ್ತು. ಇಡೀ ಧಮ್ಮಪದವು ಉಪಮೆಗಳ ಗ್ರಂಥವೆಂದರೆ ಅತಿಶಯೋಕ್ತಿಯಲ್ಲ. ಇಡೀ 26 ಅಧ್ಯಾಯಗಳು ಉಪಮೆ ದೃಷ್ಟಾಂತಗಳಿಂದ ತುಂಬಿ ತುಳುಕಾಡುತ್ತವೆ. ಬುದ್ಧನು ತನ್ನ

ಸಂದೇಶವನ್ನು ತಿಳಿಸಲು ಮನುಷ್ಯನು ತಾನಿರುವ ಪರಿಸರವನ್ನೇ ಅಥವಾ ಅವನು ಬಳಸುವ ಪದಾರ್ಥವನ್ನೇ ದೃಷ್ಟಾಂತವಾಗಿ ಬಳಸಿಕೊಳ್ಳುತ್ತಿದ್ದ. ಒಂದೇ ಉಪಮೆಯನ್ನು ವಿವಿಧ ಬೋಧನೆಗಳನ್ನು ವಿವರಿಸಲು ಅಳವಡಿಸಿಕೊಳ್ಳುತ್ತಿದ್ದ. ಅಥವಾ ಒಂದೇ ಬೋಧನೆಯನ್ನು ವಿವರಿಸಲು ವಿವಿಧ ಉಪಮೆಗಳನ್ನು ನೀಡುತ್ತಿದ್ದ. ಉದಾಹರಣೆಗೆ ಶರೀರದ ತಾತ್ಕಾಲಿಕತೆಯನ್ನು ವಿವರಿಸಲು ನೊರೆ, ಉಪಮೆ, ಕೊರಡು, ಮಣ್ಣಿನ ಗಡಿಗೆ ಇತ್ಯಾದಿ ಉಪಮೆಗಳನ್ನು ಆತನು ನೀಡುತ್ತಾನೆ. ಇದು ಅನುಭಾವಿಯ ಸಂವಹನ ಕೌಶಲ್ಯಕ್ಕೆ (Communicative Skill) ಸಾಕ್ಷಿ. ಕೆಲವು ದೃಷ್ಟಾಂತಗಳನ್ನು ನಾವು ಕೆಳಕಂಡಂತೆ ವಿವರಿಸಬಹುದು.

ಬಂಡಿಯ ಗಾಲಿಯು ಪ್ರಾಣಿಯ ಹೆಜ್ಜೆಯನ್ನು ಅನುಸರಿಸುವಂತೆ ಕಲುಷಿತವಾದ ಮನಸ್ಸುಳ್ಳವನನ್ನು ದುಃಖವು ಅನುಸರಿಸುತ್ತದೆ.[61] ಮನುಷ್ಯನನ್ನು ಆತನ ನೆರಳು ಎಡಬಿಡದೆ ಹೇಗೋ ಹಾಗೆ ಶುದ್ಧಮನಸ್ಸುಳ್ಳವನನ್ನು ಸುಖವು ಹಿಂಬಾಲಿಸುತ್ತದೆ.[62] ಗಾಳಿಯು ಬಂಡೆಗಳ ಪರ್ವತವನ್ನು ಹೇಗೋ ಹಾಗೆ ಮನ್ಮಥನು ಇಂದ್ರಿಯನಿಗ್ರಹ, ಮಿತಾಹಾರಿ ಮತ್ತು ವಿನಯಶೀಲನನ್ನು ವಶಪಡಿಸಿಕೊಳ್ಳಲಾರ.[63] ಛಾವಣಿಯಿಲ್ಲದ ಮನೆಯೊಳಗೆ ಮಳೆಯು ಬಲವಾಗಿ ನುಗ್ಗುವಂತೆ ಮೈತ್ರಿಯೇ ಮುಂತಾದ ಭಾವನೆಯಿಲ್ಲದ ಚಿತ್ತದೊಳಗೆ ರಾಗವು ನುಗ್ಗುತ್ತದೆ.[64] ಮತ್ತೊಬ್ಬರ ಗೋವುಗಳನ್ನು ಎಣಿಸುವ ಗೊಲ್ಲನಿಗೆ ಅವುಗಳ ಹಾಲಿನ ರುಚಿಯು ತಿಳಿಯದಿರುವಂತೆ ಆಚರಣೆಗೆ ತರದೇ ಧರ್ಮವಚನವನ್ನು ಯಾಂತ್ರಿಕವಾಗಿ ಪಠಿಸುವವನಿಗೆ ಶ್ರಮಣನಾದ ಸಾರ್ಥಕ್ಯ ದಕ್ಕುವುದಿಲ್ಲ.[65]

ವೇಗವಾದ ಕುದುರೆಯು ಶಕ್ತಿಯಿಲ್ಲದ ಕುದುರೆಯನ್ನು ಹಿಂದಕ್ಕೆ ಹಾಕುವಂತೆ ಜಾಣನಾದವನು ಜಾಣರಲ್ಲದವರನ್ನು ಹಿಂದಕ್ಕೆ ಹಾಕುತ್ತಾನೆ.[66] ಬಾಣವನ್ನು ಮಾಡುವಾತನು

ಬಿದಿರನ್ನು ಬಗ್ಗಿಸಿ ಬಾಣವನ್ನು ನೆಟ್ಟಗೆ ಮಾಡುವಂತೆ ಜಾಣನು ಚಂಚಲವಾದ ಚಿತ್ತವನ್ನು ಹಿಡಿತಲ್ಲಿಡಲು ಪ್ರಯತ್ನಿಸುತ್ತಾನೆ.[67] ನೀರಿನಿಂದ ಭೂಮಿಗೆ ಬಿಸಾಡಿದ ಮೀನಿನಂತೆ ಚಿತ್ತವು ಮಾರನ ಪಾಶದಿಂದ ತಪ್ಪಿಸಿಕೊಳ್ಳಲು ಒದ್ದಾಡುತ್ತಿರುತ್ತದೆ.[68] ಶವರೂಪವನ್ನು ಹೊಂದುವ ಈ ಶರೀರವನ್ನು ಮಣ್ಣಿನ ಗಡಿಗೆ, ಯಾವ ಕೆಲಸಕ್ಕೂ ಬಾರದ ಕೊರಡಿ, ನೊರೆ ಮತ್ತು ಬಿಸಿಲ್ಗುದುರೆಗೆ ಹೋಲಿಸಲಾಗಿದೆ.[69] ನೊರೆಯ ಹೋಲಿಕೆಯಲ್ಲಿ 2 ಇಂಗಿತಗಳಿವೆ. ಒಂದು ತಾತ್ಕಾಲಿಕತೆ ಮತ್ತೊಂದು ಮಲಿನತೆ.

ಇಡೀ ನಾಲ್ಕನೇ ಅಧ್ಯಾಯದ ಸಂದೇಶಗಳು ವೈವಿಧ್ಯಮಯ. ಆದರೆ ಉಪಮೆ ಮಾತ್ರ ಒಂದೇ. ಅದೇ ಪುಷ್ಪ. ಆದ್ದರಿಂದಲೇ ಈ ಅಧ್ಯಾಯದ ಹೆಸರು **ಪುಷ್ಪವಗ್ಗ** ಎಂಬುದಾಗಿದೆ. ಜಾಣನು ಹೂವುಗಳನ್ನು ಆಯ್ದುಕೊಳ್ಳುವಂತೆ ಧಮ್ಮಪದವನ್ನು ಆಯ್ದುಕೊಳ್ಳುತ್ತಾನಂತೆ. ಗ್ರಂಥಕ್ಕೆ ಹೆಸರು **ಧಮ್ಮಪದ** ಎಂಬ ಈ ಶಬ್ದಪ್ರಯೋಗದಿಂದಲೇ ಬಂದಿರಬಹುದು.[70] ಗಮನವಿಲ್ಲದ ಮನಸ್ಸುಳ್ಳವನು ಬೇರೆಲ್ಲೋ ನಿಗವಿಟ್ಟು ಹೂವುಗಳನ್ನು ಕೊಯ್ಯುವಂತೆ ತನ್ನ ಕಾರ್ಯದಲ್ಲಿ ವಿಫಲ. ಅಂತಹವವನನ್ನು ನಿದ್ರಿಸುತ್ತಿರುವ ಊರ ಜನರನ್ನು ಹೊಳೆಯು ಕೊಚ್ಚಿಕೊಂಡು ಹೋಗುವಂತೆ ಮೃತ್ಯುವು ಕೊಂಡೊಯ್ಯುತ್ತದೆ.[71] ಯಾವುದಕ್ಕೂ ಅಂಟಿಕೊಳ್ಳದೇ ಸಂಚರಿಸುವ ಮುನಿಯನ್ನು, ಹೂವಿನ ಬಣ್ಣವನ್ನಾಗಲೀ, ವಾಸನೆಯನ್ನಾಗಲಿ ಕೆಡಿಸದೆ ರಸವನ್ನು ಮಾತ್ರ ಗ್ರಹಿಸುವ ದುಂಬಿಗೆ ಹೋಲಿಸಲಾಗಿದೆ.[72] ನಡೆನುಡಿಗಳಲ್ಲಿ ಅಂತರವಿರುವ ವ್ಯಕ್ತಿಯು ನೋಡಲು ಬಣ್ಣಬಣ್ಣವಾಗಿರುವ ಆದರೆ ವಾಸನೆಯಿಲ್ಲದ ಹೂವಿನಂತೆ.[73] ಪುಣ್ಯ ಕರ್ಮಗಳನ್ನು ಮಾಡಿ ಮನುಷ್ಯಜನ್ಮವನ್ನು ಸಾರ್ಥಕಗೊಳಿಸಬಹುದಾದ ಸಾಧ್ಯತೆಯನ್ನು ಬಗೆಬಗೆಯಾದ ಪುಷ್ಪಗಳಿಂದ ಅನೇಕ ವಿಧವಾದ ಮಾಲೆಗಳನ್ನು ಮಾಡುವ ಸಾಧ್ಯತೆಗೆ ಹೋಲಿಸಲಾಗಿದೆ. ಚಂದನ, ತಗರ, ಮಲ್ಲಿಗೆಗಳ ವಾಸನೆಯು ಗಾಳಿಗೆ ಎದುರಿಸಲಾರವಾದರೂ ಸತ್ಪುರುಷನ ಪರಿಮಳವು ಮಾತ್ರ ಗಾಳಿಯನ್ನು ಎದುರಿಸಬಲ್ಲದು.

ಎಂದರೆ ಸಾತ್ವಿಕನ್ನು ಒಂದು ವಿಶಿಷ್ಟವಾದ ಹೂವಿನಂತೆ ಆತನು ಸಾಧಾರಣ ಪುಷ್ಪದಂತೆ ಅಲ್ಲ. ಚಂದನ, ತಗರ, ನೈದಿಲೆ, ವಾರ್ಷಿಕೀ ಇವೇ ಮುಂತಾದ ಹೂವುಗಳ ವಾಸನೆಗಿಂತಲೂ ಶೀಲದ ಪರಿಮಳವು ಶ್ರೇಷ್ಠ.[74] ಮೂಢರ ನಡುವೆ ಸಮ್ಯಕ್ ಸಂಬುದ್ಧನು ತಿಪ್ಪೆಯಲ್ಲಿರುವ ಸುವಾಸನೆಯು ಹೇಗೋ ಹಾಗೆ ತನ್ನ ಪ್ರಜ್ಞೆಯಿಂದ ಹೊಳೆಯುತ್ತಾನೆ. ಹೀಗೆ ನಾಲ್ಕನೇ ಅಧ್ಯಾಯವು ಅನೇಕ ಅಂಶಗಳನ್ನು ಒಳಗೊಂಡಿದ್ದು ಅವುಗಳನ್ನು ವಿವರಿಸಲು ಹೂವಿನ ಒಂದೇ ದೃಷ್ಟಾಂತವನ್ನು ನೀಡಲಾಗಿದೆ. ಜೀವನವೆಲ್ಲಾ ಪಂಡಿತರ ಸಂಗದಲ್ಲಿದ್ದು ಅವರ ಪ್ರಭಾವವನ್ನು ತಿಳಿಯದ ಮೂರ್ಖನನ್ನು ತವ್ವೆಯಲ್ಲಿರುವ ಸೌಟಿಗೆ ಹೋಲಿಸಲಾಗಿದೆ. ಸೌಟಿಗೆ ತವ್ವೆಯ ರುಚಿಯು ತಿಳಿಯದಂತೆ ಹಾಗೆಯೇ ಪಂಡಿತರ ಬಳಿಯಿದ್ದರೂ ಮೂರ್ಖನಿಗೆ ಅವರ ಮಹತ್ವವು ತಿಳಿದಿರುವುದಿಲ್ಲ.[75] ತನ್ನನ್ನು ತಾನೇ ತಿದ್ದಿಕೊಳ್ಳುವ ಪಂಡಿತನನ್ನು ತನಗೆ ಬೇಕಾದೆಡೆಗೆ ನೀರನ್ನು ಒಯ್ಯಬಲ್ಲ ನೀರು ಹಾಯಿಸುವವನಿಗೆ, ತನಗಿಷ್ಟ ಬಂದಂತೆ ಬಿದಿರನ್ನು ಬಗ್ಗಿಸಿ ಬಾಣಗಳನ್ನು ಮಾಡುವವನಿಗೆ ಮತ್ತು ತನಗೆ ಬೇಕಾದ ಮಾಟಕ್ಕೆ (ಅಂದ) ಮರವನ್ನು ರೂಪಿಸಿಕೊಳ್ಳುವ ಬಡಗಿಗೆ ಹೋಲಿಸಲಾಗಿದೆ.[76] ಇದೇ ಉಪಮೆಯನ್ನು 10ನೇ ಅಧ್ಯಾಯ 145ನೇ ಶ್ಲೋಕದಲ್ಲೂ ನೀಡಲಾಗಿದೆ ಬಾಣದ ಉಪಮೆಯು 33ನೇ ಗಾಥೆಯಲ್ಲೂ ಬರುತ್ತದೆ. ಹೊಗಳಿಕೆ ತೆಗಳಿಕೆಗಳಿಗೆ ಅಲುಗಾಡದ ಪಂಡಿತನನ್ನು ಗಾಳಿಗೆ ಅಲುಗಾಡದ ಒಂದು ದೊಡ್ಡ ಬಂಡೆಗೆ ಹೋಲಿಸಲಾಗಿದೆ.[77] ಪಂಡಿತನ ಸ್ವಚ್ಛತೆಯನ್ನು ಬಗ್ಗಡವಿಲ್ಲದ ತಿಳಿಮಡುವಿಗೆ ಹೋಲಿಸಲಾಗಿದೆ.[78]

ಹಂಸಗಳು ಕ್ಷುದ್ರಜಲಾಶಯವನ್ನು ಹೇಗೋ ಹಾಗೆ ಅರ್ಹಂತರು ಮನೆಯನ್ನು ತೊರೆಯುತ್ತಾರೆ. ಅವರ ಗತಿಯನ್ನು ಆಕಾಶದಲ್ಲಿನ ಹಕ್ಕಿಗಳ ಹೆಜ್ಜೆಗಳಂತೆ ಗುರುತಿಸುವುದು ಕಷ್ಟ. ಸಾರಥಿಯು ಕುದುರೆಗಳನ್ನು ಪಳಗಿಸುವಂತೆ ಅವರು ಇಂದ್ರಿಯಗಳನ್ನು

ಪಳಗಿಸಿರುತ್ತಾರೆ.[79] ಪೃಥ್ವಿಯಂತೆ ಕ್ಷಮಾಶೀಲರಾಗಿರುವ ಅವರು ಸುವ್ರತಿಗಳು.ಇಂದ್ರಕೀಲದಂತೆ (ಊರ ಬಾಗಿಲ ಮುಂದೆ ನೆಟ್ಟಿರುವ ಕಂಬ) ಅಚಲರಾಗಿ ನಿಂತಿರುತ್ತಾರೆ.

ಪಾಪಿಗೆ ತನ್ನ ಪಾಪದ ತೀಕ್ಷ್ಣತೆಯ ಅರಿವು ಇರುವುದಿಲ್ಲ. ಅದು ಅವನಲ್ಲಿ ತಾನು ಮಾಡಿದ ಪಾಪ ಕರ್ಮಕ್ಕೆ ಯಾವ ಫಲವೂ ಇಲ್ಲ ಎಂಬ ಒಂದು ತೆರನಾದ ಪೊಳ್ಳು ವಿಶ್ವಾಸವನ್ನು ಮೂಡಿಸುತ್ತದೆ. ಪಾಪಿಯನ್ನು ಅವನ ಕರ್ಮವು ಕೂಡಲೇ ಕಾಡುವುದಿಲ್ಲ ಎಂಬುದನ್ನು ವಿವರಿಸಲು ಹೊಸ ಹಾಲು ಮತ್ತು ಬೂದಿ ಮುಚ್ಚಿದ ಕೆಂಡಗಳ ಉದಾಹರಣೆಯನ್ನು ನೀಡಲಾಗಿದೆ. ಹಾಲು ತಕ್ಷಣ ಒಡೆಯದೇ ಮಾರನೆಯ ದಿನ ಒಡೆಯುವಂತೆ ಹಾಗೂ ಬೂದಿಮುಚ್ಚಿದ ಕೆಂಡವು ಕ್ರಮೇಣ ತನ್ನ ಪರಿಸರವನ್ನು ಸುಡುವಂತೆ ಪಾಪಿಯನ್ನು ಅವನ ಪಾಪವು ತಕ್ಷಣವಲ್ಲದಿದ್ದರೂ ಕ್ರಮೇಣ ಸುಟ್ಟು ಹಾಕುತ್ತದೆ.[80] ಕೂಡವು ಸಣ್ಣ ಸಣ್ಣ ನೀರ ಹನಿಗಳಿಂದ ನಿಧಾನವಾಗಿ ತುಂಬುವಂತೆ ಮನುಷ್ಯನ ಪಾಪವು ಸ್ವಲ್ಪ ಸ್ವಲ್ಪವಾಗಿ ಪೂರ್ಣಗೊಳ್ಳುತ್ತದೆ. ಈ ಉಪಮೆಯನ್ನು ಪುಣ್ಯಕ್ಕೂ ಅನ್ವಯಿಸಲಾಗಿದೆ.[81] ಸಿರಿವಂತ ವರ್ತಕನು ಭಯದ ಹಾದಿಯನ್ನು ಮತ್ತು ಬದುಕ ಬಯಸುವವನು ವಿಷವನ್ನು ತ್ಯಜಿಸುವಂತೆ ಮನುಷ್ಯನು ಪಾಪಕರ್ಮಗಳನ್ನು ಅಂಜಿಕೆಯಿಂದ ಬಿಡಬೇಕೆನ್ನಲಾಗಿದೆ.[82] ಹುಣ್ಣಿಲ್ಲದವನು ವಿಷವನ್ನು ಧೈರ್ಯವಾಗಿ ಹೇಗೆ ಹಿಡಿಯಬಲ್ಲನೋ ಹಾಗೆ ಪಾಪಮಾಡದವನು ಧೀರನಾಗಿರುತ್ತಾನೆ. ಕೇಡನ್ನು ಬಗೆಯುವ ವ್ಯಕ್ತಿಯನ್ನು ಗಾಳಿಗೆದುರಾಗಿ ಎರಚಲ್ಪಟ್ಟ ಧೂಳಿನ ಹುಡಿಗೆ ಹೋಲಿಸಲಾಗಿದೆ. ಅವನ ಪಾಪವು ಅವನಿಗೇ ತಟ್ಟುವುದು.[83]

ನಿರ್ವಾಣವನ್ನು ವಿವರಿಸಲು ಒಡಕು ಕಂಚಿನ ಹೀನೋಪಮೆಯನ್ನು ನೀಡಲಾಗಿದೆ. ಒಡೆದ ಕಂಚು ಯಾವ ಶಬ್ದವನ್ನೂ ಮಾಡದಿರುವಂತೆ ನಿರ್ವಾಣ ಹೊಂದಿದವರು ಆಂತರಿಕ ನಿಶ್ಶಬ್ದತೆಯನ್ನು ಕಾಪಾಡಿಕೊಳ್ಳುತ್ತಾನೆ. ಈ ಕಂಚಿನ ಉದಾಹರಣೆಯನ್ನು ಬುದ್ಧನು ಮುಕ್ತನಿಗೆ

ನೀಡುವುದು ವಿಶಿಷ್ಟವೇ ಸರಿ.[84] ಸಾಮಾನ್ಯವಾಗಿ ಒಡೆದ ಕಂಚನ್ನು ಒಡೆದ ಮನಸ್ಸಿಗೆ ಹೋಲಿಸುವುದುಂಟು. ಕಂಚು ಒಮ್ಮೆ ಒಡೆಯಿತೆಂದರೆ ಅದನ್ನು ಸರಿಮಾಡಲು ಸಾಧ್ಯವೇ ಇಲ್ಲ. 15ನೇ ಶತಮಾನದ ತೆಲುಗು ಅನುಭಾವಿಯಾದ ತಾಳ್ಲಪಾಕ ಅನ್ನಮಾಚಾರ್ಯರು **"ಕಂಚು ವಂಟಿದಿ ಮನಸ್ಸು"** ಎಂದು ಹೇಳುವಾಗ ಇದೇ ಇಂಗಿತವನ್ನು ವ್ಯಕ್ತಪಡಿಸುವುದು.[85] ದನಗಾಹಿಯು ದನಗಳನ್ನು ಕೋಲಿನಿಂದ ಹೇಗೋ ಹಾಗೆ ಆಯಸ್ಸು,ಮುಪ್ಪು,ಮತ್ತು ಸಾವುಗಳು ಪ್ರಾಣಿಗಳನ್ನು ಅಟ್ಟಿಕೊಂಡು ಹೋಗುತ್ತದೆ. ಎಚ್ಚರವಿಲ್ಲದೇ ಪಾಪಕರ್ಮಗಳನ್ನು ಮಾಡುವ ತಿಳಿಗೇಡಿಯು ತಿಳಿಯದೇ ಬೆಂಕಿಯನ್ನು ಮುಟ್ಟಿ ಕೈಸುಟ್ಟಿಕೊಳ್ಳುವ ಹೆಡ್ಡನಂತೆ.[86] ಜಾತಿಯ ಕುದುರೆಯು ಕೊರಡೆಯ ಪೆಟ್ಟನ್ನು ಹೇಗೋ ಹಾಗೆ ಬುದ್ಧಿವಂತನು ಕೆಟ್ಟ ಕೆಲಸದಿಂದ ತಪ್ಪಿಸಿಕೊಳ್ಳುತ್ತಾನೆ.[87]

ಅವಿವೇಕದಿಂದ ಮಾಡಲ್ಪಟ್ಟ ಪಾಪವು ಕಲ್ಲಿನ ರತ್ನವನ್ನು ಕೊರೆಯುವ ವಜ್ರದಂತೆ ತೀಕ್ಷ್ಣ ದುಶ್ಶೀಲವು ಮುತ್ತಿಕೊಂಡಿರುವ ವ್ಯಕ್ತಿಯು ಸಾಲವೃಕ್ಷದಂತೆ ಮತ್ತು ದುಶ್ಶೀಲವು ಮಾಲುವ ಲತೆಯಂತೆ (ಬಳ್ಳಿ). ಮಾಲುವ ಬಳ್ಳಿಯು ಎಷ್ಟು ಪ್ರಬಲವೆಂದರೆ ಅದು ಯಾವ ಮರವನ್ನು ಸುತ್ತಿಕೊಳ್ಳುವುದೋ ಆ ಮರವು ಮಳೆಗಾಲದಲ್ಲಿ ನೀರಿನ ಭಾರದಿಂದ ಕೆಳಗೆ ಬೀಳುವುದಂತೆ. ಈ ಲತೆಯು ಸಾಲವೃಕ್ಷವನ್ನು ಸುತ್ತಿಕೊಂಡು ಅದನ್ನು ಬೀಳಿಸುವಂತೆ ವ್ಯಕ್ತಿಯ ದುಶೀಲವು ಅವನನ್ನು ಆವರಿಸಿ ಅವನನ್ನು ನಾಶಮಾಡುತ್ತದೆ. ಅರಿಹಂತರ ಶಾಸನವನ್ನು ಮೀರುವ ವ್ಯಕ್ತಿಯನ್ನು ಕಟ್ಟಿಕವೆಂಬ ಬಿದಿರಿಗೆ ಹೋಲಿಸಲಾಗಿದೆ. ಈ ಬಿದಿರು ಹೂವು ಬಿಡುತ್ತಾ ಬಂದಂತೆ ಒಣಗುತ್ತಾ ಹೋಗುತ್ತದೆ. ಅದೇ ರೀತಿ ವ್ಯಕ್ತಿಯ ಪಾಪವು ತುಂಬುತ್ತಿದ್ದಂತೆ ಅವನು ನಾಶವಾಗುತ್ತಾ ಹೋಗುತ್ತಾನೆ.[88]

ಪ್ರಪಂಚದ ನಶ್ವರತೆಯನ್ನು ನೀರಿನ ಗುಳ್ಳೆಗೂ ಮತ್ತು ಬಿಸಿಲುಗುದುರೆಗೂ ಹೋಲಿಸಲಾಗಿದೆ. ಚಿತ್ರ ವಿಚಿತ್ರ ರತ್ನಾಗಳಿಂದ ಖಚಿತವಾದ ರಾಜನ ರಥದಂತೆ ಈ ಲೋಕವು ವೈಚಿತ್ರ್ಯದಿಂದ ಕೂಡಿದೆ. ಅಜ್ಞಾನವನ್ನು ಕಳೆದುಕೊಂಡ ಜ್ಞಾನಿಯು ಮೋಡದಿಂದ ಬಿಡುಗಡೆ ಹೊಂದಿದ ಚಂದ್ರನಂತೆ ಲೋಕವನ್ನು ಬೆಳಗುತ್ತಾನೆ. ಸ್ವರ್ಗಕ್ಕೆ ಹೋಗುವ ಕೆಲವೇ ಮಂದಿ ಬಲೆಯಿಂದ ಬಿಡುಗಡೆಯಾದ ಹಕ್ಕಿಗಳಂತೆ. ಎಂದರೆ ಸ್ವರ್ಗಪ್ರಾಪ್ತಿಯು ಇಲ್ಲಿ ಮುಕ್ತಿಯ ಸಂಕೇತವಾಗಿ ಮುಕ್ತನು ಬಲೆಯಿಂದ ಬಿಡುಗಡೆ ಹೊಂದಿದ ಹಕ್ಕಿಯಂತಿರುತ್ತಾನೆ.[89]

ವೃದ್ಧರನ್ನು ಬಳಸಲಾಗಿರುವ ಮುತ್ತುಗದ ಎಲೆಗೆ ಹೋಲಿಸಲಾಗಿದೆ. ಮೃತ್ಯುವು ಸನ್ನಿಹಿತವಾಗಿರುವ ಅವನನ್ನು ಮುಗಿದು ಹೋಗಿರುವ ಪಯಣದ ಬುತ್ತಿಗೆ ಹೋಲಿಸಲಾಗಿದೆ. ನೀತಿಯನ್ನು ಮೀರಿ ನಡೆಯುವಾತನ ಕರ್ಮಗಳನ್ನು ಕಬ್ಬಿಣದ ತುಕ್ಕಿಗೆ ಹೋಲಿಸಲಾಗಿದೆ. ತುಕ್ಕು ಕಬ್ಬಿಣದಿಂದಲೇ ಹುಟ್ಟಿ ಕಬ್ಬಿಣವನ್ನೇ ಹೇಗೆ ತಿನ್ನುವುದೋ ಹಾಗೆ ಮನುಷ್ಯನು ಮಾಡುವ ಪಾಪಕರ್ಮಗಳು ಅವನನ್ನು ದುರ್ಗತಿಗೆ ಎಳೆಯುತ್ತದೆ. ಪರರ ದೋಷವನ್ನು ಕಂಡು ತನ್ನ ದೋಷವನ್ನು ಬಚ್ಚಿಟ್ಟುಕೊಳ್ಳುವವನನ್ನು ಮೋಸದಿಂದ ದಾಳವನ್ನು ಬೀಳಿಸುವ ಮೋಸಗಾರ ಜೂಜುಕೋರನಿಗೆ ಹೋಲಿಸಲಾಗಿದೆ.[90]

ಕೆಟ್ಟ ಮಾತನ್ನು ಸಹಿಸಿಕೊಳ್ಳುವಿಕೆಯನ್ನು ಬಾಣದ ಏಟನ್ನು ಸಹಿಸಿಕೊಳ್ಳುವ ಯುದ್ಧದ ಆನೆಗೆ ಹೋಲಿಸಲಾಗಿದೆ. ಬೌದ್ಧರ ಪ್ರಕಾರ ಆನೆ ಸಹನೆ ಮತ್ತು ಇಂದ್ರಿಯನಿಗ್ರಹಗಳ ಪ್ರತೀಕ. ಪಳಗಿಸಿದ ನಂತರ ಶ್ರೇಷ್ಠವೆನಿಸುವ ಹೇಸರಗತ್ತೆ, ಜಾತಿಯ ಕುದುರೆ ಮತ್ತು ಆನೆಗಳಿಗಿಂತಲೂ ಶ್ರೇಷ್ಠನಾದವನು ತನ್ನನ್ನು ತಾನು ತಿದ್ದಿಕೊಂಡವನು. ಧನಪಾಲಕನೆಂಬ ವಾರಣಾಸಿಯ ರಾಜನ ಆನೆಯು ಬಂಧನಕ್ಕೆ ಒಳಗಾಗಿ ಆಹಾರವನ್ನು ತಿನ್ನದೇ ನಾಗವನವೆಂಬ ತನ್ನ ಕಾಡನ್ನೇ ನೆನೆಸಿಕೊಳ್ಳುವಂತೆ ಬದ್ಧನಾದ ಮನುಷ್ಯನು ನಿರ್ವಾಣವನ್ನು ಸ್ಮರಿಸುತ್ತಿರುತ್ತಾನೆ.

ಅತ್ಯಾಹಾರಿ, ಆಲಸಿ, ನಿದ್ರಾಳುವನ್ನು ಹಂದಿಗೆ ಹೋಲಿಸಲಾಗಿದೆ. ಮನೋನಿಗ್ರಹವನ್ನು ಸಾಧಿಸುವವನನ್ನು ಅಂಕುಶದಿಂದ ಆನೆಯನ್ನು ನಿಗ್ರಹಿಸುವ ಮಾವುತನಿಗೆ ಹೋಲಿಸಲಾಗಿದೆ. ಸಂಸಾರಿಗಳನ್ನು ಕೆಸರಿಗೆ ಸಿಲುಕಿಕೊಂಡಿರುವ ಆನೆಗಳಿಗೂ ಮತ್ತು ಹೋಲಿಸಲಾಗಿದೆ. ಧೀರರನ್ನು ಕಾಡಿನಲ್ಲಿ ಸ್ವಚ್ಛಂದವಾಗಿ ಸಂಚರಿಸುವ ಒಂಟಿಸಲಗಕ್ಕೂ ಹೋಲಿಸಲಾಗಿದೆ.[91]

ಮಾಲುವ ಬಳ್ಳಿಯು ಹೇಗೆ ದಟ್ಟವಾಗಿ ಹಬ್ಬುತ್ತದೋ ತೃಷ್ಣೆಯೂ ಕೂಡ ಅದನ್ನು ತೃಪ್ತಿಪಡಿಸಿದಷ್ಟೂ ಹೆಚ್ಚಾಗುತ್ತದೆ. ಮಾಲುವ ಬಳ್ಳಿಯ ಉಲ್ಲೇಖ ಈ ಹಿಂದೆ 164ನೇ ಗಾಥೆಯಲ್ಲೂ ಬಂದಿರುವುದು ಗಮನಾರ್ಹ. ತೃಷ್ಣೆಗೆ ವಶವಾಗಿರುವವರನ್ನು ಕಾಡಿನಲ್ಲಿ ಹಣ್ಣಿನ ಬಯಕೆಯಿಂದ ನೆಗೆಯುತ್ತಿರುವ ಕಪಿಗೆ, ಬಲೆಗೆ ಬಿದ್ದ ಮೊಲಕ್ಕೆ ಹೋಲಿಸಲಾಗಿದೆ. ಅಂತಹವನ ಶೋಕಗಳು ಬಿರಾಣ ಹುಲ್ಲಿನಂತೆ ಹೆಚ್ಚುತ್ತದೆ. ಕಮಲದ ಎಲೆಯಿಂದ ನೀರಹನಿಗಳು ಹೇಗೋ ಹಾಗೆ ತೃಷ್ಣೆಯನ್ನು ಗೆದ್ದಿರುವವನ ಶೋಕಗಳು ಅವನನ್ನು ತಟ್ಟದೇ ಜಾರಿಬೀಳುತ್ತವೆ. ಲಾಮಂಚ ಬೇಕೆನ್ನುವವನು ಕಳೆಯನ್ನು ಹೇಗೋ ಹಾಗೆ ನಿರ್ವಾಣ ಬೇಕೆನ್ನುವವನು ತೃಷ್ಣೆಯ ಬೇರನ್ನು ಕಿತ್ತು ಹಾಕಬೇಕು. ಬೇರು ಸಮೂಲಾಗ್ರವಾಗಿ ನಾಶವಾಗದಿರುವವರೆಗೆ ಮರವನ್ನು ಎಷ್ಟೇ ಕಡಿದು ಹಾಕಿದರೂ ಹೇಗೆ ಅದು ಮತ್ತೆ ಚಿಗುರುವುದೋ ಹಾಗೆಯೇ ತೃಷ್ಣೆಯ ಅನುಶಯವನ್ನು ನಾಶಮಾಡದಿರುವವರೆಗೆ ಮನುಷ್ಯನಿಗೆ ದುಃಖವು ಮತ್ತೆ ಮತ್ತೆ ಕಾಡುತ್ತಿರುತ್ತದೆ. ಮುತ್ತು ರತ್ನ, ಮಕ್ಕಳು ಮತ್ತು ಹೆಂಡತಿಗಳ ಬಗ್ಗೆ ಇರುವ ರಾಗ ಕಬ್ಬಿಣ ಮತ್ತು ಜೊಂಡಿನ ಕಟ್ಟಿಗಿಂತಲೂ ಗಟ್ಟಿಯಾಗಿರುತ್ತದೆ. ಜೇಡರ ಹುಳುವು ತನ್ನ ಬಲೆಗೆ ತಾನೇ ಬೀಳುವಂತೆ ರಾಗಕ್ಕೆ ವಶವಾಗಿರುವವರು ತಮಗೆ ತಾವೇ ಬಂಧನಕ್ಕೆ ಸಿಲುಕಿಕೊಳ್ಳುತ್ತಾರೆ.[92] ಜೇಡರಹುಳುವಿನ ಉಪಮೆಯು ನಮಗೆ ಮುಂಡೋಕಪನಿಷತ್ತಿನಲ್ಲೂ ಕಂಡುಬರುತ್ತದೆ. ಬ್ರಹ್ಮವು ಈ ಪ್ರಪಂಚದ ನಿಮಿತ್ತ ಹಾಗೂ ಉಪಾದಾನ ಕಾರಣ ಎಂಬುದನ್ನು ಸೂಚಿಸಲು ಈ ಉಪಮೆಯನ್ನು ನೀಡಲಾಗಿದೆ

(ಊರ್ಣನಾಭಿ).[93] ಡಚ್ ತಾತ್ವಿಕನಾದ ಸ್ಪಿನೋಜನೂ ಕೂಡ ತನ್ನ ವಿಶ್ವದೇವೈಕ್ಯವಾದಕ್ಕೆ ಜೇಡರ ಹುಳುವಿನ ನೇಯ್ಗೆಯ ಕೌಶಲ್ಯದಿಂದಲೇ ಪ್ರೇರಿತನಾದನು.[94]

ವರ್ಷಿಕೆ ಎಂಬ ಗಿಡವು ಬಾಡಿದ ಹೂವುಗಳನ್ನು ಕೆಳಕ್ಕೆ ಉದುರಿಸುವಂತೆ ದ್ವೇಷವನ್ನು ಕೆಳಕ್ಕೆ ಉದುರಿಸಬೇಕು. ಆತ್ಮನಿಗ್ರಹವುಳ್ಳವನು ತನ್ನ ಕುದುರೆಯನ್ನು ಹತೋಟಿಯಲ್ಲಿಟ್ಟುಕೊಂಡಿರುವ ವರ್ತಕನಂತೆ. ವಯಸ್ಸಿನಲ್ಲಿ ಸಾಧನೆ ಮಾಡಿ ನಿರ್ವಾಣ ಹೊಂದಿದವನನ್ನು ಮೋಡದಿಂದ ಬಿಡುಗಡೆಯಾದ ಚಂದ್ರನಂತೆ.[95]

## ಸಾಹಿತ್ಯ ಮತ್ತು ಶೈಲಿ

ಧಮ್ಮಪದ ಸಾಹಿತ್ಯ ರಚನೆಯಾಗಿರುವುದು ಆಡುಭಾಷೆಯಾದ ಪಾಳಿಯಲ್ಲಿ. ಈ ಗ್ರಂಥದಲ್ಲಿ ಅನೇಕ ಸ್ವಾರಸ್ಯ ಶಬ್ದಗಳ ಪ್ರಯೋಗವಿದೆ. ಉದಾಹರಣೆಗೆ **ಸಾಹಿತಿ** ಎಂಬ ಶಬ್ದದ ಬಳಕೆಯಿದೆ. ಈ ಸಾಹಿತಿ ಶಬ್ದದ ಅರ್ಥ **ಬುದ್ಧವಚನ**ವೆಂದು ವ್ಯಾಖ್ಯಾನಕಾರರು ಬರೆಯುತ್ತಾರೆ. ತ್ರಿಪಿಟಕಕ್ಕೆ ಸಹಿತ ಅಥವಾ ಸಾಹಿತ ಎಂಬ ಹೆಸರು ಇದೆ ಎಂಬುದು ಗಮನಾರ್ಹ ಸಂಗತಿ.[96] ಹಾಗೆಯೇ **ಆರ್ಯ, ಆರ್ಯಭೂಮಿ** ಎಂಬ ಶಬ್ದಗಳ ಬಳಕೆ ಧಮ್ಮಪದದಲ್ಲಿ ಪದೇ ಪದೇ ಕಂಡುಬರುತ್ತದೆ. ಇಲ್ಲಿ ಆರ್ಯರೆಂಬ ಶಬ್ದಕ್ಕೆ ಯಾವ ಐತಿಹಾಸಿಕ ಅರ್ಥವೂ ಇಲ್ಲ. ಆರ್ಯರೆಂದರೆ ಬೌದ್ಧಮತ ಅನುಯಾಯಿಗಳು, ಅರ್ಹಂತ, ನಿರ್ವಾಣ ಪದವಿಯನ್ನು ಹೊಂದಿದವರು ಎಂದರ್ಥ.[97] ಬುದ್ಧನು **ಉಪನಿಷ** ಎಂಬ ಶಬ್ದವನ್ನೂ ಬಳಸುತ್ತಾನೆ. ಆತನ ಪ್ರಕಾರ ಉಪನಿಷ ಲಾಭದ ಉಪನಿಷ ಮತ್ತು ನಿರ್ವಾಣವನ್ನು ನೀಡುವ ಉಪನಿಷ ಎಂದು ಎರಡು ರೀತಿ. ಸ್ವಾರ್ಥಕ್ಕೋಸ್ಕರ ಮನುಷ್ಯನು ಬಳಸುವ ಜ್ಞಾನವೇ ಲಾಭದ ಉಪನಿಷತ್. ನಿರ್ವಾಣಕ್ಕೆ ಒಯ್ಯುವುದೇ ನಿಜವಾದ ಉಪನಿಷತ್. ನಮಗೆ ಬೇಕಾದ ಫಲದ ಬಳಿಗೆ ಕೊಂಡೊಯ್ಯುವ ಹಾದಿಯೇ ಉಪನಿಷತ್.[98]

ಅದೇ ರೀತಿ **ಗ್ರಂಥ** ಶಬ್ದದ ಉಲ್ಲೇಖವಿದೆ. ಈ ಶಬ್ದವು ಮುಂಡಕೋಪನಿಷತ್‌ನಲ್ಲಿ ಪ್ರಯೋಗವಾಗಿರುವ **ಗ್ರಂಥಿಶಬ್ದ**ಕ್ಕೆ ಹತ್ತಿರವಾಗುತ್ತದೆ.[99] ಉಪನಿಷತ್ತಿನ ಪ್ರಕಾರ **ಗ್ರಂಥಿ** ಎಂದರೆ ಅಜ್ಞಾನದ ಕಗ್ಗಂಟು ಎಂದರ್ಥ.[100] ಹೆಚ್ಚು ಕಡಿಮೆ ಇದೇ ಅರ್ಥದಲ್ಲಿ ಧಮ್ಮಪದವು **ಗ್ರಂಥ** ಶಬ್ದವನ್ನು ಬಳಸುತ್ತದೆ.

ಹಾಗೆಯೇ ನಿರ್ವಾಣವನ್ನು **ಅಕೃತ**ವೆಂದು ಬಣ್ಣಿಸುವಾಗ ಅದ್ವೈತ ವೇದಾಂತದ ಮೋಕ್ಷ ಪರಿಕಲ್ಪನೆ ನೆನಪಿಗೆ ಬರುತ್ತದೆ. ಅದ್ವೈತದ ಪ್ರಕಾರ ಮುಕ್ತಿಯು ನಿತ್ಯಸಿದ್ಧವಾಗಿರುವುದರಿಂದ ಅದು ಯಾವ ಕರ್ಮದ ಪರಿಣಾಮವೂ ಅಲ್ಲ. ಹೆಚ್ಚು ಕಡಿಮೆ ಇದೇ ಅರ್ಥದಲ್ಲಿ ಬುದ್ಧನು ನಿರ್ವಾಣವನ್ನು **ಅಕೃತ**ವೆಂದು ಸಾರುತ್ತಾನೆ. ಸಂಸಾರದ ಗಂಟಿಗೆ ಇಲ್ಲಿ **ಸಂಧಿ**ಯೆಂದು ವಿವರಿಸಲಾಗಿದೆ.[101]

ಉಪನಿಷತ್‌ಗಳಲ್ಲಿ ಬಳಕೆಯಾಗಿರುವ ಮತ್ತೊಂದು ಶಬ್ದವೆಂದರೆ **ಉಪಶಾಂತಿ.** ಶಂಕರರು ತಮ್ಮ ವೇದಾಂತಸೂತ್ರ ವ್ಯಾಖ್ಯಾನದಲ್ಲಿ ಈಗ ನಮಗೆ ಉಪಲಬ್ಧವಿಲ್ಲದ ಒಂದು ಉಪನಿಷತ್ತಿನ ಹೇಳಿಕೆಯನ್ನು ಉಲ್ಲೇಖಿಸುತ್ತಾರೆ.[102] ಬಾಷ್ಕಲಿ ಎಂಬುವನು ಬಾಧ್ವನನ್ನು ಬ್ರಹ್ಮದ ಸ್ವರೂಪವನ್ನು ವಿವರಿಸೆಂದು ಕೇಳುತ್ತಾನೆ. ಅದಕ್ಕೆ ಬಾಧ್ವನು ಮೌನವಾಗಿಯೇ ಇರುತ್ತಾನೆ. ಬಾಷ್ಕಲಿಯು ಈ ರೀತಿ ಮೂರು ಬಾರಿ ಬಾಧ್ವನನ್ನು ಕೇಳಿದಾಗ ಬಾಧ್ವನು ಹೀಗೆ ಹೇಳುತ್ತಾನೆ, "ನಾನು ನಿನಗೆ ಬ್ರಹ್ಮಸ್ವರೂಪವನ್ನು ವಿವರಿಸುತ್ತಿರುವೆ. ನೀನು ಅದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಬ್ರಹ್ಮ ಅಥವಾ ಆತ್ಮವು ಶಾಂತಸ್ವರೂಪವಾಗಿದೆ – ಉಪಶಾಂತೋಯಮ್ಮಾತ್ಮಾ". ಎಂದರೆ ಬ್ರಹ್ಮವು ಎಲ್ಲ ಸಾಮಾನ್ಯ ವಿವರಗಳನ್ನು ಮೀರುವಂತಹುದಾಗಿದೆ ಎಂದು ಹೇಳಲು **ಉಪಶಾಂತಿ** ಶಬ್ದದ ಪ್ರಯೋಗವಿದೆ.[103] ಹೆಚ್ಚು ಕಡಿಮೆ ಇದೇ ಅರ್ಥದಲ್ಲಿ **ಉಪಶಾಂತಿ** ಶಬ್ದದ ಪ್ರಯೋಗವನ್ನು ಧಮ್ಮಪದದಲ್ಲಿ

ಮಾಡಲಾಗಿದ್ದು ವ್ಯರ್ಥವಾದ ಸಾವಿರಾರು ಮಾತುಗಳ ರಾಶಿಗಿಂತಲೂ ಯಾವುದನ್ನು ಕೇಳಿದರೆ ಉಪಶಾಂತಿಯುಂಟಾಗುವುದೋ ಅಂತಹ ಒಂದೇ ಒಂದು ಅರ್ಥಪೂರ್ಣವಾದ ಮಾತು ಶ್ರೇಷ್ಠ ಎಂದು ವಿವರಿಸಲಾಗಿದೆ.[104] ಇಲ್ಲಿ ಉಪಶಾಂತಿ ಶಬ್ದವನ್ನು ನಿರ್ವಾಣವೆಂಬ ಅರ್ಥದಲ್ಲಿ ಬಳಸಲಾಗಿದೆ. ಹಾಗೆಯೇ **ನೈಷ್ಕರ್ಮ್ಯ** ಮತ್ತು **ಉಪಶಮ** ಎಂಬ ಶಬ್ದದ ಬಳಕೆಯಿದೆ.[105] **ನೈಷ್ಕರ್ಮ್ಯ**ವೆಂದರೆ (ನಕ್ಕಮೋ) ಕರ್ಮರಹಿತವಾದ ಮೋಕ್ಷಸ್ಥಿತಿ. **ಉಪಶಮ**ವೆಂದರೆ ತೃಷ್ಣೆ ಆಸೆಗಳಿಲ್ಲದ ಶಾಂತಸ್ಥಿತಿ ಎಂದರ್ಥ. ಈ 2 ಶಬ್ದಗಳು ಉಪನಿಷತ್ ಮತ್ತು ಅದ್ವೈತ ವೇದಾಂತಗಳಲ್ಲಿ ಪ್ರಸಿದ್ಧವಾದುದು. ಸುರೇಶ್ವರಾಚಾರ್ಯರ **ನೈಷ್ಕರ್ಮ್ಯಸಿದ್ಧಿ** ಎಂಬ ಗ್ರಂಥವೇ ಇದೆ. ಹಾಗೆಯೇ ಗೌಡಪಾದರ ಮಾಂಡೂಕ್ಯಕಾರಿಕೆಯಲ್ಲಿ **ಪ್ರಪಂಚೋಪಶಮನ** ಎಂಬ ಸಾಲು ಬರುತ್ತದೆ. ಹಾಗೆಯೇ ಉಪನಿಷತ್ತಿನಲ್ಲಿ **ಏತದನುಶಾಸನಂ** (ತೈತ್ತಿರೀಯ) ಎಂಬ ಹೇಳಿಕೆಯಂತೆ ಬುದ್ಧನ **ಅನುಶಾಸನದ** ಬಗ್ಗೆಯೂ ಪ್ರಸ್ತಾಪವಿದೆ.[106]

ಹಾಗೆಯೇ ಈಶೋಪನಿಷತ್ತಿನ ದಾಟಿಯಲ್ಲಿ ಕೆಲವು ಗಾಥೆಗಳು ಧಮ್ಮಪದದಲ್ಲಿರುವುದು ಕಂಡು ಬರುತ್ತವೆ. ಈಶೋಪನಿಷತ್ ಹೀಗೆ ಹೇಳುತ್ತದೆ, ''ಯಾವಾಗ ಮನುಷ್ಯನಿಗೆ ಎಲ್ಲ ಜಂತುಗಳೂ ತನ್ನ ಆತ್ಮನೇ ಎಂದು ಸಾಕ್ಷಾತ್ಕಾರವಾಗುತ್ತದೋ ಅವನಿಗೆ ಮೋಹವೆಲ್ಲಿಯದು, ಶೋಕವೆಲ್ಲಿಯದು''?.[107] ಇದೇ ದಾಟಿಯಲ್ಲಿ ಧಮ್ಮಪದವು ಹೀಗೆ ಹೇಳುತ್ತದೆ, ''ಯಾರಿಗೆ ರಾಗ, ರತಿ, ಕಾಮ, ತೃಷ್ಣೆಗಳಿಂದ ಮುಕ್ತಿಯಾಗಿದೆಯೋ ಅವನಿಗೆ ಶ್ಲೋಕವೆಲ್ಲಿಯದು, ಭಯವೆಲ್ಲಿಯದು''?.[108] ಅದೇ ರೀತಿ **ನಿಷ್ಪ್ರಪಂಚ** ಶಬ್ದ ಪ್ರಯೋಗವಿದೆ.[109] ಉಪನಿಷತ್ತುಗಳು ಪ್ರಪಂಚವನ್ನು ಕುರಿತಂತೆ ಸಪ್ರಪಂಚ ಮತ್ತು ನಿಷ್ಪ್ರಪಂಚ ಎಂಬ ವಾದಗಳನ್ನು ಮಂಡಿಸುತ್ತವೆಂಬುದು ಇಲ್ಲಿ ಗಮನಾರ್ಹ.

ಕೆಲವು ಗಾಥೆಗಳು ಸುಭಾಷಿತ ರೂಪದಲ್ಲಿವೆ. ಉದಾಹರಣೆಗೆ 251ನೇ ಗಾಥೆ ಹಾಗೂ 331 ಮತ್ತು 332ನೇ ಗಾಥೆಗಳು. ಅನುಶಯವೆಂಬ ಶಬ್ದದ ಉಲ್ಲೇಖ ಬರುತ್ತದೆ. ಅನುಶಯವೆಂದರೆ ವಾಸನಾಶೇಷ ಎಂದರ್ಥ.

**ಯಥಾ ಪಿ ಮೂಲೇ ಅನುಪ್ಪದವೆ ದಳ್ಹೇ**

**ಚಿನ್ನೋ ಪಿ ರುಕ್ಖೋ ಪುನಪೇವ ರೂಹತಿ**

**ಏವಂ ಪಿ ತನ್ಹಾನುಸಯೆ ಅನೂಹತೇ**

**ನಿಬ್ಬತ್ತತಿ ದುಕ್ಖಂ ಇದಜ್ ಪುನಪ್ಪುನಜ್**[110]

ಎಂದರೆ ಬೇರು ಗಾಯವಾಗದೆ ಗಟ್ಟಿಯಾಗಿರುವವರೆಗೆ ಹೇಗೆ ಮರವು ಕಡಿದುಹಾಕಿದರೂ ಮತ್ತೂ ಚಿಗುರಿಕೊಳ್ಳುವದೋ, ಇದರಂತೆ ತೃಷ್ಣೆಯ ಅನುಶಯವು ನಾಶವಾಗದಿದ್ದರೆ ಈ ದುಃಖವು ಮತ್ತೆಮತ್ತೆ ಉಂಟಾಗುತ್ತಿರುವದು.

ಹದಿನೇಳನೇ ಅಧ್ಯಾಯದಲ್ಲಿ **ಅತುಲ**ನೆಂಬ ಉಪಾಸಕನ ಉಲ್ಲೇಖವಿದೆ.[111] ಪರಲೋಕಕ್ಕೆ ಹೋದ ಪುಣ್ಯವಂತನನ್ನು ದೂರ ದೇಶದಿಂದ ಸುಖವಾಗಿ ಹಿಂತಿರುಗಿ ಬಂದವನಿಗೆ ಹೋಲಿಸಲಾಗಿದೆ.[112] ಬುದ್ಧನು ತನ್ನ ಉಪದೇಶಗಳಲ್ಲಿ ಪುನರ್ಜನ್ಮ, ಸ್ವರ್ಗನರಕ, ದೇವತೆಗಳೇ ಮುಂತಾದ ಇಂದ್ರಿಯಾತೀತ ವಿಷಯಗಳ ಬಗ್ಗೆ ಪ್ರಸ್ತಾಪಿಸಿದರೂ ಆಧುನಿಕ ವಿದ್ವಾಂಸರ ಪ್ರಕಾರ ಬುದ್ಧನು ಹಾಗೆ ಮಾಡಿದುದು ಜನರನ್ನು ಕಾಲದ ಪರಿಭಾಷೆಯಲ್ಲಿ ಸ್ಪಂದಿಸಲು ಮಾತ್ರ. ಈ ವ್ಯಾಖ್ಯಾನದ ಋಜುತ್ವವೇನೇ ಇದ್ದರೂ ಧಮ್ಮಪದದಲ್ಲಿ ಇಂತಹ ಶಬ್ದಗಳು ಪದೇ ಪದೇ ಉಲ್ಲೇಖವಾಗುತ್ತದೆ. ಪ್ರಜ್ಞಾಶೀಲ ಸಮಾಧಿಗಳಿಂದ ಕೂಡಿದವನನ್ನು ದೇವತೆಗಳೂ ಕೂಡ ಹೊಗಳುವರು ಮತ್ತು ಬ್ರಹ್ಮನಿಂದಲೂ ಅವರು ಕೊಂಡಾಲ್ಪಡುವರು ಎಂಬ ಸಾಲು ಇದೆ.[113] ಹಾಗೆಯೇ ಕೆಟ್ಟದ್ದನ್ನು ಮಾಡುವವನು ನರಕಕ್ಕೆ ಹೋಗುವ ಮತ್ತು ಪಾಪಿಗೆ ಪುನರ್ಜನ್ಮ ಕಟ್ಟಿಟ್ಟ ಬುತ್ತಿಯೆಂಬ ಪ್ರಸ್ತಾಪವಿದೆ.[114] ಸೂರ್ಯಲೋಕ, ಪರಲೋಕ

ಮತ್ತು ದೇವಲೋಕಗಳ ಉಲ್ಲೇಖಗಳು ಬರುತ್ತವೆ.[115] ಹಾಗೆಯೇ ಆರ್ಯಭೂಮಿಯೆಂಬ ಪದದ ಉಲ್ಲೇಖವೂ ಇದೆ.[116]

ಕೆಲವು ಸಲ ಧಮ್ಮಪದದ ಕೆಲವು ಗಾಥೆಗಳು ಒಗಟಿನ ರೂಪದಲ್ಲಿ ಇರುತ್ತವೆ. ಅವುಗಳ ಅರ್ಥ ಅಷ್ಟು ಸ್ಪಷ್ಟವಿಲ್ಲ. ಉದಾಹರಣೆಗೆ ಬುದ್ಧನು ಹೀಗೆ ಹೇಳುತ್ತಾನೆ, "ಎಲೈ ಭಿಕ್ಕುಗಳೇ ವನವನ್ನು ಕತ್ತರಿಸಿ ಮರವನ್ನು ಕತ್ತರಿಸಬೇಡಿ, ವನದಿಂದಲೇ ಭಯವುಂಟಾಗುತ್ತದೆ. ವನವನ್ನು ವನದಲ್ಲಿರುವ ಕುರುಚಲು ಗಿಡವನ್ನು ಕತ್ತರಿಸಿ ಹಾಕಿ, ವನವಿಲ್ಲದವರಾಗಿರಿ".

**ವನಜ್ ಛಿಂದಥ ಮ ರುಕ್ಖಜ್ ವನತೋ ಜಾಯತಿ ಭಯಜ್**

**ಛೆತ್ವಾ ವನಜ್ ಚ ವನತಜ್ ಚ ನಿಬ್ಬನಾ ಹೋಥ ಭಿಕ್ಖವೋ**[117]

ಇಲ್ಲಿ ವನವೆಂದರೆ ಕಾಡು ಎಂದರ್ಥವಲ್ಲ. ಈ ಶಬ್ದಗಳು ರಾಗಾದಿಗಳನ್ನು ಸೂಚಿಸುತ್ತದೆ. ಈ ಶ್ಲೋಕವು ಮನುಷ್ಯನಿಗೆ ಅಗತ್ಯವಾದ ಪರಿಸರ ಪ್ರಜ್ಞೆಯನ್ನು ಸೂಚಿಸುತ್ತವೆ. ನಾವು ಕತ್ತರಿಸಬೇಕಾದುದು ನಮ್ಮೊಳಗೆ ರೂಢವಾಗಿರುವ ರಾಗದ್ವೇಷಗಳೆಂಬ ಕಾಡನ್ನು ಮತ್ತು ಕುರುಚಲು ಗಿಡಗಳನ್ನು. ಆಗ ಮಾತ್ರ ನಾವು ನಿರ್ವಾಣವನ್ನು ಹೊಂದುತ್ತೇವೆ. ಹೊರಗಿನ ಮರಗಳನ್ನು ಕಡಿಯುವುದರಿಂದ ಮನುಷ್ಯನಿಗೆ ಒದಗಬಹುದಾದ ಆಪತ್ತುಗಳ ಧ್ವನಿಯೂ ಇಲ್ಲಿದೆ. ಆದರೆ ನಾವು ಇಲ್ಲಿ ಕತ್ತರಿಸಬೇಕಾದುದು ಹೊರಗಿನ ಮರಗಳನ್ನಲ್ಲ. ನಮ್ಮೆಲ್ಲ ಭಯಕ್ಕೂ ಕಾರಣವಾದ ಆಂತರಿಕವಾದ ರಾಗದ್ವೇಷಗಳನ್ನು. ಈ ವ್ಯಾಖ್ಯಾನವನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ಎಂಬುದು ತಿಳಿಯದು. ವನಶಬ್ದವು ಸ್ತ್ರೀಕಾಮನೆಯನ್ನು, ಆತ್ಮಸ್ನೇಹವನ್ನು, ಮಕ್ಕಳು ಮತ್ತು ತನ್ನ ಪರಿವಾರಗಳಲ್ಲಿ ಅಭಿಮಾನವನ್ನು ಒಳಗೊಂಡಿದೆ.

ಹಾಗೆಯೇ ದ್ವೀಪದ ಪ್ರಸ್ತಾಪವೂ ಬರುತ್ತದೆ. ಇಲ್ಲಿ ದ್ವೀಪವೆಂದರೆ ನಿರ್ವಾಣ, ಅರಿಹಂತನ ಪದವಿಯೆಂದರ್ಥ.[118] ಆಕಾಶದಲ್ಲಿ ಹೆಜ್ಜೆಯ ಗುರುತಿಲ್ಲ ಎಂಬ ಒಗಟಿನ ಸಾಲಿಗೆ

ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು ವಿವರಣೆಯನ್ನು ನೀಡಲು ಯತ್ನಿಸುವರಾದರೂ ಈ ವಿವರಣೆಯು ಅಷ್ಟು ಸ್ಪಷ್ಟವಿಲ್ಲ.

**ಆಕಾಸೇ ಪದಜ್ ನತ್ಥಿ ಸಮಣೋ ನತ್ಥಿ ಬಾಹಿರೇ**

**ಪಪಂಚಾಭಿರತಾ ಪಜಾ ನಿಪ್ಪಪಂಚ ತಥಾಗತಾ**[119]

ಎಂದರೆ ಆಕಾಶದಲ್ಲಿ ಹೆಜ್ಜೆಯ ಗುರುತಿರುವುದಿಲ್ಲ, ಹೊರಗೆ ಶ್ರಮಣನಿರುವದಿಲ್ಲ, ಜನರು ಪ್ರಪಂಚದಲ್ಲಿಯೇ ರತರಾಗಿರುವರು, ತಥಾಗತರು ನಿಷ್ಪ್ರಪಂಚರಾಗಿರುವರು.

ವನಶಬ್ದವನ್ನು ಬೇರೊಂದು ಕಡೆಯಲ್ಲೂ ಬಳಸಲಾಗಿರುವುದನ್ನು ನಾವು ಕಾಣುತ್ತೇವೆ.ಎಂದರೆ ಯಾವನು ಕುರುಚಲುಗಿಡಗಳಿಲ್ಲದವನಾಗಿ ವನದಿಂದ ಬಿಡುಗಡೆಯನ್ನು ಹೊಂದಿದವನಾಗಿರುವನೋ, ವನದಿಂದ ಮುಕ್ತನಾಗಿಯೂ ವನದೆಡೆಗೆ ಓಡುತ್ತಿರುವನೋ, ಅ ಪುದ್ಗಲನೇ ಮುಕ್ತನಾಗಿಯೂ ಬಂಧನದೆಡೆಗೆ ಓಡುತ್ತಿರುವನೆಂದು ಕಂಡುಕೊಳ್ಳಿರಿ.

**ಯೋ ನಿಬ್ಬನಥೋ ವನಾಧಿಮುತ್ತೋ ವನಮುತ್ತೋ ವನಮೇವ ಧಾವತಿ**

**ತಜ್ ಪುಗ್ಗಲಮೇವ ಪಸ್ಸಥ ಮುತ್ತೋ ಬಂಧನಮೇವ ಧಾವತಿ**[120]

ಮತ್ತೊಂದು ಒಗಟು ಇಂತಿದೆ.

**ಪಂದ ಚಿಂದೆ ಪಂಚ ಜಹೆ ಪಂಚ ಚುತ್ತರಿ ಭಾವಯೆ**

**ಪಂಚ ಸಂಗಾತಿಗೋ ಭಿಕ್ಕು ಓಘತಿಣ್ಣೋ ತಿ ವುಚ್ಚತಿ**[121]

ಐದನ್ನು ಕತ್ತರಿಸಬೇಕು, ಐದನ್ನು ಬಿಡಬೇಕು, ಐದನ್ನು ಭಾವನೆಮಾಡಬೇಕು, ಐದರ ಸಂಗವನ್ನು ಮೀರಬೇಕು. ಅಂಥ ಭಿಕ್ಷುವು ಪ್ರವಾಹವನ್ನು ದಾಟಿದವನು ಎನಿಸುವನು.

ತಂದೆ ತಾಯಿಯನ್ನು ಕೊಲ್ಲುವ ಬಗ್ಗೆಯೂ ಪ್ರಸ್ತಾಪವಿದೆ. ತಂದೆತಾಯಿಯರನ್ನು ಕೊಂದು, ಇಬ್ಬರು ಕ್ಷತ್ರಿಯ ರಾಜರನ್ನು ಕೊಂದು, ಅನುಜರರ ಸಹಿತವಾದ ರಾಷ್ಟ್ರವನ್ನು

ಕೊಂದು, ಐದನೆಯದಾದ ಹುಲಿಯನ್ನು ಕೊಂದು ಬ್ರಾಹ್ಮಣನು ದುಃಖರಹಿತನಾಗುವನು ಎಂದು ಹೇಳಲಾಗಿದೆ. ಈ ಗಾಥೆಗಳಲ್ಲಿರುವ ಮಾತುಗಳನ್ನು ನಾವು ವಾಚ್ಯಾರ್ಥದಲ್ಲಿ ತೆಗೆದುಕೊಳ್ಳಬಾರದು. ಅವುಗಳಿಗೆ ಲಕ್ಷ್ಯಾರ್ಥಗಳಿವೆ. ಇಲ್ಲಿ ತಾಯಿಯೆಂದರೆ ತೃಷ್ಣೆ ಮತ್ತು ತಂದೆಯೆಂದರೆ ಅಸ್ಮೀಮಾನ ಅಥವಾ ಅಹಂಕಾರ. ಮನುಷ್ಯ ಇವುಗಳಿಲ್ಲದೇ ಇರಲು ಸಾಧ್ಯವೇ ಇಲ್ಲ ಎಂಬ ಕಾರಣಕ್ಕೆ ಇವುಗಳನ್ನು ತಂದೆತಾಯಿಗಳೆಂದು ಬಹುಶಃ ಕರೆಯಲಾಗಿದ್ದಿರಬಹುದು. ಶಾಶ್ವತದೃಷ್ಟಿ, ಉಚ್ಛೇದದೃಷ್ಟಿ ಎಂಬುವರು ರಾಜರು. ಪ್ರತೀತ್ಯ ಸಮುತ್ಪಾದಗಳಲ್ಲಿ ಬರುವ ಹನ್ನೆರಡು ಆಯತನಗಳೇ ರಾಷ್ಟ್ರ. **ನಂದೀರಾಗವೇ** (ವಿಷಯಭೋಗದ ಆಸಕ್ತಿ) ಅನುಚರ. **ವಿಚಿಕಿತ್ಸಾ** ಎಂಬ ಐದನೇ ನೀವರಣವೇ ಹುಲಿ. ಅರಿಹಂತನೇ ಬ್ರಾಹ್ಮಣ.

**ಮತಾರಜ್ ಪಿತರಜ್ ಹಂತ್ವಾ ರಾಜಾನೋ ದ್ವೇ ಚ ಖತ್ತಿಯೇ**

**ರಟ್ಠಜ್ ಸಾನಚೂರಜ್ ಹಂತ್ವಾ ಅನೀಘೋ ಯಾತಿ ಬ್ರಾಹ್ಮಣೊ**

**ಮಾತಾರಜ್ ಪಿತರಜ್ ಹಂತ್ವಾ ರಾಜಾನೋ ದ್ವೇ ಚ ಸೊತ್ಥಿಯೇ**

**ವೆಯ್ಯಗ್ಘಪಂಚಮಜ್ ಹಂತ್ವಾ ಅನೀಘೋ ಯಾತಿ ಬ್ರಾಹ್ಮಣೋ**[122]

## ಅಡಿ ಟಿಪ್ಪಣಿಗಳು

1. F. Max Muller, ***The Dhammapada***, Motilal Banarasidass Publishers Private Limited, Delhi, 2013, ಪು. xvii
2. ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು, ***ಧಮ್ಮಪದ***, ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, 1997, ಪು.119–130
3. F. Max Muller, ಪೂರ್ವೋಕ್ತ, ಪು.xviii
4. ಅದೇ ಪು. xviii
5. ಅದೇ ಪು. xx
6. ಅದೇ ಪು.liii
7. ಅದೇ ಪು. liii
8. ಅದೇ ಪು. liii
9. ಅದೇ ಪು. liii
10. ಅದೇ ಪು. liii
11. ಅದೇ ಪು. liii
12. ಅದೇ ಪು. liii
13. ಗಾಥೆ 21
14. F. Max Muller, ಪೂರ್ವೋಕ್ತ, ಪು. liv
15. ಅದೇ ಪು. liv
16. ಗಾಥೆ 100–102
17. F. Max Muller, ಪೂರ್ವೋಕ್ತ, ಪು. lv
18. ಗಾಥೆ 44, 45
19. F. Max Muller, ಪೂರ್ವೋಕ್ತ, ಪು. lv
20. ಗಾಥೆಗಳು 1, 2, 7, 8
21. ಗಾಥೆ 19
22. ಗಾಥೆ 20
23. ಗಾಥೆ 28
24. ಗಾಥೆ 21
25. ಗಾಥೆ 40
26. ಗಾಥೆಗಳು 44, 45, 46, 54

27. ಗಾಥೆಗಳು 74, 75

28. ಗಾಥೆಗಳು 76, 89,

29. ಗಾಥೆಗಳು 83, 84

30. ಗಾಥೆಗಳು 92, 93

31. ಗಾಥೆಗಳು 106, 102

32. ಗಾಥೆ 108

33. ಗಾಥೆಗಳು 121, 122

34. ಗಾಥೆಗಳು 125, 127

35. ಗಾಥೆಗಳು 140, 142

36. ಗಾಥೆ 144

37. ಗಾಥೆ 151

38. ಗಾಥೆ 154

39. ಗಾಥೆಗಳು 164, 165

40. ಗಾಥೆ 177

41. ಗಾಥೆ 184

42. ಗಾಥೆ 185

43. ಗಾಥೆ 207

44. ಗಾಥೆ 208

45. ಗಾಥೆ 221

46. ಗಾಥೆ 227

47. ಗಾಥೆಗಳು 249–252

48. ಗಾಥೆ 259

49. ಗಾಥೆಗಳು 280, 281

50. ಗಾಥೆ 282

51. ಗಾಥೆಗಳು 293, 302

52. ಗಾಥೆಗಳು 306, 309, 310, 312

53. ಗಾಥೆ 315

54. ಗಾಥೆಗಳು 324, 325, 326, 328, 329, 370, 331

55. ಗಾಥೆಗಳು 334, 338, 345, 346, 347, 352, 354

56. ಗಾಥೆ 337

57. ಗಾಥೆಗಳು 361, 375

58. ಗಾಥೆ 371
59. ಗಾಥೆಗಳು 387, 396, 414, 423
60. ಗಾಥೆ 390
61. ಗಾಥೆ 1
62. ಗಾಥೆ 2
63. ಗಾಥೆ 8
64. ಗಾಥೆಗಳು 13, 14
65. ಗಾಥೆ 19
66. ಗಾಥೆ 29
67. ಗಾಥೆ 33
68. ಗಾಥೆ 34
69. ಗಾಥೆಗಳು 40, 41, 46
70. ಗಾಥೆಗಳು 44, 45
71. ಗಾಥೆಗಳು 47, 48
72. ಗಾಥೆ 49
73. ಗಾಥೆಗಳು 51, 52
74. ಗಾಥೆಗಳು 54, 55, 56
75. ಗಾಥೆಗಳು 64, 65
76. ಗಾಥೆ 80
77. ಗಾಥೆ 81
78. ಗಾಥೆಗಳು 82, 95
79. ಗಾಥೆಗಳು 92–94
80. ಗಾಥೆ 71
81. ಗಾಥೆಗಳು 121, 122
82. ಗಾಥೆ 123
83. ಗಾಥೆಗಳು 124, 125
84. ಗಾಥೆ 134
85. Dr.H.L.Chandrasekhara, ***Shri Annamacharya A Philosophical Study***, Vidyashankara Prakashana, Mysore, 1990
86. ಗಾಥೆಗಳು 135, 136
87. ಗಾಥೆ 143

88. ಗಾಥೆಗಳು 161, 162, 164

89. ಗಾಥೆಗಳು 170, 171, 172, 174

90. ಗಾಥೆಗಳು 236, 240, 252

91. ಗಾಥೆಗಳು 320–326, 329, 330

92. ಗಾಥೆಗಳು 334, 343, 335, 336, 337, 338, 345–347

93. ಮುಂಡೋಕಪನಿಷತ್ತು 1–1–7

94. Henry Thomas Dana Lee Thomas, ***Living Biographies of Great Philosophers***, Bharatiya Vidya Bhavan, Bombay, 1993 ಪು.100

95. ಗಾಥೆಗಳು 350, 377, 382

96. ಗಾಥೆಗಳು 19, 20

97. ಗಾಥೆಗಳು 22, 206, 208, 236, 270

98. ಗಾಥೆ 75 (ಹೆಚ್ಚಿನ ವಿವರಣೆಗಾಗಿ ನೋಡಿ: ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು, ***ಧಮ್ಮಪದ***, ಪೂರ್ವೋಕ್ತ ಪು.21)

99. ಗಾಥೆಗಳು 90, 271

100.ಮುಂಡಕೋಪನಿಷತ್ತು II-II-8

101. ಗಾಥೆ 97

102. ಬ್ರಹ್ಮಸೂತ್ರ 3–2–17

103. M.Hiriyanna, ***Outlines of Indian Philosophy***, George Allen and Unwin, Bombay, 1973 ಪು.69–70

104. ಗಾಥೆಗಳು 100, 102

105. ಗಾಥೆಗಳು 181, 272

106. ಗಾಥೆಗಳು 183, 205

107. ಈಶೋಪನಿಷತ್ತು ಶ್ಲೋಕ 7

108. ಗಾಥೆಗಳು 212–216

109. ಗಾಥೆ 254

110. ಗಾಥೆ 338

111. ಗಾಥೆ 227

112. ಗಾಥೆಗಳು 219, 220

113. ಗಾಥೆಗಳು 229, 230

114. ಗಾಥೆಗಳು 306, 307, 309, 311, 322, 323, 325

115. ಗಾಥೆಗಳು 175, 176, 219

116. ಗಾಥೆಗಳು 237, 238

117. ಗಾಥೆ 283

118. ಗಾಥೆಗಳು 235, 236

119. ಗಾಥೆಗಳು 254, 255 (ಗಾಥೆಯನ್ನು ನೋಡಿ)

120. ಗಾಥೆ 344

121. ಗಾಥೆ 370

122. ಗಾಥೆಗಳು 294, 295

**********

# ಅಧ್ಯಾಯ–5

# ಪ್ರಾಚೀನ ಮತ್ತು ಅರ್ವಾಚೀನ ಬೌದ್ಧಧರ್ಮಗಳು – ಒಂದು ಸ್ಥೂಲ ಪರಿಚಯ

# ಅಧ್ಯಾಯ–5

# ಪ್ರಾಚೀನ ಮತ್ತು ಅರ್ವಾಚೀನ ಬೌದ್ಧಧರ್ಮಗಳು – ಒಂದು ಸ್ಥೂಲ ಪರಿಚಯ

ಪ್ರಾಚೀನ ಬೌದ್ಧಧರ್ಮವು ತತ್ವಶಾಸ್ತ್ರದ ಇತಿಹಾಸದಲ್ಲಿ ಅತ್ಯಂತ ಪ್ರಭಾವಶಾಲೀ ದರ್ಶನವೆಂಬುದರ ಬಗ್ಗೆ ಎರಡು ಮಾತಿಲ್ಲ. ಅದರ ಮೂಲಭೂತ ಚಿಂತನೆಗಳು 19ನೇ ಶತಮಾನದ ವೈಜ್ಞಾನಿಕ ಚಿಂತನೆಗಳಿಗೆ ಬಹಳ ಹತ್ತಿರ ಬರುತ್ತದೆಂದು ಅನೇಕ ಆಧುನಿಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. Schopenhaur ಮತ್ತು Hartmann ಎಂಬ ಜರ್ಮನಿಯ ನಿರಾಶಾವಾದೀ ಚಿಂತಕರ ದರ್ಶನಗಳು ಪ್ರಾಚೀನ ಬೌದ್ಧಧರ್ಮದ ಪರಿಷ್ಕೃತ ರೂಪವೆಂಬುದರ ಬಗ್ಗೆ ಉತ್ಪ್ರೇಕ್ಷೆಯಿಲ್ಲ, ಕೆಲವು ಸಲ ಇವರ ಚಿಂತನೆಗಳನ್ನು ಬೌದ್ಧಧರ್ಮದ ಚಿಂತನೆಗಳ ವಿಕೃತ ರೂಪಗಳೆಂದು ವಿವರಿಸುವುದೂ ಉಂಟು. ಹಾಗೆಯೇ ಬೌದ್ಧದರ್ಶನದ ಸತ್ಯವನ್ನು ಕುರಿತ ಚಲನಾತ್ಮಕ ಪರಿಕಲ್ಪನೆಯು Bergsonನ ಸೃಜನಾತ್ಮಕ ವಿಕಾಸವಾದದ (Creative Evolution) ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ.[1] ಪ್ರಾಚೀನ ಬೌದ್ಧಧರ್ಮವು ಆಗಿನ ಕಾಲದ ಮನುಷ್ಯನ ನೈತಿಕ ಅಗತ್ಯಗಳಿಗೆ ಅನುಸಾರವಾಗಿ ರೂಪುಗೊಂಡಿತ್ತು. ಪ್ರೊ.ಎಸ್.ರಾಧಾಕೃಷ್ಣನ್ ಪ್ರಕಾರ ಈ ದರ್ಶನವು ಧರ್ಮ ಮತ್ತು ವಿಜ್ಞಾನಗಳ ನಡುವೆ ಇರುವ ವೈರುಧ್ಯವನ್ನು ಸಮನ್ವಯಗೊಳಿಸುವಲ್ಲಿ ಸಹಕಾರಿಯಾಗಿದೆ.[2]

ಭಾರತದಲ್ಲಿ ಬೌದ್ಧ ಚಿಂತನೆಯ ವಿಕಾಸವು ಸುಮಾರು ಒಂದು ಸಾವಿರ ವರ್ಷಗಳ ವಿಸ್ತಾರವನ್ನು ಪಡೆದಿದೆ. ಪ್ರೊ.ರೈಸ್ ಡೇವಿಡ್ಸ್ ಹೀಗೆ ಹೇಳುತ್ತಾರೆ, "ಶತಶತಮಾನಗಳು ಕಳೆಯುತ್ತಾ ಬಂದಂತೆ ಬೌದ್ಧಧರ್ಮವು ಹಂತಹಂತವಾಗಿ ಬೆಳವಣಿಗೆಯನ್ನು ಪಡೆಯುತ್ತಾ ಬರುತ್ತದೆ. ಹೆಚ್ಚು ಕಡಿಮೆ ಪ್ರತಿ ಕಾಲದ ಪ್ರತಿಯೊಂದು ಪುಸ್ತಕದಲ್ಲೂ ಈ ಬದಲಾವಣೆಯನ್ನು

ನಾವು ಕಾಣಬಹುದು. ಬುದ್ಧನ ಮರಣಾನಂತರ 2ನೇ ಶತಮಾನದಲ್ಲಿ 18ಕ್ಕೂ ಕಡಿಮೆಯಿಲ್ಲದ ಬೌದ್ಧ ಚಿಂತನೆಯ ವಿವಿಧ ಶಾಖೆಗಳನ್ನು ನಾವು ಕಾಣಬಹುದು. ಬೌದ್ಧರ್ಮದ ಪ್ರಕಾರ ಜೀವನವು ಬದಲಾವಣೆಯಷ್ಟೆ".[3]

ಪ್ರಾಚೀನ ಬೌದ್ಧಧರ್ಮವನ್ನು ಕುರಿತ ವಿವರಣೆಗೆ ನಾವು ಪಿಟಕಗಳನ್ನು ಅವಲಂಬಿಸಬೇಕು. ಪಿಟಕಗಳೆಂದರೆ ಧಮ್ಮದ ಬುಟ್ಟಿಗಳೆಂದರ್ಥ. ಬೌದ್ಧ ಚಿಂತನೆಗೆ ಬಹಳ ಹತ್ತಿರವಾದ ಅಂಶಗಳನ್ನು ಅವು ಒಳಗೊಂಡಿದೆ. ಸಾಹಿತ್ಯದ ಭಾಷೆ ಮಗದ ರಾಜ್ಯದ ಆಡುಭಾಷೆಯಾಗಿದ್ದ ಪಾಳಿ. ಪ್ರಾಚೀನ ಬೌದ್ಧರ ಪ್ರಕಾರ ಇವು ಬುದ್ಧನ ಹೇಳಿಕೆಗಳನ್ನು ಒಳಗೊಂಡಿದೆ. ಬಹುಶಃ ಪಿಟಕಗಳ ಸಂಗ್ರಹವು ಕ್ರಿ.ಪೂ.241ರ ಹೊತ್ತಿಗೆ ಪೂರೈಸಲ್ಪಟ್ಟಿರಬಹುದು.[4] ಈ ಸಂಗ್ರಹಕಾರ್ಯವು 3ನೇ ಸಭೆಯಲ್ಲಿ ನೆರವೇರಿತ್ತು. ಹೀಗೆ ಉಪಲಬ್ಧವಿರುವ ಬುದ್ಧನ ಬೋಧನೆಗಳನ್ನು ಕುರಿತ ಅತ್ಯಂತ ಪ್ರಾಚೀನ ಮತ್ತು ಅಧಿಕಾರಯುಕ್ತ ನಿರೂಪಣೆಯು ಈ ಪಿಟಕಗಳಲ್ಲಿವೆ.

ಬೌದ್ಧಧರ್ಮದ ಅನಂತರದ ಸಂಪ್ರದಾಯಗಳ ಪ್ರಕಾರ ಗೌತಮನ ನಿರ್ವಾಣದ ಕೆಲವೇ ವರ್ಷಗಳ ನಂತರ, **ಅಶಾಶ್ವತತೆಯ ಗಾಳಿಯು ಜ್ಞಾನದ ದೀಪವನ್ನು ಆರಿಸಿದ ನಂತರ** ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಬುದ್ಧನ ಅನುಯಾಯಿಗಳಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು.[5] ಈ ಭಿನ್ನಾಭಿಪ್ರಾಯಗಳನ್ನು ಸರಿಮಾಡಲು ಮಗಧರಾಜ್ಯದ ಬಳಿಯಿರುವ ರಾಜಗೃಹದಲ್ಲಿ ಬುದ್ಧನ ಅನುಯಾಯಿಗಳೆಲ್ಲರೂ ಒಂದು ಸಭೆ ಸೇರಿದರು. ಈ ಸಭೆಯಲ್ಲಿ ಬುದ್ಧನ ಶಿಷ್ಯರಲ್ಲಿ ಅತ್ಯಂತ ವಿದ್ವಾಂಸನಾದ **ಕಶ್ಯಪ**ನನ್ನು ಅಭಿಧಮ್ಮ ಪಿಟಕದಲ್ಲಿ ಪ್ರತಿಪಾದಿಸಲಾಗಿರುವ ಭೌತಾತೀತ ಸಿದ್ಧಾಂತಗಳನ್ನು ವಿವರಿಸಲು ಕೋರಲಾಯಿತು. ಅನಂತರ **ಉಪಾಲಿ** ಎಂಬ ಮತ್ತೋರ್ವ ವೃದ್ಧ ಶಿಷ್ಯನನ್ನು ವಿನಯ ಪಿಟಕದಲ್ಲಿ ಪ್ರತಿಪಾದಿಸಲಾಗಿರುವ

ಬೌದ್ಧಧರ್ಮದ ಶಿಸ್ತು ಕಟ್ಟಳೆಗಳನ್ನು ಕುರಿತು ವಿವರಿಸಲು ಕೇಳಿಕೊಳ್ಳಲಾಯಿತು. ಕೊನೆಗೆ **ಆನಂದ**ನೆಂಬ ಬುದ್ಧನ ಅಚ್ಚುಮೆಚ್ಚಿನ ಶಿಷ್ಯನನ್ನು ಸುತ್ತಪಿಟಕವು ಒಳಗೊಂಡಿರುವ ಹಾಗೂ ಬುದ್ಧನು ತನ್ನ ಪ್ರವಾಸದಲ್ಲಿ ಹೇಳಿದ ಅನೇಕ ಕಥೆಗಳನ್ನು ವಿವರಿಸಲು ಕೋರಲಾಯಿತು.[6] ದೀರ್ಘಕಾಲದ ಅವಧಿಯಲ್ಲಿ ಈ ಚಿಂತನೆಗಳು ಗುರುಶಿಷ್ಯ ಸಂಪ್ರದಾಯದಂತೆ ಒಬ್ಬರಿಂದ ಒಬ್ಬರಿಗೆ ಪರಂಪರಾನುಗತವಾಗಿ ರವಾನಿಸಲ್ಪಟ್ಟವು. ಕೊನೆಗೆ ಸಿಂಹಳದ ರಾಜನಾದ ವತ್ತಗಮನಿಯ ಆಡಳಿತದಲ್ಲಿ ಕ್ರಿ.ಪೂ.80ರಲ್ಲಿ ಇವೆಲ್ಲವೂ ಬರಹ ರೂಪದಲ್ಲಿ ಸಂಗ್ರಹಿಸಲ್ಪಟ್ಟವು.[7] ಈ ಬರಹವು ಪಾಳೀ ಭಾಷೆಯಲ್ಲಿದೆ. ಮೇಲೆ ತಿಳಿಸಿದಂತೆ ಸುತ್ತಪಿಟಕ, ವಿನಯಪಿಟಕ ಮತ್ತು ಅಭಿಧಮ್ಮ ಪಿಟಕ ಎಂಬ ಮೂರು ಬುಟ್ಟಿಗಳಲ್ಲಿ ಈ ಚಿಂತನೆಗಳು ಸಂಗ್ರಹಗೊಂಡವು. ಸುತ್ತಪಿಟಕದಲ್ಲಿ 5 ಭಾಗಗಳಿವೆ. ಈ ಭಾಗಗಳಿಗೆ **ನಿಕಾಯ**ಗಳೆಂದು ಹೆಸರು. ಮೊದಲ ನಾಲ್ಕು ನಿಕಾಯಗಳು ಬುದ್ಧನ ಉಪನ್ಯಾಸ ಮತ್ತು ಆತನು ನಡೆಸಿದ ಸಂವಾದಗಳನ್ನು ಒಳಗೊಂಡಿವೆ. ಈ ಐದು ನಿಕಾಯಗಳು ಕೆಳಕಂಡಂತಿವೆ.

ಸುತ್ತಪಿಟಕದ ಮೊದಲನೇ ನಿಕಾಯವಾದ **ದೀರ್ಘನಿಕಾಯ** 34 ಸೂತ್ರಗಳನ್ನು ಒಳಗೊಂಡಿದ್ದು ಅದರಲ್ಲಿ ಬುದ್ಧನೇ ನೀಡಿದ ದೀರ್ಘ ಉಪನ್ಯಾಸಗಳಿವೆ. ಇವುಗಳಲ್ಲಿ ಕೆಲವು ಸೂತ್ರಗಳನ್ನು ಹೀಗೆ ಹೆಸರಿಸಬಹುದು. ಮೊದಲನೆಯದು **ಬ್ರಹ್ಮಜಾಲ ಸುತ್ತ**. ಎರಡನೆಯದು **ಸಾಮಾನ್ಯಫಲ ಸುತ್ತ**. ಮೂರನೆಯದಾದ **ಅಂಬತ್ಥ ಸುತ್ತ**ವು ಜಾತಿಯನ್ನು ಕುರಿತ ಬುದ್ಧನ ಧೋರಣೆಯನ್ನು ಒಳಗೊಂಡಿದೆ. ನಾಲ್ಕನೆಯದಾದ **ಕೂಟದಂತ ಸುತ್ತ** ಬ್ರಾಹ್ಮಣ ಧರ್ಮಕ್ಕೂ ಮತ್ತು ಬೌದ್ಧ ಧರ್ಮಕ್ಕೂ ಇರುವ ಸಂಬಂಧವನ್ನು ವಿವರಿಸುತ್ತದೆ. ಐದನೆಯದಾದ **ತೇವಿಜ್ಜ ಸುತ್ತ**ವು ಬ್ರಾಹ್ಮಣ ಸಂಸ್ಕೃತಿಗೂ, ಬೌದ್ಧ ಆದರ್ಶಗಳಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸುತ್ತದೆ. ಆರನೆಯದಾದ **ಮಹಾನಿಧಾನ ಸುತ್ತ**ವು ಕಾರ್ಯಕಾರಣವಾದದ ಬಗ್ಗೆ ವಿವರಿಸುತ್ತದೆ. ಏಳನೆಯದಾದ ಸಿ**ಗಾಲೋವಾಡ ಸುತ್ತ**ವು ಬೌದ್ಧರು ಪಾಲಿಸಬೇಕಾದ

ಸಾಮಾನ್ಯ ಕರ್ತವ್ಯಗಳನ್ನು ವಿವರಿಸುತ್ತದೆ. ಎಂಟನೆಯದಾದ **ಮಹಾಪರಿನಿಬ್ಬಾಣ ಸುತ್ತವು** ಬುದ್ಧನ ಕೊನೆಯ ದಿನಗಳ ಬಗ್ಗೆ ಒಂದು ಚಿತ್ರಣವನ್ನು ನೀಡುತ್ತದೆ.

ಇನ್ನು ಸುತ್ತಪಿಟಕದ ಎರಡನೆಯ ನಿಕಾಯವನ್ನು **ಮಜ್ಝಿಮ ನಿಕಾಯ**ವೆಂದು ಕರೆಯುತ್ತಾರೆ. ಇಲ್ಲಿರುವ ಉಪನ್ಯಾಸಗಳು ಅಷ್ಟು ದೀರ್ಘವೂ ಅಲ್ಲ, ಅಷ್ಟು ಹ್ರಸ್ವವೂ ಅಲ್ಲ. ಇದು ಬೌದ್ಧಧರ್ಮವನ್ನು ಕುರಿತ ಎಲ್ಲ ಅಂಶಗಳ ಬಗ್ಗೆಯೂ 152 ಸಂದೇಶಗಳ ಮತ್ತು ಸಂವಾದಗಳ ರೂಪದಲ್ಲಿ ಮುಂದಿಡುತ್ತದೆ.

ಸುತ್ತಪಿಟಕದ ಮೂರನೇ ನಿಕಾಯಕ್ಕೆ **ಸಂಯುಕ್ತ ನಿಕಾಯ**ವೆಂದು ಹೆಸರು. ಇದೂ ಕೂಡ ಬುದ್ಧನ ಉಪನ್ಯಾಸಗಳ ಸಂಗ್ರಹವಾಗಿದೆ. ಇದು ಬೌದ್ಧಧರ್ಮದ ಪ್ರಸಿದ್ಧ ಸೂತ್ರವಾದ **'ಧರ್ಮಚಕ್ರ ಪ್ರವರ್ತನ ಸುತ್ತ'**ವನ್ನು ಎಂದರೆ ಧರ್ಮಚಕ್ರದ ಚಲನೆಯನ್ನು ಕುರಿತ ಉಪನ್ಯಾಸವನ್ನು ಒಳಗೊಂಡಿದೆ. ಸಾಮಾನ್ಯವಾಗಿ ಇದನ್ನು **ವಾರಣಾ**ಸಿ **ಸಂದೇಶ**ವೆಂದು ಕರೆಯುತ್ತಾರೆ. ಇದು ವಿನಯಪಿಟಕದಲ್ಲೂ ಬರುತ್ತದೆ.

ನಾಲ್ಕನೆಯದಾದ **ಅಂಗುತ್ತರ ನಿಕಾಯ**ದಲ್ಲಿ ಸುಮಾರು 2300 ಸೂತ್ರಗಳಿದ್ದು, ಇವುಗಳಲ್ಲಿ 11 ಭಾಗಗಳಿವೆ. ಕೊನೆಯದಾದ **ಖುದ್ದಕ ನಿಕಾಯ**ವು ಸುಮಾರು 15 ಸಣ್ಣ ಭಾಗಗಳ ಸಂಗ್ರಹವಾಗಿದೆ. **ಈ ನಿಕಾಯದಲ್ಲೇ ನಮ್ಮ ಅಧ್ಯಯನದ ವಿಷಯವಾದ ಧಮ್ಮಪದವು ಬರುವುದು.** ಈ 15 ಭಾಗಗಳನ್ನು ಕೆಳಕಂಡಂತೆ ಹೆಸರಿಸಬಹುದು.

1. ಖುದ್ಧಕಪಾಥ
2. **ಧಮ್ಮಪದ**
3. ಉದಾನ
4. ಇತಿವುತ್ತಕ

5. ಸುತ್ತನಿಪಾತ
6. ವಿಮಾನವತ್ತು
7. ಪೇತವತ್ತು
8. ತೇರಗಾಥ
9. ತೇರಿಗಾಥ
10. ಜಾತಕ
11. ನಿದ್ದೇಶ
12. ಪತಿಸಂಭಿದಾಮಾಗ್ಗ
13. ಅಪದಾನ
14. ಬುದ್ಧವಂಶ
15. ಚರಿಯಾ ಪಿಟಕ

ಮೇಲಿನವುಗಳಲ್ಲಿ ತೇರಾಗಾಥ ಮತ್ತು ತೇರಿಗಾಥ ಎಂಬುವು ಅತ್ಯಂತ ಸ್ವಾರಸ್ಯವೂ ಕಾವ್ಯಾತ್ಮಕವೂ ಹಾಗೂ ಕಾವ್ಯಾತೀತವೂ ಆಗಿವೆ. ಅವು ಮೋಕ್ಷಾನಂದದ ಗೀತೆಗಳನ್ನು ಒಳಗೊಂಡಿದೆ. ಮತ್ತೊಂದು ಭಾಗವಾದ ಜಾತಕಗಳು ಗೌತಮನ ಪೂರ್ವಜನ್ಮಗಳ ದಂತಕಥೆಗಳನ್ನು ಒಳಗೊಂಡಿದ್ದು, ಅವು ಜಾನಪದ ವಿದ್ಯಾರ್ಥಿಗೆ ಅತ್ಯಂತ ಅಮೂಲ್ಯವೂ ಹಾಗೂ ಉಪಯುಕ್ತವೂ ಆದ ಭಾಗಗಳಾಗಿವೆ. **ಧಮ್ಮಪದವು ಬುದ್ಧನ ಬೋಧನೆಗಳ ಸಾರತತ್ವಗಳನ್ನು ಒಳಗೊಂಡಿದೆ. ಯಾರಿಗೆ ಮೂರು ಪಿಟಕಗಳನ್ನು ಅಧ್ಯಯನ ಮಾಡಲು ವ್ಯವಧಾನ ಮತ್ತು ಸಾಮರ್ಥ್ಯವಿಲ್ಲವೋ ಅವರು ಧರ್ಮಪದದ ಅಧ್ಯಯನವನ್ನು ಮಾಡಿದರೆ ಸಾಕೆಂಬ ಪ್ರತೀತಿಯಿದೆ.**[8] ಇಡೀ ಸುತ್ತಪಿಟಕವನ್ನು ಕುರಿತಂತೆ ರಿಸ್ ಡೇವಿಡ್ಸ್ ಹೀಗೆ ಹೇಳುತ್ತಾರೆ, ''ತಾತ್ವಿಕ ಅಂತರ್‌ದೃಷ್ಟಿಯ ವಿಷಯದಲ್ಲಿ, ಈ ಉಪನ್ಯಾಸಗಳು ಪ್ಲೇಟೋ

ಸಂವಾದಗಳನ್ನು, ಸೊಕ್ರಾಟಿಕ್ ವಿಧಾನವನ್ನು ನಮ್ಮ ನೆನಪಿಗೆ ತರುತ್ತವೆ. ಇವುಗಳನ್ನು ಸರಿಯಾಗಿ ಅರ್ಥೈಸಿ ಅನುವಾದಿಸಿದಲ್ಲಿ ಗೌತಮನ ಈ ಸಂವಾದ ಸಂಗ್ರಹವು ಪ್ಲೇಟೋ ಸಂವಾದಗಳ ಮಟ್ಟಕ್ಕೆ ಬರುವುದರಲ್ಲಿ ಎರಡು ಮಾತಿಲ್ಲ".[9]

ವಿನಯ ಪಿಟಕವು ಭಿಕ್ಷುಗಳು ಅನುಸರಿಸಬೇಕಾದ ನೀತಿನಿಯಮಗಳ ಬಗ್ಗೆ ವಿವರಿಸುತ್ತದೆ. ಇದು ಸುತ್ತ ವಿಭಂಗ, ಖಂಡಕ ಮತ್ತು ಪರಿವಾರ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸುತ್ತ ವಿಭಂಗದಲ್ಲಿ ಪಾರಾಜಿಕ ಮತ್ತು ಪಾಚಿತ್ತಿಯ ಎಂಬ ಎರಡು ಉಪವಿಭಾಗಗಳಿವೆ. ಹಾಗೆಯೇ ಖಂಡಕದಲ್ಲಿ ಮಹಾವಗ್ಗ ಮತ್ತು ಕುಲವಗ್ಗ ಎಂಬ ಎರಡು ಉಪವಿಭಾಗಗಳಿವೆ.[10]

ಅಭಿಧಮ್ಮ ಪಿಟಕವು ತತ್ವ ಮತ್ತು ಭೌತಾತೀತಶಾಸ್ತ್ರದ ಬಗ್ಗೆ ಪ್ರಾಸಂಗಿಕವಾಗಿ ಚರ್ಚಿಸುತ್ತದೆ. ಈ ಪಿಟಕವು ಮೂಲತಃ ನೀತಿಪ್ರಧಾನವಾಗಿದ್ದರೂ ತತ್ವವನ್ನು ಕುರಿತ ಚರ್ಚೆ ಅದರಲ್ಲಿ ಪ್ರಾಸಂಗಿಕವಾಗಿ ಬರುತ್ತದೆ. ಈ ಪಿಟಕದಲ್ಲಿ ಏಳು ಉಪವಿಭಾಗಗಳಿವೆ, ಯಾವುವೆಂದರೆ 1) ಧಮ್ಮ ಸಂಗನೀ (ಕ್ರಿ.ಪೂ.4ನೇ ಶತಮಾನ) 2) ವಿಭಂಗ 3) ಕಥಾವತ್ತು 4) ಪುಗ್ಗಲಪನ್ನತ್ತಿ 5) ಧಾತು 6) ಯಮಕ 7) ಪತ್ಥಾನ. ಇವೆಲ್ಲವೂ ಪಾಳಿ ಗ್ರಂಥಗಳಾಗಿವೆ. ಇವು ಪ್ರತಿಪಾದಿಸುವ ಸಿದ್ಧಾಂತಗಳನ್ನು **ತೇರವಾದ** ಎಂದು ಕರೆಯುತ್ತಾರೆ. ಏಕೆಂದರೆ ಅವು ಮೊದಲ ಸಭೆಯಲ್ಲಿ ತೇರರಿಂದ ಅಥವಾ ಹಿರಿಯರಿಂದ ಸಂಗ್ರಹಿಸಲ್ಪಟ್ಟವು.[11]

ಕೆಲವು ಸಲ ಮಿಲಿಂದ ಪನ್ಹಾವನ್ನು ಪಾಳೀ ಗ್ರಂಥಗಳಲ್ಲಿ ಸೇರಿಸಲಾಗುತ್ತದೆ. ಇದು ಮಿಲಿಂದ ದೊರೆಯ ಪ್ರಶ್ನೋತ್ತರಗಳನ್ನು ಒಳಗೊಂಡಿದೆ. ಇದರಲ್ಲಿ ಬೌದ್ಧ ಗುರುವು ಮತ್ತು ಮಹಾತಾರ್ಕಿಕನೂ ಆದ ನಾಗಸೇನನಿಗೂ ಮತ್ತು ಗ್ರೀಕ್ ದೊರೆಯಾದ ಮಿನಾಂಡರ್‌ಗೂ ನಡೆದ ಸಂವಾದಗಳಿವೆ. ಮಿನಾಂಡರ್ ಸುಮಾರು ಕ್ರಿ.ಪೂ.2 ರಿಂದ ಕ್ರಿ.ಶ.95ರವರೆಗೆ ಸಿಂಧು

ಪ್ರಾಂತ್ಯವನ್ನು ಆಳಿದ್ದಿರಬಹುದಾದ ದೊರೆ. ಈ ಗ್ರಂಥವು ಸಿಂಹಳದಲ್ಲಿ ಒಂದು ಪ್ರಮಾಣಯುಕ್ತ ಗ್ರಂಥವಾಗಿದ್ದು, ಇದು ಬಹುಶಃ ಕ್ರೈಸ್ತ ಯುಗದ ಪ್ರಾರಂಭದಲ್ಲಿ ರಚಿಸಲ್ಪಟ್ಟಿರಬಹುದು. ಇದರಲ್ಲಿ ಅಡಕವಾಗಿರುವ ಚರ್ಚೆಗಳು ಬುದ್ಧನು ತೀರಿಕೊಂಡ 100 ವರ್ಷಗಳ ಅನಂತರ ಸಂಗ್ರಹವಾಗಿದ್ದಿರಬಹುದು. ಎಸ್ ಡೇವಿಡ್ಸ್ ಹೀಗೆ ಹೇಳುತ್ತಾರೆ, "The question of king Milinda panna is master piece of Indian prose and indeed the best book of its class from a literary point of view, that had been produced in any country". ಬುದ್ಧಘೋಷನ ಪ್ರಕಾರ ಪಾಳಿ ಪಿಟಕಗಳ ನಂತರ ಮಿಲಿಂದ ಪನ್ನವು ಅತ್ಯಂತ ಪ್ರಮಾಣಯುಕ್ತ ಗ್ರಂಥವಾಗಿದೆ. ಪಾಳಿ ಪಿಟಕಗಳು ಬುದ್ಧನ ಬೋಧನೆಗಳನ್ನು ಒಳಗೊಂಡಿದೆ. ಮಿಲಿಂದ ಪನ್ನದಲ್ಲಿ ಬೌದ್ಧಧರ್ಮದ ನಿಷೇಧಾತ್ಮಕ ವ್ಯಾಖ್ಯಾನವನ್ನು ನಾವು ಕಾಣುತ್ತೇವೆ. ನಾಗಸೇನನು ಇಲ್ಲಿ ಬೌದ್ಧಧರ್ಮದ ಒಂದು ನಿಷೇಧಾತ್ಮಕ ನಿರೂಪಣೆಯನ್ನು ನೀಡಲೆತ್ನಿಸುತ್ತಾನೆ. ಆತನು ಆತ್ಮ ಮತ್ತು ದೇವರನ್ನು ನಿರಾಕರಿಸಿದನಲ್ಲದೇ, ಅರ್ಹಂತನಿಗೆ ಭವಿಷ್ಯವನ್ನೂ ನಿರಾಕರಿಸಿದ.[12]

ಬುದ್ಧಘೋಷನ **ವಿಶುದ್ಧಿಮಾಗ್ಗ** ಎಂಬುದು ಅನಂತರದ ಕೃತಿ (ಕ್ರಿ.ಶ.400). ಬುದ್ಧಘೋಷನು ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ ಒಬ್ಬ ಬ್ರಾಹ್ಮಣ. ಆತನ ಗ್ರಂಥವು ಹೀನಯಾನ ಆದರ್ಶವನ್ನು ಎತ್ತಿ ಹಿಡಿಯುತ್ತದೆ. ಬುದ್ಧಘೋಷನೇ ಬೌದ್ಧಧರ್ಮದ ಇತಿಹಾಸದಲ್ಲಿ ಬೌದ್ಧಧರ್ಮವನ್ನು ಕುರಿತಂತೆ ಮೊಟ್ಟಮೊದಲ ವ್ಯಾಖ್ಯಾನಕಾರ. ಆತನ **ಅತ್ತಶಾಲಿನಿ** ಎಂಬುದು **ಧಮ್ಮ ಸಂಗನಿ** (ಅಧಮ್ಮ ಪಿಟಕ ಭಾಗ) ಎಂಬ ಗ್ರಂಥವನ್ನು ಕುರಿತ ಅಮೂಲ್ಯ ವ್ಯಾಖ್ಯಾನವಾಗಿದೆ. ಬೌದ್ಧಧರ್ಮವನ್ನು ಕುರಿತ ಇತರ ಪಾಳೀ ಗ್ರಂಥಗಳೆಂದರೆ **ದೀಪವಂಶ** (ಕ್ರಿ.ಶ.4) ಮತ್ತು **ಮಹಾವಂಶ** (ಕ್ರಿ.ಶ.5).[13]

## ಪ್ರಾಚೀನ ಬೌದ್ಧಧರ್ಮ

ಬುದ್ಧನು ಮೂಲತಃ ನೈತಿಕ ಆದರ್ಶಗಳನ್ನು ಮಾತ್ರ ತನ್ನ ಬೋಧನೆಗಳಲ್ಲಿ ಮುಂದಿಟ್ಟ. ಆತನೊಬ್ಬ ಸುಧಾರಕನಾಗಿದ್ದನೇ ಹೊರತು ಯಾವುದೇ ವೃತ್ತಿಪರ ಭೌತಾತೀತಶಾಸ್ತ್ರಜ್ಞನಾಗಿರಲಿಲ್ಲ. ಜನರ ದುಃಖವನ್ನು ನಿರ್ಮೂಲಗೊಳಿಸುವುದು ಆತನ ಗುರಿಯಾಗಿತ್ತು. ಯಾರಾದರೂ ತಾತ್ತ್ವಿಕ ಅಥವಾ ಭೌತಾತೀತ ಪ್ರಶ್ನೆಗಳನ್ನು ಕೇಳಿದರೆ ಅವುಗಳಿಗೆ ಉತ್ತರಗಳನ್ನು ನೀಡಲು ಆತನು ನಿರಾಕರಿಸುತ್ತಿದ್ದ. ಆತನ ಪ್ರಕಾರ ಇಂತಹ ಪ್ರಶ್ನೆಗಳಿಗೆ ಉತ್ತರಗಳು ಯಾವುದೇ ಆಧಾರಗಳನ್ನು ಹೊಂದಿರಲಿಲ್ಲ. ಈ ಉತ್ತರಗಳಿಗೆ ಸಾಕಷ್ಟು ಪುರಾವೆಗಳು ಇರಲಿಲ್ಲ. ಅವು ಭಾಗಶಃ ಸತ್ಯಗಳಾಗಿದ್ದವೇ ಹೊರತು ಪೂರ್ಣ ಸತ್ಯಗಳಾಗಿರಲಿಲ್ಲ. ಆತನ ಪ್ರಕಾರ ಇಂತಹ ಏಕಪಕ್ಷೀಯ ವಿವರಣೆಗಳು ವಿರೋಧಾಭಾಸಗಳಿಗೆ ಎಡೆಮಾಡಿಕೊಡುತ್ತವೆ. ಕುರುಡರು ಆನೆಯ ಅಂಗಗಳನ್ನೇ ಆನೆಯೆಂದು ಭಾವಿಸುವಂತೆ ಈ ಉತ್ತರಗಳು ಅರ್ಧಸತ್ಯವನ್ನೇ ಪೂರ್ಣಸತ್ಯವೆಂಬಂತೆ ಬಿಂಬಿಸುತ್ತವೆ. ಬುದ್ಧನು ಅಂತಹ ಹಲವಾರು ಭೌತಾತೀತ ಸಿದ್ಧಾಂತಗಳನ್ನು ತನ್ನ ಬೋಧನೆಗಳಲ್ಲಿ ಉಲ್ಲೇಖಿಸುತ್ತಾನೆ. ಅಷ್ಟೇ ಅಲ್ಲ, ಇವೆಲ್ಲವೂ ಅಪೂರ್ಣವೆಂದು ಸಾಧಿಸಿ ತೋರಿಸುತ್ತಾನೆ. ಕಾರಣ ಈ ಉತ್ತರಗಳು ಅಸ್ಪಷ್ಟವಾದ ಅನುಭವಗಳ ಮತ್ತು ವಿಕೃತ ಭಯಗಳ ಆಧಾರವನ್ನು ಹೊಂದಿದ್ದವು. ಆದ್ದರಿಂದ ಇಂತಹ ಒಣಚರ್ಚೆಗಳನ್ನು ನಿರ್ದಾಕ್ಷಿಣ್ಯವಾಗಿ ದೂರವಿರಿಸಬೇಕೆಂಬುದು ಆತನ ನಿಲುವಾಗಿತ್ತು. ಆತನ ಪ್ರಕಾರ ಈ ಯಾವ ಚರ್ಚೆಗಳೂ ಮನುಷ್ಯನನ್ನು ಮುಕ್ತಿಗೆ ಒಯ್ಯಲಾರವು. ಈ ಚರ್ಚೆಗಳಲ್ಲಿ ತೊಡಗಿದಷ್ಟೂ ಮನುಷ್ಯನು ವಿಚಾರ ಶುಷ್ಕತೆಯ ಬಲೆಗೆ ಇನ್ನಷ್ಟು ಸಿಕ್ಕಿಹಾಕಿಕೊಳ್ಳುತ್ತಾನೆ. ಮನುಷ್ಯನು ತ್ವರೆಯಾಗಿ ಮಾಡಬೇಕಾದುದೆಂದರೆ ದುಃಖ ನಿರ್ಮೂಲನೆ. ಆತ್ಮ, ಪ್ರಪಂಚಗಳೇ ಮುಂತಾದ ತಾತ್ತ್ವಿಕ ಚರ್ಚೆಗಳಲ್ಲಿ ತೊಡಗಿದವನನ್ನು ವಿಷಪೂರಿತವಾದ ಬಾಣವು ಚುಚ್ಚಿಕೊಂಡ ಮನುಷ್ಯನಿಗೆ ಹೋಲಿಸಲಾಗಿದೆ. ಬಾಣ

ಚುಚ್ಚಿಕೊಂಡವನು ಬಾಣವು ಎಲ್ಲಿಂದ ಬಂತು, ಅದನ್ನು ತಯಾರಿಸಿದವರು ಯಾರು, ಅದನ್ನು ಬಿಟ್ಟವರಾರು – ಇವೇ ಮುಂತಾದ ಚರ್ಚೆಗಳಲ್ಲಿ ತೊಡಗುತ್ತಾನೆ. ಅದೇರೀತಿ ಮನುಷ್ಯನು ನೋವನ್ನು ಅನುಭವಿಸುತ್ತಿದ್ದರೂ ಆ ನೋವನ್ನು ಅಂತ್ಯಗೊಳಿಸದೇ ಅನವಶ್ಯಕವಾದ ತಾತ್ತ್ವಿಕ ಚರ್ಚೆಯಲ್ಲಿ ತೊಡಗಿದರೆ ಅವನು ತನ್ನ ನೈಜ ಗುರಿಯನ್ನು ತಲುಪಲಾರ.[14]

ಬುದ್ಧನ ಪ್ರಕಾರ ಹತ್ತು ಪ್ರಶ್ನೆಗಳು ಅನಿಶ್ಚಿತವಾದ ರೂಪವನ್ನು ತಳೆದಿವೆ. ಈ ಪ್ರಶ್ನೆಗಳ ಚರ್ಚೆಯಿಂದ ಮನುಷ್ಯನಿಗೆ ಯಾವ ನೈತಿಕ ಲಾಭವೂ ಇಲ್ಲ. ಇವು ಅವನ ವ್ಯಕ್ತಿತ್ವವನ್ನು ರೂಪಿಸಲು ನೆರವಾಗುವುದಿಲ್ಲ. ಈ ಪ್ರಶ್ನೆಗಳು ಕೆಳಕಂಡಂತಿವೆ.

1. ಪ್ರಪಂಚವು ಶಾಶ್ವತವೇ?
2. ಅಥವಾ ಅದು ಅಶಾಶ್ವತವೇ?
3. ಅದು ಅಂತವೋ?
4. ಅಥವಾ ಅದು ಅನಂತವೋ?
5. ಆತ್ಮವೆಂಬುದು ಶರೀರವೋ?
6. ಅಥವಾ ಅದು ಶರೀರಕ್ಕಿಂತಲೂ ಭಿನ್ನವೋ?
7. ಸತ್ಯವನ್ನು ತಿಳಿದಾತನು (ತಥಾಗತ) ಮರಣದ ನಂತರ ಇರುವನೋ?
8. ಅಥವಾ ಆತನು ಇರುವುದಿಲ್ಲವೋ?
9. ಅಥವಾ ಅವನು ಇರುವನು ಮತ್ತು ಇಲ್ಲದಿರುವನು – ಎರಡೂ ಆಗಿದ್ದಾನೆಯೋ?
10. ಅಥವಾ ಆತನು ಎರಡು ಅಲ್ಲವೋ?[15]

ಈ ಪ್ರಶ್ನೆಗಳನ್ನು ಪೊತ್ತಪಾದಸುತ್ತದ ಸಂವಾದಗಳಲ್ಲಿ ಬುದ್ಧನು ಮಂಡಿಸುತ್ತಾನೆ. ಈ ಪ್ರಶ್ನೆಗಳು ಅವ್ಯಕ್ತವಾದುವಷ್ಟೆ (ಪಾಳಿಯಲ್ಲಿ ಅವ್ಯಾಕತಾನಿ). ಈ ವಿಷಯವನ್ನು ಕುರಿತ ಮಾಹಿತಿಗಳು ಸಂಯುಕ್ತನಿಕಾಯ ಮತ್ತು ಮಜ್ಜಮನಿಕಾಯಗಳಲ್ಲೂ ಬರುತ್ತವೆ.[16] ಇಂತಹ ತಾತ್ತ್ವಿಕ ಪ್ರಶ್ನೆಗಳನ್ನು ಚರ್ಚಿಸುವುದಕ್ಕಿಂತಲೂ ಬುದ್ಧನು ದುಃಖ, ಅದರ ಮೂಲ, ಅದರ ನಾಶ ಮತ್ತು ಅದನ್ನು ನಾಶಗೊಳಿಸುವ ವಿಧಾನಗಳ ಬಗ್ಗೆ ಜನರಿಗೆ ತಿಳಿಹೇಳಿದ. ಇವನ್ನೇ **ಚತುರಾರ್ಯ ಸತ್ಯ**ಗಳೆಂದು ಕರೆಯುತ್ತಾರೆ.[17] ಸತ್ಯಗಳಲ್ಲಿ ಆರ್ಯಸತ್ಯಗಳು ಶ್ರೇಷ್ಠ ಎಂದು ಬುದ್ಧನು ಹೇಳುತ್ತಾನೆ. ಇದನ್ನು ಬುದ್ಧನು **ಚತುರೋಪಾದ** ಎಂದೂ ಕರೆಯುತ್ತಾನೆ. ಈ ಆರ್ಯಸತ್ಯಗಳು ಕೆಳಕಂಡಂತಿವೆ.

ಅ) ಜೀವನವು ದುಃಖಮಯ.

ಆ) ಈ ದುಃಖಕ್ಕೆ ಕಾರಣವೊಂದಿದೆ.

ಇ) ಈ ದುಃಖವನ್ನು ನಾಶಮಾಡಲು ಸಾಧ್ಯವುಂಟು.

ಈ) ಹಾಗೆ ನಾಶಗೊಳಿಸುವ ಒಂದು ಮಾರ್ಗವೂ ಉಂಟು.

ಹೀಗೆ ನಾಲ್ಕು ಆರ್ಯಸತ್ಯಗಳು ದುಃಖ, ದುಃಖ ಸಮುದಾಯ, ದುಃಖ ನಿರೋಧ ಮತ್ತು ದುಃಖ ನಿರೋಧ ಮಾರ್ಗವೆಂದು ಪ್ರಸಿದ್ಧ.

### ಅ) ಜೀವನ ದುಃಖಮಯ

ರೋಗ, ಮುಪ್ಪು ಮತ್ತು ಮರಣಗಳ ದೃಶ್ಯಗಳು ಸಿದ್ಧಾರ್ಥನ ಮನಸ್ಸನ್ನು ಕಲಕಿದವು. ಬುದ್ಧನು ಜೀವನದಲ್ಲಿ ತಾಂಡವವಾಡುತ್ತಿರುವ ಈ ನೋವಿಗೆ ಸಂವೇದನಾಶೀಲನಾಗಿದ್ದ. ಸೂಕ್ಷ್ಮ ಮನಸ್ಸುಳ್ಳವನಾಗಿದ್ದ ಆತನು ಮನುಷ್ಯನ ನೋವಿಗೆ ಕಾರಣ ವಿಷಯಾಸಕ್ತಿಯೆಂದು ಬಗೆದನು. ಭಾರತೀಯ ತತ್ತ್ವಶಾಸ್ತ್ರದ ಬಹುತೇಕ ದರ್ಶನಗಳು ಈ ವಿಷಯದಲ್ಲಿ ಬುದ್ಧನ

ಚಿಂತನೆಯನ್ನೇ ಹೋಲುತ್ತವೆ.[18] ಇವೆಲ್ಲ ದರ್ಶನಗಳ ಪ್ರಕಾರ – ಅದರಲ್ಲೂ ವಿಶೇಷವಾಗಿ ಸಾಂಖ್ಯದರ್ಶನದ ಪ್ರಕಾರ – ಜೀವನವು ದುಃಖಮಯ. ಆದರೆ ಚಾರ್ವಾಕರು ಮಾತ್ರ ಈ ದೃಷ್ಟಿಕೋನಕ್ಕೆ ಅಪವಾದ. ಅವರು ಬದುಕನ್ನು ಕುರಿತ ಬುದ್ಧನ ನಿರಾಕರಣೆಯನ್ನು ಸಮ್ಮತಿಸುವುದಿಲ್ಲ. ಅವರ ಪ್ರಕಾರ ಜೀವನದಲ್ಲಿ ದುಃಖವಲ್ಲದೇ ಸುಖವೂ ಇದೆ.[19] ಆದರೆ ಬುದ್ಧನ ಪ್ರಕಾರ ಯಾವುದನ್ನು ನಾವು ಸುಖವೆನ್ನುತ್ತೇವೋ ಅದೂ ಕೂಡ ದುಃಖದಲ್ಲಿ ಪರ್ಯಾವಸಾನವಾಗುತ್ತದೆ. ಕಾರಣ, ಅಂತಹ ಸುಖವು ನಶ್ವರವಾದುದು. ಆ ಸುಖವನ್ನು ಪಡೆಯಲು ಮನುಷ್ಯನು ಮಾಡುವ ಶ್ರಮದಲ್ಲಿ ನೋವಿದೆ. ಆ ಸುಖವು ನಾಶವಾದ ನಂತರ ಅವನಿಗೆ ಮತ್ತೆ ನೋವು ಕಾಡುತ್ತದೆ. ಆದ್ದರಿಂದ ಜೀವನವು ದುಃಖಮಯ.[20]

**ಆ) ಈ ದುಃಖಕ್ಕೆ ಕಾರಣವೊಂದಿದೆ**

ಭಾರತದ ಎಲ್ಲ ದಾರ್ಶನಿಕರೂ ದುಃಖದ ವಾಸ್ತವತೆಯನ್ನು ಒಪ್ಪಿಕೊಂಡಿದ್ದರೂ ಅದರ ಕಾರಣವನ್ನು ಗುರುತಿಸುವ ವಿಧಾನದಲ್ಲಿ ಅವರಲ್ಲಿ ಭಿನ್ನಾಭಿಪ್ರಾಯಗಳಿವೆ. ದುಃಖಮೂಲವನ್ನು ಬುದ್ಧನು ತನ್ನೊಂದು ವಿಶೇಷ ಪರಿಕಲ್ಪನೆಯ ಮೂಲಕ ಮಂಡಿಸುತ್ತಾನೆ. ಅದೇ **ಪ್ರತೀತ್ಯ ಸಮುತ್ಪಾದ.** ಈ ವಾದದ ಪ್ರಕಾರ ಪ್ರಪಂಚದಲ್ಲಿ ಯಾವ ಘಟನೆಯೂ ನಿರುಪಾಧಿಕವಲ್ಲ. ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿನ ಅಸ್ತಿತ್ವವು ಸೋಪಾಧಿಕವಾದದ್ದು. ಪ್ರತಿಯೊಂದು ಘಟನೆಯು ಕೆಲವು ಉಪಾಧಿಗಳನ್ನು ಅವಲಂಬಿಸಿದೆ. ಈ ಉಪಾಧಿಗಳಿಲ್ಲದೇ ವಸ್ತುವಿಲ್ಲ.[21] ಬುದ್ಧನು ಜೀವನದಲ್ಲಿ ತಾಂಡವವಾಡುತ್ತಿರುವ ದುಃಖವನ್ನು ಹನ್ನೆರಡು ಉಪಾಧಿಗಳಿಗೆ ಗುರುತಿಸುತ್ತಾನೆ.

ಜೀವನದ ನೋವು **ಜರಾಮರಣದ** (ಮುಪ್ಪು ಸಾವು) ರೂಪದಲ್ಲಿರುತ್ತದೆ. **ಜಾತಿ**ಯಿಂದಾಗಿ ಈ ನೋವಿದೆ. ಇಲ್ಲಿ ಜಾತಿಯೆಂದರೆ **ಹುಟ್ಟು** ಎಂದರ್ಥ. ಎಲ್ಲಿ ಹುಟ್ಟು

ಅಥವಾ ಜನನವಿರುತ್ತದೋ ಅಲ್ಲಿ ಮುಪ್ಪು ಮತ್ತು ಸಾವುಗಳಿರುತ್ತವೆ. ಈ ಜಾತಿಯೂ ಕೂಡ **ಭವ** ಎಂಬ ಉಪಾಧಿಯನ್ನು ಅವಲಂಬಿಸಿದೆ. ಮನುಷ್ಯನಲ್ಲಿ ಪ್ರತಿಕ್ಷಣವೂ ತಾನು ಶಾಶ್ವತವಾಗಿ ಇರಬೇಕೆಂಬ ತುಡಿತವಿರುತ್ತದೆ. ಈ ತುಡಿತವನ್ನೇ **ಭವ**ವೆಂದು ಕರೆಯುವುದು. ಈ ತುಡಿತವೇ ಮನುಷ್ಯನ ಜನ್ಮಕ್ಕೆ ಕಾರಣ. ಈ ತುಡಿತವಾದರೂ ಮನುಷ್ಯನಲ್ಲಿ ಏಕೆ ಉಂಟಾಗುತ್ತದೆಂದು ಬುದ್ಧನು ಪ್ರಶ್ನಿಸಿದ. ಆತನ ಪ್ರಕಾರ ಪ್ರಾಪಂಚಿಕ ವಿಷಯಗಳಲ್ಲಿನ ಆಸಕ್ತಿಯೇ ಈ ತುಡಿತಕ್ಕೆ ಕಾರಣ. ಈ ಆಸಕ್ತಿಯನ್ನು ಬುದ್ಧನು **ಉಪಾದಾನ**ವೆಂದು ಕರೆಯುತ್ತಾನೆ. ಈ ಉಪಾದಾನಕ್ಕೆ ಕಾರಣ **ತೃಷ್ಣೆ**. ತೃಷ್ಣೆಯೆಂದರೆ ಇಂದ್ರಿಯವಿಷಯಗಳು ಬೇಕೆಂಬ ತೀವ್ರ ಹಂಬಲ. ಪಾಳಿಯಲ್ಲಿ ಇದನ್ನು **ತನ್ಹಾ** ಎಂದು ಕರೆಯುತ್ತಾರೆ. ಈ ತೃಷ್ಣೆಯಾದರೋ ನಾವು ಈ ಮೊದಲು ಇಂದ್ರಿಯ ವಿಷಯಗಳನ್ನು ಅನುಭವಿಸದೇ ಅಥವಾ ಭೋಗಿಸದೇ ಉಂಟಾಗುತ್ತಿರಲಿಲ್ಲ. ಇಂದ್ರಿಯ ವಿಷಯಗಳ ಪೂರ್ವಾನುಭವವೇ ತೃಷ್ಣೆಗೆ ಕಾರಣ. ಈ ಅನುಭವವನ್ನು **ವೇದನಾ** ಎಂದು ಕರೆಯುತ್ತಾರೆ. ಇಂದ್ರಿಯಾನುಭವವು ಇಂದ್ರಿಯ ಮತ್ತು ಇಂದ್ರಿಯ ವಿಷಯಗಳ ಸಂಪರ್ಕ ಅಥವಾ **ಸ್ಪರ್ಶ**ವಿಲ್ಲದೇ ಸಾಧ್ಯವಿಲ್ಲ. ಈ ಸ್ಪರ್ಶವಾದರೋ ಆರು ಇಂದ್ರಿಯಗಳಿಲ್ಲದೇ ಸಾಧ್ಯವಿಲ್ಲ. ಇವುಗಳನ್ನು ಸಾಮೂಹಿಕವಾಗಿ **ಷಡಾಯತನ**ವೆಂದು ಕರೆಯುತ್ತಾರೆ. ಚಕ್ಷು, ಶ್ರೋತ್ರ, ಘ್ರಾಣ, ರಸನ, ತ್ವಕ್ ಮತ್ತು ಮನಸ್ – ಇವುಗಳನ್ನು ಒಟ್ಟಾಗಿ ಷಡಾಯತನವೆಂದು ಕರೆಯುತ್ತಾರೆ. ಈ ಷಡಾಯತನವು **ನಾಮರೂಪ**ಗಳನ್ನು ಅವಲಂಬಿಸಿದೆ. ಇಲ್ಲಿ ನಾಮವೆಂದರೆ ಮನಸ್ಸು ಮತ್ತು ರೂಪವೆಂದರೆ ಶರೀರ. ಇಡೀ ಮನೋದೈಹಿಕ ಸಂಕೀರ್ಣವೇ ನಾಮರೂಪ. ಈ ನಾಮರೂಪವು ತಾಯಿಯ ಗರ್ಭದಲ್ಲಿ ಬೆಳೆದು ಅಸ್ತಿತ್ವಕ್ಕೆ ಬರಬೇಕಾದರೆ ಅದು ಪ್ರಜ್ಞೆಯನ್ನು ಹೊಂದಿರಬೇಕು. ಈ ಪ್ರಜ್ಞೆಯಿಲ್ಲದೇ ನಾಮರೂಪ ಸಂಕೀರ್ಣವು ಬೆಳೆಯಲಾರದು. ಈ ಪ್ರಜ್ಞೆಯನ್ನೇ **ವಿಜ್ಞಾನ**ವೆಂದು ಕರೆಯುತ್ತಾರೆ. ಈ ವಿಜ್ಞಾನವಾದರೋ ತಾಯಿಯ ಗರ್ಭದಲ್ಲಿರುವ ಭ್ರೂಣವನ್ನು ಪ್ರವೇಶಿಸುವುದು ಮಗುವಿನ ಪೂರ್ವಜನ್ಮದ

**ಸಂಸ್ಕಾರ**ದಿಂದ. ಈ ಸಂಸ್ಕಾರವಿಲ್ಲದೇ ವಿಜ್ಞಾನವು ಸಾಧ್ಯವಿಲ್ಲ. ಮನುಷ್ಯನ ಪುನರ್ಜನ್ಮಕ್ಕೆ ಕಾರಣವಾದ ಈ ಸಂಸ್ಕಾರಗಳ ಮೂಲ ಸತ್ಯವನ್ನು ಕುರಿತ ನಮ್ಮ ಅಜ್ಞಾನ. ಇದನ್ನು **ಅವಿದ್ಯಾ** ಎಂದು ಕರೆಯುತ್ತಾರೆ. ಈ ಪ್ರಪಂಚದಲ್ಲಿ ನಾವು ಶಾಶ್ವತವೆಂಬ ತಪ್ಪು ತಿಳುವಳಿಕೆಯೇ ಅಜ್ಞಾನ. ಈ ಅವಿದ್ಯೆ ಅಥವಾ ಅಜ್ಞಾನವೇ ಉಳಿದೆಲ್ಲ ಉಪಾಧಿಗಳಿಗೂ ಮೂಲಭೂತ ಕಾರಣ.[22]

ಹೀಗೆ ಮನುಷ್ಯನ ದುಃಖಕ್ಕೆ ಹನ್ನೆರಡು ಕೊಂಡಿಗಳುಳ್ಳ ಕಾರಣವಿದೆ. ಇವುಗಳನ್ನು **ದ್ವಾದಶ ನಿದಾನ, ಭವಚಕ್ರ** ಎಂದೂ ಕರೆಯುತ್ತಾರೆ. ಇಂದಿಗೂ ಬೌದ್ಧರು ತಮ್ಮ ಪ್ರಾರ್ಥನೆಯ ಸಮಯದಲ್ಲಿ ಈ ಚಕ್ರವನ್ನು ತಿರುಗಿಸುವುದು ವಾಡಿಕೆ. ಈ ಕ್ರಿಯೆಯು ಅವರಲ್ಲಿ ದುಃಖಮೂಲದ ಜಾಗೃತಿಯನ್ನುಂಟು ಮಾಡುತ್ತದೆ.[23] ಹನ್ನೆರಡು ಕೊಂಡಿಗಳನ್ನು ಮತ್ತೊಮ್ಮೆ ಕೆಳಕಂಡಂತೆ ಸಂಕ್ಷಿಪ್ತವಾಗಿ ತಿಳಿಸಬಹುದು.

1. ಅವಿದ್ಯಾ
2. ಸಂಸ್ಕಾರ
3. ವಿಜ್ಞಾನ
4. ನಾಮರೂಪ
5. ಷಡಾಯತನ
6. ಸ್ಪರ್ಶ
7. ವೇದನಾ
8. ತೃಷ್ಣಾ
9. ಉಪಾದಾನ

10. ಭವ

11. ಜಾತಿ

12. ಜರಾಮರಣ

ಮೇಲಿನ ಸರಪಣಿಯಲ್ಲಿ ನಾವು ಗಮನಿಸಬೇಕಾದ ವಿಷಯವೆಂದರೆ ಜೀವನಕ್ಕೆ ಮೂಲಭೂತ ಕಾರಣ ಆಂತರಿಕ ಬಯಕೆಯೆಂಬುದು. ಈ ದೃಷ್ಟಿಕೋನವು ಬದುಕಿಗೆ ಮೂಲಭೂತ ಕಾರಣ ಭೌತಿಕ ಉಪಾಧಿಗಳು ಎಂಬ ಜೀವಶಾಸ್ತ್ರಜ್ಞನ ನಿಲುವಿಗಿಂತಲೂ ಭಿನ್ನವಾಗಿದೆ. ಜೀವಶಾಸ್ತ್ರಜ್ಞನ ಪ್ರಕಾರ ಜೀವದ ಉಗಮವು ಆಕಸ್ಮಿಕ. ಆದರೆ ಬುದ್ಧನು ಜೀವಶಾಸ್ತ್ರಜ್ಞನ ನಿಲುವಿಗಿಂತಲೂ ಭಿನ್ನವಾಗಿದ್ದಾನೆ. ಆತನ ಪ್ರಕಾರ ಬದುಕಿಗೆ ಕಾರಣ ಮನುಷ್ಯನು ತಾನು ಸದಾ ಇರಬೇಕೆಂಬ ಆಂತರಿಕ ತುಡಿತ (ಭವ). ಬದುಕೆಂಬುದು ಈ ತೀವ್ರ ತುಡಿತದ ಬಾಹ್ಯ ಅಭಿವ್ಯಕ್ತಿ. ಹೀಗೆ ಜೀವಶಾಸ್ತ್ರಜ್ಞನ ಪ್ರಕಾರ ಜೀವದ ಉಗಮಕ್ಕೆ ಭೌತಿಕ ಉಪಾಧಿಗಳು ಕಾರಣವಾದರೆ, ಬುದ್ಧನು ಜೀವದ ಉಗಮವನ್ನು ಬಯಕೆಯೆಂಬ ಮಾನಸಿಕ ಕಾರಣಕ್ಕೆ ಗುರುತಿಸುತ್ತಾನೆ. ಶಾಶ್ವತವಾಗಿದ್ದು ಸುಖಿಸಬೇಕೆಂಬ ತೀವ್ರವಾದ ಬಯಕೆಯೇ ಮನುಷ್ಯನನ್ನು ಜನನ–ಮರಣ ಚಕ್ರಕ್ಕೆ ದೂಡುವುದು.[24]

ಬುದ್ಧನ ಪ್ರಕಾರ ತನ್ನ ಸ್ವರೂಪವನ್ನು ಕುರಿತ ಅಜ್ಞಾನ ಅಥವಾ ಅವಿದ್ಯೆಯೇ ಮಾನವನ ದುಃಖಕ್ಕೆ ಮೂಲ ಕಾರಣ. ಉಪನಿಷತ್ತುಗಳು ದೇಹವ್ಯತಿರಿಕ್ತವಾದ ಮತ್ತು ಸ್ಥಿರವಾದ ಆತ್ಮವನ್ನು ಒಪ್ಪಿಕೊಂಡರೆ ಬುದ್ಧನು ಅಂತಹ ಆತ್ಮದ ಬಗ್ಗೆ ಮೌನ ತಳೆದ. ಆತ್ಮವನ್ನು ನಶ್ವರವಾಗಿಸುವುದು ಬುದ್ಧನ ಬೋಧನಾ ವೈಶಿಷ್ಟ್ಯ. ಆತನ ಪ್ರಕಾರ ಆತ್ಮವೆಂಬುದು ದೇಹಮನಸ್ಸುಗಳ ಒಂದು ಸಮೂಹ, ಸ್ಕಂಧ ಅಥವಾ ಸಂಘಾತ. ಮೇಲೆ ಈಗಾಗಲೇ ತಿಳಿಸಿರುವಂತೆ ಆತ್ಮನ ದೈಹಿಕ ಅಥವಾ ಭೌತಿಕ ಅಂಶಕ್ಕೆ **ರೂಪ**ವೆಂದೂ ಮತ್ತು ಮಾನಸಿಕ

ಅಂಶಕ್ಕೆ **ನಾಮ**ವೆಂದು ಹೆಸರು. ಉಪನಿಷತ್ತುಗಳಲ್ಲಿ ನಾಮವು ಹೆಸರನ್ನು ಸೂಚಿಸಿದರೆ ಇಲ್ಲಿ ಮನಸ್ಸು ಎಂಬ ಅರ್ಥವನ್ನು ಪಡೆದಿದೆ. ನಾಮವು ಪುನಃ ವೇದನಾ, ಸಂಜ್ಞಾ, ಸಂಸ್ಕಾರ ಮತ್ತು ವಿಜ್ಞಾನ ಎಂಬ ನಾಲ್ಕು ಅಂಶಗಳನ್ನು ಒಳಗೊಂಡಿದೆ. ಒಟ್ಟಾರೆ ಆತ್ಮವು ಐದು ಅಂಶಗಳ ಒಂದು ಸಂಘಾತ.[25] ರಥವು ವಿವಿಧ ಅವಯವಗಳ ಸಮುದಾಯವಾಗಿರುವಂತೆ ಆತ್ಮವೂ ಕೂಡ ಈ ಐದು ಅಂಶಗಳ ಒಂದು ಸಂಘಾತ. ಇವುಗಳಲ್ಲಿ ಯಾವುದೇ ಒಂದು ಅಂಶವು ಪೂರ್ಣಾತ್ಮವೆನಿಸಲು ಸಾಧ್ಯವಿಲ್ಲ. ಅಲ್ಲದೇ ಆತ್ಮದ ಪ್ರತಿಯೊಂದು ಅಂಶವೂ ಸತತ ವಿಕಾರಕ್ಕೆ ಒಳಗಾಗುತ್ತಿರುತ್ತದೆ. ವಾಸ್ತವವಾಗಿ ಆತ್ಮನ ಮಾನಸಿಕ ಅಂಶವೇ ಅದರ ಭೌತಿಕ ಅಂಶಕ್ಕಿಂತಲೂ ಹೆಚ್ಚು ಚಂಚಲ. ದೇಹವು ನೂರು ವರ್ಷವಾದರೂ ಸ್ಥಿರವಿರಬಹುದು. ಆದರೆ ಮನಸ್ಸು ಒಂದು ಕ್ಷಣವೂ ಸ್ಥಿರವಲ್ಲ. ಬುದ್ಧನು ಅದನ್ನು ಮರ್ಕಟಕ್ಕೆ ಹೋಲಿಸುತ್ತಾನೆ. ಸತತ ವಿಕಾರಿಗಳಾದ ಈ ಅಂಶಗಳ ಹಿನ್ನೆಲೆಯಲ್ಲಿದ್ದು ಅವುಗಳನ್ನು ಒಂದುಗೂಡಿಸಿ ನಿಯಂತ್ರಿಸುವ ಮತ್ತೊಂದು ಸ್ಥಿರವಾದ ಆತ್ಮವಿದೆಯೇ ಎಂಬ ಬಗ್ಗೆ ಬುದ್ಧನು ಮೌನ ತಳೆಯುತ್ತಾನೆ. ಆತನ ಪ್ರಕಾರ ಈ ಮಿಥ್ಯಾತ್ಮವೇ ಶಾಶ್ವತವೆಂಬ ತಪ್ಪುಕಲ್ಪನೆಯೇ ಅವಿದ್ಯೆ. ನಮ್ಮ ದುಃಖಕ್ಕೆ ಸುಳ್ಳೇ ನಿಜವೆಂಬ ಮತ್ತು ನಿಜವು ಇದೆಯೆಂಬ ಅಜ್ಞಾನವು ಕಾರಣ. ತಾನು ಸ್ಥಿರನೆಂಬ ಭಾವನೆಯು ಮನುಷ್ಯನನ್ನು ಇಂದ್ರಿಯಬಯಕೆಗಳಿಗೆ ಒಯ್ಯುತ್ತದೆ. ಅತೃಪ್ತ ಬಯಕೆಗಳು ಅಥವಾ ತೃಷ್ಣೆಯು ಅವನನ್ನು ಜನನ ಮರಣ ಚಕ್ರಕ್ಕೆ ದೂಡುತ್ತದೆ.

### ಇ) ಈ ದುಃಖವನ್ನು ನಾಶಮಾಡಲು ಸಾಧ್ಯವುಂಟು

ಬುದ್ಧನು ದುಃಖವು ಬದುಕಿನ ಆತ್ಯಂತಿಕ ಲಕ್ಷಣವೇನೂ ಅಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾನೆ. ಜೀವನವು ದುಃಖಮಯವೆನ್ನುವಾಗ ಬುದ್ಧನು ದುಃಖವು ಜೀವನದಿಂದ ಪೃಥಕ್ಕರಿಸಲಾಗದ ಲಕ್ಷಣವೆಂದು ಘೋಷಿಸುತ್ತಿಲ್ಲ. ಆತನ ಪ್ರಕಾರ ನಿರಾಶೆಯು ಜೀವನದ

ಅಂತಿಮ ಲಕ್ಷಣವಲ್ಲ. ಆತನೇನೂ ನಿರಾಶಾವಾದವನ್ನು ಬೋಧಿಸಲಿಲ್ಲ. ನಿರಾಶೆಯನ್ನು ಅಂತ್ಯಗೊಳಿಸುವ ಮಾರ್ಗವನ್ನು, ಬದುಕನ್ನು ಸುಖಮಯವಾಗಿಸಿಕೊಳ್ಳುವ ಬಗೆಯನ್ನು ಆತ ಸೂಚಿಸಿದ. ಆತನ ಪ್ರಕಾರ ಮನುಷ್ಯನು ಶಾಂತಿ ಅಥವಾ ನಿರ್ವಾಣವನ್ನು ಇಲ್ಲೇ ಈಗಲೇ ಪಡೆದುಕೊಳ್ಳಲು ಸಾಧ್ಯ. ಹೀಗೆ ಬುದ್ಧನು ಆರಂಭದಲ್ಲಿ ನಿರಾಶೆಯನ್ನು ಘೋಷಿಸಿದರೂ ಅಂತ್ಯದಲ್ಲಿ ಮನುಷ್ಯನಿಗೆ ಶಾಂತಿ ಭರವಸೆಗಳನ್ನು ನೀಡಿದ. ಆತನ ಪ್ರಕಾರ ಪ್ರತಿಯೊಂದು ವಸ್ತುವಿಗೂ ಆದಿ ಅಥವಾ ಕಾರಣವಷ್ಟೇ ಅಲ್ಲ, ಅಂತ್ಯವೂ ಇರಬೇಕು. ದುಃಖಕ್ಕೂ ಕಾರಣವಿರುವುದರಿಂದ, ಆ ಕಾರಣವು ನಾಶವಾಗುತ್ತಲೇ ದುಃಖಕ್ಕೆ ಅಂತ್ಯವಿರಲೇಬೇಕು.

### ಈ) ದುಃಖವನ್ನು ನಾಶಗೊಳಿಸುವ ಒಂದು ಮಾರ್ಗವುಂಟು

ಬುದ್ಧನು ದುಃಖವನ್ನು ಅಂತ್ಯಗೊಳಿಸುವ ವಿಧಾನವನ್ನು ಸೂಚಿಸುತ್ತಾನೆ. ಹಾಗೆ ದುಃಖನಾಶದ ಮಾರ್ಗವನ್ನು ಸೂಚಿಸುವಲ್ಲಿ ಆತನು ಪ್ರಾಯೋಗಿಕ ನೀತಿಯನ್ನು ತಳೆಯುತ್ತಾನೆ. ಆತನ ಈ ಪ್ರಾಯೋಗಿಕ ನೀತಿಯು ಎರಡು ವಿಷಯಗಳಲ್ಲಿ ಎದ್ದು ಕಾಣುತ್ತದೆ. ಒಂದು ದೇವರೇ ಮುಂತಾದ ಭೌತಾತೀತ ವಿಷಯಗಳ ಬಗ್ಗೆ ಆತನ ಮೌನ. ಈ ಮೌನದಿಂದ ಆತನು ಕೆಲವರ ದೃಷ್ಟಿಯಲ್ಲಿ ಅಜ್ಞೇಯತಾವಾದಿಯೂ (Agnositic), ಇನ್ನು ಕೆಲವರ ದೃಷ್ಟಿಯಲ್ಲಿ ಅಜ್ಞಾನಿಯೂ ಆದ. ಆದರೆ ಆತನಿಗೆ ತಾನು ಜನರಿಗೆ ಬೋಧಿಸಿದುದಕ್ಕಿಂತಲೂ ಹೆಚ್ಚು ತಿಳಿದಿತ್ತು. ಆದರೂ ಅದನ್ನು ಕುರಿತ ಆತನ ಮೌನವು ಉದ್ದೇಶ ಪೂರ್ವಕವಾಗಿತ್ತು. ಆತನು ದೇವರೇ ಮುಂತಾದ ವಿಷಯಗಳ ಬಗ್ಗೆ ಜನರಿಗೆ ಯಾವ ಮಾಹಿತಿಯನ್ನೂ ನೀಡಲಿಲ್ಲ. ಏಕೆಂದರೆ ಆತನ ಪ್ರಕಾರ ಬರಿಯ ಚರ್ಚೆಯಿಂದ ಸಮಸ್ಯೆಯು ಪರಿಹರಿಸುವುದಿಲ್ಲ. ಆತನಿಗೆ ಎಲ್ಲ ರೀತಿಯ ಸೈದ್ಧಾಂತಿಕ ಕುತೂಹಲಗಳೂ ಅಸಹನೀಯವಾಗಿತ್ತು. ಎರಡನೆಯದಾಗಿ ಮೋಕ್ಷಸಾಧನವನ್ನು ರೂಪಿಸುವಲ್ಲೂ ಕೂಡ

ಬುದ್ಧನು ಪ್ರಾಯೋಗಿಕತೆಯನ್ನು ತೋರಿದ. ಭೋಗ ಮತ್ತು ದೇಹದಂಡನೆಗಳೆಂಬ ಎರಡು ಅತಿರೇಕಗಳನ್ನು ದೂರವಿರಿಸಿ ಎಲ್ಲರಿಗೂ ಅನುಷ್ಠಾನಯೋಗ್ಯವಾದ ಮಧ್ಯಮ ಮಾರ್ಗ ಅಥವಾ ಆರ್ಯ ಅಷ್ಟಾಂಗಿಕ ಮಾರ್ಗವನ್ನು ಜನರ ಮುಂದಿಟ್ಟ. ಭೋಗ ಮತ್ತು ದೇಹ ದಂಡನೆಗಳೆಂಬ ಅತಿರೇಕಗಳು ಮನುಷ್ಯನ ದುಃಖವನ್ನು ಶಮನಗೊಳಿಸುವ ಬದಲು ಅದನ್ನು ಹೆಚ್ಚಿಸುತ್ತವೆ. ವೀಣೆಯ ತಂತಿಯು ತೀರ ಬಿಗಿಯಾಗಿದ್ದರೆ ಅದು ತುಂಡಾಗುತ್ತದೆ. ಅದು ಬಹಳ ಸಡಿಲವಾಗಿದ್ದರೂ ಅಪಸ್ವರ ಬರುತ್ತದೆ. ವೀಣೆಯು ಸುಸ್ವರವನ್ನು ಹೊಮ್ಮಿಸಬೇಕಿದ್ದಲ್ಲಿ ಅದರ ತಂತಿಗಳು ತೀರ ಬಿಗಿಯಾಗಿಯೂ ಇರಬಾರದು, ತೀರ ಸಡಿಲವೂ ಇರಬಾರದು.[26] ಬುದ್ಧನ ಈ ಪ್ರಾಯೋಗಿಕ ನೀತಿಯು ಆತನ ಧರ್ಮವನ್ನು ವಿಶ್ವಧರ್ಮವಾಗಿಸಿತು. ಇಡೀ ಬೌದ್ಧಧರ್ಮದ ನೀತಿಶಾಸ್ತ್ರವು ಆರ್ಯ ಅಷ್ಟಾಂಗಿಕ ಮಾರ್ಗದಲ್ಲಿ ಅಡಗಿದೆ. ಮಾರ್ಗಗಳಲ್ಲಿ ಅಷ್ಟಾಂಗಿಕ ಮಾರ್ಗವು ಶ್ರೇಷ್ಠ ಎಂದು ಬುದ್ಧನು ಸಾರುತ್ತಾನೆ. ಬುದ್ಧನು ಈ ಮಾರ್ಗದಲ್ಲಿ ಭಿಕ್ಷುಗಳು ಮತ್ತು ಸಾಧಾರಣ ಮನುಷ್ಯರಿಬ್ಬರೂ ಸಮವಾಗಿ ಪಾಲಿಸಬಹುದಾದ ನೈತಿಕ ನಿಯಮಗಳನ್ನು ನಮ್ಮ ಮುಂದೆ ಇಟ್ಟನು. ಈ ನಿಯಮಗಳನ್ನು ಕೆಳಕಂಡಂತೆ ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು.

### 1. ಸಮ್ಯಕ್ ದೃಷ್ಟಿ

ಅಜ್ಞಾನದಿಂದಾಗಿ ಮನುಷ್ಯನಿಗೆ ಜಗತ್ತಿನ ಬಗ್ಗೆ ತಪ್ಪು ಕಲ್ಪನೆ ಇರುತ್ತದೆ. ಆದ್ದರಿಂದ ಅವನು ಮೊದಲ ಹಂತದಲ್ಲಿ ಜೀವನ ಮತ್ತು ಜಗತ್ತುಗಳ ಬಗ್ಗೆ ಸರಿಯಾದ ದೃಷ್ಟಿಕೋನವನ್ನು ಹೊಂದಬೇಕಾಗುತ್ತದೆ. ಈ ಸರಿಯಾದ ದೃಷ್ಟಿಕೋನವನ್ನೇ ಸಮ್ಯಕ್‌ದೃಷ್ಟಿ ಎಂದು ಕರೆಯುವುದು. ನಾಲ್ಕು ಆರ್ಯಸತ್ಯಗಳ ಸರಿಯಾದ ಜ್ಞಾನವನ್ನು ಹೊಂದುವುದೇ

ಸಮ್ಯಕ್‌ದೃಷ್ಟಿ. ಇಲ್ಲಿ ಜ್ಞಾನವೆಂಬುದು ಪುಸ್ತಕ ಅಥವಾ ಸೈದ್ಧಾಂತಿಕ ಜ್ಞಾನಕ್ಕಿಂತಲೂ ಹೆಚ್ಚಿನದು. ಅದೊಂದು ಖಚಿತ ಮನವರಿಕೆ (conviction).[27]

## 2. ಸಮ್ಯಕ್ ಸಂಕಲ್ಪ

ಸಮ್ಯಕ್ ದೃಷ್ಟಿಗೆ ಸಮ್ಯಕ್ ಸಂಕಲ್ಪದ ಹಿನ್ನೆಲೆಯಿರಬೇಕು. ಪ್ರಪಂಚದ ಆಸಕ್ತಿ, ಇತರರನ್ನು ಕುರಿತ ಕೆಟ್ಟ ಆಲೋಚನೆ ಮತ್ತು ಇತರ ಜಂತುಗಳನ್ನು ಕುರಿತ ಹಿಂಸೆ – ಇವುಗಳನ್ನು ತೊರೆಯುತ್ತೇನೆಂದು ಸಂಕಲ್ಪಿಸುವುದೇ ಸಮ್ಯಕ್ ಸಂಕಲ್ಪ.

## 3. ಸಮ್ಯಕ್ ವಾಕ್

ಇದು ನಮ್ಮ ಮಾತಿನ ಮೇಲಿನ ನಿಯಂತ್ರಣವನ್ನು ಒಳಗೊಂಡಿದೆ. ಸುಳ್ಳು ಹೇಳದಿರುವುದು, ಕಾಡು ಹರಟೆಯಲ್ಲಿ ತೊಡಗದಿರುವುದು, ಕೆಟ್ಟ ಮಾತುಗಳನ್ನು ಆಡದಿರುವುದು ಮತ್ತು ಇತರರನ್ನು ಹಳಿಯದಿರುವುದು – ಇವೇ ಸಮ್ಯಕ್ ವಾಕ್.

## 4. ಸಮ್ಯಕ್ ಕರ್ಮಾಂತ

ಮಾತಷ್ಟೇ ಸಾಲದು. ಮಾತು ಕಾರ್ಯರೂಪಕ್ಕೆ ಬರಬೇಕು. ಇದನ್ನೇ ಸಮ್ಯಕ್ ಕರ್ಮಾಂತವೆನ್ನುವುದು. ಇದು 5 ವ್ರತಗಳನ್ನು ಒಳಗೊಂಡಿದೆ. ಯಾವುವೆಂದರೆ ಕೊಲ್ಲದಿರುವುದು, ಸುಳ್ಳು ಹೇಳದಿರುವುದು, ಕಳ್ಳತನ ಮಾಡದಿರುವುದು, ಸ್ತ್ರೀ ಸಂಗ ಮಾಡದಿರುವುದು ಮತ್ತು ಮದ್ಯಪಾನ ಮಾಡದಿರುವುದು. ಇವುಗಳಿಗೆ **ಪಂಚಶೀಲ**ವೆಂದು ಹೆಸರು.[28]

**5. ಸಮ್ಯಕ್ ಆಜೀವ**

ನ್ಯಾಯ ಮಾರ್ಗದಿಂದ ಜೀವನ ನಿರ್ವಹಣೆ ಮಾಡುವುದು ಸಮ್ಯಕ್ ಆಜೀವ. ಬದುಕಲು ಮನುಷ್ಯನು ನಿಷಿದ್ಧ ಮಾರ್ಗವನ್ನು ತೊರೆಯಬೇಕು.

**6. ಸಮ್ಯಕ್ ವ್ಯಾಯಾಮ**

ಸಾಮಾನ್ಯವಾಗಿ ಮನುಷ್ಯನು ತನ್ನ ಆಧ್ಯಾತ್ಮಿಕ ಪ್ರಗತಿಯಲ್ಲಿ ಕೆಟ್ಟ ಆಲೋಚನೆಗಳಿಂದ ಗೊಂದಲಗೊಂಡಿರುತ್ತಾನೆ. ಈ ಕೆಟ್ಟ ಆಲೋಚನೆ ಎರಡು ರೀತಿಯವು.

1. ಈಗಾಗಲೇ ಅವನ ಮನಸ್ಸಿನಲ್ಲಿ ನೆಲೆಸಿರುವಂತಹವು
2. ಅವನ ಮನಸ್ಸಿಗೆ ಹೊಸದಾಗಿ ಪ್ರವೇಶಿಸುವಂತಹವು

ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಬೇಕಿದ್ದರೆ ವ್ಯಕ್ತಿಯು ತನ್ನ ಮನಸ್ಸಿನಲ್ಲಿ ಈಗಾಗಲೇ ನೆಲೆಸಿರುವಂತಹ ಆಲೋಚನೆಗಳನ್ನು ಸಮೂಲಾಗ್ರವಾಗಿ ನಾಶಗೊಳಿಸಬೇಕಲ್ಲದೆ, ಹೊಸದಾಗಿ ಬರುವ ಕೆಟ್ಟ ಆಲೋಚನೆಗಳನ್ನು ತಡೆಯಬೇಕಾಗುತ್ತದೆ. ಇದು ಸಾಧ್ಯವಾಗುವುದು ನಮ್ಮ ಮನಸ್ಸನ್ನು ಒಳ್ಳೆಯ ಆಲೋಚನೆಗಳಿಂದ ತುಂಬಿಸಿ ಅವು ಅಲ್ಲೇ ಸ್ಥಿರವಾಗಿ ನೆಲೆಸುವಂತೆ ಮಾಡಿದಾಗ ಮಾತ್ರ. ಇದನ್ನೇ ಬುದ್ಧನು ಸಮ್ಯಕ್ ವ್ಯಾಯಾಮ ಎಂದು ಕರೆಯುವುದು. ಹೀಗೆ ಸಮ್ಯಕ್ ವ್ಯಾಯಾಮಕ್ಕೆ ಎರಡು ಮುಖಗಳಿವೆ. ಅವುಗಳೆಂದರೆ,

1. ಮನಸ್ಸಿನಲ್ಲಿ ಈಗಾಗಲೇ ಇರುವ ಕೆಟ್ಟ ಆಲೋಚನೆಗಳನ್ನು ನಾಶ ಮಾಡಿ ಹೊಸ ಕೆಟ್ಟ ಆಲೋಚನೆಗಳನ್ನು ಬರದಿರುವಂತೆ ಮಾಡುವುದು.
2. ಮನಸ್ಸಿನಲ್ಲಿ ಒಳ್ಳೆಯ ಆಲೋಚನೆಗಳನ್ನು ತುಂಬಿಸಿ ಅವು ಅಲ್ಲೇ ಸ್ಥಿರವಾಗಿ ನೆಲೆಸುವಂತೆ ಮಾಡುವುದು.[29]

## 7. ಸಮ್ಯಕ್ ಸ್ಮೃತಿ

ಜಗತ್ತಿನ ವಸ್ತುಗಳ ಸ್ವರೂಪದ ಬಗ್ಗೆ ನಿರಂತರ ಅರಿವಿರುವುದೇ ಸಮ್ಯಕ್ ಸ್ಮೃತಿ. ಉದಾಹರಣೆಗೆ ನಮ್ಮೆಲ್ಲ ವರ್ತನೆಗಳೂ ನಮ್ಮ ಶರೀರವನ್ನು ಕುರಿತ ತಪ್ಪು ಕಲ್ಪನೆಯನ್ನು ಆಧರಿಸಿದೆ. ಈ ತಪ್ಪು ಕಲ್ಪನೆಗಳನ್ನು ಕೆಳಕಂಡಂತೆ ಸ್ಮರಿಸುವುದರ ಮೂಲಕ ನಿವಾರಿಸಿಕೊಳ್ಳಬಹುದು.

1. ಈ ಶರೀರವು ರಕ್ತ–ಮಾಂಸ–ಮೂಳೆಗಳೇ ಮುಂತಾದ ಅಸಹ್ಯಕರ ಅಂಶಗಳಿಂದ ಕೂಡಿದೆ.
2. ಅದು ಪಂಚಭೂತಗಳಿಂದ ಆದುದು.
3. ಅದು ನಾಶವಾಗುವಂತಹುದು.[30]

## 8. ಸಮ್ಯಕ್ ಸಮಾಧಿ

ಮೊದಲ ಏಳು ಹಂತಗಳು ಸಾಧಕನನ್ನು ಸಮ್ಯಕ್ ಸಮಾಧಿಗೆ ಒಯ್ಯುತ್ತದೆ. ಇಲ್ಲಿ ಅವನು ಯಾವುದೇ ಅಡಚಣೆಯಿಲ್ಲದೆ ಚಿತ್ತೈಗ್ರಾಕತೆಯನ್ನು ಸಾಧಿಸುತ್ತಾನೆ. ಇದರಿಂದ ಆತನಿಗೆ ಸಂಪೂರ್ಣ ಜ್ಞಾನವುಂಟಾಗುತ್ತದೆ. ಆತನ ಅವಿದ್ಯೆ ಮತ್ತು ತೃಷ್ಣೆಗಳು ಸಮೂಲಾಗ್ರವಾಗಿ ನಾಶವಾಗಿ ಆತನ ದುಃಖವು ಕೊನೆಗೊಳ್ಳುತ್ತದೆ. ಬೌದ್ಧ ಧರ್ಮದ ಪ್ರಕಾರ ಮನುಷ್ಯನು ಈ ಸ್ಥಿತಿಯನ್ನು ಇಲ್ಲೇ ಮತ್ತು ಈ ಜೀವನದಲ್ಲೇ ಪಡೆಯಬಹುದು. ಈ ಸ್ಥಿತಿಯನ್ನು ನಿರ್ವಾಣವೆಂದು ಕರೆಯುತ್ತಾರೆ.

ನಿರ್ವಾಣವನ್ನು ಪಡೆದವನಿಗೆ **ಅರ್ಹತ್** ಎಂದು ಕರೆಯುತ್ತಾರೆ. ಇದು ಯಾವ ಬಯಕೆಯೂ ಇಲ್ಲದಿರುವಂತಹ ಸ್ಥಿತಿ. ಮನುಷ್ಯನು ಈ ಸ್ಥಿತಿಯನ್ನು ಒಮ್ಮೆ ಪಡೆದನೆಂದರೆ ಆತನು ನಿಷ್ಕ್ರಿಯನಾಗಿರುವುದಿಲ್ಲ. ನಿರ್ವಾಣವನ್ನು ಪಡೆದಾತನು

ಸಮಾಜವಿಮುಖಿಯಾಗಿರುವುದಿಲ್ಲ. ಆತನು ಸಮಾಜದಲ್ಲೇ ಇದ್ದು ಬೋಧನೆಯಲ್ಲಿ ಮತ್ತು ಸಂಘಸ್ಥಾಪನೆಯಲ್ಲಿ ತೊಡಗಿರುತ್ತಾನೆ. ಬುದ್ಧನೇ ಇದಕ್ಕೆ ಒಂದು ಮಹೋನ್ನತ ಉದಾಹರಣೆಯಾಗಿದ್ದ. ತನ್ನ ಕಡೆಯ ಉಸಿರು ಇರುವವರೆಗೂ ಆತನು ಕ್ರಿಯಾಶೀಲ ಬದುಕನ್ನು ನಡೆಸಿದ. ಆದರೆ, ಆತನ ಕ್ರಿಯಾಶೀಲತೆಯ ಹಿನ್ನೆಲೆಯಲ್ಲಿ ಯಾವ ಫಲಾಪೇಕ್ಷೆಯೂ ಇರಲಿಲ್ಲ. ಲೋಕೋದ್ಧಾರವೇ ಆತನ ಉದ್ದೇಶವಾಗಿತ್ತು.[31]

ಸಾಮಾನ್ಯವಾಗಿ ನಿರ್ವಾಣವೆಂದರೆ, ನಂದಿ ಹೋಗುವುದೆಂದರ್ಥ.[32] ಈ ನಿಷೇಧಾತ್ಮಕ ಅರ್ಥವು ಕೆಲವು ವಿದ್ವಾಂಸರನ್ನು ತಪ್ಪು ಅಭಿಪ್ರಾಯಕ್ಕೆ ದೂಡಿದೆ. ಅವರು ನಿರ್ವಾಣ ಶಬ್ದವನ್ನು ಅಸ್ತಿತ್ವದ ನಾಶವೆಂದು ಅರ್ಥೈಸುತ್ತಾರೆ. ಎಂದರೆ ಅವರ ಪ್ರಕಾರ ನಿರ್ವಾಣದಲ್ಲಿ ಆಸೆ ಇಲ್ಲದಿರುವುದು ಅಷ್ಟೇ ಅಲ್ಲ. ಇಡೀ ಅಸ್ತಿತ್ವವೇ ಇರುವುದಿಲ್ಲವೆಂದರ್ಥ.[33] ಆದರೆ ಈ ಅಭಿಪ್ರಾಯವು ತಪ್ಪು. ನಿರ್ವಾಣದಲ್ಲಿ ಅಸ್ತಿತ್ವವೇ ಇರುವುದಿಲ್ಲವಾದರೆ ಯಾರಿಗೆ ನಿರ್ವಾಣ ಎಂಬ ಪ್ರಶ್ನೆ ಬರುತ್ತದೆ. ನಿರ್ವಾಣವನ್ನು ಪಡೆಯುವ ಒಂದು ವಸ್ತುವಿಲ್ಲದೆ ನಿರ್ವಾಣ ಪರಿಕಲ್ಪನೆಯು ಅರ್ಥಹೀನವಾಗುತ್ತದೆ. ಅಲ್ಲದೇ ಬುದ್ಧನು ತಾನು ಬದುಕಿರುವವರೆಗೂ ನಿರ್ವಾಣ ಹೊಂದಿದವನಲ್ಲವೆಂದು ಹೇಳಬೇಕಾಗಿ ಆತನ ಬೋಧನೆಗೆ ಯಾವ ಮೌಲ್ಯವೂ ಇಲ್ಲವೆಂದು ಸಾರಬೇಕಾಗುತ್ತದೆ. ಇದು ಸರಿಯಲ್ಲ.[34]

ಆದ್ದರಿಂದ ನಿರ್ವಾಣ ಶಬ್ದವನ್ನು ಇರುವಿಕೆಯ ಅಭಾವವೆಂದು ಅರ್ಥೈಸುವುದು ತಪ್ಪು. ಅದೊಂದು ಅಸ್ತಿತ್ವದ ಸ್ಥಿತಿ. ಆದರೆ ಅಲ್ಲಿ ರಾಗ–ದ್ವೇಷಗಳು ಮತ್ತು ಬಯಕೆಗಳು ಇರುವುದಿಲ್ಲ. ಈ ಸ್ಥಿತಿಯಲ್ಲಿ ಮನುಷ್ಯನು ಸುಖ–ದುಃಖ ದ್ವಂದ್ವಗಳನ್ನು ಮೀರಿರುತ್ತಾನೆ. ಪ್ರಸಿದ್ಧ ಬೌದ್ಧಗುರುವಾದ ನಾಗಸೇನನು ಮಿಲಿಂದನೆಂಬ ಗ್ರೀಕ್ ದೊರೆಗೆ ನಿರ್ವಾಣದ ಸ್ವರೂಪವನ್ನು ಹೀಗೆ ಬಣ್ಣಿಸುತ್ತಾನೆ, “ನಿರ್ವಾಣವು ಸಮುದ್ರದಂತೆ ಆಳವಾದುದು. ಪರ್ವತ

ಶಿಖರದಂತೆ ಎತ್ತರವಾದುದು ಮತ್ತು ಜೇನಿನಂತೆ ಮಧುರವಾದುದು. ಆದರೆ ಈ ಯಾವ ಉಪಮೆಗಳೂ ನಿರ್ವಾಣವನ್ನು ಕುರಿತ ಪರಿಕಲ್ಪನೆಯನ್ನು ಜನಸಾಮಾನ್ಯನಿಗೆ ಸ್ಪಷ್ಟವಾಗಿ ತಿಳಿಸಲಾರವು. ಎಷ್ಟೇ ತರ್ಕಿಸಿದರೂ ಮತ್ತು ಯಾವುದೇ ಉಪಮೆಗಳನ್ನು ಬಳಸಿದರೂ ನಿರ್ವಾಣದ ಸ್ವರೂಪವನ್ನು ಭಾಷೆಯಿಂದ ವಿವರಿಸಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಕುರುಡನಿಗೆ ಬಣ್ಣವೆಂದರೇನು ಎಂದು ವಿವರಿಸಿದಂತಾಗುತ್ತದೆ".[35] ಒಟ್ಟಾರೆ ನಿರ್ವಾಣವು ಒಂದು ಅನುಭವದ ಸ್ಥಿತಿ.

ಬುದ್ಧನ ಆರ್ಯಅಷ್ಟಾಂಗಿಕ ಮಾರ್ಗವನ್ನು ಪ್ರಜ್ಞಾ, ಶೀಲ ಮತ್ತು ಸಮಾಧಿ ಎಂಬ ಮೂರು ನಿಯಮಗಳಿಗೆ ಸಂಕ್ಷಿಪ್ತಗೊಳಿಸಬಹುದು. ಪ್ರಜ್ಞೆಯು ನಾಲ್ಕು ಆರ್ಯ ಸತ್ಯಗಳನ್ನು ಕುರಿತ ಖಚಿತವಾದ ಮನವರಿಕೆ. ಇದು ಬರಿಯ ಬೌದ್ಧಿಕ ಜ್ಞಾನಕ್ಕಿಂತಲೂ ಹೆಚ್ಚಾದುದು. ಶೀಲವೆಂದರೆ ಸರಿಯಾದ ನಡೆವಳಿಕೆ. ಇದು ಸತ್ಯ, ಸಂತೋಷ, ಅಹಿಂಸೆ–ಇವೇ ಮುಂತಾದ ನಿಯಮಗಳನ್ನು ಒಳಗೊಂಡಿದೆ. ಚತುರಾರ್ಯ ಸತ್ಯಗಳನ್ನು ಕುರಿತ ಧ್ಯಾನವೇ ಸಮಾಧಿ. ಸಮಾಧಿಯು ಮನುಷ್ಯನನ್ನು ನಿರ್ವಾಣಕ್ಕೆ ಎಂದರೆ ಯಾವುದೇ ಆಶೆಯಿಲ್ಲದಂತಹ ಸ್ಥಿತಿಗೆ ಒಯ್ಯುತ್ತದೆ. ಬುದ್ಧನ ಪ್ರಕಾರ ಈ ನಿರ್ವಾಣದ ಸಾಧನೆ ದೇವರು, ಗುರು ಅಥವಾ ಇನ್ನಾವುದೇ ಹೊರಗಿನ ಪ್ರಮಾಣವನ್ನು ಅವಲಂಬಿಸಿಲ್ಲ.[36] ಮಾನವನು ಅದನ್ನು ಸ್ವಂತ ಪ್ರಯತ್ನದಿಂದ ಮಾತ್ರ ಪಡೆಯಲು ಸಾಧ್ಯ. ಗುರುವು ಕೇವಲ ಮಾರ್ಗವನ್ನು ತೋರಿಸಬಲ್ಲನು. ಆದರೆ ವಿವೇಚನಾಪೂರ್ವಕವಾಗಿ ಆ ಮಾರ್ಗದಲ್ಲಿ ಸ್ವತಃ ನಡೆದು ಗುರಿಯನ್ನು ತಲುಪಬೇಕಾದವನು ಶಿಷ್ಯನು ಮಾತ್ರ. ಈ ಅರ್ಥದಲ್ಲಿ ಬುದ್ಧನು ತನ್ನ ಬೋಧನೆಯ ಮೌಢ್ಯ ಸ್ವೀಕಾರವನ್ನು ಒಪ್ಪಲಿಲ್ಲ. ಆದ್ದರಿಂದಲೇ ಆತನು "ನನ್ನ ಮಾತಿನ ಸತ್ಯಾಸತ್ಯತೆಗಳನ್ನು ಪರೀಕ್ಷಿಸಿ, ವಿವೇಚಿಸಿ ಅದರಂತೆ ನಡೆಯಿರಿ, ನನ್ನ ಮೇಲಿನ ಗೌರವದಿಂದ

ಅದನ್ನು ಸ್ವೀಕರಿಸಬೇಡಿ'' ಎಂದು ಹೇಳಿದುದು (**ಪರೀಕ್ಷ್ಯ ಭಿಕ್ಷವಃ ಮದ್ವಚಃ, ನ ತು ಗೌರವಾತ್**).[37]

## ಅರ್ವಾಚೀನ ಬೌದ್ಧಧರ್ಮ

ಮೂಲತಃ ಬುದ್ಧನ ಬೋಧನೆಗಳು ನೈತಿಕವಾಗಿದ್ದರೂ ಅವುಗಳಲ್ಲಿ ತಾತ್ತ್ವಿಕ ನಿಲುವುಗಳಿಗೆ ಕೊರತೆಯೇನೂ ಇಲ್ಲ. ಈ ನೈತಿಕ ಬೋಧನೆಗಳ ಹಿನ್ನೆಲೆಯಲ್ಲಿ ಮುಖ್ಯವಾದ ಕೆಳಕಂಡ ನಾಲ್ಕು ತಾತ್ತ್ವಿಕ ನಿಲುವುಗಳನ್ನು ನಾವು ಗುರುತಿಸಬಹುದು.

1. ಪ್ರತೀತ್ಯ ಸಮುತ್ಪಾದ
2. ಕರ್ಮ ಸಿದ್ಧಾಂತ
3. ಕ್ಷಣಿಕವಾದ
4. ನೈರಾತ್ಮ್ಯವಾದ

## ಪ್ರತೀತ್ಯ ಸಮುತ್ಪಾದ

ನಾವೀಗಾಗಲೇ ಪ್ರಸ್ತಾಪಿಸಿರುವಂತೆ ಪ್ರತೀತ್ಯ ಸಮುತ್ಪಾದದಲ್ಲಿ ಬೌದ್ಧಧರ್ಮದ ಕಾರ್ಯಕಾರಣವಾದವು ಅಡಗಿದೆ. ಬುದ್ಧನ ಪ್ರಕಾರ ಯಾವ ಘಟನೆಯೂ ನಿರುಪಾಧಿಕವಲ್ಲ, ನಿಷ್ಕಾರಣವಲ್ಲ. ಆದರೆ ಈ ಕಾರಣವು ಘಟನೆಗೆ ಬಾಹ್ಯವಾಗಿರದೇ ಘಟನೆಯೊಳಗೆ ಅಂತರ್ಗತವಾಗಿದೆ. ಯಾವುದೇ ಬಾಹ್ಯಶಕ್ತಿಯು ಪ್ರಪಂಚದಲ್ಲಿ ಜರುಗುವ ಘಟನೆಗಳನ್ನು ನಿಯಂತ್ರಿಸುವುದಿಲ್ಲ. ಜಗತ್ತಿನಲ್ಲಿ ಯಾವುದೇ ಘಟನೆಯು ಸಂಭವಿಸಿದರೂ ಅದರ ನಂತರ ಇನ್ನೊಂದು ಘಟನೆಯು ಸಂಭವಿಸುತ್ತದೆ. ಈ ಜಗತ್ತು ಕಾರಣಕಾರ್ಯ ಸರಪಣಿಯನ್ನು ಪ್ರತಿನಿಧಿಸುತ್ತದೆ. ಪ್ರತಿಯೊಂದು ಸಂಗತಿಯ ಅಸ್ತಿತ್ವವೂ ಸೋಪಾಧಿಕವಾಗಿದೆ ಎಂದರೆ ಒಂದು ಕಾರಣವನ್ನು ಅವಲಂಬಿಸಿದೆ. ಯಾವುದೂ ಆಕಸ್ಮಿಕವಾಗಿ ಸಂಭವಿಸುವುದಿಲ್ಲ.[38] ಈ

ವಿಷಯದಲ್ಲಿ ಬೌದ್ಧಧರ್ಮವು ಚಾರ್ವಾಕರು ಪ್ರತಿಪಾದಿಸುವ **ಯದೃಚ್ಛಾವಾದ**ಕ್ಕಿಂತಲೂ ಭಿನ್ನವಾಗಿದೆ. ಯದೃಚ್ಛಾವಾದದ ಪ್ರಕಾರ ಪ್ರಪಂಚದಲ್ಲಿ ಜರುಗುವ ಪ್ರತಿಯೊಂದು ಘಟನೆಯು ಆಕಸ್ಮಿಕವಾದುದು. ಅದು ಯಾವುದೇ ಕಾರ್ಯಕಾರಣ ವ್ಯವಸ್ಥೆಯನ್ನು ಅವಲಂಬಿಸಿಲ್ಲ. ಎರಡು ಘಟನೆಗಳ ಅನುಕ್ರಮವು ಮುಂದೆ ಬದಲಾಗುವ ಸಾಧ್ಯತೆಯುಂಟು. ಬುದ್ಧನಾದರೋ ಈ ವಾದವನ್ನು ಒಪ್ಪಿಕೊಳ್ಳುವುದಿಲ್ಲ. ಒಂದು ಘಟನೆಗೆ ಮತ್ತೊಂದು ಘಟನೆಯು ಕಾರಣವಿರುವುದಾದರೆ ಅದು ಯಾವಾಗಲೂ ಅದೇ ಕಾರಣವನ್ನು ಹೊಂದಿರಬೇಕು. ಈ ವಿಷಯದಲ್ಲಿ ಬುದ್ಧನೊಬ್ಬ ಮಹಾವಿಜ್ಞಾನಿಯಾಗಿ ಮೆರೆಯುತ್ತಾನೆ. ಅಲ್ಲದೇ ಬುದ್ಧನ ಪ್ರತೀತ್ಯ ಸಮುತ್ಪಾದವು ಎರಡು ಅತಿರೇಕ ನಿಲುವುಗಳಿಂದ ದೂರವಾಗಿದೆ. ಒಂದು, **ಶಾಶ್ವತವಾದ**. ಎಂದರೆ ಸತ್ಯವೊಂದು ನಿರುಪಾಧಿಕವಾಗಿ ಮತ್ತು ಸ್ವತಂತ್ರವಾಗಿ ಶಾಶ್ವತವಾಗಿ ಇದ್ದಿರಲೇಬೇಕು ಎಂಬ ವಾದ. ಮತ್ತೊಂದು **ಶೂನ್ಯವಾದ**. ಈ ವಾದದ ಪ್ರಕಾರ ಯಾವುದಾದರೂ ವಸ್ತುವೊಂದಿದ್ದರೆ ಅದನ್ನು ಶಾಶ್ವತವಾಗಿ ಇಲ್ಲವಾಗಿಸಬಹುದು. ಬುದ್ಧನು ಈ ಎರಡು ಅತಿರೇಕಗಳಿಂದಲೂ ದೂರವಾಗಿ ಮಧ್ಯಮ ನಿಲುವನ್ನು ತಳೆದನು.[39] ಆತನ ಪ್ರಕಾರ ನಮ್ಮ ಅನುಭವಕ್ಕೆ ಗೋಚರವಾದ ಪ್ರತಿಯೊಂದು ವಸ್ತುವು ಅಸ್ತಿತ್ವದಲ್ಲಿರುತ್ತದೆ. ಆದರೆ ಅದು ಶಾಶ್ವತವಾಗಿ, ನಿರುಪಾಧಿಕವಾಗಿ ಇರುವುದಿಲ್ಲ. ಅದು ತನ್ನ ಅಸ್ತಿತ್ವಕ್ಕೆ ಮತ್ತೊಂದನ್ನು ಅವಲಂಬಿಸಿರುತ್ತದೆ. ಆ ಮತ್ತೊಂದು ವಸ್ತುವು ತನ್ನ ಜಾಡನ್ನು ಬಿಡದೆ ನಾಶವಾಗುವುದಿಲ್ಲ.[40] ಹೀಗೆ ಬುದ್ಧನ ಪ್ರಕಾರ ಪ್ರತಿಯೊಂದು ವಸ್ತುವು ಇರುವುದೂ ಹೌದು ಮತ್ತು ಇಲ್ಲದಿರುವುದೂ ಹೌದು.

ಬುದ್ಧನು ತನ್ನ ಮೇಲಿನ ವಾದಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ನೀಡುವನೆಂದರೆ ಆತನು ಅದನ್ನು **ಧಮ್ಮ**ವೆಂದು ಕರೆಯುತ್ತಾನೆ. ಆತನು ಹೀಗೆ ಹೇಳುತ್ತಾನೆ, "ಆದಿ ಅಂತ್ಯಗಳನ್ನು ಕುರಿತ ಪ್ರಶ್ನೆಗಳನ್ನು ನಾವು ಬದಿಗಿರಿಸುವ. ನಾನು ನಿಮಗೆ ಈಗ ಧಮ್ಮವನ್ನು

ಬೋಧಿಸುತ್ತೇನೆ. ಅದು ಇದ್ದರೆ ಇದು ಬರುತ್ತದೆ. ಅದಿಲ್ಲದಿದ್ದರೆ ಇದು ಉಂಟಾಗುವುದಿಲ್ಲ. ಅದನ್ನು ನಾಶಪಡಿಸಿದರೆ ಇದೂ ನಾಶವಾಗುತ್ತದೆ".[41] ಬುದ್ಧನು ಮುಂದುವರೆಯುತ್ತಾ ಹೀಗೆ ಸಾರುತ್ತಾನೆ, "ಯಾರು ಪ್ರತೀತ್ಯ ಸಮುತ್ಪಾದವನ್ನು ಕಾಣುತ್ತಾರೋ ಅವರು ಧಮ್ಮವನ್ನೂ ಕಾಣುತ್ತಾರೆ ಮತ್ತು ಯಾರು ಧಮ್ಮವನ್ನು ನೋಡುತ್ತಾರೋ ಅವರು ಪ್ರತೀತ್ಯ ಸಮುತ್ಪಾದವನ್ನೂ ನೋಡುತ್ತಾರೆ".[42] ಪ್ರತೀತ್ಯ ಸಮುತ್ಪಾದವನ್ನು ಮಹಡಿಯ ಮೆಟ್ಟಿಲಿಗೆ ಹೋಲಿಸಲಾಗಿದೆ. ಇದನ್ನು ಏರುವುದರಿಂದ ಮನುಷ್ಯನು ಇಡೀ ಪ್ರಪಂಚವನ್ನು ಬುದ್ಧಚಕ್ಷುವಿನಿಂದ ನೋಡಬಹುದು.[43] ಈ ದೃಷ್ಟಿಯನ್ನು ಅರ್ಥಮಾಡಿಕೊಳ್ಳದಿರುವುದರಿಂದಲೇ ಮನುಷ್ಯನಿಗೆ ಎಲ್ಲ ದುಃಖಗಳೂ ಕಾಡುವುದು. ರಿಸ್ ಡೇವಿಡ್ಸ್ ಪ್ರಕಾರ ಅರ್ವಾಚೀನ ಬೌದ್ಧಧರ್ಮವು ಈ ಸಿದ್ಧಾಂತಕ್ಕೆ ಅಷ್ಟು ಪ್ರಾಶಸ್ತ್ಯವನ್ನು ನೀಡುವುದಿಲ್ಲ.[44] ಆದರೆ ಬುದ್ಧನೇ ಈ ಸಿದ್ಧಾಂತದ ಅಗಾಧತೆಯನ್ನು ಕುರಿತು ಒತ್ತಿ ನುಡಿಯುತ್ತಾನೆ.

## ಕರ್ಮಸಿದ್ಧಾಂತ

ಬುದ್ಧನ ನೈತಿಕ ಬೋಧನೆಗಳಲ್ಲಿ ಅಡಗಿರುವ ಮತ್ತೊಂದು ತಾತ್ತ್ವಿಕ ನಿಲುವೆಂದರೆ ಕರ್ಮಸಿದ್ಧಾಂತ. ಬುದ್ಧನ ಪ್ರಕಾರ ಮನುಷ್ಯನ ವರ್ತಮಾನ ಅಸ್ತಿತ್ವವು ಆತನ ಪೂರ್ವಜನ್ಮದ ಕರ್ಮದಿಂದ ಉಂಟಾದುದು. ಹಾಗೆಯೇ ಅವನ ಭವಿಷ್ಯದ ಅಸ್ತಿತ್ವವು ಆತನ ವರ್ತಮಾನದ ಕರ್ಮದಿಂದ ನಿರ್ಧಾರಿತವಾಗಿದೆ. ಹೀಗಾಗಿ ಅವನ ಭವಿಷ್ಯವು ಅವನ ಕೈಗಳಲ್ಲೇ ಇದೆ. ಅದನ್ನು ಇನ್ನಾರೂ ಬದಲಿಸಲು ಸಾಧ್ಯವಿಲ್ಲ.

## ಕ್ಷಣಿಕವಾದ

ಪ್ರತೀತ್ಯ ಸಮುತ್ಪಾದದಲ್ಲಿ ಅಡಕವಾಗಿರುವ ಮತ್ತೊಂದು ಮುಖ್ಯ ಸಿದ್ಧಾಂತವೆಂದರೆ ಕ್ಷಣಿಕವಾದ. ಈ ವಾದವು ಅರ್ವಾಚೀನ ಬೌದ್ಧಧರ್ಮದಲ್ಲಿ ಕ್ಷಣಭಂಗವಾದವಾಗಿ ಪರಿಣಮಿಸಿತು. ಈ ವಾದದ ಪ್ರಕಾರ ಜಗತ್ತಿನ ಎಲ್ಲ ವಸ್ತುಗಳೂ ನಶ್ವರ. ಬುದ್ಧನು ತನ್ನ ಸಂದೇಶಗಳಲ್ಲಿ ಪದೇ ಪದೇ ತಿಳಿಸುವುದೇನೆಂದರೆ ಎಲ್ಲ ವಸ್ತುಗಳೂ ಬದಲಾವಣೆ ಮತ್ತು ನಾಶಕ್ಕೆ ಒಳಗಾಗುತ್ತವೆ. ಪ್ರತಿಯೊಂದು ವಸ್ತುವೂ ಕೆಲವು ಉಪಾಧಿಗಳಿಂದ ಜನಿತವಾಗಿರುವುದರಿಂದ ಆ ಉಪಾಧಿಗಳು ನಾಶವಾದ ಮೇಲೆ ಅದೂ ನಾಶವಾಗಬೇಕು. ಆದಿ ಇರುವುದಕ್ಕೆಲ್ಲಾ ಅಂತ್ಯವಿರಲೇಬೇಕು. ಆದ್ದರಿಂದ ಬುದ್ಧನು ಮಹಾಪರಿನಿರ್ವಾಣ ಸೂತ್ರದಲ್ಲಿ ಹೀಗೆ ಹೇಳುತ್ತಾನೆ, "ಯಾವುದು ಇದೆಯೋ ಅದು ಕೆಲವು ಕಾರಣಗಳು ಮತ್ತು ಉಪಾಧಿಗಳಿಂದ ಉಂಟಾಗುತ್ತದೆ, ಆದ್ದರಿಂದ ಅದು ಅಶಾಶ್ವತವಾಗಿರುತ್ತದೆ".[45] "ಯಾವುದು ಶಾಶ್ವತವಾಗಿ ಇರುವಂತೆ ತೋರುತ್ತದೋ ಅದು ನಾಶವಾಗುತ್ತದೆ, ಯಾವುದು ಎತ್ತರದಲ್ಲಿರುತ್ತದೋ ಅದು ಕೆಳಗೆ ಬರಲೇಬೇಕು, ಎಲ್ಲಿ ಸಂಧಿ ಇರುತ್ತದೋ ಅಲ್ಲಿ ಬೇರ್ಪಡೆ ಇರಲೇಬೇಕು, ಎಲ್ಲಿ ಜನನವಿರುತ್ತದೋ ಅಲ್ಲಿ ಮರಣವಿರಲೇಬೇಕು".[46]

ಜಗತ್ತಿನ ನಶ್ವರತೆಯನ್ನು ಕುರಿತು ಅನೇಕ ಕವಿಗಳು ಮತ್ತು ತಾತ್ತ್ವಿಕರು ವಿವರಿಸಿದ್ದಾರಾದರೂ ಈ ದೃಷ್ಟಿಗೊಂದು ಹೊಸ ಆಯಾಮವನ್ನು ನೀಡಿದವನು ಭಗವಾನ್ ಬುದ್ಧ.[47] ಅನಂತರದ ಬೌದ್ಧ ಧರ್ಮೀಯರು ಈ ವಾದವನ್ನು ಕ್ಷಣಿಕವಾದವನ್ನಾಗಿ ಪರಿಷ್ಕರಿಸಿದರು. ಈ ವಾದದ ಪ್ರಕಾರ ಪ್ರತಿಯೊಂದು ವಸ್ತುವು ಸೋಪಾಧಿಕವಷ್ಟೇ ಅಲ್ಲ, ಅಶಾಶ್ವತವಷ್ಟೇ ಅಲ್ಲ, ಅದರ ಅಸ್ತಿತ್ವವು ಕೇವಲ ಒಂದು ಕ್ಷಣಕ್ಕೆ ಮಾತ್ರ ಸೀಮಿತವಾಗಿದೆ. ವಸ್ತುವು ಈ ಕ್ಷಣ ಅಸ್ತಿತ್ವದಲ್ಲಿರುತ್ತದೆ, ಮುಂದಿನ ಕ್ಷಣ ನಾಶವಾಗುತ್ತದೆ.

## ನೈರಾತ್ಮ್ಯವಾದ

ಪರಿಣಾಮದ ನಿಯಮವು ಸಾರ್ವತ್ರಿಕವಾದುದು. ಮನುಷ್ಯನಾಗಲೀ ಯಾವುದೇ ಜೀವ ಅಥವಾ ಅಜೀವ ವಸ್ತುವಾಗಲೀ ಈ ನಿಯಮಕ್ಕೆ ಅಪವಾದವಲ್ಲ. ಸಾಮಾನ್ಯವಾಗಿ ಮನುಷ್ಯನಲ್ಲಿ ಬದಲಾವಣೆ ಹೊಂದದ ಶಾಶ್ವತವಾದ ಆತ್ಮವೆಂಬ ವಸ್ತುವಿರುತ್ತದೆಂಬುದನ್ನು ನಂಬಲಾಗಿದೆ. ಶರೀರವು ಬದಲಾವಣೆ ಹೊಂದುತ್ತಿದ್ದರೂ, ಹುಟ್ಟು ಸಾವುಗಳನ್ನು ಅನುಭವಿಸುತ್ತಿದ್ದರೂ ಮತ್ತು ಒಂದು ಶರೀರದಿಂದ ಮತ್ತೊಂದು ಶರೀರಕ್ಕೆ ಸೇರುತ್ತಿದ್ದರೂ ಈ ಆತ್ಮವು ಯಾವುದೇ ಬದಲಾವಣೆಗೆ ಒಳಗಾಗುವುದಿಲ್ಲವೆಂಬುದು ವೈದಿಕ ಮತದ ಅಭಿಪ್ರಾಯ. ನಿರುಪಾಧಿಕ ಅಸ್ತಿತ್ವವಾದಕ್ಕೆ ಮತ್ತು ಪರಿಣಾಮವಾದಕ್ಕೆ ಅನುಗುಣವಾಗಿ ಬುದ್ಧನು ಅಂತಹ ಶಾಶ್ವತ ಆತ್ಮದ ಅಸ್ತಿತ್ವವನ್ನು ನಿರಾಕರಿಸಿದನು.[49] ಆದರೆ ಇಲ್ಲೊಂದು ಪ್ರಶ್ನೆ ಏಳುತ್ತದೆ. ವಿವಿಧ ಜನ್ಮಗಳಲ್ಲಿ ಮನುಷ್ಯನ ಏಕತೆಯನ್ನು ಅಥವಾ ಮನುಷ್ಯನ ವಿವಿಧ ಸ್ಥಿತಿಗಳಲ್ಲಿ ಅವನ ಸ್ಥಿರತೆಯನ್ನು ಹೇಗೆ ವಿವರಿಸುವುದು? ಎಂದರೆ ನಮ್ಮೆಲ್ಲ ಸ್ಥಿತಿಗಳಲ್ಲೂ ನಮಗೆ **ನಾವು ನಾವೇ** ಎಂಬ ಅರಿವಿರುತ್ತದೆ. ಈ ಸ್ಥಿರತೆಯ ಪ್ರಜ್ಞೆ ನಾವು ಶಾಶ್ವತವಲ್ಲದಿದ್ದರೆ ಹೇಗೆ ಸಾಧ್ಯವಾಗುತ್ತಿತ್ತು ಎಂಬುದು ಪ್ರಶ್ನೆ. ಬುದ್ಧನಾದರೋ ಇದಕ್ಕೆ ವಿಶಿಷ್ಟವಾದ ಉತ್ತರವನ್ನು ನೀಡುತ್ತಾನೆ. ಆತ್ಮದ ಶಾಶ್ವತತೆಯನ್ನು ನಿರಾಕರಿಸಿದರೂ ಬುದ್ಧನು ಪ್ರಜ್ಞೆಯ ನಿರಂತರತೆಯನ್ನು ನಿರಾಕರಿಸಲಿಲ್ಲ. ಆತನ ಪ್ರಕಾರ ಬದುಕೆಂಬುದು ಅಸ್ತಿತ್ವದ ಅವಿಚ್ಛಿನ್ನ ಸರಣಿಯನ್ನು ಪ್ರತಿನಿಧಿಸುತ್ತದೆ. ಈ ಸರಣಿಯಲ್ಲಿ ಪ್ರತಿಯೊಂದು ಅಸ್ತಿತ್ವವು ತನ್ನ ಹಿಂದಿನ ಅಸ್ತಿತ್ವವನ್ನು ಅವಲಂಬಿಸಿರುತ್ತದೆ ಮತ್ತು ಮುಂದಿನ ಅಸ್ತಿತ್ವಕ್ಕೆ ಜನ್ಮ ನೀಡುತ್ತದೆ. ಬದುಕಿನ ಈ ನಿರಂತರತೆಯು ಹೀಗೆ ಅಸ್ತಿತ್ವಗಳ ಕಾರ್ಯಕಾರಣ ಸಂಬಂಧವನ್ನು ಅವಲಂಬಿಸಿದೆ. ಈ ನಿರಂತರತೆಯನ್ನು ದೀಪದ ಉದಾಹರಣೆಯೊಂದಿಗೆ ವಿವರಿಸಲಾಗಿದೆ. ಕತ್ತಲೆಯಲ್ಲೂ ದೀಪವು ನಿರಂತರವಾಗಿ ಉರಿಯುತ್ತಿರುತ್ತದೆ. ಪ್ರತಿಕ್ಷಣದ ಕಿಡಿಯು ಕೆಲವು ಉಪಾಧಿಗಳನ್ನು ಅವಲಂಬಿಸಿದ್ದು

ಮತ್ತೊಂದು ಕ್ಷಣದ ಕಿಡಿಗಿಂತಲೂ ಭಿನ್ನವಾಗಿದೆ. ಆದರೂ ಈ ಕಿಡಿಗಳಲ್ಲಿ ನಿರಂತರತೆ ಎಂಬುದಿದೆ. ಕಿಡಿಗಳಲ್ಲಿ ಹೊತ್ತಿ ಆರುವಿಕೆ ಎಂಬುದು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಅದೇರೀತಿ ಪುನರ್ಜನ್ಮವೆಂಬುದು ಅದೇ ಆತ್ಮದ ಮತ್ತೊಂದು ಶರೀರದ ಹೊಂದುವಿಕೆಯಲ್ಲ. ಅದು ವರ್ತಮಾನದ ಬದುಕಿನಿಂದ ಉಂಟಾಗುವ ಮುಂದಿನ ಬದುಕಷ್ಟೆ. ವಿಲಿಯಂ ಜೇಮ್ಸ್‌ನ ಸಿದ್ಧಾಂತದಲ್ಲಿನಂತೆ ಆತ್ಮವೆಂಬುದು ಪ್ರಜ್ಞೆಯ ಒಂದು ಅವಿಚ್ಛಿನ್ನ ಸರಣಿಯಷ್ಟೆ.[50] ಪ್ರಜ್ಞೆಯ ವರ್ತಮಾನ ಸ್ಥಿತಿಯು ತನ್ನೆಲ್ಲ ಲಕ್ಷಣಗಳನ್ನೂ ತನ್ನ ಪೂರ್ವಸ್ಥಿತಿಯಿಂದ ಪಡೆದುಕೊಳ್ಳುವಂತೆ ಭೂತವು ವರ್ತಮಾನವಾಗಿ ವರ್ತಮಾನವು ಭವಿಷ್ಯವಾಗಿ ಮುಂದುವರೆಯುತ್ತದೆ. ಹೀಗಾಗಿ ಶಾಶ್ವತವಾದ ಆತ್ಮವಿಲ್ಲದೆ ಮನುಷ್ಯನಿಗೆ ನೆನಪಿನ ಶಕ್ತಿಯು ಸಾಧ್ಯವಾಗುತ್ತದೆ.[51] ಬುದ್ಧನ ಈ ವಾದವನ್ನು ನೈರಾತ್ಮ್ಯವಾದ, ಅನಾತ್ಮವಾದ, ಅನತ್ತಾವಾದ ಎಂದು ವಿವಿಧವಾಗಿ ಕರೆಯುತ್ತಾರೆ. ಈ ವಾದವು ಬುದ್ಧನ ಬೋಧನೆಗಳನ್ನು ಅರ್ಥಮಾಡಿಕೊಳ್ಳಲು ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಬುದ್ಧನು ಆತ್ಮನ ಶಾಶ್ವತತೆಯನ್ನು ಕುರಿತ ತಪ್ಪು ತಿಳುವಳಿಕೆಯನ್ನು ಬಿಡಬೇಕೆಂದು ತನ್ನ ಶಿಷ್ಯರಿಗೆ ಪದೇ ಪದೇ ಬೋಧಿಸುತ್ತಾನೆ. ದುಃಖಕ್ಕೆ ಕಾರಣ ನಾವು ಶಾಶ್ವತರೆಂಬ ತಪ್ಪು ಭಾವನೆ. ಯಾವುದನ್ನು ನಾವು ಆತ್ಮವೆಂದು ಕರೆಯುತ್ತೇವೋ ಅದರ ಸ್ವರೂಪವು ನಮಗೆ ಸರಿಯಾಗಿ ತಿಳಿದಿಲ್ಲ. ಆದರೂ ನಾವು ಅದನ್ನು ತಿಳಿದಿದ್ದೇವೆ ಎಂದು ಭಾವಿಸುತ್ತೇವೆ. ಇದು ಹೇಗಿದೆಯೆಂದರೆ ವ್ಯಕ್ತಿಯು ಎಂದಿಗೂ ನೋಡಲ್ಪಡದಿರುವ ಸುಂದರ ಸ್ತ್ರೀಯನ್ನು ಪ್ರೀತಿಸುವಂತೆ ಅಥವಾ ನಾವು ಈ ಮೊದಲು ಎಂದಿಗೂ ಕಾಣದಿರುವ ಅರಮನೆಗೆ ತಲುಪಲು ಮೆಟ್ಟಿಲುಗಳನ್ನು ಹತ್ತುವಂತೆ.[52] ಯಾರನ್ನು ನಾವು ಮನುಷ್ಯರೆಂದು ಕರೆಯುತ್ತೇವೋ ಅವರು ನಾಮರೂಪಗಳ ಸಂಘಾತವಷ್ಟೆ.

ಒಟ್ಟಾರೆ ಬೌದ್ಧಧರ್ಮದ ಪ್ರಕಾರ ಜೀವನದ ಅವಿಭಾಜ್ಯ ಅಂಗವಾಗಿರುವ ದುಃಖವನ್ನು ನಾವು ಸ್ಥಿರವೆಂಬ ಅಜ್ಞಾನವನ್ನು ತೊಡೆದು ಹಾಕುವ ಮೂಲಕ

ನಾಶಮಾಡಬಹುದು. ಬುದ್ಧನು ನಿರಾಶವಾದಿಯಾಗಿರಲಿಲ್ಲ. ಆತನೊಬ್ಬ ಮಹಾ ಆಶಾವಾದಿ. ಪ್ರತಿಯೊಬ್ಬನಿಗೂ ಶಾಂತಿ ಭರವಸೆಗಳನ್ನು ನೀಡಿದ ಮಹಾನ್ ವ್ಯಕ್ತಿ. ಈ ಶಾಂತತೆಯನ್ನು ಹೇಗೆ ಗಳಿಸಿಕೊಳ್ಳಬಹುದು ಎಂಬುದನ್ನು ತಿಳಿಸಲೆಂದೇ ಆತನು ಜನಸಾಮಾನ್ಯನಿಗೆ ಧಮ್ಮಪದವನ್ನು ನೀಡಿದುದು.

# ಅಡಿ ಟಿಪ್ಪಣಿಗಳು

1. Radhakrishnan, ***Indian Philosophy Volume 1***, George Allen and Unwin Ltd., London, 1958, ಪು.342
2. ಅದೇ ಪು.342
3. ಅದೇ ಪು.342
4. ಅದೇ ಪು.343
5. ಅದೇ ಪು.343
6. ಅದೇ ಪು.343
7. ಅದೇ ಪು.343
8. ಅದೇ ಪು.344 ನೋಡಿ ಅಡಿ ಟಿಪ್ಪಣಿ
9. ಅದೇ ಪು.344
10. ಅದೇ ಪು.345
11. ಅದೇ ಪು.345
12. ಅದೇ ಪು.345–346
13. ಅದೇ ಪು.346
14. Satischandra Chatterjee and Dhirendramohan Datta, ***An Introduction to Indian Philosophy***, Rupa Publications India Pvt. Ltd., New Delhi, 2012, ಪು.108–109
15. ಅದೇ ಪು.109
16. ಅದೇ ಪು.109
17. ಅದೇ ಪು.110
18. ಅದೇ ಪು.110
19. ಅದೇ ಪು.110–111
20. ಅದೇ ಪು.111
21. ಅದೇ ಪು.111
22. ಅದೇ ಪು.111–112
23. ಅದೇ ಪು.112–113
24. ಅದೇ ಪು.113–114
25. M.Hiriyanna, ***Outlines of Indian Phillosophy***, George Allen & Unwin India Private Ltd., Bombay, 1976, ಪು.149

26. ಅದೇ ಪು.151

27. Satischandra Chatterjee and Dhirendramohan Datta, ಪೂರ್ವೋಕ್ತ, ಪು.119

28. ಅದೇ ಪು.119

29. ಅದೇ ಪು.119–120

30. ಅದೇ ಪು.120

31. ಅದೇ ಪು.115–116

32. ಅದೇ ಪು.116

33. ಅದೇ ಪು.116

34. ಅದೇ ಪು.116–117; M.Hiriyanna, ***Outlines of Indian Phillosophy***, ಪೂರ್ವೋಕ್ತ, ಪು.152

35. ಅದೇ ಪು.118

36. M.Hiriyanna, ***Outlines of Indian Phillosophy***, ಪೂರ್ವೋಕ್ತ, ಪು.150

37. ಡಾ.ಎಚ್.ಎಲ್.ಚಂದ್ರಶೇಖರ, ***ದರ್ಶನಲೋಕ***, ನವಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು, 2010, ಪು.61ರಲ್ಲಿ ಉಲ್ಲೇಖಿತ

38. Satishchandra Chatterjee and Dhirendramohan Datta, ಪೂರ್ವೋಕ್ತ, ಪು.124

39. ಅದೇ ಪು.124

40. ಅದೇ ಪು.124

41. ಅದೇ ಪು.124

42. ಅದೇ ಪು.124–125

43. ಅದೇ ಪು.125

44. ಅದೇ ಪು.125

45. ಅದೇ ಪು.125

46. ಅದೇ ಪು.126

47. ಅದೇ ಪು.126

48. ಅದೇ ಪು.126

49. ಅದೇ ಪು.127

50. ಅದೇ ಪು.127–128

51. ಅದೇ ಪು.128

52. ಅದೇ ಪು.128

**********

# ಅಧ್ಯಾಯ–6

# ಧಮ್ಮಪದದ ನೈತಿಕ ಅಂಶಗಳು

# ಅಧ್ಯಾಯ–6

# ಧಮ್ಮಪದದ ನೈತಿಕ ಅಂಶಗಳು

ಧಮ್ಮಪದದ ನೈತಿಕ ಅಂಶಗಳನ್ನು ಕುರಿತು ಚರ್ಚಿಸುವ ಮುನ್ನ ಕೆಲವು ಸಾಮಾನ್ಯ ಅಂಶಗಳ ಬಗ್ಗೆ ಒಂದು ವಿವರಣೆಯನ್ನು ನೀಡುವುದು ಇಲ್ಲಿ ಅಗತ್ಯ.

ಭಾರತದಲ್ಲಿ ನೀತಿಶಾಸ್ತ್ರವು ಒಂದು ಆಧ್ಯಾತ್ಮಿಕ ಗುರಿಯಿಂದ – ಆ ಗುರಿಯ ಪರಿಕಲ್ಪನೆಯು ಭಾರತೀಯ ದರ್ಶನಗಳಲ್ಲಿ ಭಿನ್ನವಾಗಿದ್ದರೂ – ನಿರ್ಧಾರಿತವಾಗಿದೆ. ಬುದ್ಧನು ವೇದಾಂತದ ಅರ್ಥದಲ್ಲಿ ಆಧ್ಯಾತ್ಮವನ್ನು ಪ್ರತಿಪಾದಿಸದಿದ್ದರೂ ಆತನ ಪ್ರಕಾರ ಮನುಷ್ಯನು ತಲುಪಬೇಕಾದ ಆಧ್ಯಾತ್ಮಿಕ ಗುರಿಯೊಂದಿದೆ. ಅದೇ ನಿರ್ವಾಣ. ಈ ನಿರ್ವಾಣ ಪರಿಕಲ್ಪನೆಯೇ ಬೌದ್ಧಧರ್ಮವನ್ನು ಚಾರ್ವಾಕರಿಂದ ಪ್ರತ್ಯೇಕಿಸುವುದು. ಚಾರ್ವಾಕರ ಪ್ರಕಾರ ಮನುಷ್ಯನು ಹೊಂದಬೇಕಾದ ಯಾವ ಆಧ್ಯಾತ್ಮಿಕ ಗುರಿಯೂ ಇಲ್ಲ. ಬದುಕಿನಲ್ಲಿ ಅವನು ಸಾಧಿಸಬೇಕಾಗಿರುವ ಏಕೈಕ ಗುರಿಯೆಂದರೆ ಕಾಮತೃಪ್ತಿಯಷ್ಟೇ. ಅರ್ಥಕಾಮಗಳೇ ಚಾರ್ವಾಕರ ಪ್ರಕಾರ ಆತ್ಯಂತಿಕ ಮೌಲ್ಯಗಳು.[1] ಈ ವಿಷಯದಲ್ಲಿ ಬುದ್ಧನು 19ನೇ ಶತಮಾನದಲ್ಲಿ ಆಗಿಹೋದ ಕಾರ್ಲ್‌ಮಾರ್ಕ್ಸ್‌ಗಿಂತ ಶ್ರೇಷ್ಠನಾಗುತ್ತಾನೆ. ಕಾರ್ಲ್‌ಮಾರ್ಕ್ಸ್‌ನ ಪ್ರಕಾರ ಬದುಕಿನ ಆಗುಹೋಗುಗಳನ್ನು ನಿಯಂತ್ರಿಸುವುದು ಆರ್ಥಿಕತೆಯಷ್ಟೇ. ಆದರೆ ಮನುಷ್ಯನ ಬದುಕಿಗೆ ಆರ್ಥಿಕ ಅಗತ್ಯ ಮತ್ತು ಲೌಕಿಕ ಸುಖವೆನ್ನುವುದೇನೋ ಬೇಕು. ಆದರೆ ಅದೇ ಇಡೀ ಬದುಕಾಗಲಾರದು. ಈ ಸಂದರ್ಭದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹೀಗೆ ಉದ್ಗರಿಸುತ್ತಾರೆ, **"**ಮನುಕುಲಕ್ಕೆ ಬೇಕಿರುವುದು ಆರ್ಥಿಕ ಮೌಲ್ಯಗಳಷ್ಟೇ ಅಲ್ಲ, ಆಧ್ಯಾತ್ಮಿಕ ಮೌಲ್ಯಗಳೂ ಬೇಕು. ಸರ್ವಾಧಿಕಾರವು ಈ ವಿಷಯದಲ್ಲಿ ಆಧ್ಯಾತ್ಮಿಕ ಮೌಲ್ಯಗಳತ್ತ ಕಡಿಮೆ ಗಮನ ಹರಿಸಿದೆ ಅಥವಾ ಅದಕ್ಕೆ ಆಧ್ಯಾತ್ಮಿಕ ಮೌಲ್ಯಗಳ ಅಗತ್ಯವೇ ಇದ್ದಂತೆ ಇಲ್ಲ**"**.

ಕಾರ್ಲ್‌ಮಾರ್ಕ್ಸ್‌ನ ರಾಜಕೀಯ ಆರ್ಥಿಕತೆಯನ್ನು ಡಾ.ಅಂಬೇಡ್ಕರ್ **ಸೂಕರ ಆರ್ಥಿಕತೆ** ಎಂದು ಬಣ್ಣಿಸುತ್ತಾರೆ. ಅವರ ಪ್ರಕಾರ ಮನುಷ್ಯನಿಗೆ ಭೌತಿಕ ಸುಖಗಳೇನೋ ಬೇಕು. ಆದರೆ ಅವರ ದೃಷ್ಟಿಯಲ್ಲಿ ಕಮ್ಯುನಿಸಂ ತಪ್ಪೆಸಗಿದೆ. ಏಕೆಂದರೆ ಅದರ ಚಿಂತನೆಯ ಗುರಿ ಮನುಷ್ಯರನ್ನು **ಕೊಬ್ಬಿದ ಹಂದಿ**ಗಳನ್ನಾಗಿಸುವುದು. ಡಾ.ಅಂಬೇಡ್ಕರ್ ಪ್ರಕಾರ ಮನುಷ್ಯನು ಲೌಕಿಕವಾಗಿಯೂ ಬೆಳೆಯಬೇಕು, ಆಧ್ಯಾತ್ಮಿಕವಾಗಿಯೂ ಬೆಳೆಯಬೇಕು. ಈ ಆಧ್ಯಾತ್ಮಿಕ ಗುರಿಯ ಪ್ರಾಪ್ತಿಗೆ ನೈತಿಕ ಬದುಕು ಅಗತ್ಯವಾಗುತ್ತದೆ.[2] ಈ ಗುರಿಯನ್ನು ಇಲ್ಲೇ ಹೊಂದಬಹುದು ಎಂಬುದು ಧಮ್ಮಪದದ ಸಂದೇಶ.

ಧಮ್ಮಪದವು ಬಹುತೇಕ ಒತ್ತನ್ನು ನೀಡುವುದು ಸಾಮಾನ್ಯ ಮೌಲ್ಯಗಳಿಗೆ. ಇಲ್ಲಿ ವರ್ಣಾಶ್ರಮ ಧಮ್ಮಗಳ ಪ್ರಸ್ತಾಪವಿಲ್ಲ. ಎಲ್ಲರೂ ಪಾಲಿಸಬಹುದಾದ ಸಾಮಾನ್ಯ ಧರ್ಮಗಳಿಗೆ ಧಮ್ಮಪದವು ಮಹತ್ವವನ್ನು ನೀಡುತ್ತದೆ. ಈ ವಿಷಯದಲ್ಲಿ ಅದರ ಸಂದೇಶವು ಪ್ರಾಯೋಗಿಕವಾಗಿದೆ.

ಈ ಮೌಲ್ಯಗಳಿಗೆ ನಿರ್ವಾಣವೆಂಬ ಆಧ್ಯಾತ್ಮಿಕ ಗುರಿಯಿದ್ದರೂ ದೈವಪ್ರಾಪ್ತಿ ಎಂಬ ಗುರಿಯಿಲ್ಲ. ಧಮ್ಮಪದದಲ್ಲಿ ಸ್ವರ್ಗ, ನರಕ, ಕರ್ಮ, ಪುನರ್‌ಜನ್ಮಗಳ ಪ್ರಸ್ತಾಪವಿದ್ದರೂ ಎಲ್ಲೂ ಕೂಡ ವೇದಾಂತದ ಆತ್ಮಬ್ರಹ್ಮ ಸಾಕ್ಷಾತ್ಕಾರಗಳ ಬಗ್ಗೆ ಪ್ರಸ್ತಾಪವಿಲ್ಲ.[3] ಧಮ್ಮಪದದ ಸಂದೇಶವು **ದೈವಕೇಂದ್ರಿತ ಆಧ್ಯಾತ್ಮವಲ್ಲದ ಆಧ್ಯಾತ್ಮ**. ಮನುಷ್ಯನು ಪಾಲಿಸಬಹುದಾದ ನೈತಿಕ ಮೌಲ್ಯಗಳ ಬಗ್ಗೆಯಷ್ಟೇ ಇಲ್ಲಿ ಪ್ರಸ್ತಾಪವಿರುವುದು. ಈ ಮೌಲ್ಯಗಳು ಶ್ರಮಣ ಶ್ರಾವಕರಿಬ್ಬರಿಗೂ ಸಮನಾಗಿಯೇ ಅನ್ವಯಿಸುತ್ತವೆ. ಜೈನರು ಹೇಳುವಂತೆ ಶ್ರಮಣರಿಗೆ ತೀವ್ರ ಮತ್ತು ಶ್ರಾವಕರಿಗೆ ಕಡಿಮೆ ತೀವ್ರತೆಯ ಅನ್ವಯವು ಇಲ್ಲಿಲ್ಲ. ಒಂದೆರಡು ಕಡೆ ನೈತಿಕ ಪರಿಪೂರ್ಣತೆಯನ್ನೇ ಮೋಕ್ಷಸ್ಥಿತಿಗೆ ಸಮೀಕರಿಸುವುದನ್ನು ನಾವು ಕಾಣುತ್ತೇವೆ.

ಮತ್ತೊಂದು ಮುಖ್ಯ ಅಂಶವೆಂದರೆ ನಾವು ನೈತಿಕ ಮೌಲ್ಯಗಳನ್ನು ವ್ಯಕ್ತಿಕೇಂದ್ರಿತ ಮತ್ತು ಸಮಾಜಕೇಂದ್ರಿತ ಎಂದು 2 ರೀತಿ ವಿಂಗಡಿಸಬಹುದು. ವ್ಯಕ್ತಿಕೇಂದ್ರಿತ ಮೌಲ್ಯಗಳು ನಿಷೇಧಾತ್ಮಕ ರೂಪದಲ್ಲಿ ಇರುತ್ತದೆ. ಎಂದರೆ ಅವು ಮನುಷ್ಯನು ಏನು ಮಾಡಬಾರದು ಎಂದು ವಿಧಿಸುತ್ತವೆಯೇ ಹೊರತು ಏನೂ ಮಾಡಬೇಕೆಂದು ಹೇಳುವುದಿಲ್ಲ. ಇವುಗಳ ಉದ್ದೇಶ ವ್ಯಕ್ತಿಯನ್ನು ಮೊದಲು ಶುದ್ಧನನ್ನಾಗಿಸುವುದು, ಪೂರ್ಣನನ್ನಾಗಿಸುವುದು. ವ್ಯಕ್ತಿಯು ತಾನು ಶುದ್ಧನಾಗದೇ ಅಥವಾ ತಾನು ನಿರ್ವಾಣವನ್ನು ಹೊಂದದೇ ಸಮಾಜವನ್ನು ತಿದ್ದುವುದರಲ್ಲಿ ಅರ್ಥವಿಲ್ಲವೆಂಬ ಸಂದೇಶಗಳು ಧಮ್ಮಪದದಲ್ಲಿ ಪದೇ ಪದೇ ಕಾಣುತ್ತದೆ.[4] ಈ ದಿಸೆಯಲ್ಲಿ ವ್ಯಕ್ತಿಯ ಆತ್ಮವಿಶ್ಲೇಷಣೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಮಾಜಕೇಂದ್ರಿತ ಮೌಲ್ಯಗಳು ಭಾವಾತ್ಮಕ ರೂಪದಲ್ಲಿ ಇರುತ್ತವೆ. ಎಂದರೆ ಅವು ಸಮಾಜಕ್ಕೆ ಸಲ್ಲಿಸಬಹುದಾದ ಸೇವೆಯ ಬಗ್ಗೆ ವಿವರಿಸುತ್ತವೆ. ಆದರೆ ಈ 2 ರೀತಿಯ ಮೌಲ್ಯಗಳ ನಡುವೆ ಇರುವ ಭಿನ್ನತೆಗೆ ಅಷ್ಟು ಮಹತ್ವವನ್ನು ನೀಡಬಾರದು. ಏಕೆಂದರೆ ವ್ಯಕ್ತಿಕೇಂದ್ರಿತ ಮೌಲ್ಯಗಳಿಗೂ ಸಾಮಾಜಿಕ ಉದ್ದೇಶವಿರುತ್ತದೆ ಮತ್ತು ಸಮಾಜಕೇಂದ್ರಿತ ಮೌಲ್ಯಗಳಿಗೂ ವೈಯಕ್ತಿಕ ಉದ್ದೇಶಗಳಿರುತ್ತವೆ. ಎಂದರೆ ವ್ಯಕ್ತಿಕೇಂದ್ರಿತ ಮೌಲ್ಯಗಳನ್ನು ಪಾಲಿಸುವುದರಿಂದ ಮನುಷ್ಯನು ತಾನು ಪರಿಪೂರ್ಣನಾಗುವುದಲ್ಲದೇ ಸಮಾಜದ ಮೇಲೆ ಪರೋಕ್ಷವಾಗಿ ಪ್ರಭಾವವನ್ನು ಬೀರುತ್ತಲೇ ಇರುತ್ತಾನೆ, ಸಮಾಜದ ಸದಸ್ಯರೂ ಆ ಮೌಲ್ಯಗಳನ್ನು ಬೆಳೆಸಿಕೊಳ್ಳುವಂತೆ ಪ್ರಚೋದಿಸುತ್ತಿರುತ್ತಾನೆ. ಹಾಗೆಯೇ ಸಮಾಜಕೇಂದ್ರಿತವಾದ ಮೌಲ್ಯಗಳನ್ನು ಪಾಲಿಸುವುದರಿಂದ ಅವನು ತನ್ನೊಳಗಿನ ಸೀಮಿತಸ್ವಾರ್ಥ, ಅಹಂಕಾರ, ರಾಗದ್ವೇಷಗಳನ್ನು ಕಳೆದುಕೊಂಡು ವೈಯಕ್ತಿಕವಾಗಿ ಶುದ್ಧನಾಗುತ್ತಾನೆ.[5] ವ್ಯಕ್ತಿಕೇಂದ್ರಿತ ಮೌಲ್ಯಗಳಿಗೆ ಇರುವ ಸಾಮಾಜಿಕ ಉದ್ದೇಶವನ್ನು ಕೆಳಕಂಡಂತೆ ತೋರಿಸಬಹುದು.

ಅ) ಅಹಿಂಸೆಯು ಅದರಿಂದ ಪ್ರಯೋಜನ ಪಡೆಯುವ ಸಮಾಜದ ಇತರರ ಅಸ್ತಿತ್ವವಿಲ್ಲದೇ ಅರ್ಥಪೂರ್ಣವಾಗಲಾರದು. ಈ ನಿಷೇಧಾತ್ಮಕ ಮೌಲ್ಯಗಳು ಅವುಗಳಿಂದ ಪರೋಕ್ಷವಾಗಿ ಪ್ರಯೋಜನ ಪಡೆಯುವ ಇತರರ ಅಸ್ತಿತ್ವವನ್ನು ಒಳಗೊಂಡಿರುತ್ತದೆ.

ಆ) ನಿಷೇಧಾತ್ಮಕ ಮೌಲ್ಯಗಳ ಭಾವಾತ್ಮಕ ಲಕ್ಷಣವು ಅವು ಮನುಷ್ಯನ ಇಚ್ಛೆ ಅಥವಾ ಸಂಕಲ್ಪದಿಂದ ಹೊರಹೊಮ್ಮುವುದರಲ್ಲಿದೆ. ಎಂದರೆ ಇಲ್ಲಿ ಮನುಷ್ಯನು ಹೊರಗಿನಿಂದ ತಪ್ಪು ಮಾಡದಿರುವಷ್ಟೇ ಅಲ್ಲ, ಒಳಗಿನ ಭಾವಾತ್ಮಕ ಸಂಕಲ್ಪದಿಂದ ಅವನು ತಪ್ಪಿನಿಂದ ದೂರವಾಗಿರುತ್ತಾನೆ. ತ್ರಿಕರಣಗಳಲ್ಲೂ ಕೂಡ ಅವನು ಪಾಪವನ್ನು ಮಾಡಬಾರದೆಂಬ ಧಮ್ಮಪದದ ಹೇಳಿಕೆಯನ್ನು ಇದಕ್ಕೆ ದೃಷ್ಟಾಂತವಾಗಿ ನೀಡಬಹುದು.

ಇ) ಕೊನೆಯದಾಗಿ ಧಮ್ಮಪದದಲ್ಲಿ ದಯೆ ಮತ್ತು ದಾನವೆಂಬ ಮುಂತಾದ ಸಮಾಜ ಕೇಂದ್ರಿತ ಮೌಲ್ಯಗಳಿಗೆ ಕೊರತೆಯಿಲ್ಲ.

ಈ ಅಂಶಗಳ ಹಿನ್ನೆಲೆಯಲ್ಲಿ ಧಮ್ಮಪದವು ಪ್ರತಿಪಾದಿಸುವ ಕೆಲವು ನೈತಿಕ ಮೌಲ್ಯಗಳನ್ನು ಕೆಳಕಂಡಂತೆ ವಿವರಿಸಬಹುದು.

ಬುದ್ಧನು ಬದುಕನ್ನು ಸಾರ್ಥಕಗೊಳಿಸಿಕೊಳ್ಳುವ ವಿಧಾನವನ್ನು ನಮ್ಮ ಮುಂದೆ ಹೀಗಿಡುತ್ತಾನೆ. ಆತನ ಪ್ರಕಾರ ದುಶ್ಶೀಲನಾಗಿ, ಸಮಾಧಿಯಿಲ್ಲದವನಾಗಿ, ಪ್ರಜ್ಞೆಯಿಲ್ಲದವನಾಗಿ, ಆಲಸನಾಗಿ, ಹೀನವೀರ್ಯನಾಗಿ (ಪ್ರಯತ್ನರಹಿತನಾಗಿ), ಅಮೃತ ಪದವನ್ನು ಹಾಗೂ ಧಮ್ಮವನ್ನು ಕಾಣದೇ ನೂರು ವರ್ಷ ಬಾಳುವುದಕ್ಕಿಂತಲೂ ಶೀಲವಂತನಾಗಿ, ಧ್ಯಾನಮಾಡುವವನಾಗಿ, ಪ್ರಜ್ಞಾವಂತನಾಗಿ, ಆರಬ್ಧವೀರ್ಯನಾಗಿ ಅಮೃತಪದವನ್ನು ಹಾಗೂ ಧಮ್ಮವನ್ನು ಕಂಡು ಕೊಂಡವನ ಒಂದೇ ದಿನದ ಬಾಳು ಉತ್ತಮ.[6]

## ಇಚ್ಛಾ ಸ್ವಾತಂತ್ರ

ನೈತಿಕ ಬದುಕಿಗೆ ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯವಿರಬೇಕೆಂಬುದನ್ನು ನಾವು ಈಗಾಗಲೇ ತಿಳಿಸಿದ್ದೇವೆ. ನೈತಿಕ ಜೀವನವು ಅರ್ಥಪೂರ್ಣವಾಗುವುದು ಮನುಷ್ಯನಿಗೆ ಇಚ್ಛಾ ಸ್ವಾತಂತ್ರವಿದ್ದಾಗ ಮಾತ್ರ. ಎಂದರೆ ಸ್ವಇಚ್ಛೆಯಿಂದ ಹೊರಹೊಮ್ಮುವಂತಹ ನೈತಿಕತೆಯು ಮಾತ್ರ ಅರ್ಥಪೂರ್ಣವಾಗುವುದು. ಹೊರಗಿನ ಒತ್ತಡ,ಭಯ ಅಥವಾ ಅಧಿಕಾರದ ಹೇರಿಕೆಯಿಂದ ಜರುಗುವ ನೈತಿಕ ಬದುಕು ಯಾಂತ್ರಿಕತೆಯಾಗುತ್ತದೆಯೇ ಹೊರತು ನೈತಿಕತೆಯೆನಿಸುವುದಿಲ್ಲ. ಇದನ್ನೇ ಧಮ್ಮಪದವು ಸರಳವಾಗಿ ಈ ರೀತಿ ಹೇಳುತ್ತದೆ, "ಹೇಗೆ ಪುಷ್ಪರಾಶಿಯಿಂದ ಬಗೆಬಗೆಯ ಮಾಲೆಗಳನ್ನು ಮಾಡಬಹುದೋ ಹಾಗೆಯೇ ಮನುಷ್ಯನಾಗಿ ಹುಟ್ಟಿದ ಮೇಲೆ ಅವನು ಅನೇಕ ಪುಣ್ಯಕರ್ಮಗಳನ್ನು ಮಾಡಬಹುದು".

**ಯಥಾಪಿ ಪುಪ್ಫರಾಸಿಂಹಾ ಕಯಿರಾ ಮಲಾಗುಣೇ ಬಹೂ**

**ಏವಜ್ ಜಾತೇನ ಮಚ್ಚೇನ ಕತ್ತಬ್ಬಜ್ ಕುಸಲಜ್ ಬಹುಜ್**[7]

ಎಂದರೆ ಮನುಷ್ಯನಾಗಿ ಹುಟ್ಟುವುದೆಂದರೆ ಅವನಿಗೆ ವಿವೇಚನೆಯಿದೆ ಎಂದರ್ಥ. ವಿವೇಚನಾಪೂರ್ವಕವಾಗಿ ಅವನು ಒಳ್ಳೆಯ ಕೆಲಸಗಳನ್ನು ಸ್ವಇಚ್ಛೆಯಿಂದ ಮಾಡಬಲ್ಲನೆಂದರ್ಥ. ಏಕೆಂದರೆ ಮನುಷ್ಯನು ತನಗೆ ತಾನೇ ಒಡೆಯ, ಅವನಲ್ಲದೆ ಅವನಿಗೆ ಬೇರಾರೂ ಒಡೆಯರಾಗಲು ಸಾಧ್ಯವಿಲ್ಲ. ಅವನು ತನ್ನನ್ನು ದಮನ ಮಾಡಿಕೊಂಡರೆ ದುರ್ಲಭವಾದ ಪದವಿಯನ್ನು ಪಡೆದುಕೊಳ್ಳಬಹುದು.

**ಅತ್ತಾ ಹಿ ಅತ್ತನೋ ನಾಥೋ ಕೋ ಹಿ ನಾಥೋ ಪರೋ ಸಿಯಾ**

**ಅತ್ತನಾ ವಾ ಸುದಂತೇನ ನಾಥಜ್ ಲಭತಿ ದುಲ್ಲಭಜ್**[8]

ಇಚ್ಛಾ ಸ್ವಾತಂತ್ರವುಳ್ಳವನಾಗಿ ಅವನು ಒಳ್ಳೆಯದನ್ನೂ ಮಾಡಬಲ್ಲ, ಕೆಟ್ಟದನ್ನೂ ಮಾಡಬಲ್ಲ. ಈ ಎರಡಕ್ಕೂ ಅವನೇ ಹೊಣೆಗಾರ. ಅವನು ಮಾಡುವ ಪಾಪವು

ಅವನಿಂದಲೇ ಹುಟ್ಟಿದ್ದು ಮತ್ತು ಅವನಿಂದಲೇ ಬೆಳೆಯುತ್ತದೆ. ವಜ್ರವು ಕಲ್ಲಿನ ರತ್ನವನ್ನು ಹೇಗೆ ಕೊರೆಯುತ್ತದೆಯೋ ಹಾಗೆಯೇ ಅದು ಅವನನ್ನು ಕೊರೆಯುತ್ತದೆ. ಕೆಟ್ಟ ಕರ್ಮವನ್ನು ಮಾಡುವುದು ಬಹಳ ಸುಲಭ. ಆದರೆ ಒಳ್ಳೆಯದನ್ನು ಮಾಡುವುದು ಬಹಳ ಕಷ್ಟ.

**ಅತ್ತನಾ ವ ಕತಜ್ ಪಾಪಜ್ ಅತ್ತಜಜ್ ಅತ್ತಸಂಭವಜ್**

**ಅಭೀಮಂಥತಿ ದುಮ್ಮೇಧಜ್ ವಜಿರಜ್ ವಸಮಯಜ್ ಮಣಿಜ್**[9]

**ಸುಕರಾನಿ ಅಸಾಧೂನಿ ಅತ್ತನೋ ಅಹಿತಾನಿ ಚ**

**ಯಜ್ ವೇ ಹಿತಜ್ ಚ ಸಾಧೂಚ ತಜ್ ವೇ ಪರಮದುಕ್ಕರಜ್**[10]

ಒಟ್ಟಾರೆ ಪುಣ್ಯಪಾಪಗಳ ಹೊಣೆಗಾರಿಕೆ ಮನುಷ್ಯನದೇ. ಪಾಪವು ಅವನನ್ನು ಕ್ಲೇಶಗೊಳಿಸುತ್ತದೆ ಮತ್ತು ಪುಣ್ಯವು ಶುದ್ಧಿಗೊಳಿಸುತ್ತದೆ. ಶುದ್ಧಿ ಅಶುದ್ಧಿಗಳೆರಡು ಅವರವರಿಗೆ ಸೇರಿದ್ದೇ ಹೊರತು ಒಬ್ಬನು ಮತ್ತೊಬ್ಬನನ್ನು ಶುದ್ಧಿಗೊಳಿಸಲಾರ.

**ಅತ್ತನಾ ವ ಕತಜ್ ಪಾಪಜ್ ಅತ್ತನಾ ಸಂಕಿಲಿಸ್ಸತಿ**

**ಅತ್ತನಾ ಅಕತಜ್ ಪಾಪಜ್ ಅತ್ತನಾ ವ ವಿಸುಜ್ಝತಿ**

**ಸುದ್ಧಿ ಅಸುದ್ಧಿ ಪಚ್ಚತ್ತಜ್ ನಾಞ್ಞಜ್ ಅಞ್ಞೋ ವಿಸೋಧಯೇ**[11]

## ಆತ್ಮ ವಿಮರ್ಶೆ

ಬುದ್ಧನು ಆತ್ಮವಿಮರ್ಶೆಗೆ ಬಹಳ ಪ್ರಾಧಾನ್ಯವನ್ನು ನೀಡುತ್ತಾನೆ. ಇತರರ ದೋಷಗಳನ್ನು ಟೀಕಿಸುವ, ವಿಮರ್ಶಿಸುವ ಮೊದಲು ತನ್ನನ್ನು ವಿಮರ್ಶಿಸಿಕೊಳ್ಳಬೇಕು. ಆತನ ಪ್ರಕಾರ ಮತ್ತೊಬ್ಬರ ಕೃತ್ಯಗಳನ್ನು – ಅದೆಷ್ಟೇ ಕೆಟ್ಟದಿದ್ದರೂ – ನೋಡಲು ಹೋಗಬಾರದು. ತನ್ನ ಕೃತ್ಯಗಳನ್ನಷ್ಟೇ ನೋಡಿಕೊಳ್ಳಬೇಕು. ಎಂದರೆ ಪ್ರತಿಕ್ಷಣವೂ ತನ್ನ ಕೃತ್ಯಗಳ ಸರಿತಪ್ಪುಗಳನ್ನು ವಿಮರ್ಶಿಸಿಕೊಳ್ಳಬೇಕು ಮತ್ತು ತನ್ನ ಕರ್ತವ್ಯಗಳನ್ನು ಮಾತ್ರ ನೋಡಿಕೊಳ್ಳುತ್ತಿರಬೇಕು.

**ನ ಪರೇಸಙ್ ವಿಲೋಮಾನಿ ನ ಪರೇಸಜ್ ಕತಾಕತಜ್**

**ಅತ್ತನೋ ವಾ ಅವೇಕ್ಖೆಯ್ಯ ಕತಾನಿ ಅಕತಾನಿ ಚ**[12]

ನೀರು ಹಾಯಿಸುವವನು ನೀರನ್ನು ತನಗೆ ಬೇಕಾದ ಕಡೆಗೆ ಹಾಯಿಸುವಂತೆ ಬಾಣ ತಯಾರಕನು ಬಿದಿರನ್ನು ತನಗೆ ಬೇಕಾದಂತೆ ಬಗ್ಗಿಸುವಂತೆ ಮತ್ತು ಬಡಗಿಯು ಮರವನ್ನು ತನಗೆ ಬೇಕಾದಂತೆ ರೂಪಿಸುವಂತೆ ಪಂಡಿತನು ತನ್ನನ್ನು ತಾನೇ ತಿದ್ದಿಕೊಂಡು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು.

**ಉದಕಜ್ ಹಿ ನಯಂತಿ ನೇತ್ತಿಕಾ ಉಸುರಾಕಾ ನಮಯಂತಿ ತೇಜನಜ್**

**ದಾರುಜ್ ನಮಯಂತಿ ತಚ್ಛಕ ಅತ್ತಾನಜ್ ದಮಯಂತಿ ಪಂಡಿತಾ**[13]

**ಸೇಲೋ ಯಥಾ ಏಕಘನೋ ವಾತೇನ ನ ಸಮೀರತಿ**

**ಏವಜ್ ನಿಂದಾ – ಪಸಜ್‌ಪಾಸು ನ ಸಮಿಂಜಂತಿ ಪಂಡಿತಾ**[14]

**ಸೇಖೋ ಪಠವಿಜ್ ವಿಜೆಸ್ಸತಿ**

**ಯಮಲೋಕಜ್ ಚ ಇಮಜ್ ಸದೇವಕಜ್**

**ಸೇಖೋ ಧಮ್ಮಪದಜ್ ಸುದೇಸಿತಜ್**

**ಕುಸಲೋ ಪುಪ್ಫಜ್ ಇವ ಪಚೆಸ್ಸತಿ**[15]

ಜಾತಿಯ ಕುದುರೆಯು ಕೊರಡೆಯ ಪೆಟ್ಟನ್ನು ತಿಳಿದು ತಪ್ಪಿಸಿಕೊಳ್ಳುವಂತೆ ಒಬ್ಬನು ನಾಚಿಕೆಯಿಂದ ಕೆಟ್ಟ ಕೆಲಸವನ್ನು ತಡೆದುಕೊಂಡು ನಿಂದೆಯಿಂದ ದೂರಾಗಬೇಕು. ಬುದ್ಧನು ಇಂತಹ ಆತ್ಮವಿಮರ್ಶಕರ ವಿರಳತೆಯ ಬಗ್ಗೆ ಸ್ಪಷ್ಟಪಡಿಸುತ್ತಾನೆ.

**ಹಿರೀನಿಸೇಧೋ ಪುರಿಸೋ ಕೋಚಿ ಲೋಕಸ್ಮಜ್ ವಿಜ್ಜತಿ**

**ಯೋ ನಿಂದಜ್ ಅಪ್ಪಬೋಧತಿ ಅಸ್ಸೋ ಭದ್ರೋ ಕಸಂ ಇವ?**[16]

ಮತ್ತೊಬ್ಬರ ದೋಷವನ್ನು ಕಾಣುವುದು ಬಹಳ ಸುಲಭ. ಆದರೆ ತನ್ನ ತಪ್ಪನ್ನು ಕಂಡುಕೊಳ್ಳುವುದು ಬಹಳ ಕಷ್ಟ. ಮನುಷ್ಯನು ಪರರ ದೋಷಗಳನ್ನು ಹೊಟ್ಟಿನಂತೆ ಪ್ರತ್ಯೇಕಿಸಿ

(ವಂದರಿಯಾಡಿ) ಎದ್ದುಕಾಣಿಸುವನೇ ಹೊರತು ತನ್ನ ದೋಷಗಳನ್ನಲ್ಲ. ತನ್ನ ದೋಷಗಳನ್ನು ಮೋಸಗಾರನಾದ ಜೂಜುಗಾರನು ತನ್ನ ಮೋಸದ ದಾಳವನ್ನು ಹೇಗೋ ಹಾಗೆ ಬಚ್ಚಿಡುವನು.

**ಸುದಸ್ಸಙ್ ವಜ್ಜಙ್ ಅಞ್ಞೇಸಙ್ ಅತ್ತನೋ ಪನ ದುದ್ದಸಙ್**

**ಪರೇಸಙ್ ಹಿ ಸೋ ವಜ್ಜಾನಿ ಓಪುಣಾತಿ ಯಥಾ ಭುಸಙ್**

**ಅತ್ತನೋ ಪನ ಛಾದೇತಿ ಕಲಿಙ್ ವಾ ಕಿತವಾ ಸಠೋ**[17]

ಮತ್ತೊಬ್ಬರ ದೋಷವನ್ನೇ, ಹುಳುಕನ್ನೇ ಕಾಣುತ್ತಿರುವವನ ಆಸ್ರವಗಳು ಹೆಚ್ಚುವುವು (253). ಬುದ್ಧನು ತನ್ನನ್ನು ತಾನೇ ತಿದ್ದಿಕೊಳ್ಳಬೇಕಾದ ಅಗತ್ಯತೆಯ ಬಗ್ಗೆ ಪದೇ ಪದೇ ಒತ್ತಿ ನುಡಿಯುತ್ತಾನೆ. ಆತ್ಮವಿಮರ್ಶೆಗೆ ಏಕಾಂತತೆಯ ಅಗತ್ಯವನ್ನು ಸಾರಿ ಹೇಳುತ್ತಾನೆ. ಆತನ ಪ್ರಕಾರ ಮನುಷ್ಯನು ಒಂಟಿಯಾಗಿಯೇ ಕುಳಿತು ಮಲಗಿ ಸಂಚರಿಸುತ್ತಾ, ಆಲಸ್ಯರಹಿತನಾಗಿ ತನ್ನನ್ನು ತಾನೇ ತಿದ್ದಿಕೊಳ್ಳಬೇಕು.

**ಏಕಾಸನಙ್ ಏಕಸೆಯ್ಯಙ್ ಏಕೋ ಚರಂ ಅತಂದಿತೋ**

**ಏಕೋ ದಮಯಂ ಅತ್ತಾನಙ್ ವನಂತೇ ರಮಿತೋ ಸಿಯಾ**[18]

ಬುದ್ಧನು ಭಿಕ್ಷುವಿಗೆ ಹೀಗೆ ಬೋಧಿಸುತ್ತಾನೆ, "ಎಲೈ ಭಿಕ್ಷುವೇ ನಿನ್ನನು ನೀನು ಹುರಿದುಂಬಿಸಿಕೋ, ನಿನ್ನನ್ನು ಪರೀಕ್ಷಿಸಿಕೋ, ನಿನ್ನನ್ನು ಕಾಪಾಡಿಕೊಂಡು ಸ್ಮೃತಿಯುಳ್ಳವನಾಗಿದ್ದರೆ ನೀನು ಸುಖವಾಗಿರುವೆ".

**ಅತ್ತನಾ ಚೋದಯತ್ತಾನಙ್ ಪಟಿಮಾಸೇಥ ಅತ್ತನಾ**

**ಸೋ ಅತ್ತಗುತ್ತೋ ಸತಿಮಾ ಸುಖಙ್ ಭಿಕ್ಖು ವಿಹಾಹಿಸಿ**[19]

## ತ್ರಿಕರಣ

ಮನುಷ್ಯನು ತ್ರಿಕರಣಪೂರ್ವಕವಾಗಿ ಎಂದರೆ ನಡೆ ನುಡಿ ಮನಗಳಲ್ಲಿ ಶುದ್ಧನಾಗಿರಬೇಕು. ತೋರಿಕೆಯ ಒಳ್ಳೆಯತನ ಮತ್ತು ಆಂತರಿಕ ಕುಟಿಲತೆಯ ಬಗ್ಗೆ ಎಚ್ಚರವಹಿಸಬೇಕು. ಸುಭಾಷಿತವೊಂದು ಹೇಳುವಂತೆ ನಡೆ ನುಡಿ ಮನಗಳಲ್ಲಿ ಭಿನ್ನವಾಗಿರದೇ ಮನುಷ್ಯನು ಒಂದೇ ರೀತಿಯಿರಬೇಕು.[20] ಮಾತಿನಂತೆ ನಡೆಯಿಲ್ಲದವನ ಒಳ್ಳೆಯ ಮಾತು ನೋಡಲು ಅಂದವಾಗಿದ್ದು ವಾಸನೆಯಿಲ್ಲದ ಹೂವಿನಂತೆ ವ್ಯರ್ಥ.

**ಯಥಾ ಪಿ ರಚಿರಙ್ ಪುಪ್ಫಙ್ ವಣ್ಣವಂತಙ್ ಅಗಂಧಕಙ್**

**ಏವಙ್ ಸುಭಾಸಿತಾ ವಾಚಾ ಅಫಲಾ ಹೋತಿ ಅಕುಬ್ಬತೋ**[21]

ಬುದ್ಧನು ಮಾತಿನಲ್ಲಿ ಹರಟೆಯನ್ನು ಟೀಕಿಸುತ್ತಾನೆ. ಈ ಸಂದರ್ಭದಲ್ಲಿ ಹರಟೆಯನ್ನು ಕುರಿತಂತೆ ಪ್ರಸಿದ್ಧ ಅಸ್ತಿತ್ವವಾದಿಯಾದ ಹೈಡೆಗರ್ ದೃಷ್ಟಿಕೋನವನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯವಾಗುತ್ತದೆ. ಹೈಡೆಗರ್ ಪ್ರಕಾರ ಮನುಷ್ಯನು ಸಾವಿನ ನಿರೀಕ್ಷಣೆಯಲ್ಲಿ ಬದುಕಿದರೆ ಅದರ ಪರಿಣಾಮ ಅವನಿಗೆ ಭಯ ಉಂಟಾಗುತ್ತದೆ (Dread). ಇಲ್ಲಿ ಭಯವೆಂದರೆ ಸಾಮಾನ್ಯ ಅರ್ಥದಲ್ಲಿ ಭಯವಲ್ಲ. ಸಾಮಾನ್ಯ ಭಯವು ಹೊರಗಿನ ಕಾರಣಗಳಿಂದ ಉಂಟಾದುದು. ಈ ಕಾರಣವನ್ನು ನಾಶ ಮಾಡಿದರೆ ಸಾಮಾನ್ಯ ಭಯವು ನಾಶವಾಗುತ್ತದೆ. ಆದರೆ ಹೈಡೆಗರ್ ಭಯ ಕಲ್ಪನೆಯು ವಿಭಿನ್ನವಾದುದು, ಅದು ಆಂತರಿಕವಾದುದು. ಅದು ಎಲ್ಲಾ ವಸ್ತುಗಳನ್ನು ಕುರಿತ ಶೂನ್ಯಭಾವವಷ್ಟೆ, ಈ ಶೂನ್ಯಭಾವವೇ ಮಾನವ ಅಸ್ತಿತ್ವದ ನಿಷ್ಪ್ರಯೋಜಕತೆಯನ್ನು ಹೊರಹಾಕುವುದು. ಆದರೆ ಈ ಶೂನ್ಯಭಾವವು ಸಾಮಾನ್ಯ ಮಾನವನಿಗೆ ಸಹಿಸಲು ಅಸಾಧ್ಯವಾದುದು. ಆದ್ದರಿಂದ ಅವನು ಅದರಿಂದ ಹೊರಬರಲು ಮೂರು ವಿಧಾನಗಳನ್ನು ಅನುಸರಿಸುತ್ತಾನೆ. ಒಂದು, ಕಾಡು ಹರಟೆ. ಇಲ್ಲಿ ಅವನು ಕಾಲ ಕಳೆಯಲು ಉಪಯೋಗವಿಲ್ಲದ ಮಾತುಗಳಲ್ಲಿ ತೊಡಗುತ್ತಾನೆ. ಎರಡನೆಯದು, ಅನಗತ್ಯ ಕುತೂಹಲ.

ಇಲ್ಲಿ ಅವನು ಇತರರ ವ್ಯವಹಾರಗಳಲ್ಲಿ ಅನಗತ್ಯವಾಗಿ ಕುತೂಹಲ ತೋರಿಸುತ್ತಾನೆ. ತನ್ನ ವಿಕೃತ ಆನಂದಕ್ಕಾಗಿ ಅವರ ವೈಯಕ್ತಿಕ ವ್ಯವಹಾರಗಳಲ್ಲಿ ಮೂಗು ತೂರಿಸುತ್ತಾನೆ. ಮೂರನೆಯದು ಸಂದಿಗ್ಧತೆ. ಇಲ್ಲಿ ಅವನು ಜವಾಬ್ದಾರಿಯಿಲ್ಲದೇ ಸುಳ್ಳು ಸುದ್ದಿಗಳನ್ನು ಮತ್ತು ಅಸ್ಪಷ್ಟ ಹೇಳಿಕೆಗಳನ್ನು ಹರಡುವಲ್ಲಿ ಆನಂದ ಪಡೆಯುತ್ತಾನೆ. ಹೀಗೆ ಅವನು ತನ್ನೊಳಗಿನ ಆಂತರಿಕ ಬಿಕ್ಕಟ್ಟನ್ನು ತೊಡೆದು ಹಾಕಲು ಮೂರು ಪ್ರಕಾರವಾದ ಪಲಾಯನ ಮಾರ್ಗಗಳನ್ನು ಹಿಡಿಯುತ್ತಾನೆ. ಹೈಡೆಗರ್ ಭಾಷೆಯಲ್ಲಿ ಇದು **ಅನಧಿಕೃತ ಮಾನವ ಅಸ್ತಿತ್ವದ** ಕುರುಹು (Unauthentic Human Existence).[22] ಬುದ್ಧನು ಈ ವ್ಯರ್ಥ ಬದುಕಿನ ಬಗ್ಗೆ ಶತಶತಮಾನಗಳ ಮೊದಲೇ ಧಮ್ಮಪದದಲ್ಲಿ ವಿವರಿಸಿದ್ದಾನೆ. ಆತನ ಪ್ರಕಾರ ವ್ಯರ್ಥವಾದ ಸಾವಿರಾರು ಮಾತುಗಳ ರಾಶಿಗಿಂತಲೂ ಯಾವ ಒಂದೇ ಒಂದು ಅರ್ಥಪೂರ್ಣ ಮಾತನ್ನು ಕೇಳಿದರೆ ಮಾನವನಿಗೆ ಉಪಶಾಂತಿ ಉಂಟಾಗುವುದೋ. ಆ ಮಾತೇ ಶ್ರೇಷ್ಠ.

**ಸಹಸ್ಸಂ ಅಪಿ ಚೆ ವಾಚಾ ಅನತ್ಥ ಪದಸಂಹಿತಾ**

**ಏಕಜ್ ಅತ್ಥಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ**[23]

ಬುದ್ಧನ ಪ್ರಕಾರ ಇದು ಗಾಥೆಗಳ (ಶ್ಲೋಕಗಳ) ವಿಷಯಕ್ಕೂ ಅನ್ವಯವಾಗುತ್ತದೆ. ವ್ಯರ್ಥವಾದ ಪದಗಳಿಂದ ಕೂಡಿದ ಸಾವಿರಾರು ಗಾಥೆಗಳ ಗುಂಪಿಗಿಂತಲೂ ಯಾವ ಒಂದೇ ಒಂದು ಗಾಥೆ ಅಥವಾ ಪದವನ್ನು ಕೇಳಿದರೆ ಮನುಷ್ಯನಿಗೆ ಉಪಶಾಂತಿ ಉಂಟಾಗುವುದೋ ಆ ಒಂದು ಪದವೇ ಹೆಚ್ಚಿನದು. ಅದೇ ಧಮ್ಮಪದ.

**ಸಹಸ್ಸಂ ಅಪಿ ಚೆ ಗಾಥಾ ಅನತ್ಥ ಪದಸಂಹಿತಾ**

**ಏಕಜ್ ಗಾಥಾಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ**[24]

**ಯೋ ಚ ಗಾಥಾಸತಜ್ ಭಾಸೆ ಅನತ್ಥ ಪದಸಂಹಿತಾ**

**ಏಕಜ್ ಧಮ್ಮಪದಜ್ ಸೆಯ್ಯೋ ಯಜ್ ಸುತ್ವಾ ಉಪಸಮ್ಮತಿ**[25]

ಕೆಲವು ಸಲ ಬುದ್ಧನು ಮೌನಕ್ಕೆ ಆದ್ಯತೆ ನೀಡುತ್ತಾನೆ. ಒಡಕು ಕಂಚು ಯಾವ ಶಬ್ದವನ್ನೂ ಮಾಡದಿರುವಂತೆ ಮಾನವನು ನಿಶಬ್ದತೆಯನ್ನು ಕಾಪಾಡಿಕೊಳ್ಳಬಲ್ಲನಾದರೆ ಆತನಿಗೆ ನಿರ್ವಾಣವು ದೊರೆತಂತೆಯೇ ಸರಿ. ಅಂತಹವನಿಗೆ ಜಗಳವು ಇರುವುದಿಲ್ಲ.

**ಸಚೇ ನೇರೇಸಿ ಅತ್ತಾನಜ್ ಕಂಸೋ ಉಪಹತೋ ಯಥಾ**

**ಏಸ ಪತ್ತೋಸಿ ನಿಬ್ಬಾಣಜ್ ಸಾರಂಭೋ ತೆ ನ ವಿಜ್ಜತಿ**[26]

ಇತರರಿಗೆ ಬುದ್ಧಿವಾದ ಹೇಳುವ ವಿಷಯದಲ್ಲೂ ಮಾನವನು ಅರ್ಹತೆಯನ್ನು ಸಂಪಾದಿಸಿಕೊಳ್ಳಬೇಕು. ಮೊದಲು ಅವನು ತನ್ನನ್ನು ಸರಿಯಾದ ಮಾರ್ಗಕ್ಕೆ ಹಚ್ಚಿಕೊಂಡು ಅನಂತರ ಇತರರಿಗೆ ಬುದ್ಧಿವಾದ ಹೇಳಬೇಕು. ಉಪದೇಶಕ್ಕೆ ಅರ್ಹತೆ ಬರುವುದು ಮೊದಲು ಮಾನವನು ತಾನು ಆ ಉಪದೇಶದಂತೆ ನಡೆದಾಗ ಮಾತ್ರ. ಉಪದೇಶ ಮತ್ತು ಕಾರ್ಯಶೀಲತೆಯಲ್ಲಿ ಕಂದಕವಿರಬಾರದು.

**ಅತ್ತಾನಂ ಏವ ಪಠಮಜ್ ಪತಿರೂಪೇ ನಿವೇಸಯೇ**

**ಅಥಞ್ಞಂ ಅನುಸಾಸೆಯ್ಯ ನ ಕಿಲಿಸ್ಸೆಯ್ಯ ಪಂಡಿತೋ**[27]

ಮತ್ತೊಬ್ಬರಿಗೆ ಉಪದೇಶಿಸುವಂತೆ ತಾನೂ ಅದರಂತೆ ನಡೆಯುವುದಾದರೆ, ಮತ್ತೊಬ್ಬನು ದಾಂತನಾಗಿರಬೇಕೆಂದು ಉಪದೇಶಿಸುವಂತೆ ತಾನೂ ದಾಂತನಾಗಿದ್ದರೆ ಅದು ಸರಿ. ಆದರೆ ಲೋಕದಲ್ಲಿ ಹೀಗಿರುವುದೇ ಕಷ್ಟ.

**ಅತ್ತಾನಜ್ ಚೆ ತಥಾ ಕಯಿರಾ ಯತಞ್ಞಂ ಅನುಸಾಸತಿ**

**ಸುದಂತೋ ವತ ಧಮ್ಮೇಥ ಅತ್ತಾ ಹಿ ಕಿರಾ ದುದ್ದಮೋ**[28]

ವಾಸ್ತವವಾಗಿ ನಮ್ಮ ಕೃತಿಯು ಇತರರಿಗೆ ಮಾದರಿಯಾಗಿರಬೇಕು. ಈ ಸಂದರ್ಭದಲ್ಲಿ ಜನರ ವರ್ತನೆಯನ್ನು ಬುದ್ಧನು ಪರಿಶೀಲನೆಗೆ ಒಳಪಡಿಸುತ್ತಾನೆ. ಬುದ್ಧನು ಅತುಲನೆಂಬುವವನಿಗೆ ಹೀಗೆ ಹೇಳುತ್ತಾನೆ, “ಲೋಕದಲ್ಲಿ ಜನರು ಸುಮ್ಮನಿರುವವನನ್ನೂ

ನಿಂದಿಸುವರು, ಹೆಚ್ಚು ಮಾತನಾಡುವವನನ್ನೂ ನಿಂದಿಸುವರು ಮತ್ತು ಮಿತಭಾಷಿಯನ್ನೂ ನಿಂದಿಸುವರು. ಲೋಕದಲ್ಲಿ ನಿಂದನೆಗೆ ಒಳಗಾಗದ ವ್ಯಕ್ತಿಯೇ ಇಲ್ಲ".

**ಪೋರಣಂ ಏತಜ್ ಅತುಲಾ ನೇತಂ ಅಜ್ಜತನಂ ಇವಾ**

**ನಿಂದಂತಿ ತುಣ್ಹೀಮಾಸೀನಜ್ ನಿಂದಂತಿ ಬಹುಭಾಣಿನಜ್**

**ಮಿತಭಾಣಿನಂ ಪಿ ನಿಂದಂತಿ ನತ್ಥಿ ಲೋಕೇ ಅನಿಂದಿತೋ**[29]

ಪ್ರತಿಯೊಬ್ಬ ವ್ಯಕ್ತಿಯೂ ನಿಂದನೆಗೆ ಒಳಗಾಗುತ್ತಾನೆ. ಯಾವಾಗಲೂ ನಿಂದಿಸಲ್ಪಡುವ ಅಥವಾ ಹೊಗಳಲ್ಪಡುವ ಪುರುಷನು ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ ಮತ್ತು ಮುಂದೆಯೂ ಇರುವುದಿಲ್ಲ.

**ನ ಚಾಹು ನ ಚ ಭವಿಸ್ಸತಿ ನ ಚೇತರಹಿ ವಿಜ್ಜತಿ**

**ಏಕಂತಜ್ ನಿಂದಿತೋ ಪೋಸೋ ಏಕಂತಜ್ ವಾ ಪಸಜ್ಸಿತೋ**[30]

ಬುದ್ಧನು ನಿಂದನೆಗೆ ಈಡಾಗುವವರಿಗೆ ಈ ಮಾತು ಸಮಾಧಾನದಂತಿದೆ. ಆದರೆ ನಡೆ ನುಡಿ ಮನಗಳು ಪ್ರಕೋಪವಾಗದಂತೆ ನೋಡಿಕೊಳ್ಳಬೇಕು. ಅವುಗಳನ್ನು ಹಿಡಿತದಲ್ಲಿಟ್ಟುಕೊಂಡಿರಬೇಕು. ಕೆಟ್ಟ ನಡತೆಯಾಗಿ ಪರಣಿಮಿಸದೇ ಅವುಗಳನ್ನು ಒಳ್ಳೆಯ ನಡತೆಯಾಗಿ ಪರಿಣಮಿಸಬೇಕು.

**ಕಾಯಪ್ಪಕೋಪಜ್ ರಕ್ಖೆಯ್ಯ ಕಾಯೇನ ಸಂವುತೋ ಸಿಯಾ**

**ಕಾಯದುಚ್ಚರಿತಜ್ ಹಿತ್ವಾ ಕಾಯೇನ ಸುಚರಿತಜ್ ಚರೇ**

**ವಾಚೀಪಕೋಪಜ್ ರಕ್ಖೆಯ್ಯ ವಾಚಾಯ ಸಂವುತೋ ಸಿಯಾ**

**ವಾಚೀದುಚ್ಚರಿತಜ್ ಹಿತ್ವಾ ವಾಚಾಯ ಸುಚರಿತಜ್ ಚರೇ**

**ಮನೋಪಕೋಪಜ್ ರಕ್ಖೆಯ್ಯ ಮಾನಸಾ ಸಂವುತೋ ಸಿಯಾ**

**ಮನೋದುಚ್ಚರಿತಜ್ ಹಿತ್ವಾ ಮನಸಾ ಸುಚರಿತಜ್ ಚರೇ**

**ಕಾಯೇನ ಸಂವುಕಾ ಧೀರಾ ಅಥೋ ವಾಚಾಯ ಸಂವುತೋ**

**ಮನಸಾ ಸಂವುತಾ ಧೀರಾ ತೇ ವೇ ಸುಪರಿಸಂವುತಾ**[31]

ಪರನಿಂದನೆಯನ್ನು ಎದುರಿಸಲು ಅಗತ್ಯವಾದ ಸಹನೆಯ ಬಗ್ಗೆ ಬುದ್ಧನು ಸಾರುತ್ತಾನೆ. ಯುದ್ಧದಲ್ಲಿ ಬಿಟ್ಟ ಬಾಣವನ್ನು ಆನೆಯು ಸಹಿಸಿಕೊಳ್ಳುವಂತೆ ಮನುಷ್ಯನು ಕೆಟ್ಟ ಮಾತನ್ನು ಸಹಿಸಿಕೊಳ್ಳಬೇಕು. ಇದಕ್ಕೆ ಅಗಾಧ ಸಂಕಲ್ಪ ಶಕ್ತಿಯು ಅಗತ್ಯ. ಲೋಕದಲ್ಲಿ ನಿಂದಿಸುವರೇ ಹೆಚ್ಚಿರುವುದರಿಂದ ಮನುಷ್ಯನು ಸಹನೆ ಎಂಬ ಮೌಲ್ಯವನ್ನು ಬೆಳೆಸಿಕೊಳ್ಳಬೇಕು.

**ದಂತಜ್ ನಯಂತಿ ಸಮಿತಿಜ್ ದಂತಜ್ ರಾಜಾಭಿರೂಹತಿ**

**ದಂತೋ ಸಟ್ಠೋ ಮನುಸ್ಸೇಸು ಯೋತಿವಾಕ್ಯಜ್ ತಿತಿಕ್ಖತಿ**[32]

ಯಾರು ಕೆಟ್ಟ ಮಾತನ್ನು ಸಹಿಸಿಕೊಳ್ಳಬಲ್ಲರೋ ಅಂತಹ ದಾಂತನೇ ಮನುಷ್ಯರಲ್ಲಿ ಶ್ರೇಷ್ಠ.

ಮನುಷ್ಯನನ್ನು ಬಾಹ್ಯ ಆಡಂಬರವು ಶುದ್ಧಗೊಳಿಸಲಾರದು. ಬೆತ್ತಲೆ ಚಲಿಸುವುದರಿಂದ ಜಟೆಗಳನ್ನು ಬಿಡುವುದರಿಂದ, ಕೆಸರನ್ನು ಬಳಿದುಕೊಳ್ಳುವುದರಿಂದ, ಉಪವಾಸದಿಂದ, ಬರಿಯ ನೆಲದ ಮೇಲೆ ಮಲಗುವುದರಿಂದ, ಧೂಳನ್ನು ನೀರು ಬೆರೆಸಿ ಬಳಿದುಕೊಳ್ಳುವುದರಿಂದ ಮತ್ತು ಕುಕ್ಕರಗಾಲಲ್ಲಿ ಕೂರುವುದರಿಂದ ಮನುಷ್ಯನು ಶುದ್ಧನಾಗಲಾರ. ಬುದ್ಧನು ಈ ಸಂದರ್ಭದಲ್ಲಿ ಶ್ರಮಣ, ಭಿಕ್ಷು ಪರಿಕಲ್ಪನೆಯನ್ನು ಬ್ರಾಹ್ಮಣ ಪರಿಕಲ್ಪನೆಯೊಂದಿಗೆ ಸಮೀಕರಿಸುವುದು ಗಮನಾರ್ಹ. ಯಾರು ಕ್ಷಮೆಯೆಂಬ ಗುಣವನ್ನು ಬೆಳೆಸಿಕೊಂಡಿದ್ದಾನೋ, ಶಾಂತನೋ, ದಾಂತನೋ, ಬ್ರಹ್ಮಚಾರಿಯೋ ಮತ್ತು ಯಾವ ಪ್ರಾಣಿಯನ್ನೂ ಹಿಂಸಿಸುವುದಿಲ್ಲವೋ ಆತನೇ ಶ್ರಮಣ, ಭಿಕ್ಷು ಅಥವಾ ಬ್ರಾಹ್ಮಣ. ಮನುಷ್ಯನಿಗೆ

ಬ್ರಾಹ್ಮಣತ್ವವು ಹುಟ್ಟಿನಿಂದ ಬರುವುದಲ್ಲ ಎಂಬ ಬಗ್ಗೆ ಧಮ್ಮಪದದಲ್ಲಿ ಒಂದು ದೀರ್ಘ ಅಧ್ಯಾಯವೇ ಮುಡಿಪಾಗಿದೆ. ಇದನ್ನು ಮುಂದೆ ವಿವರಿಸಲಾಗುತ್ತದೆ.

**ನ ನಗ್ಗಚರಿಯಾ, ನ ಜಟಾ, ನ ಪಂಕ,**

**ನಾನಾಸಕಾ, ಥಂಡಿಲಸಾಯಿಕಾ ವಾ**

**ರಜೋ ಚ ಜಲ್ಲಜ್ ಉಕ್ಕುಟಿಕಪ್ಪಧನಜ್**

**ಸೋಧೆಂತಿ ಮಚ್ಚಜ್ ಅವಿತಿಣ್ಣಕಂಖಜ್[33]**

**ಅಲಂಕಟೋ ಚೆ ಪಿ ಸಮಜ್ ಚರೆಯ್ಯ**

**ಸಂತೋ ದಂತೋ ನಿಯತೋ ಬ್ರಹ್ಮಚಾರೀ**

**ಸಬ್ಬೇಸು ಭೂತೇಸು ನಿಧಾಯ ದಂಡಜ್**

**ಸೋ ಬ್ರಾಹ್ಮಣೋ, ಸೋ ಸಮಣೋ, ಸಾ ಭಿಕ್ಕು[34]**

ಬಾಹ್ಯಾಲಂಕಾರದಲ್ಲಿ ಒಬ್ಬನು ಸಾಧುವೆನಿಸುವುದಿಲ್ಲ. ಏಕೆಂದರೆ ಕುತ್ತಿಗೆಯವರೆಗೆ ಕಾಷಾಯವನ್ನು ಧರಿಸಿ ಪಾಪವನ್ನೇ ಮಾಡುವ ಅನೇಕ ಅಸಂಯಮಿಗಳುಂಟು ಎಂದು ಬುದ್ಧನು ಸಾರುತ್ತಾನೆ. ಅಂತಹವರು ನರಕಕ್ಕೆ ಹೋಗುವರೆಂದು ಬುದ್ಧನ ಅಭಿಪ್ರಾಯ.

**ಕಾಸಾವಕಂಥಾ ಬಹವೋ ಪಾಪಧಮ್ಮಾ ಅಸಞ್ಞತಾ**

**ಪಾಪಾ ಪಾಪೇಹಿ ಕಮ್ಮೇಹಿ ನಿರಯಜ್ ತೆ ಉಪಪಜ್ಜರೇ[35]**

## ಅಡಿ ಟಿಪ್ಪಣಿಗಳು

1. Satishchandra Chatterjee and Dhirendramohan Datta, ***An Introduction to Indian Philosophy***, Rupa Publications India Pvt. Ltd., New Delhi, 2012, ಪು.62
2. Dr.B.R.Ambedkar, ***Buddha and His Dhamma,*** Buddha Bhoomi Publication, Nagpur, 1997 ಪು. 461-462.
3. ಉದಾಹರಣೆಗೆ ನೋಡಿ ಗಾಥೆ 126
4. ಉದಾಹರಣೆಗೆ ನೋಡಿ ಗಾಥೆಗಳು 45, 50, 80
5. M.Hiriyanna, ***Indian Conception of Values***, Kavyalaya Publishers, Mysore, 1975, ಪು.193–194
6. ಗಾಥೆಗಳು 110–115
7. ಗಾಥೆ 53
8. ಗಾಥೆ 160
9. ಗಾಥೆ 161
10. ಗಾಥೆ 163
11. ಗಾಥೆ 165
12. ಗಾಥೆ 50
13. ಗಾಥೆ 50
14. ಗಾಥೆ 81
15. ಗಾಥೆ 45
16. ಗಾಥೆ 143
17. ಗಾಥೆ 252
18. ಗಾಥೆ 305
19. ಗಾಥೆ 379
20. **ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಂ ।**
    **ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ ॥**
    ಮಹಾತ್ಮರಿಗೆ ಮನಸ್ಸಿನಲ್ಲಿಯೂ ಒಂದೇ, ಮಾತಿನಲ್ಲಿಯೂ ಒಂದೇ, ಕಾರ್ಯದಲ್ಲಿಯೂ ಒಂದೇ. (ಮನಸ್ಸಿನಲ್ಲಿದ್ದುದನ್ನೇ ಹೇಳುತ್ತಾರೆ, ಹೇಳಿದ್ದನ್ನು ಮಾಡುತ್ತಾರೆ). ದುರಾತ್ಮರಿಗೆ ಮನಸ್ಸಿನಲ್ಲೊಂದು, ಮಾತಿನಲ್ಲೊಂದು, ಕಾರ್ಯದಲ್ಲಿ ಮತ್ತೊಂದು.
    ಸಂಪಾದಿತ, ***ಸುಭಾಷಿತ ಮಂಜರೀ***, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2005, ಪು.502

21. ಗಾಥೆ 51

22. Dr.G.Srinivasan, ***Recent Trends in Western Philosophy***, Bappco, Bangalore, 1981, ಪು.103

23. ಗಾಥೆ 100

24. ಗಾಥೆ 101

25. ಗಾಥೆ 102

26. ಗಾಥೆ 134

27. ಗಾಥೆ 158

28. ಗಾಥೆ 159

29. ಗಾಥೆ 227

30. ಗಾಥೆ 228

31. ಗಾಥೆಗಳು 231–234

32. ಗಾಥೆ 321

33. ಗಾಥೆ 141

34. ಗಾಥೆ 142

35. ಗಾಥೆ 307

**********

# ಅಧ್ಯಾಯ–7

# ನೈತಿಕ ಅಂಶಗಳು – ಅಹಿಂಸೆ ಮತ್ತು ಇತರ ಮೌಲ್ಯಗಳು

# ಅಧ್ಯಾಯ–7

## ನೈತಿಕ ಅಂಶಗಳು – ಅಹಿಂಸೆ ಮತ್ತು ಇತರ ಮೌಲ್ಯಗಳು

ಸಮ್ಯಕ್ ಕರ್ಮಾಂತದಲ್ಲಿ ಬುದ್ಧನು ಪಂಚಶೀಲಗಳನ್ನು ಪ್ರತಿಪಾದಿಸುವನೆಂಬುದನ್ನು ಈ ಹಿಂದೆ ವಿವರಿಸಲಾಗಿದೆ. ಈ ಪಂಚಶೀಲಗಳಲ್ಲಿ ಮೊದಲ ತತ್ತ್ವವೇ ಅಹಿಂಸೆ. ಬುದ್ಧನು ಹಿಂಸಾವಿರೋಧಿ ಎಂಬುದು ಎಲ್ಲರಿಗೂ ತಿಳಿದ ಅಂಶ. ಆತನ ಪ್ರಕಾರ ಪ್ರತಿಯೊಬ್ಬನಿಗೂ ಸಾವಿನ ಅಂಜಿಕೆಯಿದೆ. ಎಲ್ಲರಿಗೂ ಬದುಕಬೇಕೆಂಬ ಆಸೆಯಿರುತ್ತದೆ. ಶಿಕ್ಷೆಗೆ ಎಲ್ಲರೂ ಹೆದರುತ್ತಾರೆ. ತನ್ನಂತೆ ಇತರರು ಎಂಬುದನ್ನು ಅರಿತು ಯಾರೂ ಯಾರನ್ನೂ ಕೊಲ್ಲಬಾರದು, ಕೊಲ್ಲಿಸಲೂಬಾರದು. ಪರೋಕ್ಷ ಹಿಂಸೆ ಮತ್ತು ಪ್ರತ್ಯಕ್ಷ ಹಿಂಸೆಗಳೆರಡೂ ತಪ್ಪು. ಪ್ರತಿಯೊಂದು ಪ್ರಾಣಿಯೂ ಸುಖವನ್ನು ಅರಸುತ್ತಿರುತ್ತದೆ. ಯಾರು ತನ್ನ ಸುಖಕ್ಕೆ ಪ್ರಾಣಿಗಳನ್ನು ದಂಡಿಸಿ, ಹಿಂಸಿಸುತ್ತಾರೋ ಅವನಿಗೆ ಸತ್ತ ಬಳಿಕ ಸುಖವಿರದು ಎಂದು ಬುದ್ಧನು ಹೇಳುತ್ತಾನೆ. ಸತ್ತ ನಂತರ ಬದುಕು ಇರುವುದೆಂಬ ಪೂರ್ವಕಲ್ಪನೆ ಇಲ್ಲಿ ಸೂಚ್ಯವಾಗಿದೆ. ಹಾಗೆಯೇ ಮಾತಿನಿಂದಲೂ ಯಾರನ್ನೂ ನೋಯಿಸಬಾರದು. ಸಿಟ್ಟಿನ ಮಾತುಗಳು ಮತ್ತೊಬ್ಬನಿಗೆ ದುಃಖವನ್ನು ತರುತ್ತದೆ. ಆ ದುಃಖವು ಮಾರುನುಡಿಯಿಂದ ನಮಗೆ ತಗಲುವ ಸಾಧ್ಯತೆ ಇರುತ್ತದೆ. ಒಟ್ಟಾರೆ ಬುದ್ಧನ ಪ್ರಕಾರ ಅಹಿಂಸೆ ಎಂಬುದು ಕಾಯಾ, ವಾಚಾ ಮತ್ತು ಮನಸಾ ತ್ರಿಕರಣ ಪೂರ್ವಕವಾಗಿ ಇರಬೇಕು.

**ಸಬ್ಬೇ ತಸಂತಿ ದಂಡಸ್ಸ ಸಬ್ಬೇ ಭಾಯಂತಿ ಮಚ್ಚನೋ**

**ಅತ್ತಾನಙ್ ಉಪಮಙ್ ಕತ್ವಾ ನ ಹನೆಯ್ಯ ನ ಘಾತಯೇ**

**ಸಬ್ಬೇ ತಸಂತಿ ದಂಡಸ್ಸ ಸಬ್ಬೇಸಙ್ ಜೀವಿತಙ್ ಪಿಯಙ್**

**ಅತ್ತಾನಙ್ ಉಪಮಙ್ ಕತ್ವಾ ನ ಹನೆಯ್ಯ, ನ ಘಾತಯೇ**

**ಸುಖಕಾಮಾನಿ ಭೂತಾನಿ ಯೋ ದಂಡೇನ ವಿಹಿಂಸತಿ**

**ಅತ್ತನೋ ಸುಖಜ್ ಏಸಾನೋ ಪೆಚ್ಚ ಸೋ ನ ಲಭತೇ ಸುಖಜ್**

**ಸುಖಮಾನಿ ಭೂತಾನಿ ಯೋ ದಂಡೇನ ನ ಹಿಂಸತಿ**

**ಅತ್ತನೋ ಸುಖಜ್ ಏಸಾನೋ ಪೆಚ್ಚ ಸೋ ಲಭತೇ ಸುಖಜ್**

**ಮಾವೋಚ ಫರುಸಜ್ ಕಂಚಿ ವುತ್ತಾ ಪತಿವದೆಯ್ಯು ತಜ್**

**ದುಕ್ಖಾ ಹಿ ಸಾರಂಭಕಥಾ ಪತಿದಂಡಾ ಫುಸೆಯ್ಯು ತಜ್**[1]

ಬುದ್ಧನು ದೇಶವನ್ನಾಳುವ ದೊರೆಗೆ ಒಂದು ಕಿವಿಮಾತನ್ನು ಹೇಳುತ್ತಾನೆ. ಆತನ ಪ್ರಕಾರ ಯಾರು ದಂಡನೆಗೆ ಅರ್ಹರಲ್ಲದವರನ್ನು ಮತ್ತು ನಿರ್ದೋಷಿಗಳನ್ನು ದಂಡಿಸುತ್ತಾನೋ ಅವನಿಗೆ ಅಧಿಕವಾದ ನೋವು, ಹಾನಿ, ಶರೀರಕ್ಕೆ ಪೆಟ್ಟು, ಕೆಟ್ಟ ಬೇನೆ, ಹುಚ್ಚು, ರಾಜನಿಂದ ತೊಂದರೆ, ಅಪಖ್ಯಾತಿಗೆ ಪಾತ್ರವಾಗುವುದು, ಪ್ರಿಯಬಂಧುಗಳ ನಾಶ, ಭೋಗಗಳ ನಾಶ ಮತ್ತು ಮನೆಗೆ ಬೆಂಕಿಯು ಹೊತ್ತಿಕೊಳ್ಳುವುದು – ಈ ಹತ್ತರಲ್ಲಿ ಒಂದು ಗತಿಯು ಬಂದೇ ಬರುವುದು. ಈ ಹಿನ್ನೆಲೆಯಲ್ಲಿ ಸ್ವಾರ್ಥ ಕಾರಣಗಳಿಗಾಗಿ ಅಧಿಕಾರದಲ್ಲಿರುವವರು ಅನೇಕ ಸಲ ಶಿಕ್ಷೆಗೆ ಅರ್ಹರಲ್ಲದವರನ್ನು ದಂಡನೆಗೆ ಗುರಿಪಡಿಸುವುದನ್ನು ನಾವು ಕಾಣುತ್ತೇವೆ. ಅಂತಹವರಿಗೆ ಬುದ್ಧನ ಈ ಮಾತು ಎಚ್ಚರಿಕೆಯನ್ನು ನೀಡುತ್ತದೆ. ಇಲ್ಲೂ ಕೂಡ ಬುದ್ಧನು ಅಂತಹವರು ಬದುಕಿರುವಾಗಷ್ಟೇ ಅಲ್ಲ, ಸತ್ತ ನಂತರವೂ ದುಃಖವನ್ನು ಅನುಭವಿಸುತ್ತಾರೆಂದು ಹೇಳುತ್ತಾನೆ. ಈ ಹೇಳಿಕೆಯಲ್ಲೂ ಕೂಡ ಮರಣಾನಂತರದ ಅಸ್ತಿತ್ವದ ಬಗ್ಗೆ ಒಂದು ಸೂಚನೆ ಇದೆ. ಈ ಅಹಿಂಸೆಯ ಅಧಾರದ ಮೇಲೆಯೇ ಬುದ್ಧನು ಮನುಷ್ಯನ ಶ್ರೇಷ್ಠತೆಯನ್ನು ಅಳೆಯುವುದು. ಯಾವ ಪ್ರಾಣಿಯನ್ನೂ ದಂಡಿಸದೇ ಇರುವವನು ಶ್ರಮಣ ಅಥವಾ ಭಿಕ್ಷು. ಆತನನ್ನು ಬುದ್ಧನು ಬ್ರಾಹ್ಮಣನೆಂದೂ ಕರೆಯುತ್ತಾನೆ. ಬುದ್ಧನ ಪ್ರಕಾರ ಒಬ್ಬನು ಬ್ರಾಹ್ಮಣನಾಗುವುದು ಹುಟ್ಟಿನಿಂದಲ್ಲ, ಅಹಿಂಸಾಪಾಲನೆಯಿಂದ (10–137–142).[2] ಬ್ರಾಹ್ಮಣತ್ವವು ಒಂದು ನೈತಿಕ ಆದರ್ಶವೇ

ಹೊರತು ಹುಟ್ಟಿನಿಂದಲ್ಲ ಎಂಬುದನ್ನು ಬುದ್ಧನು ಧಮ್ಮಪದದ ಕಡೆಯ ಅಧ್ಯಾಯದಲ್ಲಿ ಸ್ಪಷ್ಟಪಡಿಸುತ್ತಾನೆ.[3]

ಬುದ್ಧನ ಪ್ರಕಾರ ಮತ್ತೊಬ್ಬನನ್ನು ಕೊಲ್ಲುವವನು ಅಥವಾ ಸಂಕಟಗೊಳಿಸುವವನು ಪರಿವ್ರಾಜಕನಲ್ಲ ಅಥವಾ ಶ್ರಮಣನಲ್ಲ. ಮತ್ತೊಬ್ಬರನ್ನು ನಿಂದಿಸದಿರುವುದು ಮತ್ತು ಕೊಲ್ಲದಿರುವುದು ಬುದ್ಧನ ಅನುಶಾಸನ.

**ಖಂತೀಪರಮಜ್ ಕಪೋತಿತಿಕ್ಖಾ**

**ನಿಬ್ಭಾಣಜ್ ಪರಮಜ್ ವದಂತಿ ಬುದ್ಧಾ**

**ನ ಹಿ ಪಬ್ಬಜಿತೋ ಪರೂಪಘಾತಿ**

**ಸಮಣೋ ಹೋತಿ ಪರಜ್ ವಿಹೇಥಯಂತೋ**[4]

**ಅನೂಪವಾದೋ ಅನೂಪಘಾತೋ ಪಾತಿಮೊಕ್ಖೇ ಚ ಸಂವರೋ**

**ಮತ್ತಞ್ಞುತಾ ಚ ಭತ್ತಸ್ಮಿಜ್ ಪಂತಞ್ ಚ ಸಯನಾಸನಜ್**

**ಅಧಿಚಿತ್ತೇ ಚ ಅಯೋಗೋ ಏತಜ್ ಬುದ್ಧಾನ ಸಾಸನಜ್**[5]

ಏಕೆಂದರೆ ವೈರದಿಂದ ವೈರವು ಉಗಮವಾಗುತ್ತದೆ. ಬುದ್ಧನು ವೈರಕ್ಕೆ ಪ್ರತಿವೈರವನ್ನು ವಿರೋಧಿಸುತ್ತಾನೆ. ವೈರಿಗಳಲ್ಲಿ ಅವೈರಿಗಳಾಗಿದ್ದರೆ ನಮ್ಮ ಬದುಕು ಸುಖಮಯವಾಗಿರುತ್ತದೆ.

**ಸುಸುಖಜ್ ವತ ಜೀವಾಮ ಆತುರೇಸು ಅನಾತುರಾ**

**ಆತುರೇಸು ಮನುಸ್ಸೇಸು ವಿಹರಾಮ ಅನಾತುರಾ**[6]

ಈ ಅವೈರವು ಸಾಧ್ಯವಾಗಬೇಕಾದರೆ ಮನುಷ್ಯನು ಭಾವಾತ್ಮಕವಾದ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು. ವೈರದ ನಾಶಕ್ಕೆ ಪ್ರೀತಿಯೇ ಮದ್ದು. ಬುದ್ಧನು ಈ ಸಂದರ್ಭದಲ್ಲಿ **"ಅಭಾಸ್ವರ ಎಂಬ ದೇವತೆಗಳಂತೆ"** ಪ್ರೀತಿಯೇ ನಮಗೆ ಭಿಕ್ಷವಾಗಿರುತ್ತದೆ ಎಂದು ಸಾರುತ್ತಾನೆ. ಭಿಕ್ಷುಗಳಿಗೆ ಭಿಕ್ಷೆಯು ದ್ವೇಷವಲ್ಲ, ಪ್ರೀತಿ. ಈ ಪ್ರೀತಿಯೇ ವೈರಿಯನ್ನು ಗೆಲ್ಲುವುದು.

**ಸುಸುಖಜ್ ವತ ಜೀವಾಮ ಉಸ್ಸುಕೇಸು ಅನುಸ್ಸುಕಾ**

**ಉಸ್ಸುಕೇಸು ಮನುಸ್ಸೇಸು ವಿಹರಾಮ ಅನುಸ್ಸುಕಾ[7]**

ಹಿಂಸೆ ಮಾಡದವನು ಶೋಕವಿಲ್ಲದ ಸ್ಥಾನವನ್ನು ಪಡೆಯುತ್ತಾನೆಂದು ಆತನು ಸಾರುತ್ತಾನೆ. ಅಹಿಂಸೆಯ ವೈಭವೀಕರಣ ಬುದ್ಧನ ನುಡಿಗಳಲ್ಲಿ ನಾವು ಪದೇ ಪದೇ ಕಾಣುತ್ತೇವೆ.

**ಅಹಿಂಸಕಾ ಯೇ ಮುನಯೋ ನಿಚ್ಚಜ್ ಕಾಯೇನ ಸಂವುತಾ**

**ತೇ ಯಂತಿ ಅಚ್ಚುತುಜ್ ಠಾನಜ್ ಯತ್ಥ ಗಂತ್ವಾ ನ ಸೋಚರೇ[8]**

ಒಬ್ಬನು ಪ್ರಾಣಿಗಳನ್ನು ಹಿಂಸಿಸುವುದರಿಂದ ಆರ್ಯನಾಗುವುದಿಲ್ಲ. ಯಾವ ಜಂತುಗಳನ್ನೂ ಕೊಲ್ಲದಿರುವುದರಿಂದಲೇ ಆತನು ಆರ್ಯನೆನಿಸುತ್ತಾನೆ.

**ಮತ್ತಾಸುಖ ಪರಿಚ್ಚಾಗಾ ಪಸ್ಸೇ ಚೆ ವಿಪುಲಜ್ ಸುಖಜ್**

**ಚಜೆ ಮತ್ತಾ ಸುಖಜ್ ಧೀರೋ ಸಂಪಸ್ಸಜ್ ವಿಪುಲಜ್ ಸುಖಜ್[9]**

ಈ ನೆಲೆಯಲ್ಲೇ ಬುದ್ಧನು ಪ್ರಾಣಿಹಿಂಸೆಯನ್ನು ಒಳಗೊಂಡ ಯಜ್ಞಯಾಗಾದಿಗಳನ್ನು ನಿರಾಕರಿಸುವುದು.[10] ಆರ್ಯನೆಂದರೆ ಶ್ರೇಷ್ಠನೆಂದರ್ಥ. ಒಬ್ಬನಿಗೆ ಶ್ರೇಷ್ಠತೆಯು ಅವನು ಮಾಡುವ ಯಜ್ಞಯಾಗಾದಿಗಳಿಂದ ಬರುವುದಿಲ್ಲ. ಬುದ್ಧನು ಬೇರೆಲ್ಲೋ ಒಂದು ಕಡೆ ಮೂರು ವಿಧವಾದ ಯಜ್ಞಗಳನ್ನು ಗುರುತಿಸುವುದುಂಟು. ಮೊದಲೆಯದು ಪ್ರಾಣಿಬಲಿಯನ್ನು ಒಳಗೊಂಡ ಯಜ್ಞಾಚರಣೆ. ಎರಡನೆಯದು ಪ್ರಾಣಿಬಲಿಯಿಲ್ಲದ, ಆದರೆ ಕೇವಲ ಹಸುವಿನ ತುಪ್ಪ, ಜೇನು ಇತ್ಯಾದಿ ಪರಿಕರಗಳನ್ನು ಒಳಗೊಂಡ ಯಜ್ಞಾಚರಣೆ. ಮೂರನೆಯದು ಯಾವ ಹಿಂಸೆಯನ್ನೂ ಒಳಗೊಳ್ಳದ ಶುದ್ಧ ನೈತಿಕ ಮೌಲ್ಯಗಳ ಪಾಲನೆ. ಬುದ್ಧನ ಪ್ರಕಾರ ಮೊದಲನೆಯದು ಅಧಮ, ಎರಡನೆಯದು ಮಧ್ಯಮ ಮತ್ತು ಕೊನೆಯದು ಉತ್ತಮ. ನೀತಿವಂತಿಕೆಯು ಒಂದು ಯಜ್ಞ ಎಂಬ ಪರಿಕಲ್ಪನೆಯು ಇಲ್ಲಿದೆ. ಈ ದೃಷ್ಟಿಯಲ್ಲಿ

ಅಹಿಂಸಾಪಾಲನೆಯು ಒಂದು ದೊಡ್ಡ ಯಜ್ಞ .ಇಲ್ಲಿ ಯಜ್ಞಾಚರಣೆಗೆ ಸಂಬಂಧಪಟ್ಟ ಯಾವ ಪುರೋಹಿತರ ಅಗತ್ಯವೂ ಇಲ್ಲ. ಅದಕ್ಕೆ ಯಾವ ದುಬಾರಿ ಪರಿಕರಗಳ ಅಗತ್ಯವೂ ಇಲ್ಲ. ಅದು ಯಾವುದೋ ಒಂದು ವರ್ಗಕ್ಕೆ ಮಾತ್ರ ಸೀಮಿತವಲ್ಲ. ಅದು ಎಲ್ಲರೂ ಯಾವಾಗಲೂ ಅತ್ಯಂತ ಸುಲಭವಾಗಿ ಆಚರಿಸುವಂತಹುದು.

ಬುದ್ಧನು ಅಂದಿನ ಕಾಲದಲ್ಲೇ ಪರಿಸರ ಪ್ರಜ್ಞೆಯನ್ನು ಕೆಳಕಂಡ ಗಾಥೆಯ ಮೂಲಕ ಮುನ್ಸೂಚಿಸಿದ್ದ. ಆತನ ಪ್ರಕಾರ ಭಿಕ್ಷುಗಳು ವನವನ್ನು ಮಾತ್ರ ಕತ್ತರಿಸಬೇಕು, ಮರವನ್ನಲ್ಲ. ಇಲ್ಲಿ ವನಶಬ್ದವು ರಾಗಾದಿ ಸೀಮಿತ ಭಾವಗಳನ್ನು ಸೂಚಿಸುತ್ತದೆ. ಬುದ್ಧನು ಒಗಟಿನ ರೂಪದಲ್ಲಿ ವನವನ್ನು ಕತ್ತರಿಸಬೇಕೇ ಹೊರತು ಮರವನ್ನು ಅಲ್ಲ ಎಂದು ಹೇಳುವಾಗ ಭಿಕ್ಷುಗಳು ರಾಗದ್ವೇಷಾದಿಗಳನ್ನು ಸಮೂಲಾಗ್ರವಾಗಿ ನಾಶಪಡಿಸಬೇಕೆಂದರ್ಥ. ಮರಗಳು ಜೀವಿಗಳಾದ್ದರಿಂದ ಅವುಗಳನ್ನು ಕತ್ತರಿಸಬಾರದು. ಹಾಗೆ ಮಾಡಿದರೆ ಅದು ಹಿಂಸೆಯಾಗುತ್ತದೆ. ರಾಗದ್ವೇಷಗಳನ್ನು ಬುದ್ಧನು ಕುರುಚಲು ಗಿಡಗಳಿಗೆ ಹೋಲಿಸಿ ಮರವು ಬೆಳೆಯಬೇಕಾದರೆ ಈ ಕುರುಚಲುಗಿಡಗಳನ್ನು ನಾಶಪಡಿಸಲೇಬೇಕೆಂದು ಸಾರುತ್ತಾನೆ. ವೃಕ್ಷ ಶಬ್ದವನ್ನು ನಾವು ವಾಚ್ಯಾರ್ಥದಲ್ಲಿ ಸ್ವೀಕರಿಸಿದರೂ ಸರಿ ಲಕ್ಷ್ಯಾರ್ಥದಲ್ಲಿ ಸ್ವೀಕರಿಸಿದರೂ ಸರಿ ಈ ಗಾಥೆಯು ಬಹಳ ಅರ್ಥಪೂರ್ಣವಾಗಿದೆ.

**ವನಜ್ ಛಿಂದಥ ಮ ರುಕ್ಖಜ್ ವನತೋ ಜಾಯತಿ ಭಯಜ್**

**ಛೆತ್ವಾ ವನಜ್ ಚ ವನತಜ್ ಚ ನಿಬ್ಬನಾ ಹೋಥ ಭಿಕ್ಖವೋ[11]**

ಬುದ್ಧನ ಪ್ರಕಾರ ಶ್ರಾವಕರ ಮನಸ್ಸು ಹಗಲು –ಇರುಳು ಅಹಿಂಸೆಯಲ್ಲೇ ರತವಾಗಿರುತ್ತದೆ.

**ಸುಪ್ಪಬುದ್ಧಜ್ ಪಬುಜ್ಝಂತಿ ಸದಾ ಗೋತಮಸಾವಕಾ**

**ಯೇಸಜ್ ದಿವಾ ಚ ರತ್ತೋ ಚ ಅಹಿಂಸಾಯ ರತೋ ಮನೋ**[12]

ಬುದ್ಧನ ಪ್ರಕಾರ ವೈರವು ವೈರದಿಂದ ಎಂದಿಗೂ ಶಾಂತವಾಗುವುದಿಲ್ಲ. ಅವೈರದಿಂದಲೇ ವೈರವು ಶಾಂತವಾಗುವುದು. ಇದನ್ನು **ಸನಾತನ ಧರ್ಮ**ವೆಂದು ಬುದ್ಧನು ಕರೆಯುತ್ತಾನೆ.

**ಅಕ್ಕೊಚ್ಛಿ ಮಜ್, ಅವಧಿ ಮಜ್, ಅಜಿನಿ ಮಜ್, ಅಹಾಸಿ ಮೇ**

**ಯೇ ಚ ತಜ್ ಉಪನಹ್ಯಂತಿ ವೇರಜ್ ತೇಸಜ್ ನ ಸಮ್ಮತಿ**

**ಅಕ್ಕೊಚ್ಛಿ ಮಜ್, ಅವಧಿ ಮಜ್, ಅಜಿನಿ ಮಜ್, ಅಹಾಸಿ ಮೇ**

**ಯೇ ತಜ್ ನ ಉಪನಹ್ಯಂತಿ ವೇರಜ್ ತೇಸೂಪಸಮ್ಮತಿ**

**ನ ಹಿ ವೇರೇನ ವೇರಾನಿ ಸಮ್ಮಂತೀ ಧ ಕುದಾಚನಜ್**

**ಅವೇರೇನ ಚ ಸಮ್ಮಂತಿ ; ಯೇಸ ಧಮ್ಮೋ ಸನಾತನೋ**[13]

ಮತ್ತೊಬ್ಬರ ದುಃಖದಲ್ಲಿ ತಾನು ಸುಖವನ್ನು ಕಾಣುವುದು ವಿಕೃತ ಮನೋಭಾವ. ಆತನೆಂದಿಗೂ ಸುಖಿಯಲ್ಲ. ಆತನಲ್ಲಿ ಹುದುಗಿರುವುದು ವೈರವಷ್ಟೆ.

**ಪರದುಕ್ಖೂಪದಾನೇನ ಯೋತ್ತನೋ ಸುಖಂ ಇಚ್ಛತಿ**

**ವೇರಸಂಸಗ್ಗ ಸಂಸಟ್ಠೋ ವೇರಾ ಸೊ ನ ಪರಿಮುಚ್ಚತಿ**[14]

ವೈರಿಗಳಲ್ಲಿ ಅವೈರಿಗಳಾದರೆ ಮನುಷ್ಯನು ಅನುಭವಿಸುವ ಸುಖದ ಬಗ್ಗೆ ಬುದ್ಧನು ಬಹಳವಾಗಿ ಕೊಂಡಾಡುತ್ತಾನೆ.[5] ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ಅಳವಡಿಸಿಕೊಳ್ಳಬೇಕಾದ ಮೌಲ್ಯವನ್ನು ಬುದ್ಧನು ಸ್ಪಷ್ಟವಾಗಿ ವಿವರಿಸುತ್ತಾನೆ. ಸೋಲು ಗೆಲುವುಗಳಲ್ಲಿ ಗೆಲುವು ವೈರಕ್ಕೆ ಎಡೆಮಾಡಿಕೊಡುವುದಂತೆ. ಏಕೆಂದರೆ ಸೋತವನು ದುಃಖಿಸುತ್ತಿರುತ್ತಾನೆ. ವೈರದ ಮೂಲ ಅತಿಯಾದ ಸ್ಪರ್ಧಾತ್ಮಕ ಮನೋಭಾವ ಎಂಬುದನ್ನು ಬುದ್ಧನು ಸ್ಪಷ್ಟಪಡಿಸುತ್ತಾನೆ. ಸಮಾಜದಲ್ಲಿ ತಾಂಡವವಾಡುತ್ತಿರುವ ಎಲ್ಲ ರೀತಿಯ

ಅಸಮಾನತೆಗಳಿಗೂ ಇದೇ ಮೂಲವೆಂಬುದು ಬುದ್ಧನ ದೃಷ್ಟಿಕೋನ. ಸಾಮಾಜಿಕವಾಗಿ, ಆರ್ಥಿಕವಾಗಿ ಇನ್ನಾವುದೇ ಕಾರಣದಿಂದ ತಾನು ಮೇಲೆಂದುಕೊಂಡಿರುವವನು ಇತರರನ್ನು ಹೀನದೃಷ್ಟಿಯಿಂದ ನೋಡುತ್ತಲೇ ಇರುತ್ತಾನೆ. ಇತರರಲ್ಲಿ ತಾನು ಹೀನನೆಂಬ ಸಂಕೀರ್ಣವನ್ನು ಬಿತ್ತುತ್ತಿರುತ್ತಾನೆ. ಇದು ವೈರಕ್ಕೆ ಎಡೆಮಾಡಿಕೊಡುತ್ತದೆ. ಎಲ್ಲಿ ವೈರವಿರುವುದೋ ಅಲ್ಲಿ ಸಮಾನತೆ ತನ್ಮೂಲಕ ಶಾಂತಿಯಿರುವುದಿಲ್ಲ.

**ಜಯಜ್ ವೇರಜ್ ಪಸವತಿ ದುಕ್ಖಜ್ ಸೇತಿ ಪರಾಜಿತೋ**

**ಉಪಸಂತೋ ಸುಖಜ್ ಸೇತಿ ಹಿತ್ವಾ ಜಯಪರಾಜಯಜ್**[16]

ಸಿಟ್ಟು ಅಭಿಮಾನಗಳನ್ನು ತೊರೆಯಬೇಕೆಂದು ಬುದ್ಧನು ಬೋಧಿಸುತ್ತಾನೆ. ಯಾರು ಏರುತ್ತಿರುವ ಕ್ರೋಧವನ್ನು ತಿರುಗುವ ಗಾಡಿಯನ್ನು ಜಗ್ಗುವಂತೆ ಹಿಡಿದು ನಿಲ್ಲಿಸುವನೋ ಆತನೇ ನಿಜವಾದ ಸಾರಥಿ. ಉಳಿದವರು ಹೆಸರಿಗೆ ಸಾರಥಿಗಳು.

**ಯೋ ವೇ ಉಪ್ಪತಿತಜ್ ಕೋಧಇಜ್ ರಥಜ್ ಭಂತಜ್ ವ ಧಾರಯೇ**

**ತಮ್ ಅಹಜ್ ಸಾರಥಿಜ್ ಬ್ರೂಮಿ ರಸ್ಮಿಗ್ಗಾಹೋ ಇತರೋ ಜನೋ**[17]

ಕ್ರೋಧವನ್ನು ಸಹನೆಯಿಂದ ಗೆಲ್ಲಬೇಕು (223). ನಿಜವನ್ನು ಹೇಳುವಾಗ ಸಿಟ್ಟಿರಬಾರದೆಂದು ಬುದ್ಧನು ನಮಗೆ ಎಚ್ಚರಿಸುತ್ತಾನೆ. ಎಂದರೆ ಸತ್ಯದ ಹಿನ್ನೆಲೆಯಲ್ಲಿ ಅಹಿಂಸೆಯು ಕ್ರಿಯಾಶೀಲವಾಗಿರಬೇಕು. ಕ್ರೋಧವು ಹಿಂಸೆಯ ಪ್ರತಿರೂಪ. ಕೋಪದಿಂದ ನುಡಿದ ನಿಜವು ಸತ್ಯವಾಗಿರದೇ ಅದು ಹಿಂಸೆಯಾಗುತ್ತದೆ, ಮತ್ತೊಬ್ಬರನ್ನು ನೋಯಿಸುತ್ತದೆ. ಎಲ್ಲ ಮೌಲ್ಯಗಳಿಗೂ ಮೂಲಭೂತವಾದ ಮೌಲ್ಯವೆಂದರೆ ಅಹಿಂಸೆ. ಅಹಿಂಸೆಗೆ ವಿರುದ್ಧವಾಗಿ ಇನ್ನಾವ ಮೌಲ್ಯಗಳನ್ನು ಎಷ್ಟೇ ಕಟ್ಟುನಿಟ್ಟಾಗಿ ಪಾಲಿಸಿದರೂ ಅದು ವ್ಯರ್ಥವೆಂಬ ಧ್ವನಿಯು ಬುದ್ಧನ ಕೆಳಕಂಡ ಗಾಥೆಯಲ್ಲಿದೆ.

**ಸಚ್ಚಜ್ ಭಣೆ ನ ಕುಜ್ಝೆಯ್ಯ ದಜ್ಜಾಪ್ಪಸ್ಮಿಂ ಪಿ ಯಾಚಿತೋ**

**ಏತೇಹಿ ತೀಹಿ ಠಾನೇಹಿ ಗಚ್ಛೇ ದೇವಾನ ಸಂತಿಕೇ[18]**

ಹಾಗೆಯೇ ಅಸೂಯಾಪರರಿಗೂ ಒಂದು ಸಂದೇಶವಿದೆ. ಅಸೂಯೆಯಲ್ಲಿ ಸಮಾಧಾನವಿಲ್ಲ. ಇನ್ನೊಬ್ಬರ ಅನ್ನಪಾನಗಳ ವಿಷಯದಲ್ಲಿ ಯಾರು ಅಸೂಯೆಯನ್ನು ಮಾಡುತ್ತಾನೋ ಆತನಿಗೆ ಹಗಲಿರುಳೂ ಸಮಾಧಾನವಿರುವುದಿಲ್ಲ. ಯಾರಲ್ಲಿ ಸಮೂಲಾಗ್ರವಾಗಿ ಅಸೂಯೆಯು ನಾಶವಾಗಿರುತ್ತದೋ ಆತನು ಸದಾಕಾಲ ಸಮಾಧಾನದಿಂದ ಇರುತ್ತಾನೆ. ಮನುಷ್ಯನಿಗೆ ಸೌಂದರ್ಯವು ಬರುವುದು ಆಂತರಿಕವಾಗಿ. ಬಾಹ್ಯ ಸೌಂದರ್ಯವು ಸೌಂದರ್ಯವೇ ಅಲ್ಲ. ಒಳಗೆ ಅಸೂಯೆಯನ್ನು ಇರಿಸಿಕೊಂಡಿರುವ ದುರುಳನು ಹೊರಗಿನ ಸುಂದರವಾದ ಮುಖದಿಂದಾಗಲೀ ಮೈಬಣ್ಣದಿಂದಾಗಲೀ ಸಾಧುವಾಗಲಾರ. ಸೌಂದರ್ಯವು ಆಂತರಿಕ ಪರಿಕಲ್ಪನೆಯೆಂಬ ಸಂದೇಶವನ್ನು ಬುದ್ಧನು ಅತ್ಯಂತ ಮನೋಜ್ಞವಾಗಿ ಇಲ್ಲಿ ಚಿತ್ರಿಸುತ್ತಾನೆ.

**ನ ವಾಕ್ಕರಣಮತ್ತೇನ ವಣ್ಣಪೋಕ್ಖರತಾಯ ವಾ**

**ಸಾಧುರೂಪೋ ನರೋ ಹೋತಿ ಇಸ್ಸುಕೀ ಮಚ್ಛರೀ ಸಠೋ[19]**

ಮನುಷ್ಯನು ನಿಜವಾದ ಸಾಧು ಎನಿಸುವುದು ಆತನು ಅಸೂಯೆಯನ್ನು ಸಮೂಲಾಗ್ರವಾಗಿ ನಾಶಗೊಳಿಸಿದಾಗ ಮಾತ್ರ.

**ಯಸ್ಸ ಚೇತಜ್ ಸಮುಚ್ಛಿನ್ನಜ್ ಮೂಲಘಚ್ಚಜ್ ಸಮೂಹತಜ್**

**ಸ ವಂತದೋಸೋ ಮೇಧಾವ ಸಾಧುರೂಪೋ ನಿ ವುಚ್ಚತಿ[20]**

ಹಾಗೆಯೇ ಆತ್ಮಸ್ನೇಹದ ಬಗ್ಗೆಯೂ ಬುದ್ಧನು ಟೀಕಿಸುತ್ತಾನೆ. ಶರತ್‌ಕಾಲದಲ್ಲಿ ನೈದಿಲೆಯನ್ನು ಕೀಳುವಂತೆ ಆತ್ಮಸ್ನೇಹವನ್ನು ಎಂದರೆ ತಾನು ತನ್ನದೆಂಬ ಅಭಿಮಾನವನ್ನು ನಿರ್ದಾಕ್ಷಿಣ್ಯವಾಗಿ ಕಿತ್ತೊಗೆಯ್ಯಬೇಕೆಂದು ಬುದ್ಧನು ಬೋಧಿಸುತ್ತಾನೆ. ಮೂರ್ಖನು

ಮಳೆಗಾಲದಲ್ಲಿ ತಾನು ನಿರ್ದಿಷ್ಟ ಸ್ಥಳದಲ್ಲಿ ಸುಖವಾಗಿರುವೆನೆಂದೂ, ಚಳಿಬೇಸಿಗೆಗಳಲ್ಲಿ ಬೇರೊಂದು ಸ್ಥಳಗಳಲ್ಲಿ ಸುಖವಾಗಿ ಇರುವೆನೆಂದೂ ಚಿಂತಿಸುತ್ತಾನೆ. ಅಲ್ಲಿರುವ ಅಪಾಯಗಳ ಅರಿವು ಅವನಿಗಿರುವುದಿಲ್ಲ. ಯಾರಿಗೆ ಮಕ್ಕಳು ದನಕರುಗಳ ಬಗ್ಗೆ ಅಭಿಮಾನವಿದೆಯೋ ಎಂದರೆ ಅಹಂಕಾರ ಮಮಕಾರಗಳಿವೆಯೋ ಅಂತಹವನನ್ನು ಪ್ರವಾಹವು ಹಳ್ಳಿಯನ್ನು ಕೊಚ್ಚಿಕೊಂಡು ಹೋಗುವಂತೆ ಮೃತ್ಯುವು ಕೊಂಡೊಯ್ಯುವುದು. ಮಕ್ಕಳು ತಂದೆ ನೆಂಟರುಗಳು ಮನುಷ್ಯನನ್ನು ಕಾಪಾಡಲಾರರು. ಹಾಗೆ ಕಾಪಾಡುವರೆಂದು ತಿಳಿದರೆ ಅದು ಭ್ರಮೆಯಷ್ಟೇ. ಯಾರನ್ನೂ ಮೃತ್ಯುವು ಬಿಡದು. ಜಗತ್ತಿನಲ್ಲಿ ನಮ್ಮ ಅಸ್ತಿತ್ವದ ಅಶಾಶ್ವತೆಯ ಅರಿವಿನಲ್ಲಿ ನಾವು ಮೌಲ್ಯಯುತ ಜೀವನವನ್ನು ನಡೆಸಬೇಕೆಂದು ಬುದ್ಧನು ನಮಗೆ ಪದೇ ಪದೇ ನೆನಪಿಸುತ್ತಾನೆ. ನಮ್ಮ ಬದುಕಿನ ಮೌಲ್ಯಮಾಪನವು ಆಗುವುದು ನಾವು ಸತ್ತ ನಂತರವೇ. ಅಲ್ಲಿಯವರೆಗೆ ನಮ್ಮ ಜೀವನವೆಲ್ಲವೂ ಈ ಅಶಾಶ್ವತೆಯ ನೆಲೆಗಟ್ಟಿನಲ್ಲೇ ಸಾಗಬೇಕು ಎಂಬುದು ಬುದ್ಧನ ಬೋಧನೆ.

**ಉಚ್ಛಿಂದ ಸಿನೇಹಂ ಅತ್ತನೋ ಕುಮುದಜ್ ಸಾರದಿಕಜ್ ಪಾಣಿನಾ**

**ಸಂತಿಮಗ್ಗಮ್ ಏವ ಬ್ರೂಹಯ ನಿಬ್ಬಾಣಜ್ ಸುಗತೇನ ದೇಸಿತಜ್**

**ಇಧ ವಸ್ಸಜ್ ವಸಿಸ್ಸಾಮಿ ಇಧ ಹೇಮಂತಗಿಂಹಿಸು**

**ಇಧಿ ಬಾಲೋ ವಿಚಿಂತೇತಿ ಅಂತರಾಯಜ್ ನ ಬುಜ್ಝತಿ**

**ತಜ್ ಪುತ್ತ ಪಸುಸಮ್ಮ ತಜ್ ವ್ಯಾಸತ್ತಮನಸಜ್ ನರಜ್**

**ಸುತ್ತಜ್ ಗಾಮಜ್ ಮಹೋಘೋ ವ ಮಚ್ಚು ಆದಾಯ ಗಚ್ಛತಿ**[21]

ಇನ್ನು ವೈರಕ್ಕೆ ಗುರಿಯಾಗಿರುವವನ ಮನೋಭಾವ ಹೇಗಿರಬೇಕೆಂಬುದನ್ನು ಬುದ್ಧನು ತಿಳಿಸುತ್ತಾನೆ. ಇದಕ್ಕೆ ಸಹನೆಯೇ ಔಷಧಿ. ಆನೆಯು ಇಂದ್ರಿಯನಿಗ್ರಹ ಮತ್ತು ತಾಳ್ಮೆಯ ಸಂಕೇತ. ಪಾಳಿಯಲ್ಲಿ ಆನೆಗೆ **ನಾಗ**ನೆಂದು ಹೆಸರು. ಬುದ್ಧನನ್ನು **ಮಹಾನಾಗ**ನೆಂದು

ಕರೆಯುವ ರೂಢಿಯುಂಟು. ಏಕೆಂದರೆ ಆತನು ತಾಳ್ಮೆಯ ಸಾಕಾರನೇ ಆಗಿದ್ದನು. ಮತ್ತೊಬ್ಬರ ಕೆಟ್ಟ ಮಾತನ್ನು ಸಹಿಸಿಕೊಳ್ಳಲು ನಮಗೆ ತಾಳ್ಮೆಯು ಅಗತ್ಯ. ಆನೆಯು ಯುದ್ಧದಲ್ಲಿ ಬಾಣದ ಏಟನ್ನು ಸಹಿಸಿಕೊಳ್ಳುವಂತೆ ಮನುಷ್ಯನು ಕೆಟ್ಟ ಮಾತನ್ನು ಸಹಿಸಿಕೊಳ್ಳಬೇಕು. ಜಗತ್ತಿನಲ್ಲಿ ದುಶ್ಶೀಲರೇ ಹೆಚ್ಚು ಎಂಬ ಭಾವನೆಯಿಂದ ಸಹಿಸಿಕೊಳ್ಳಬೇಕು. ಹತೋಟಿಯಲ್ಲಿಟ್ಟ ಆನೆಯನ್ನೇ ರಾಜನು ಏರುವುದು ಮತ್ತು ಯುದ್ಧಕ್ಕೆ ಒಯ್ಯುವುದು. ಹಾಗೆಯೇ ಯಾರು ಕೆಟ್ಟಮಾತನ್ನು ಸಹಿಸಿಕೊಳ್ಳಬಲ್ಲನೋ ಮತ್ತು ಪ್ರತಿಯಾಗಿ ಕೆಟ್ಟಮಾತನ್ನು ಆಡುವುದಿಲ್ಲವೋ ಅಂತಹವನೇ ಶ್ರೇಷ್ಠನೆಂದು ಬುದ್ಧನು ತಿಳಿಸುತ್ತಾನೆ. ಅಂತಹವನನ್ನು **ದಾಂತ**ನೆಂದು ಕರೆಯುತ್ತಾರೆ.

**ಅಹಙ್ ನಾಗೋ ವ ಸಂಗಾಮೇ ಚಾಪಾತೋ ಪತಿತಙ್ ಸರಙ್**

**ಅತಿವಾಕ್ಯಙ್ ತಿತಿಕ್ಖಿಸ್ಸಙ್ ದುಸ್ಸೀಲೋ ಹಿ ಬಹುಜ್ಜನೋ**

**ದಂತಙ್ ನಯಂತಿ ಸಮಿತಿಙ್ ದಂತಙ್ ರಾಜಾಭಿರೂಹತಿ**

**ದಂತೋ ಸೆಟ್ಠೋ ಮನುಸ್ಸೇಸು ಯೋತಿವಾಕ್ಯಙ್ ತಿತಿಕ್ಖತಿ**[22]

ರಾಗದ್ವೇಷಗಳನ್ನು ದೋಣಿಯಲ್ಲಿರುವ ನೀರಿಗೆ ಹೋಲಿಸಲಾಗಿದೆ. ನಾವು ಸಂಸಾರವೆಂಬ ನದಿಯ ಮೇಲೆ ದೋಣಿಯಲ್ಲಿ ಚಲಿಸುತ್ತಿದ್ದೇವೆ. ಈ ದೋಣಿಯಲ್ಲಿ ರಾಗದ್ವೇಷಗಳೆಂಬ ನೀರು ಸೇರಿಕೊಂಡರೆ ನಾವು ನಮ್ಮ ಗುರಿಯನ್ನು ತಲುಪಲಾರೆವು. ನಾನು ಎಂಬ ಭಾವನೆಯೇ ದೋಣಿ. ಈ ದೋಣಿಯಲ್ಲಿ ಸೇರಿಕೊಂಡಿರುವ ರಾಗದ್ವೇಷಗಳನ್ನು ತೆಗೆದುಹಾಕಿದರೆ ನಾವು ನಿರ್ವಾಣವೆಂಬ ಗುರಿಯನ್ನು ತಲುಪುವುದು ಖಂಡಿತ. ಬುದ್ಧನು ವರ್ಷಿಕೆಯೆಂಬ ಗಿಡದ ಉಪಮೆಯನ್ನು ನೀಡುತ್ತಾ ರಾಗದ್ವೇಷಗಳನ್ನು ತೊಡೆದು ಹಾಕಬೇಕೆಂದು ಬೋಧಿಸುತ್ತಾನೆ. ವರ್ಷಿಕೆಯೆಂಬ ಗಿಡವು ಬಾಡಿದ ಹೂಗಳನ್ನು ಉದುರಿಸುವ ಹಾಗೆ ರಾಗದ್ವೇಷಗಳನ್ನು ನಾವು ಉದುರಿಸಬೇಕೆಂದು ಹೇಳುತ್ತಾನೆ.

**ವಸ್ಸಿಕಾ ವಿಯ ಪುಪ್ಫಾಣಿ ಮದ್ದವಾಣಿ ಪಮುಂಚತಿ**

**ಏವಜ್ ರಾಗಜ್ ಚ ದೋಸಜ್ ಚ ನಿಪ್ಪಮುಂಚೇಥ ಭಿಕ್ಖವೋ**[23]

ಬುದ್ಧನ ಪ್ರಕಾರ ಶಾಂತಿಯೇ ತಪಸ್ಸು, ತಿತಿಕ್ಷೆಯೇ ನಿರ್ವಾಣಕ್ಕೆ ಪರಮ ಸಾಧನ. ತಿತಿಕ್ಷೆಯೆಂದರೆ ಪರರ ಹಿಂಸೆಗೆ ಪ್ರತಿಕ್ರಿಯೆ ಮಾಡದೇ ಅದನ್ನು ಸಹಿಸಿಕೊಳ್ಳುವುದು. ಇದು ಭಿಕ್ಷುವಿನ ಲಕ್ಷಣವೆಂದು ಹೇಳಲಾಗಿದೆ. ಮತ್ತೊಬ್ಬರನ್ನು ಕೊಲ್ಲುವವರನ್ನು ಮತ್ತು ಸಂಕಟಗೊಳಿಸುವವನನ್ನು ಪರವ್ರಾಜಕ ಅಥವಾ ಶ್ರಮಣನಲ್ಲ.

**ಖಂತೀಪರಮಜ್ ಕಪೋತಿತಿಕ್ಖಾ**

**ನಿಬ್ಭಾಣಜ್ ಪರಮಜ್ ವದಂತಿ ಬುದ್ಧಾ**

**ನ ಹಿ ಪಬ್ಬಜಿತೋ ಪರೂಪಘಾತಿ**

**ಸಮಣೋ ಹೋತಿ ಪರಜ್ ವಿಹೇಥಯಂತೋ**[24]

## ಸತ್ಯ

ಇನ್ನು ಸತ್ಯದ ಹಿರಿಮೆಯ ಬಗ್ಗೆ ಆರ್ಯ ಅಷ್ಟಾಂಗಿಕ ಮಾರ್ಗದಲ್ಲಿ **ಸಮ್ಯಕ್ ಕರ್ಮಾಂತ** ಮತ್ತು **ಸಮ್ಯಕ್ ವಾಕ್**ಗಳಲ್ಲಿ ಪ್ರಸ್ತಾಪವಿದೆ. ಬುದ್ಧನು ಧಮ್ಮವನ್ನು ಬಿಟ್ಟು ಸುಳ್ಳನ್ನು ಆಡುತ್ತಿರುವ ವ್ಯಕ್ತಿಯನ್ನು ಜಂತುವೆಂದು ಕರೆದು ಅವನಿಗೆ ಮಾಡಲು ಉಳಿದಿರುವ ಪಾಪವೇ ಇಲ್ಲವೆಂದು ಸಾರುತ್ತಾನೆ. ಆತನಿಗೆ ಪರಲೋಕದ ಭರವಸೆ ಇಲ್ಲ. ಬುದ್ಧನು ತನ್ನ ಹೇಳಿಕೆಗಳಲ್ಲಿ ಪದೇ ಪದೇ ಪರಲೋಕದ ಸುಖದ ಬಗ್ಗೆ ಪ್ರಸ್ತಾಪಿಸುವುದು ಒಂದು ವಿಶೇಷ.

**ತುಮ್ಹೇಹಿ ಕಿಚ್ಚಜ್ ಆತಪ್ಪಜ್ ಅಕ್ಖಾತಾರೋ ತಥಾಗತಾ**

**ವಟಿಪನ್ನಾ ಪಮೊಕ್ಖಂತಿ ಝಾಯಿನೋ ಮಾರಬಂಧನಾ**[25]

ಅಂದ ಮಾತ್ರಕ್ಕೆ ಬುದ್ಧನ ಕಾಲದಲ್ಲಿ ಸುಳ್ಳು ಹೇಳುವವನೇ ಇರಲಿಲ್ಲವೆಂದರ್ಥವಲ್ಲ. ಆತನ ಕಾಲದಲ್ಲೂ ಅಸತ್ಯವಾದಿಗಳಿದ್ದರು. ಈ ಅಸತ್ಯವಾದಿಗಳನ್ನು ದಂಡನೆಯಿಂದಾಗಲಿ,

ಹಿಂಸೆಯಿಂದಾಗಲೀ ಗೆಲ್ಲಬಾರದು. ಬುದ್ಧನದು ಶಾಂತಿಯುತ ಮಾರ್ಗ. ಸುಳ್ಳು ಹೇಳುವವನನ್ನು ಸತ್ಯದ ಮೂಲಕ ಗೆದ್ದು ಆತನ ಮನಸ್ಸನ್ನು ಪರಿವರ್ತಿಸಬೇಕು. ನಿಜವನ್ನು ಹೇಳಬೇಕು, ಆ ನಿಜದ ಹಿನ್ನೆಲೆಯಲ್ಲಿ ಸಿಟ್ಟು ಇರಬಾರದು. ಸಿಟ್ಟಿನಿಂದ ನುಡಿದ ನಿಜವು ಕೇಳುಗನಲ್ಲಿ ಭಯವನ್ನು ಹುಟ್ಟಿಸುತ್ತದೆ. ಇದು ಅಹಿಂಸೆಗೆ ವಿರುದ್ಧ. ಆದ್ದರಿಂದಲೇ ಸತ್ಯದ ಜೊತೆಗೆ ಕ್ರೋಧರಾಹಿತ್ಯದ ಅಗತ್ಯವನ್ನು ಬುದ್ಧನು ಒತ್ತಿ ನುಡಿಯುವುದು.

**ಅಕ್ಕೋಧೇನ ಜಿನೇ ಕೋಧಜ್ ಅಸಾಧುಜ್ ಸಾಧುನಾ ಜಿನೇ**

**ಜಿನೇ ಕದಿರಿಯಜ್ ದಾನೇನ ಸಚ್ಚೇನ ಅಲಿಕವಾದಿನಜ್**

**ಸಚ್ಚಜ್ ಭಣೆ ನ ಕುಜ್ಝೆಯ್ಯ ದಜ್ಜಾಪ್ಪಸ್ಮಿಂ ಪಿ ಯಾಚಿತೋ**

**ಏತೇಹಿ ತೀಹಿ ಠಾನೇಹಿ ಗಚ್ಛೇ ದೇವಾನ ಸಂತಿಕೇ**[26]

ಸತ್ಯವು ಪಂಚಶೀಲಗಳಲ್ಲಿ ಪ್ರಮುಖವಾದ ತತ್ವವಾಗಿದೆ. ಬುದ್ಧನ ಪ್ರಕಾರ ಯಾರು ಪ್ರಾಣವನ್ನು ತೆಗೆಯುವನೋ (ಹಿಂಸೆ), ಸುಳ್ಳನ್ನು ಆಡುವನೋ (ಅಸತ್ಯ), ಒಬ್ಬರು ಕೊಡದಿರುವುದನ್ನು ತೆಗೆದುಕೊಳ್ಳುವನೋ (ಕಳ್ಳತನ), ಪರಸ್ತ್ರೀ ಗಮನವನ್ನು ಮಾಡುವನೋ ಮತ್ತು ಮದ್ಯಪಾನಾಸಕ್ತನೋ ಅವನು ಈ ಲೋಕದಲ್ಲಿ ತನ್ನ ಬೇರನ್ನು ತಾನೇ ಕಡಿದುಕೊಳ್ಳುವನೆಂದು ಬುದ್ಧನು ಹೇಳುತ್ತಾನೆ, ಎಂದರೆ ಅವನು ನಾಶವಾಗುತ್ತಾನೆಂದರ್ಥ.

**ಯೋ ಪಾಣಂ ಅತಿಪಾತೇತಿ ಮುಸಾವಾದಜ್ ಚ ಭಾಸತಿ**

**ಲೋಕೇ ಅದಿನ್ನಜ್ ಅದಿಯತಿ ಪರದಾರಜ್ ಚ ಗಚ್ಛತಿ**

**ಸುರಮೇರಯ ಪಾನಜ್ ಚ ಯೋ ನರೋ ಅನುಯಂಜತಿ**

**ಇಧೇವಮೇಸೋ ಲೋಕಸ್ಮಿಜ್ ಮೂಲಜ್ ಖಣತಿ ಅತ್ತನೋ**[27]

ಉಳಿದವರನ್ನು ತಿದ್ದುವಾಗಲೂ ಮನುಷ್ಯನು ಎಚ್ಚರ ವಹಿಸಬೇಕಾಗುತ್ತದೆ. "ಯಾವ ಪಂಡಿತನು ಒತ್ತಡವಿಲ್ಲದೇ ಜನರನ್ನು ಸಮನಾದ ಧರ್ಮದಿಂದ ತಿದ್ದುವನೋ" ಎಂದು

ಸಾರುವಾಗ ಬುದ್ಧನು ಪಂಡಿತನಿಗೆ ಉಪದೇಶದಲ್ಲಿ ನಯನಾಜೂಕುಗಳನ್ನು ವಿಧಿಸುತ್ತಾನೆ. ಹೇರಿಕೆಯ ಉಪದೇಶವು ಮತ್ತೊಬ್ಬರನ್ನು ನೋಯಿಸುತ್ತದೆ. ಜನರಲ್ಲಿ ಧಮ್ಮಪ್ರಜ್ಞೆಯನ್ನು ನಯವಾಗಿ ತರಬೇಕು ಎಂಬ ಇಂಗಿತವು ಇಲ್ಲಿದೆ. ಅಂತಹವನೇ ಮೇಧಾವಿ ಮತ್ತು ಧರ್ಮಸ್ಥ.

**ನ ತೇನ ಹೋತಿ ಧಮ್ಮಟ್ಠೋ ಯೇನತ್ಥಙ್ ಸಹಸಾ ನಯೇ**

**ಯೋ ಚ ಅತ್ಥಙ್ ಅನತ್ಥಙ್ ಚ ಉಭೋ ನಿಚ್ಛೆಯ್ಯ ಪಂಡಿತೋ**

**ಅಸಾಹಸೇನ ಧಮ್ಮೇನ ಸಮೇನ ನಯತೀ ಪರೇ**

**ಧಮ್ಮಸ್ಸ ಗುಟ್ಟೋ ಮೇಧಾವಿ ಧಮ್ಮಟ್ಠೋ ತಿ ಪವುಚ್ಚತಿ**[28]

ಯಾರು ಇಲ್ಲದ್ದನ್ನು ಹೇಳುತ್ತಾನೋ, ತಾನು ಮಾಡಿದ್ದನ್ನು ಮಾಡಿಲ್ಲವೆಂದು ಸಾಧಿಸುತ್ತಾನೋ ಅವನು ಸತ್ತ ಮೇಲೆ **ನಿರಯ**ವನ್ನು ಎಂದರೆ ನರಕವನ್ನು ಸೇರುತ್ತಾನೆ.

**ಅಭೂತವಾದೀ ನಿರಯಙ್ ಉಪೇತಿ**

**ಯೋ ಚಾ ಪಿ ಕತ್ವಾನ ಕರೋಮಿ ಚಾಹ**

**ಉಭೋ ಪಿ ತೆ ಪೆಚ್ಚ ಸಮಾ ಭವಂತಿ**

**ನಿಹೀನಕಮ್ಮಾ ಮನುಜಾ ಪರತ್ಥ**[29]

## ದಾನ

ದಾನವೆಂಬ ಗುಣವನ್ನು ಜಗತ್ತಿನ ಎಲ್ಲ ಸಂತರೂ ವೈಭವೀಕರಿಸುತ್ತಾರೆ. ಬುದ್ಧನೇನೂ ಇದಕ್ಕೆ ಹೊರತಲ್ಲ. ಬುದ್ಧನು ಜಿಪುಣನನ್ನು ದಾನದಿಂದ ಗೆಲ್ಲಬೇಕು ಎಂದು ಸಾರುತ್ತಾನೆ. ಎಂದರೆ ಜಿಪುಣನು ಮತ್ತಾರಿಗೂ ಕೊಡದಿದ್ದರೂ ಅವನಿಗೆ ನಾವು ಕೊಡುವ ಮೂಲಕ ಆತನ ಮನಸ್ಸಿನಲ್ಲಿ ಮಾರ್ಪಾಟು ತಂದು ಅವನು ಇತರರಿಗೂ ದಾನ ಮಾಡುವಂತೆ

ಪ್ರಚೋದಿಸಬೇಕೆಂದರ್ಥ. ಎಂದರೆ ನಾವು ಮಾಡುವ ದಾನದಿಂದ ಜಿಪುಣನ ಮನಸ್ಸು ಬದಲಾಗಿ ಮತ್ತೊಬ್ಬರಿಗೂ ಅವನು ದಾನ ಮಾಡುವಂತೆ ಪ್ರೇರೇಪಿಸುತ್ತದೆ.

**ಅಕ್ಕೋಧೇನ ಜಿನೇ ಕೋಧಜ್ ಅಸಾಧುಜ್ ಸಾಧುನಾ ಜಿನೇ**

**ಜಿನೇ ಕದಿರಿಯಜ್ ದಾನೇನ ಸಚ್ಚೇನ ಅಲಿಕವಾದಿನಜ್**[30]

ಕೇಳಿದವರಿಗೆ ನಮ್ಮ ಬಳಿಯಿರುವ ಸ್ವಲ್ಪವನ್ನೇ ನೀಡಬೇಕು. ಹೀಗೆ ಮಾಡಿದರೆ ನಾವು ದೇವತೆಗಳ ಸಾಮೀಪ್ಯವನ್ನು ಹೊಂದುತ್ತೇವೆಂದು ಬುದ್ಧನು ಸಾರುತ್ತಾನೆ.

**ಸಚ್ಚಜ್ ಭಣೆ ನ ಕುಜ್ಝೆಯ್ಯ ದಜ್ಜಾಪ್ಪಸ್ಮಿಂ ಪಿ ಯಾಚಿತೋ**

**ಏತೇಹಿ ತೀಹಿ ಠಾನೇಹಿ ಗಚ್ಛೇ ದೇವಾನ ಸಂತಿಕೇ**[31]

ಜಿಪುಣರು ದೇವಲೋಕಕ್ಕೆ ಹೋಗಲಾರರು. ತಿಳಿಗೇಡಿಗಳಾದ ಅವರು ದಾನ ಬುದ್ಧಿಯನ್ನು ಮೆಚ್ಚುವುದಿಲ್ಲ. ಯಾರು ದಾನ ಬುದ್ಧಿಯನ್ನು ಮೆಚ್ಚುವನೋ ಆತನನ್ನು ಬುದ್ಧನು ಧೀರನೆಂದು ಕರೆದು ಆತನೇ ದಾನದಿಂದ ಪರಲೋಕದಲ್ಲಿ ಸುಖಿಯಾಗುವನೆಂದು ಹೇಳುತ್ತಾನೆ.

**ನ ವೇ ಕದರಿಯಾ ದೇವಲೋಕಜ್ ವಜಂತಿ**

**ಬಾಲಾ ಹವೆ ನಪ್ಪಸಂಸತಿ ದಾನಜ್**

**ಧೀರೋ ಚ ದಾನಞ್ ಅನುಮೋದಮಾನೋ**

**ತೇನೇವ ಸೋ ಹೋತಿ ಸುಖೀ ಪರತ್ಥಾ**[32]

ಬುದ್ಧನು ದಾನವನ್ನು ಬೋಧಿಸುವಲ್ಲಿ ಪ್ರಾಯೋಗಿಕನೂ ಹೌದು. ಆತನ ಪ್ರಕಾರ ನಾವು ದಾನವನ್ನು ಶ್ರದ್ಧೆಯಿಂದ ಮಾಡಬೇಕಾಗಿದ್ದು ಅದು ನಮ್ಮ ಯೋಗ್ಯತೆಗೆ ಅನುಸಾರವಾಗಿ ಇರಬೇಕು. ಇಲ್ಲಿ **ಯಥಾಪಸಾದನಜ್** ಎಂಬ ಸಾಲಿನಲ್ಲಿ **ಪಸಾದ** ಶಬ್ದವನ್ನು ವಿವಿಧ ಅನುವಾದಕರು ವಿವಿಧ ರೀತಿಯಲ್ಲಿ ಅನುವಾದಿಸುತ್ತಾರೆ. ಉದಾಹರಣೆಗೆ ಡಾ.

ರಾಧಾಕೃಷ್ಣನ್‌ರವರು **ಪಸಾದ** ಶಬ್ದಕ್ಕೆ 'Friendliness' ಎಂದೂ,[33] ಮ್ಯಾಕ್ಸ್‌ಮುಲ್ಲರ್ 'Pleasure' ಎಂದೂ,[34] ಕೆ. ಆರ್. ನಾರ್ಮನ್‌ರವರು 'Inclination' ಎಂದೂ[35] ಮತ್ತು ಶ್ರೀ ಆಚಾರ್ಯ ಬುದ್ಧರಖ್ಖಿತರವರು 'Regard' ಎಂದೂ ಅನುವಾದಿಸುತ್ತಾರೆ.[36] ಈ ಎಲ್ಲ ಅನುವಾದಗಳಿಗಿಂತಲೂ ಸ್ವಲ್ಪ ಅರ್ಥಪೂರ್ಣ ಅನುವಾದವೆಂದರೆ ಸಚ್ಚಿದಾನೇಂದ್ರ ಸರಸ್ವತಿಗಳವರದು. ಅವರು **ಪಸಾದ** ಪದಕ್ಕೆ ಯೋಗ್ಯತೆ ಎಂದು ಅರ್ಥೈಸಿದ್ದಾರೆ. ಒಟ್ಟಾರೆ ಸಾಲ ಮಾಡಿ ದಾನ ಮಾಡಬೇಕಾದ ಅವಶ್ಯಕತೆಯಿಲ್ಲ ಎಂಬ ಅಂಶವು ಇಲ್ಲಿ ಸೂಚ್ಯವಾಗಿದೆ. ನಮ್ಮ ಯೋಗ್ಯತೆಗೂ ಮೀರಿ ದಾನ ಮಾಡುವುದು ಸರಿಯಲ್ಲ. ದಾನ ಮಾಡುವಲ್ಲಿ ನಮಗೂ ತೊಂದರೆಯಾಗಬಾರದು, ಪರರಿಗೂ ನೆರವಾಗಬೇಕು ಎಂಬ ಅಂಶವಿಲ್ಲಿದೆ. ಎಲ್ಲ ಮೌಲ್ಯಗಳಿಗೂ ಮೂಲಭೂತ ಮೌಲ್ಯವೆಂದರೆ ಅಹಿಂಸೆ. ಪರಹಿಂಸೆ ಎಷ್ಟು ತಪ್ಪೋ ತನ್ನನ್ನು ಹಿಂಸಿಸಿಕೊಂಡು ದಾನ ಮಾಡುವುದೂ ಅಷ್ಟೇ ತಪ್ಪು ಎಂಬುದನ್ನು ಬುದ್ಧನು ಇಲ್ಲಿ ಸೂಚ್ಯವಾಗಿ ಹೇಳುತ್ತಾನೆ.

**ದದಾತಿ ವೆ ಯಥಾಸದ್ಧಜ್ ಯಥಾ ಪಸಾದನಜ್ ಜನೋ,**

**ತತ್ಥ ಚೆ ಮಂಕು ಯೋ ಹೋತಿ ಪರೇಸಜ್ ಪಾನಭೋಜನೆ**

**ನ ಸೋ ದಿವಾ ವಾ ರತ್ತಿಜ್ ವಾ ಸಮಾಧಿಜ್ ಅಧಿಗಚ್ಛತಿ**

**ಯಸ್ಸ ಚೇತಜ್ ಸಮುಚ್ಛಿನ್ನಜ್ ಮೂಲಘಚ್ಚಜ್ ಸಮೂಹತಜ್**

**ಸಾ ವೆ ದಿವಾ ವಾ ರತ್ತಿಜ್ ವಾ ಸಮಾಧಿಜ್ ಅಧಿಗಚ್ಛತಿ**[37]

ದಾನವೆಂಬುದು ಶ್ರೇಷ್ಠವೆನ್ನುವುದು ಸರಿ. ಆದರೆ ದಾನದ ವಸ್ತುವಿನ ಮೇಲೆ ದಾನದ ಶ್ರೇಷ್ಠತೆಯು ನಿಲ್ಲುತ್ತದೆ. ಬುದ್ಧನ ಪ್ರಕಾರ ಎಲ್ಲ ದಾನಗಳಿಗಿಂತಲೂ ಧಮ್ಮದಾನವು ಶ್ರೇಷ್ಠವಾದುದು. ಎಂದರೆ ಮನುಷ್ಯನಿಗೆ ಯಾವುದು ಧಮ್ಮ ಮತ್ತು ಯಾವುದು ಅಧಮ್ಮ ಎಂಬುದನ್ನು ತಿಳಿಸುವುದು ಶ್ರೇಷ್ಠವಾದ ದಾನ.

**ಸಬ್ಬದಾನಜ್ ಧಮ್ಮದಾನಜ್ ಜಿನಾತಿ**

**ಸಬ್ಬಜ್ ರಸಜ್ ಧಮ್ಮರಸೋ ಜಿನಾತಿ**

**ಸಬ್ಬಜ್ ರತಿಜ್ ಧರ್ಮರತೀ ಜಿನಾತಿ**

**ತನ್ಹಕ್ಖಯೋ ಸಬ್ಬದುಕ್ಖಜ್ ಜಿನಾತಿ**[38]

ಪಾತ್ರವರಿತು ದಾನ ಮಾಡಬೇಕೆಂದು ಬುದ್ಧನು ತಿಳಿಸುತ್ತಾನೆ. ಪಾತ್ರಾಪಾತ್ರರನ್ನು ವಿವೇಚಿಸಿ, ಸತ್ಪಾತ್ರರಿಗೆ ಮಾತ್ರ ದಾನ ಮಾಡಬೇಕೆಂದು ಬುದ್ಧನು ಸಾರುತ್ತಾನೆ. ಯಾರಿಗೆ ರಾಗ, ದ್ವೇಷ, ಮೋಹ ಮತ್ತು ಇಚ್ಛೆಗಳಿಲ್ಲವೋ ಅವರಿಗೆ ಕೊಟ್ಟರೆ ಹೆಚ್ಚಿನ ಫಲವಾಗುತ್ತೆಂದು ಬುದ್ಧನು ಹೇಳುತ್ತಾನೆ. ಮತ್ತೊಬ್ಬರ ವಿಷಯದಲ್ಲಿ ಸತ್ಕಾರ ಬುದ್ಧಿಯಿಂದ ನಡೆದುಕೊಳ್ಳಬೇಕೆಂದು ಬುದ್ಧನು ಸಾರುತ್ತಾನೆ.

**ತಿಣದೋಸಾನಿ ಖೆತ್ತಾನಿ ರಾಗದೋಸಾ ಅಯಜ್ ಪಜಾ**

**ತಸ್ಮಾ ಹಿ ವೀತರಾಗೇಸು ದಿನ್ನಜ್ ಹೋತಿ ಮಹಪ್ಫಲಜ್**

**ಪಟಿಸಂಥಾರತ್ಯಸ್ಸ ಆಚಾರ ಕುಸಲೋ ಸಿಯಾ**

**ತತೋ ಪಾಮುಜ್ಜಬಹುಳೋ ದುಕ್ಖಸ್ಸಂತಜ್ ಕರಿಸ್ಸಸಿ**[39]

## ಅಪರಿಗ್ರಹ

ಮತ್ತೊಬ್ಬರಿಂದ ಏನ್ನನ್ನೂ ಸ್ವೀಕರಿಸದಿರುವುದು ಅಪರಿಗ್ರಹ. ನಿರ್ವಾಣಕ್ಕೆ ಇದೊಂದು ಸಾಧನವೆಂಬುದನ್ನು ಧಮ್ಮಪದದಲ್ಲಿ ಅಲ್ಲಲ್ಲಿ ತಿಳಿಸಲಾಗಿದೆ.

**ಯೇಸಜ್ ಸಂಬೋಧಿ – ಅಂಗೇಸು ಸಮ್ಮಾಚಿತ್ತಜ್ ಸುಭಾವಿತಜ್**

**ಆದಾನಪಟಿನಿಸ್ಸಗ್ಗೇ ಅನುಪಾದಾಯ ಯೇ ರತಾ**

**ಖೀನಾಸವಾ ಜುತಿಮಂತೋ ತೇ ಲೋಕೇ ಪರಿನಿಬ್ಬುತಾ**[40]

ಅಂದಮಾತ್ರಕ್ಕೆ ಯಾರಿಂದಲೂ ಏನನ್ನೂ ಸ್ವೀಕರಿಸಬಾರದೆಂದರ್ಥವಲ್ಲ. ಭಿಕ್ಷುವು ತನ್ನ ಬದುಕಿನ ನಿರ್ವಹಣೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸಬೇಕು. ಅದಕ್ಕಿಂತಲೂ ಹೆಚ್ಚಿನದಾದ ಯಾವ ಅನಗತ್ಯ ವಸ್ತುವನ್ನು ಅವನು ಯಾರಿಂದಲೂ ಸ್ವೀಕರಿಸಬಾರದು. ಹಾಗೆಯೇ ಅಗತ್ಯವಾಗಿ ಸ್ವೀಕರಿಸುವಾಗಲೂ ಅರ್ಹತೆಯನ್ನು ವಿಧಿಸಲಾಗಿದೆ. ಧಮ್ಮಪದವು ಯಾರಿಂದ ಭಿಕ್ಷೆಯನ್ನು ಸ್ವೀಕರಿಸಬಾರದೆಂಬುದನ್ನು ಸ್ಪಷ್ಟಪಡಿಸುತ್ತದೆ. ದುಃಶೀಲನೂ ಸಂಯಮರಹಿತನೂ ಆದವನಿಂದ ಅನ್ನವನ್ನು ಸ್ವೀಕರಿಸಬಾರದು. ಅಂತಹ ಅನ್ನವನ್ನು ತಿನ್ನುವುದಕ್ಕಿಂತಲೂ ಕಾದ ಕಬ್ಬಿಣದ ಗುಂಡನ್ನು ನುಂಗುವುದು ಮೇಲೆಂದು ಸಾರುತ್ತದೆ.

**ಸೆಯ್ಯೋ ಅಯೋಗುಳೋ ಭುತ್ತೋ ತತ್ತೋ ಅಗ್ಗಿಸಿಖೂಪಮೋ**

**ಯಞ್ ಚ ಭುಂಜೆಯ್ಯ ದುಸ್ಸೀಲೋ ರಠ್ಠಪಿಂಡಞ್ ಅಸಞ್ಞತೋ**[41]

## ಹಿರಿಯರ ಸೇವೆ

ಕೌಟುಂಬಿಕ ಮೌಲ್ಯಗಳಲ್ಲಿ ತಂದೆ-ತಾಯಿಗಳ ಸೇವೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಧಮ್ಮಪದವು ಬಹಳ ಸುಂದರವಾಗಿ ಈ ರೀತಿ ಹೇಳುತ್ತದೆ. "ಯಾರು ನಮಸ್ಕರಿಸುವ ಸ್ವಭಾವವುಳ್ಳವನೋ ಪ್ರತಿನಿತ್ಯವೂ ವೃದ್ಧರ ಸೇವೆಯನ್ನು ಮಾಡುತ್ತಿರುವನೋ ಆತನಿಗೆ ಆಯಸ್ಸು, ವರ್ಣ, ಸುಖ ಮತ್ತು ಬಲಗಳು ಹೆಚ್ಚುವವು". ಇಲ್ಲಿ ನಮಸ್ಕರಿಸುವ ಸ್ವಭಾವವೆಂದರೆ ಸಮಾಜದ ಸರಿಸಮಾನರನ್ನು ಮತ್ತು ಹಿರಿಯರನ್ನು ಗೌರವಿಸುವ ಸೌಜನ್ಯವುಳ್ಳವರೆಂದಾರ್ಥ. ಅಭಿವಾದನ ಶೀಲರೆಂದು ಬುದ್ಧನು ಇವರನ್ನು ಕರೆಯುತ್ತಾನೆ.

**ಅಭಿವಾದನಸೀಲಸ್ಸ ನಿಚ್ಚಞ್ ವದ್ಧಾಪಿಚಾಯಿನೋ**

**ಚತ್ತಾರೋ ಧಮ್ಮ ವದ್ಧಂತಿ ಆಯು, ವಣ್ಣೋ, ಸುಖಞ್, ಬಲಞ್**[42]

ಹಾಗೆಯೆ ಮುಂದುವರಿಯುತ್ತಾ ಒಂದೆಡೆ ಹೀಗೆ ಹೇಳಲಾಗಿದೆ. "ಕೆಲಸವಿದ್ದಾಗ ಸ್ನೇಹಿತರು ಸುಖಕರರಾಗುವರು, ಒಬ್ಬರಿಗೊಬ್ಬರು ಉಂಟಾಗುವ ಸಂತೋಷವು ಸುಖಕರವಾಗಿರುವುದು". ಸಮಾಜದಲ್ಲಿ ಸ್ನೇಹ ಸಹಕಾರಗಳೆಂಬ ಸಾಮಾಜಿಕ ಮೌಲ್ಯದ ಪ್ರಾಮುಖ್ಯತೆಯನ್ನು ಇದು ಒತ್ತು ನುಡಿಯುತ್ತದೆ.

**ಅತ್ಥಮಿ ಜಾತಮ್ಹಿ ಸುಖಾ ಸಹಾಯ**

**ತುಟ್ಠೀ ಸುಖಾ ಯಾ ಇತರೀತರೇನ**

**ಪುಞ್ಞಂ ಸುಖಂ ಜೀವಿತಸಂಖಯಮ್ಹಿ**

**ಸಬ್ಬಸ್ಸ ದುಕ್ಖಸ್ಸ ಸುಖಂ ಪಹಾಣಂ**[43]

ಇನ್ನೊಂದೆಡೆ ಕುಟುಂಬದಲ್ಲಿ ತಂದೆ ತಾಯಿಗಳ ಸೇವೆಗೆ ಹಾಗೂ ಸಮಾಜದಲ್ಲಿ ಸ್ನೇಹ ಸಹಕಾರಗಳ ಪ್ರಾಮುಖ್ಯತೆಗೆ ಧಮ್ಮಪದವು ಹೀಗೆ ಒತ್ತನ್ನು ನೀಡುತ್ತದೆ. "ಲೋಕದಲ್ಲಿ ಮಾತೃ ಸೇವೆಯು ಸುಖಕರವಾಗಿರುವುದು, ಪಿತೃಸೇವೆಯು ಸುಖಕರವಾಗಿರುವುದು".

**ಸುಖಾ ಮತ್ತೆಯ್ಯತಾ ಲೋಕೇ ಅಥೋ ಪತ್ತೆಯ್ಯತಾ ಸುಖಾ**

**ಸುಖಾ ಸಾಮಞ್ಞತಾ ಲೋಕೇ ಅಥೋ ಬ್ರಹ್ಮಞ್ಞತಾ ಸುಖಾ**[44]

# ಅಡಿ ಟಿಪ್ಪಣಿಗಳು

1. ಗಾಥೆಗಳು 129–133
2. ಗಾಥೆಗಳು 137–142
3. ಅಧ್ಯಾಯ–26
4. ಗಾಥೆ 184
5. ಗಾಥೆ 185
6. ಗಾಥೆ 197
7. ಗಾಥೆ 200
8. ಗಾಥೆ 225
9. ಗಾಥೆ 290
10. Dr.B.R.Ambedkar, ***Buddha and His Dhamma***, Buddha Bhoomi Publications, Nagpur, 1997, ಪು.264–268
11. ಗಾಥೆ 283
12. ಗಾಥೆ 300
13. ಗಾಥೆಗಳು 3–5
14. ಗಾಥೆ 291
15. ಗಾಥೆ 197
16. ಗಾಥೆ 201
17. ಗಾಥೆ 221
18. ಗಾಥೆ 224
19. ಗಾಥೆ 262
20. ಗಾಥೆ 263
21. ಗಾಥೆಗಳು 285–287
22. ಗಾಥೆಗಳು 320–321
23. ಗಾಥೆ 377
24. ಗಾಥೆ 184
25. ಗಾಥೆ 276
26. ಗಾಥೆಗಳು 223–224
27. ಗಾಥೆಗಳು 246–247

28. ಗಾಥೆಗಳು 256–257
29. ಗಾಥೆ 306
30. ಗಾಥೆ 223
31. ಗಾಥೆ 224
32. ಗಾಥೆ 177
33. S.Radhakrishnan, ***Dhammapada,*** Geoffrey Cumberlege, Oxford University Press, London, 1950, ಪು.138)
34. F.Max Muller, ***The Dhammapada***, Motilal Banarsidass Publishers, Delhi, 2013, ಪು.63
35. K.R.Norman, ***The Word of the Doctrine***, The Pali Text Society, Oxford, 2004 ಪು.37
36. Venerable Sri Acharya Buddharakkhita, ***Dhammapada***, Buddha Vacana Trust, Maha Bodhi Society, Bangalore, 1986, ಪು.99
37. ಗಾಥೆ 249
38. ಗಾಥೆ 354
39. ಗಾಥೆ 356 ಮತ್ತು 376
40. ಗಾಥೆ 89
41. ಗಾಥೆ 308
42. ಗಾಥೆ 109
43. ಗಾಥೆ 331
44. ಗಾಥೆ 332

**********

# ಅಧ್ಯಾಯ–8

# ನೈತಿಕ ಅಂಶಗಳು – ಆತ್ಮನಿಗ್ರಹ

## ಅಧ್ಯಾಯ–8

# ನೈತಿಕ ಅಂಶಗಳು – ಆತ್ಮನಿಗ್ರಹ

ಬುದ್ಧನು ಆತ್ಮನಿಗ್ರಹಿಯನ್ನು ಯುದ್ಧದಲ್ಲಿ ಸಾವಿರಾರು ಮಂದಿಯನ್ನು ಜಯಿಸುವ ಪರಾಕ್ರಮಿಗಿಂತಲೂ ಶ್ರೇಷ್ಠವಾಗಿಸುತ್ತಾನೆ.

**ಯೋ ಸಹಸ್ಸಜ್ ಸಹಸ್ಸೇನ ಸಂಗಾಮೆ ಮಾನುಸೇ ಜಿನೇ**

**ಏಕಜ್ ಚ ಜೆಯ್ಯ ಅತ್ತಾನಜ್ ಸಾ ವೆ ಸಂಗಾಮಜುತ್ತಮೋ**[1]

ಕಾರಣ, ಉಳಿದ ಜನರನ್ನು ಜಯಿಸುವುದಕ್ಕಿಂತ ತನ್ನನ್ನೇ ಜಯಿಸುವುದು ಒಳ್ಳೆಯದು. ತನ್ನನ್ನು ತಾನು ನಿಗ್ರಹಿಸಿರುವ ಪುರುಷನನ್ನು ಸೋಲಿಸುವುದಕ್ಕೆ ಬ್ರಹ್ಮನಿಂದಾಗಲೀ, ದೇವತೆಯಿಂದಾಗಲೀ, ಗಂಧರ್ವಮಾರರಿಂದಾಗಲೀ ಸಾಧ್ಯವಿಲ್ಲ.

**ಅತ್ತಾ ಹವೆ ಜಿತಜ್ ಸೆಯ್ಯೋ ಯಾ ಚಾಯಜ್ ಇತರಾ ಪಜಾ**

**ಅತ್ತದಂತಸ್ಸ ಪೋಸಸ್ಸ ನಿಚ್ಚಜ್ ಸಞ್ಞಾತಚಾರಿನೋ**

**ನೇವ ದೇವೋ ನ ಗಂಧಬ್ಬೋ ನ ಮಾರೋ ಸಹ ಬ್ರಹ್ಮುನಾ**

**ಜಿತಜ್ ಅಪಜಿತಜ್ ಕಯಿರಾ ತಥಾರೂಪಸ್ಸ ಜಂತುನೋ**[2]

ಧರ್ಮಶೀಲನಲ್ಲದ ನೂರುವರ್ಷಕ್ಕಿಂತಲೂ ಉತ್ತಮ ಧರ್ಮವನ್ನು ಕಂಡುಕೊಂಡವನ ಒಂದು ದಿನದ ಬಾಳೇ ಉತ್ತಮ. ಯಾರು ದುಶ್ಶೀಲನಾಗಿ, ಸಮಾಧಿಯಿಲ್ಲದವನಾಗಿ ಪ್ರಜ್ಞೆಯಿಲ್ಲದವನಾಗಿ, ಆಲಸನಾಗಿ, ಹೀನವೀರ್ಯನಾಗಿ ನೂರು ವರ್ಷ ಬಾಳುವನೋ ಅವನ ಬಾಳಿಗಿಂತಲೂ ಪ್ರಜ್ಞಾ, ಶೀಲ, ಸಮಾಧಿ ಮತ್ತು ಪ್ರಯತ್ನಶೀಲತೆಯನ್ನು (ವೀರ್ಯ) ಪಡೆದುಕೊಂಡಿರುವಾತನ ಬಾಳೇ ಉತ್ತಮ. ಹುಟ್ಟುಸಾವುಗಳನ್ನು ಸರಿಯಾಗಿ ಅರಿಯದೇ, ಅಮೃತಪದವನ್ನು ಮತ್ತು ಧಮ್ಮವನ್ನು ಕಾಣದೆ ನೂರು ವರ್ಷ ಬಾಳುವುದಕ್ಕಿಂತ ಹುಟ್ಟು ಸಾವುಗಳನ್ನು ಅರಿತು ಅಮೃತಪದವನ್ನು ಕಂಡು

ಉತ್ತಮ ಧರ್ಮವನ್ನು ಕಂಡುಕೊಂಡವನ ಒಂದು ದಿನದ ಬಾಳೇ ಉತ್ತಮವೆಂದು ಬುದ್ಧನು ಹೇಳುತ್ತಾನೆ.

**ಯೋ ಚೆ ವಸ್ಸಸತಙ್ ಜೀವೇ ದುಸ್ಸೀಲೋ ಅಸಮಾಹಿತೋ**

**ಏಕಾಹಙ್ ಜೀವಿತಙ್ ಸೆಯ್ಯೋ ಸೀಲವಂತಸ್ಸ ಝಾಯಿನೋ**

**ಯೋ ಚೆ ವಸ್ಸಸತಙ್ ಜೀವೇ ದುಪ್ಪಞ್ಞೋ ಅಸಮಾಹಿತೋ**

**ಏಕಾಹಙ್ ಜೀವಿತಙ್ ಸೆಯ್ಯೋ ಪಞ್ಞಾವಂತಸ್ಸ ಝಾಯಿನೋ**

**ಯೋ ಚೆ ವಸ್ಸಸತಙ್ ಜೀವೇ ಕುಸೀತೋ ಹೀನವೀರಿಯೋ**

**ಏಕಾಹಙ್ ಜೀವಿತಙ್ ಸೆಯ್ಯೋ ವಿರಿಯಙ್ ಆರಭತೋ ದಳ್ಹಙ್**

**ಯೋ ಚೆ ವಸ್ಸಸತಙ್ ಜೀವೇ ಅಪಸ್ಸಙ್ ಉದಯವ್ವಯಙ್**

**ಏಕಾಹಙ್ ಜೀವಿತಞ್ ಸೆಯ್ಯೋ ಪಸ್ಸತೊ ಉದಯಬ್ಬಯಙ್**

**ಯೋ ಚೆ ವಸ್ಸಸತಙ್ ಜೀವೇ ಅಪಸ್ಸಙ್ ಅಮತಙ್ ಪದಙ್**

**ಏಕಾಹಙ್ ಜೀವಿತಙ್ ಸೆಯ್ಯೋ ಪಸ್ಸತೋ ಅಮತಙ್ ಪದಙ್**

**ಯೋ ಚೆ ವಸ್ಸಸತಙ್ ಜೀವೇ ಅಪಸ್ಸಙ್ ಧಮ್ಮಮುತ್ತಮಮ್**

**ಏಕಾಹಙ್ ಜೀವಿತಙ್ ಸೆಯ್ಯೋ ಪಸ್ಸತೋ ಧಮ್ಮಮುತ್ತಮಙ್**[3]

ಬುದ್ಧನು ಪುಣ್ಯಾಪುಣ್ಯಗಳ ವೈಚಿತ್ರ್ಯಗಳನ್ನು ನಮ್ಮ ಮುಂದಿಡುತ್ತಾನೆ. ಪುಣ್ಯಾಪುಣ್ಯಗಳ ಹಿನ್ನೆಲೆಯಲ್ಲಿರುವ ಮನೋವೈಜ್ಞಾನಿಕತೆಯನ್ನು ನಮಗೆ ಮನಗಾಣಿಸುತ್ತಾನೆ. ಆತನ ಪ್ರಕಾರ ಮನುಷ್ಯನು ಪುಣ್ಯ ಮಾಡಲು ತ್ವರೆ ಮಾಡಬೇಕು. ಏಕೆಂದರೆ ಹಾಗೆ ಮಾಡಲು ಅಲಕ್ಷಿಸಿದರೆ ಅಥವಾ ಪುಣ್ಯವನ್ನು ಮುಂದೂಡಲು ಪ್ರಯತ್ನಿಸಿದರೆ ಮನಸ್ಸು ಪಾಪದಲ್ಲಿ ಆಸಕ್ತವಾಗುತ್ತದೆ. ಚಿತ್ತವು ಒಳ್ಳೆಯ ಅಥವಾ ಕೆಟ್ಟ ಮಾರ್ಗಗಳತ್ತ ಹರಿಯುತ್ತಲೇ ಇರುತ್ತದೆ. ಒಳಿತನ್ನು ಮುಂದೂಡಿದಲ್ಲಿ ಮನಸ್ಸು ಕೆಡುಕಿನತ್ತ ಗಮನವನ್ನು ಹರಿಸುವುದು ಖಂಡಿತ. ಏಕೆಂದರೆ ಅದು ಪುಣ್ಯಪಾಪಗಳಲ್ಲಿ ಯಾವುದಾದರೂ ಒಂದರಲ್ಲಂತೂ ಪ್ರತಿಕ್ಷಣವೂ ಆಸಕ್ತವಾಗಿಯೇ ಇರುತ್ತದೆ.

ಅದು ಪಾಪದತ್ತ ಹರಿದರೆ ಅದನ್ನು ತಕ್ಷಣವೇ ಪುಣ್ಯದತ್ತ ಸೆಳೆಯಲು ಪ್ರಯಾಸಪಡಬೇಕಾಗುತ್ತದೆ.

**ಅಭಿತ್ಥರೇಥ ಕಲ್ಯಾಣೇ ಪಾಪಾ ಚಿತ್ತಜ್ ನಿವಾರಯೇ**

**ದಂಡಜ್ ಹಿ ಕರೋತೋ ಪುಞ್ಞಜ್ ಪಾಪಸ್ಮಿಜ್ ರಮತೀ ಮನೋ**[4]

ಒಮ್ಮೆ ಮನುಷ್ಯನು ಪಾಪವನ್ನು ಬಿಟ್ಟರೆ ಮತ್ತೆ ಅದರತ್ತ ಅವನು ಗಮನ ಹರಿಸಬಾರದು ಮತ್ತು ಅದನ್ನು ಪುನಃ ಮಾಡಬಾರದು. ಆದರೆ ಅವನು ಪುಣ್ಯವನ್ನು ಮಾಡಿದರೆ ಅದನ್ನು ಅವನು ಪುನಃಪುನಃ ಮಾಡಬೇಕು, ಅದರಲ್ಲೇ ಆಸಕ್ತನಾಗಬೇಕು.

**ಪಾಪಞ್ ಚೆ ಪುರಿಸೋ ಕಯಿರಾ ನ ತಜ್ ಕಯಿರಾ ಪುನಪ್ಪುನಜ್**

**ನ ತಮ್ಹಿ ಚಂದಜ್ ಕಯಿರಾಥಾ ದುಕ್ಖೋ ಪಾಪಸ್ಸ ಉಚ್ಚಯೋ**

**ಪುಞ್ಞಜ್ ಚೆ ಪುರಿಸೋ ಕಯಿರಾ ಕಯಿರಾಥೇತಜ್ ಪುನಪ್ಪುನಜ್**

**ತಮ್ಹಿ ಚಂಚಜ್ ಕಯಿರಾಥಾ ಸುಖೋ ಪುಞ್ಞಸ್ಸ ಉಚ್ಚಯೋ**[5]

ಒಂದು ವಿಚಿತ್ರವೆಂದರೆ ಪಾಪವು ಪಕ್ವವಾಗುವವರೆಗೆ ಪಾಪಿಯು ತನ್ನ ಕರ್ಮವನ್ನು ಒಳ್ಳೆಯದೆಂದೇ ಭ್ರಮಿಸುವನು. ಒಮ್ಮೆ ಪಾಪವು ಪಕ್ವವಾಗಲು ಪ್ರಾರಂಭವಾಯಿತೆಂದರೆ ಅವನಿಗೆ ದುಃಖವು ಪ್ರಾರಂಭವಾಗುತ್ತದೆ. ಪುಣ್ಯದ ವಿಷಯವಾದರೋ ಇದಕ್ಕೆ ವಿರುದ್ಧ. ಮನುಷ್ಯನಿಗೆ ಪುಣ್ಯವು ಪಕ್ವವಾಗದಿರುವವರೆಗೆ ಅವನಿಗೆ ಪುಣ್ಯವು ಕಷ್ಟವಾಗಿಯೇ ಕಾಣುತ್ತದೆ. ಆದರೆ ಒಮ್ಮೆ ಪುಣ್ಯದ ಫಲವು ಗೋಚರವಾಯಿತೆಂದರೆ ಅವನಿಗೆ ಅದರ ಮೌಲ್ಯದ ಅರಿವಾಗಲು ಪ್ರಾರಂಭಿಸುತ್ತದೆ.

**ಪಾಪೋ ಪಿ ಪಸ್ಸತಿ ಭದ್ರಜ್ ಯಾವ ಪಾಪಜ್ ನ ಪಚ್ಚತಿ**

**ಯದಾ ಚ ಪಚ್ಚತೀ ಪಾಪಜ್ ಅಥ ಪಾಪೋ ಪಾಪಾನಿ ಪಸ್ಸತಿ**

**ಭದ್ರೋ ಪಿ ಪಸ್ಸತಿ ಪಾಪಜ್ ಯಾವ ಭದ್ರಜ್ ನ ಪಚ್ಚತಿ**

**ಯದಾ ಚ ಪಚ್ಚತಿ ಭದ್ರಜ್ ಅಥ ಭದ್ರೋ ಭದ್ರಾನಿ ಪಸ್ಸತಿ**[6]

ತಕ್ಷಣವೇ ಪಕ್ವವಾಗದೇ ಇರುವುದರಿಂದ ಪಾಪದಿಂದ ತನಗೆ ಏನೂ ಆಗುವುದಿಲ್ಲವೆಂದು ಮನುಷ್ಯನು ಭ್ರಮಿಸಬಾರದು. ಹಾಗೆ ಮಾಡುವುದು ತಿಳಿಗೇಡಿತನ. ಹಾಗೆ ಮಾಡುತ್ತಿದ್ದಲ್ಲಿ ಅವನು ಪಾಪವನ್ನು ಸ್ವಲ್ಪಸ್ವಲ್ಪವಾಗಿ ಕಲೆಹಾಕುತ್ತಿದ್ದಾನೆ. ಒಂದೊಂದು ತೊಟ್ಟಿನಂತೆ ನೀರು ಹನಿಯುತ್ತಿದ್ದರೆ ದೊಡ್ಡ ಕೊಡವು ತುಂಬುತ್ತದೆ. ಹನಿಯಿಂದ ಕೊಡವನ್ನು ತುಂಬುವುದಿಲ್ಲವೆಂಬುದು ಭ್ರಮೆಯಷ್ಟೆ. ಹಾಗೆಯೇ ಪಾಪದಿಂದ ತನಗೇನೂ ಕೆಡುಕಾಗಲಿಲ್ಲವೆಂಬ ಭಾವನೆಯು ಭ್ರಮೆ.

**ಮಾಪ್ಪಮಞ್ಞೇಥ ಪಾಪಸ್ಸ ನ ಮಙ್ ತಙ್ ಆಗಮಿಸ್ಸತಿ**

**ಉದಬಿಂದು – ನಿಪಾತೇನ ಉದಕುಂಭೋ ಪಿ ಪೂರತಿ**

**ಪೂರತಿ ಬಾಲೋ ಪಾಪಸ್ಸ ಥೋಕ – ಥೋಕಂ ಪಿ ಆಚಿನಙ್**[7]

ಬುದ್ಧನು ಈ ತತ್ವವನ್ನು ಪುಣ್ಯಕರ್ಮಗಳಿಗೂ ಅನ್ವಯಿಸುತ್ತಾನೆ. ಪುಣ್ಯದಿಂದ ತನಗೇನೂ ಒಳ್ಳೆಯದಾಗಲಿಲ್ಲವೆಂಬುದು ನಕರಾತ್ಮಕ ಧೋರಣೆ. ನೀರಿನ ಕೊಡದ ಉಪಮೆಯಂತೆ ಸ್ವಲ್ಪ ಸ್ವಲ್ಪವಾಗಿ ಕಲೆ ಹಾಕಿದರೂ ಮನುಷ್ಯನು ಪುಣ್ಯವಂತನಾಗುತ್ತಾನೆ. ತಕ್ಷಣವು ಫಲ ದೊರೆಯಲಿಲ್ಲವೆಂಬ ನಕಾರಾತ್ಮಕ ಧೋರಣೆಯನ್ನು ತೊರೆದು ಪುಣ್ಯದ ಬಗ್ಗೆ ಸಕಾರಾತ್ಮಕ ಭಾವನೆಯನ್ನು ಬಳಸಿಕೊಳ್ಳಬೇಕೆಂಬುದು ಬುದ್ಧನ ಸಂದೇಶ.

**ಮಾಪ್ಪಮಞ್ಞೇಥ ಪುಞ್ಞಸ್ಸ ನ ಮಙ್ ತಙ್ ಆಗಮಿಸ್ಸತಿ**

**ಉದಬಿಂದು ನಿಪಾತೇನ ಉದಕುಂಭೋ ಪಿ ಪೂರತಿ**

**ಪೂರತಿ ಧೀರೋ ಪುಞ್ಞಸ್ಸ ಥೋಕ – ಥೋಕಂ ಪಿ ಆಚಿನಙ್**[8]

ಧನಿಕ ವರ್ತಕನು ಹೆದರಿಕೆಯ ದಾರಿಯನ್ನು ಮತ್ತು ಬದುಕಬಯಸುವವನು ವಿಷಯವನ್ನು ಹೇಗೋ ಹಾಗೇ ಮನುಷ್ಯನು ಪಾಪಕರ್ಮಗಳನ್ನು ಬಿಡಬೇಕು. ಕೈಯಲ್ಲಿ

ಹುಣ್ಣಿಲ್ಲದವನಿಗೆ ಕೈಯಲ್ಲಿರುವ ವಿಷವು ಹೇಗೆ ತಟ್ಟದೋ ಹಾಗೆ ಪಾಪ ಮಾಡದವನಿಗೆ ಪಾಪದ ಫಲವು ತಟ್ಟದು.

**ವಾಣಿಜೋ ವ ಭಯಜ್ ಮಗ್ಗಜ್ ಅಪ್ಪಸತ್ಥೋ ಮಹದ್ಧನೋ**

**ವಿಸಜ್ ಜೀವಿತುಕಾಮೊ ವ ಪಾಪಾನಿ ಪರಿವಜ್ಜಯೇ**

**ಪಾಣಿಮ್ಹಿ ಚೆ ವಣೋ ನಸ್ಸ ಹರೆಯ್ಯ ಪಾಣಿನಾ ವಿಸಜ್**

**ನಾಬ್ಬಣಜ್ ವಿಸಂ ಅನ್ವೇತಿ ನತ್ಥಿ ಪಾಪಜ್ ಅಕುಬ್ಬತೋ**[9]

ಪಾಪವೆಂದರೆ ಇತರರಿಗೆ ಕೇಡು ಬಯಸುವುದೆಂದರ್ಥ. ಯಾರು ನಿರ್ದೋಷಿಗೆ ಕೇಡನ್ನು ಬಗೆಯುವನೋ ಅವನ ಪಾಪವು ಗಾಳಿಗೆ ಎದುರಾಗಿ ಎರಚಿದ ಮಣ್ಣಿನಂತೆ ತನ್ನ ಕಡೆಗೇ ಹಿಂತಿರುಗುವುದು.

**ಯೋ ಅಪ್ಪದುಟ್ಠಸ್ಸ ನರಸ್ಸ ದುಸ್ಸತಿ**

**ಸುದ್ಧಸ್ಸ ಪೋಸಸ್ಸ ಅನಂಗಣಸ್ಸ**

**ತಂ ಏವ ಬಾಲಜ್ ಪಚ್ಚೇತಿ ಪಾಪಜ್**

**ಸುಖಮೋ ರಜೋ ಪಟವಾತಜ್ ವಖಿಟ್ಟೋ**[10]

ಬುದ್ಧನು ಈ ವಿಷಯದಲ್ಲಿ ಕರ್ಮ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತಾನೆ. ನಾವು ಮಾಡಿದ ಕೆಟ್ಟ ಕೆಲಸದ ಫಲವನ್ನು ನಾವೇ ಅನುಭವಿಸಬೇಕಾಗುತ್ತದೆ. ಧಮ್ಮಪದದಲ್ಲಿ ಬುದ್ಧನು ನೈತಿಕ ಮೌಲ್ಯಗಳಿಗಾಗಲೀ, ತಾನು ಪ್ರತಿಪಾದಿಸಿದ ಕರ್ಮ ಸಿದ್ಧಾಂತಕ್ಕಾಗಲೀ ತಾತ್ವಿಕ ನೆಲೆಗಟ್ಟನ್ನು ನೀಡುವುದಿಲ್ಲ. ಅವನು ಜನರು ಪಾಲಿಸಬೇಕಾದ ನೀತಿಯನ್ನು ಸರಳವಾಗಿ ಮತ್ತು ನೇರವಾಗಿ ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಹೇಳುತ್ತಾ ಹೋಗುತ್ತಾನೆ. ಆತನಿಗೆ ಯಾವ ತಾತ್ವಿಕ ಮತ್ತು ಭೌತಾತೀತ ಜಿಜ್ಞಾಸೆಯೂ ಬೇಕಿಲ್ಲ. ಜನರಿಗೆ ನೀತಿಪಾಲನೆಯ ಮಹತ್ವವನ್ನು ಮನಗಾಣಿಸಲು ಆತನು ಸ್ವರ್ಗನರಕಗಳ ಪೌರಾಣಿಕ ಭಾಷೆಗಳನ್ನು

ಬಳಸುತ್ತಾನೆ. ಬಹುತೇಕ **ಇಡೀ ಧಮ್ಮಪದವು ಸ್ವರ್ಗನರಕ ಭಾಷೆಗಳನ್ನೇ ಬಳಸುತ್ತದೆಂಬುದು ಇಲ್ಲಿ ಗಮನಾರ್ಹವಾದ ವಿಷಯ**. ಆತನ ಪ್ರಕಾರ ಕೆಲವು ಪಾಪಿಗಳು ಈ ಮರ್ತ್ಯಲೋಕದಲ್ಲೇ ಜನನ ಮರಣ ಚಕ್ರಕ್ಕೆ ಸಿಲುಕುವರು. ಇನ್ನು ಕೆಲವು ಪಾಪಿಗಳು **ನಿರಯ**ವನ್ನು ಹೊಂದುತ್ತಾರೆ. ವೈದಿಕ ಮತದಂತೆ ಬೌದ್ಧರೂ ನರಕವನ್ನು ನಂಬುತ್ತಾರೆ. **ನಿರಯ**ವೆಂಬುದು ಮನುಷ್ಯನು ಅನುಭವಿಸುವ ಅನೇಕ ನರಕಗಳಲ್ಲಿ ಒಂದು. ಪುಣ್ಯವಂತರಾದರೋ, ಸ್ವರ್ಗವನ್ನು ಹೊಂದುತ್ತಾರೆ. ಆದರೆ ಯಾವ ಆಸ್ರವಗಳೂ ಇಲ್ಲದವರು ಪರಿನಿರ್ವಾಣವನ್ನು ಹೊಂದುತ್ತಾರೆ.

**ಗಬ್ಭಂ ಏಕೇ ಉಪ್ಪಜ್ಜಂತಿ ನಿರಯಜ್ ಪಾಪಕಮ್ಮಿನೋ**

**ಸಗ್ಗಜ್ ಸುಕತಿನೋ ಯಂತಿ ಪರಿನಿಬ್ಬಂತಿ ಅನಾಸವಾ**[11]

ಪಾಪಕರ್ಮಿಯು ತನ್ನ ಪಾಪಕರ್ಮದ ಫಲದಿಂದ ಬಿಡುಗಡೆ ಹೊಂದುವ ಸ್ಥಳವು ಈ ಜಗತ್ತಿನಲ್ಲಿ ಎಲ್ಲೂ ಇಲ್ಲವೆಂದು ಬುದ್ಧನು ಎಚ್ಚರಿಸುತ್ತಾನೆ. ಅವನು ಅಂತರಿಕ್ಷಕ್ಕೆ ಹೋಗಲಿ, ಕಡಲಿನ ನಡುವೆ ಅಡಗಿಕೊಳ್ಳಲಿ, ಬೆಟ್ಟಗಳ ಗವಿಯನ್ನು ಸೇರಲಿ, ಅವನು ಮಾಡಿದ ಪಾಪವು ಮೃತ್ಯುರೂಪದಲ್ಲಿ ಅವನನ್ನು ಕಾಡಿಯೇ ತೀರುತ್ತದೆಂದು ಬುದ್ಧನು ಹೇಳುತ್ತಾನೆ.

**ನ ಅಂತಲಿಕ್ಖೆ ನ ಸಮುದ್ದಮಜ್ಝೆ**

**ನ ಪಬ್ಬತಾನಜ್ ವಿವರಜ್ ಪವಿಸ್ಸ**

**ನ ವಿಜ್ಜತೀ ಸೋ ಜಗತಿಪ್ಪದೇಸೋ**

**ಯತ್ಥಟ್ಠಿತೋ ಮುಚ್ಚೆಯ್ಯ ಪಾಪಕಮ್ಮಾ**

**ನ ಅಂತಲಿಕ್ಖೆ ನ ಸಮುದ್ದಮಜ್ಝೆ ನ ಪಬ್ಬತಾನಜ್ ವಿವರಜ್ ಪವಿಸ್ಸ**

**ನ ವಿಜ್ಜತಿ ಸೋ ಜಗತಿಪ್ಪದೇಸೋ ಯತ್ಥಟ್ಠಿತಜ್ ಸಪ್ಪಸಹೇಥ ಮಚ್ಚು**[12]

ಈ ಸಂದರ್ಭದಲ್ಲಿ ಬುದ್ಧನ ಕರ್ಮಸಿದ್ಧಾಂತವನ್ನು ವಿಧಿವಾದವೆಂದು (Fatalism) ತಪ್ಪು ತಿಳಿಯಬಾರದೆಂಬುದನ್ನು ನಾವು ನೆನಪಿನಲ್ಲಿಡಬೇಕು. ನಮ್ಮ ಜೀವನದ ಆಗುಹೋಗುಗಳನ್ನು ನಮಗೆ ಬಾಹ್ಯವಾದ ಯಾವುದೋ ಒಂದು ಶಕ್ತಿಯು ನಿಯಂತ್ರಿಸುತ್ತಿಲ್ಲ. ಅದಕ್ಕೆ ಮೂಲಭೂತ ಕಾರಣವು ನಾವೇ ಎಂಬುದು ಬುದ್ಧನ ಕರ್ಮಸಿದ್ಧಾಂತದ ತಿರುಳು. ನೈತಿಕ ಬದುಕಿಗೆ ದೈವದಲ್ಲಿನ ನಂಬಿಕೆಯು ಅಗತ್ಯವೆಂದು ಕ್ಯಾಂಟನು ಹೇಳುವನಾದರೂ ಬುದ್ಧನು ಧಮ್ಮಪದದಲ್ಲಿ ಎಲ್ಲೂ ಇಡೀ ವಿಶ್ವವನ್ನು ಸೃಷ್ಟಿಸಿ ನಿಯಂತ್ರಿಸುವ ಈಶ್ವರನನ್ನು ಕುರಿತು ಪ್ರಸ್ತಾಪಿಸುವುದಿಲ್ಲ. ನಮ್ಮ ನೈತಿಕ ಬದುಕಿಗೆ ನಮ್ಮ ಇಚ್ಚಾಸ್ವಾತಂತ್ರ್ಯವು ಅಗತ್ಯವೆನಿಸಿದರೂ ದೈವದಲ್ಲಿನ ನಂಬಿಕೆಯು ಬುದ್ಧನ ಪ್ರಕಾರ ಅಗತ್ಯವಿಲ್ಲ. ಏಕೆಂದರೆ ನಮ್ಮ ಜೀವನದ ಆಗುಹೋಗುಗಳನ್ನು ನಿಯಂತ್ರಿಸುವುದು ನಮಗೆ ಬಾಹ್ಯವಾದ ಈಶ್ವರನೋ ಅಥವಾ ವಿಧಿಯೋ ಅಲ್ಲ. ನಮ್ಮ ಬದುಕಿನ ಆಗುಹೋಗುಗಳಿಗೆ ಕಾರಣ ನಾವೇ ಹೊರತು, ನಮಗೆ ಬಾಹ್ಯವಾದ ಯಾವ ದೇವರೂ ಅಲ್ಲ. ಅಂತಹ ದೇವರು ಇದ್ದಾನೋ ಇಲ್ಲವೋ ಎಂಬ ತಾತ್ವಿಕ ಪ್ರಶ್ನೆಯ ಬಗ್ಗೆ ಬುದ್ಧನು ತಲೆಕೆಡಿಸಿಕೊಳ್ಳುವುದಿಲ್ಲ, ಇತರರ ತಲೆಯನ್ನೂ ಕೆಡಿಸುವುದಿಲ್ಲ. ನಮ್ಮ ದುಃಖಕ್ಕೆ ಕಾರಣ ನಾವು ಮಾಡಿದ ಕೆಟ್ಟ ಕೆಲಸವಾದರೆ ನಮ್ಮ ಸುಖಕ್ಕೆ ಕಾರಣ ನಾವೇ ಮಾಡಬಹುದಾದ ಒಳ್ಳೆಯ ಕೆಲಸವೂ ಆಗಬಹುದು. ನಮ್ಮ ಇಚ್ಚಾಸ್ವಾತಂತ್ರ್ಯವನ್ನು ನಕರಾತ್ಮಕ ಮತ್ತು ಸಕಾರಾತ್ಮಕ – ಈ ಎರಡು ನಿಟ್ಟಿನಲ್ಲೂ ಬಳಸಬಹುದು. ಆದರೆ ಅದರ ಪರಿಣಾಮವನ್ನು ಎದುರಿಸಬೇಕಾದುದು ನಾವೇ ಎಂಬುದಾಗಿ ಬುದ್ಧನು ಇಲ್ಲಿ ಸೂಚ್ಯವಾಗಿ ಹೇಳುತ್ತಾನೆ. ನಾವು ಮಾಡಿಲ್ಲದ ಕೆಟ್ಟ ಕೆಲಸದ ಫಲವು ನಮ್ಮನ್ನು ಕಾಡಲಾರದು. ಹಾಗೆಯೇ ನಾವು ಮಾಡಿದ ಸತ್ಕಾರ್ಯದ ಫಲವೂ ನಮಗೆ ಬರದಿರಲಾರದೆಂದು ಬುದ್ಧನು ಗ್ರಂಥದುದ್ದಕ್ಕೂ ಸ್ಪಷ್ಟವಾಗಿ ನಮಗೆ ಪದೇ ಪದೇ ತಿಳಿಸಿಕೊಡುತ್ತಾನೆ. ಆತನಿಗೆ ದೇವರಿದ್ದಾನೋ ಇಲ್ಲವೋ, ಮನುಷ್ಯನು ಸತ್ತಮೇಲೂ ಆತ್ಮನಾಗಿ

ಇರುವನೋ ಇಲ್ಲವೋ ಎಂಬ ತಾತ್ವಿಕ ಚರ್ಚೆಯು ಮುಖ್ಯವಲ್ಲವೇ ಅಲ್ಲ. ಬದುಕಿಗೊಂದು ನೀತಿ, ನೀತಿಯಿಂದ ವ್ಯಕ್ತಿತ್ವ ಮತ್ತು ವ್ಯಕ್ತಿತ್ವದಿಂದ ಉತ್ತಮ ಸಮಾಜದ ನಿರ್ಮಾಣದ ಸಾಧ್ಯತೆ ಆತನಿಗೆ ಮುಖ್ಯವಾಗಿತ್ತು.

ಬುದ್ಧನು ಮುಂದುವರೆಯುತ್ತಾ ಹೀಗೆ ಹೇಳುತ್ತಾನೆ: ತಿಳಿಗೇಡಿಯಾದವನಿಗೆ ಪಾಪ ಮಾಡುತ್ತಿರುವಾಗ ಎಚ್ಚರವಿರುವುದಿಲ್ಲ, ತಾನು ಬುದ್ಧಿವಂತನಂತೆ ವರ್ತಿಸುತ್ತಾನೆ. ಅದರ ಫಲವು ಅವನನ್ನು ಕಾಡಲು ಪ್ರಾರಂಭವಾದಾಗ ಎತ್ತಲೋ ನೋಡುತ್ತಾ ಬೆಂಕಿಯನ್ನು ಮುಟ್ಟಿ ಸುಡಿಸಿಕೊಂಡವನಂತೆ ನೋವನ್ನು ಅನುಭವಿಸುತ್ತಾನೆ.

**ಅಥ ಪಾಪಾನಿ ಕಮ್ಮಾನಿ ಕರಜ್ ಬಾಲೋ ನ ಬುಜ್ಝತಿ**

**ಸೇಹಿ ಕಮ್ಮೇಹಿ ದುಮ್ಮೇಧೋ ಅಗ್ಗಿದಡ್ಢೋ ವ ತಪ್ಪತಿ**[13]

ಮನುಷ್ಯನು ತನಗೆ ತಾನೇ ಒಡೆಯ. ಅವನಿಗೆ ಬಾಹ್ಯವಾದ ಯಾವ ಒಡೆಯನೂ ಇಲ್ಲ. ತನ್ನನ್ನು ತಾನು ದಮನ ಮಾಡಿಕೊಂಡರೆ ಅವನು ದುರ್ಲಭವಾದ ಪದವಿಯನ್ನು ಪಡೆದುಕೊಳ್ಳುತ್ತಾನೆ.

ಪಾಪದ ಮೂಲವು ಮನುಷ್ಯನೇ. ಅದು ಮನುಷ್ಯನಿಂದಲೇ ಹುಟ್ಟಿದ್ದು. ಅದು ವಜ್ರವು ಕಲ್ಲಿನ ರತ್ನವನ್ನು ಹೇಗೋ ಹಾಗೆ ಅವನನ್ನು ಕೊರೆಯುತ್ತದೆ.

**ಅತ್ತಾ ಹಿ ಅತ್ತನೋ ನಾಥೋ ಕೋ ಹಿ ನಾಥೋ ಪರೋ ಸಿಯಾ**

**ಅತ್ತನಾ ವಾ ಸುದಂತೇನ ನಾಥಜ್ ಲಭತಿ ದುಲ್ಲಭಜ್**

**ಅತ್ತನಾ ವ ಕತಜ್ ಪಾಪಜ್ ಅತ್ತಜಜ್ ಅತ್ತಸಂಭವಜ್**

**ಅಭೀಮಂಥತಿ ದುಮ್ಮೇಧಜ್ ವಜಿರಜ್ ವಸಮಯಜ್ ಮಣಿಜ್**[14]

ಬುದ್ಧನ ಪ್ರಕಾರ ಕೆಟ್ಟಕೆಲಸವನ್ನು ಮಾಡುವುದು ಸುಲಭ ಮತ್ತು ಒಳ್ಳೆಯದನ್ನು ಮಾಡುವುದು ಕಷ್ಟ. ಮನುಷ್ಯನು ಪ್ರಯತ್ನಪೂರ್ವಕವಾಗಿ ಪಾಪವನ್ನು ತ್ಯಜಿಸಿ ಪುಣ್ಯಕರ್ಮಗಳನ್ನು ಮಾಡಬೇಕು. ಮನುಷ್ಯನು ಮಾಡಿದ ಪಾಪವು ಅವನನ್ನು ಕ್ಲೇಶಗೊಳಿಸುವುದು ಮತ್ತು ಮಾಡದ ಪಾಪವು ಅವನನ್ನು ಶುದ್ಧಿಗೊಳಿಸುವುದು. ಶುದ್ಧಿ ಮತ್ತು ಅಶುದ್ಧಿಗಳೆರಡೂ ಮನುಷ್ಯನಿಗೆ ಸೇರಿವೆಯೇ ಹೊರತು ಒಬ್ಬನು ಮತ್ತೊಬ್ಬನನ್ನು ಶುದ್ಧಗೊಳಿಸಲಾರ. ಸಾಧನೆಯಲ್ಲಿ ಸ್ವಾವಲಂಬನೆಯ ಪ್ರಾಮುಖ್ಯತೆಯನ್ನು ಬುದ್ಧನು ಒತ್ತಿ ನುಡಿಯುತ್ತಾನೆ.

**ಸುಕರಾನಿ ಅಸಾಧೂನಿ ಅತ್ತನೋ ಅಹಿತಾನಿ ಚ**

**ಯಜ್ ವೇ ಹಿತಜ್ ಚ ಸಾಧೂಚ ತಜ್ ವೇ ಪರಮದುಕ್ಕರಜ್**[15]

**ಅತ್ತನಾ ವ ಕತಜ್ ಪಾಪಜ್ ಅತ್ತನಾ ಸಂಕಿಲಿಸ್ಸತಿ**

**ಅತ್ತನಾ ಅಕತಜ್ ಪಾಪಜ್ ಅತ್ತನಾ ವ ವಿಸುಜ್ಝತಿ**

**ಸುದ್ಧಿ ಅಸುದ್ಧಿ ಪಚ್ಚತ್ತಜ್ ನಾಞ್ಞಜ್ ಅಞ್ಞೋ ವಿಸೋಧಯೇ**[16]

ಬುದ್ಧನು ಒಬ್ಬ ಪ್ರಾಯೋಗಿಕ ಚಿಂತಕ. ಆತನ ಬೋಧನೆಗಳಲ್ಲಿ ಆದರ್ಶ ಮತ್ತು ಸಾಮಾನ್ಯ ಪ್ರಜ್ಞೆಗಳೆರಡೂ ಎದ್ದು ಕಾಣುತ್ತವೆ. ಅವನೆಂದಿಗೂ ಮನುಷ್ಯನು ಪಾಲಿಸಲು ಅಸಾಧ್ಯವಾದ ಆದರ್ಶಗಳನ್ನು ನಮ್ಮ ಮುಂದಿಡಲಿಲ್ಲ. ಆತನೊಬ್ಬ ನಿಜವಾದ ಸಮತಾವಾದಿ. ಎಂದರೆ ಆದರ್ಶಗಳನ್ನು ಮುಂದಿಡುವಲ್ಲಿ ಆತನು ಜನಸಾಮಾನ್ಯ ಮತ್ತು ಭಿಕ್ಷು – ಇವರಿಬ್ಬರೂ ಸುಲಭವಾಗಿ ಪಾಲಿಸಬಹುದಾದ ಆದರ್ಶಗಳನ್ನು ಉಪದೇಶಿಸಿದ. ಶ್ರೇಣೀಕೃತ ಸಮಾಜದಲ್ಲಿರುವ ಲೋಪದೋಷಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಆತನು ತೋರಿದ ಸಮತೋಲನ ದೃಷ್ಟಿ ಅಸಾಮಾನ್ಯವಾಗಿತ್ತು. ಈ ನಿಟ್ಟಿನಲ್ಲೇ ಆತನು ಹೀಗೆ ಉಪದೇಶಿಸುತ್ತಾನೆ, "ತನ್ನ ಪ್ರಯೋಜನವನ್ನು ಕೆಡಿಸಿಕೊಂಡು ಮತ್ತೊಬ್ಬರ ಪ್ರಯೋಜನದ ಬಗ್ಗೆ ಒಬ್ಬನು

ತಲೆಕೆಡಿಸಿಕೊಳ್ಳಬಾರದು. ತನ್ನ ಹಿತವು ಯಾವುದೆಂದು ತಿಳಿದುಕೊಂಡು ತನಗೆ ಹಿತವಾದ ಕಾರ್ಯದಲ್ಲೇ ಆತನು ತೊಡಗಬೇಕು".

**ಅತ್ತದತ್ತಜ್ ಪರತ್ಥೇನ ಬಹುನಾ ಪಿ ನ ಹಾಪಯೆ**

**ಅತ್ತದತ್ತಜ್ ಅಭಿಞ್ಞಾಯ ಸಕತ್ಥಪಸುತೋ ಸಿಯಾ**[17]

ಇಲ್ಲಿ ಹಿತವೆಂದರೆ ಸ್ವಾರ್ಥ ಲೌಕಿಕತೆಯಲ್ಲ. ಮನುಷ್ಯನು ಮೊದಲು ತನ್ನ ಆಧ್ಯಾತ್ಮಿಕ ಹಿತವನ್ನು ಸಂಪಾದಿಸಿ ಅನಂತರ ಇತರರ ಹಿತದಲ್ಲಿ ತೊಡಗಬೇಕು ಎಂದರ್ಥ. ಪ್ರತಿಯೊಬ್ಬನೂ ಅವನವನ ಏಳಿಗೆಯನ್ನು ಅವನೇ ಕಂಡುಕೊಳ್ಳಬೇಕು. ತನ್ನ ಪ್ರಯೋಜನಕ್ಕೆ ಧಕ್ಕೆ ತಂದುಕೊಂಡು ಇತರರ ಪ್ರಯೋಜನದ ಬಗ್ಗೆ ತಲೆಕೆಡಿಸಿಕೊಳ್ಳುವವನು ತನ್ನ ಏಳಿಗೆಯಲ್ಲಿ ಅಧಃಪತನ ಹೊಂದುತ್ತಾನೆಂದರ್ಥ.

ಯಾರು ಕಾಯವನ್ನು ಹತೋಟಿಯಲ್ಲಿ ಇಟ್ಟಿರುವರೋ ಅವರು ಸ್ಥಿರವಾದ ಹಾಗೂ ಶೋಕವಿಲ್ಲದ ನಿರ್ವಾಣ ಪದವಿಯನ್ನು ಪಡೆಯುತ್ತಾರೆ. ಈ ಕಾಯವನ್ನು ತಪ್ಪುಹಾದಿಗೆ ಹೋಗದಂತೆ ಹಿಡಿತದಲ್ಲಿಟ್ಟುಕೊಂಡಿರಬೇಕು. ಎಂದರೆ ಶರೀರವು ಒಳ್ಳೆಯ ನಡತೆಯಲ್ಲಿ ತೊಡಗುವಂತೆ ಮಾಡಬೇಕು. ಇದು ಮಾತು ಮನಸ್ಸುಗಳಿಗೂ ಅನ್ವಯಿಸುತ್ತದೆ. ಯಾರು ಮಾತು ಮನಸ್ಸು ಮತ್ತು ಶರೀರಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವರೋ ಅವರೇ ಧೀರರು.

**ಅಹಿಂಸಕಾ ಯೇ ಮುನಯೋ ನಿಚ್ಚಜ್ ಕಾಯೇನ ಸಂವುತಾ**

**ತೇ ಯಂತಿ ಅಚ್ಚುತುಜ್ ಠಾನಜ್ ಯತ್ಥ ಗಂತ್ವಾ ನ ಸೋಚರೇ**[18]

**ಕಾಯಪ್ಪಕೋಪಜ್ ರಕ್ಖೆಯ್ಯ ಕಾಯೇನ ಸಂವುತೋ ಸಿಯಾ**

**ಕಾಯದುಚ್ಚರಿತಜ್ ಹಿತ್ವಾ ಕಾಯೇನ ಸುಚರಿತಜ್ ಚರೇ**

**ವಾಚೀಪಕೋಪಜ್ ರಕ್ಖೆಯ್ಯ ವಾಚಾಯ ಸಂವುತೋ ಸಿಯಾ**

**ವಾಚೀದುಚ್ಚರಿತಙ್ ಹಿತ್ವಾ ವಾಚಾಯ ಸುಚರಿತಙ್ ಚರೇ**

**ಮನೋಪಕೋಪಙ್ ರಕ್ಖೆಯ್ಯ ಮಾನಸಾ ಸಂವುತೋ ಸಿಯಾ**

**ಮನೋದುಚ್ಚರಿತಙ್ ಹಿತ್ವಾ ಮನಸಾ ಸುಚರಿತಙ್ ಚರೇ**

**ಕಾಯೇನ ಸಂವುಕಾ ಧೀರಾ ಅಥೋ ವಾಚಾಯ ಸಂವುತೋ**

**ಮನಸಾ ಸಂವುತಾ ಧೀರಾ ತೇ ವೇ ಸುಪರಿಸಂವುತಾ**[19]

ಪಾಪಿಯು ನಾಚಿಕೆಯಿಲ್ಲದವನೂ, ಕಾಗೆಯಂತೆ ಸ್ವಾರ್ಥಿಯೂ ಮತ್ತು ಮತ್ತೊಬ್ಬರ ಕೆಲಸವನ್ನು ಕೆಡಿಸುವವನೂ ಆಗಿರುತ್ತಾನೆ. ಅವನಿಗೆ ಆ ಪಾಪಜೀವನವೇ ಸುಖಮಯವಾಗಿರುತ್ತದೆ. ಆದರೆ ಪುಣ್ಯವಂತನು ನಾಚಿಕೆಯುಳ್ಳವನೂ, ಯಾವಾಗಲೂ ಶುಚಿವಂತನೂ ಆಲಸ್ಯವಿಲ್ಲದವನೂ, ವಿನಯವುಳ್ಳವನೂ ಮತ್ತು ವಿವೇಕಿಯೂ ಆಗಿರುತ್ತಾನೆ. ಇಂತಹ ಪುಣ್ಯಜೀವನವು ಕಷ್ಟಕರವೆಂಬುದು ಬುದ್ಧನ ಮತ.

**ಸುಜೀವಙ್ ಅಹಿರೀಕೇನ ಕಾಕಸೂರೇನ ಧಂಸಿನಾ**

**ಪಕ್ಖಂದಿನಾ ಪಗಬ್ಭೇನ ಸಂಕಿಲಿಟ್ಠೇನ ಜೀವಿತಙ್**[20]

**ಅಸಜ್ಝಾಯಮಲಾ ಮಂತಾ ಅನುಟ್ಠಾನಮಲಾ ಘರಾ**

**ಮಲಙ್ ವಣ್ಣಸ್ಸ ಕೋಸಜ್ಜಙ್ ಪಮಾದೋ ರಕ್ಖತೋ ಮಲಙ್**[21]

ಬುದ್ಧನು ಧರ್ಮಜ್ಞಾನಿಗೆ ಒಂದು ಮಾನದಂಡವನ್ನು ನೀಡುತ್ತಾನೆ. ಯಾರು ವಿಷಯವನ್ನು ತಕ್ಷಣವೇ ನಿರ್ಧರಿಸುತ್ತಾನೋ ಅವನು ಧರ್ಮಸ್ಥನಲ್ಲ. ಯಾರು ಅರ್ಥಾನರ್ಥಗಳನ್ನು ನಿಶ್ಚಯಿಸಿ ಇತರರನ್ನು ಬಲವಂತಪಡಿಸದೇ ಅವರನ್ನು ತಿದ್ದುವನೋ ಅವನೇ ಧರ್ಮಸ್ಥ. ಎಂದರೆ ಧರ್ಮಸ್ಥನು ಯಾವುದೇ ವಿಷಯವನ್ನು ಕುರಿತು ತನ್ನ ತೀರ್ಮಾನವನ್ನು ತಡೆಹಿಡಿಯುತ್ತಾನೆ. ಶೀಘ್ರ ತೀರ್ಮಾನವನ್ನು ಕೈಗೊಳ್ಳುವುದಿಲ್ಲ. ಪಾಶ್ಚಾತ್ಯ ತತ್ವಶಾಸ್ತ್ರದ ಸಂವೃತಿಶಾಸ್ತ್ರದ ಪರಿಭಾಷೆಯನ್ನು ಬಳಸಿಕೊಳ್ಳಬೇಕೆಂದರೆ ಅವನು Suspension of Judgement ಎಂಬ ತತ್ವಕ್ಕೆ ಮೊರೆ ಹೋಗುತ್ತಾನೆ. Husserl

ಭಾಷೆಯನ್ನು ಬಳಸಬೇಕೆಂದರೆ ಇದನ್ನು Epoche ಎನ್ನುತ್ತಾರೆ.[22] ಧರ್ಮಸ್ಥನಿಗೆ ಇತರರಿಗೆ ಧರ್ಮವನ್ನು ಬೋಧಿಸುವಲ್ಲಿ ಸಾಮಾಜಿಕ ಕಳಕಳಿ ಇರುತ್ತದೆ. ಆದರೆ ಆತನು ಒತ್ತಾಯಪೂರ್ವಕವಾಗಿ ಇತರರಿಗೆ ಬೋಧಿಸುವುದಿಲ್ಲ. ಬಹಳ ಮಾತಾಡುವವನು ಪಂಡಿತನಲ್ಲ. ಕ್ಷೇಮವನ್ನುಂಟುಮಾಡುವವನು, ವೈರಿಯಲ್ಲದವನು ಮತ್ತು ಭಯವಿಲ್ಲದವನು ಪಂಡಿತನಾಗುತ್ತಾನೆ. ಇಲ್ಲಿ ಭಯರಾಹಿತ್ಯವೆಂದರೆ ತಾನೂ ಭಯಗೊಳ್ಳುವುದಿಲ್ಲ ಮತ್ತು ಇತರರನ್ನೂ ಭಯಪಡಿಸುವುದಿಲ್ಲವೆಂದರ್ಥ. ಬಹಳ ಮಾತನಾಡಿದ ಮಾತ್ರಕ್ಕೆ ಒಬ್ಬನು ಧರ್ಮಜ್ಞನಲ್ಲ. ಸ್ವಲ್ಪವೇ ಅರಿತಿದ್ದರೂ ಅದನ್ನು ಆಚರಣೆಗೆ ತರುವವನೇ ಧರ್ಮಜ್ಞ.

**ತನ್ಹಾಯ ಜಾಯತೀ ಸೋಕೋ ತನ್ಹಾಯ ಜಾಯತೀ ಭಯಜ್**

**ತನ್ಹಾಯ ವಿಪ್ಪಮುತ್ತಸ್ಸ ನತ್ಥಿ ಸೋಕೋ ಕತೋ ಭಯಜ್**

**ಸೀಲದಸ್ಸನ ಸಂಪನ್ನಜ್ ಧಮ್ಮಟ್ಠಜ್ ಸಚ್ಚವೇದಿನಜ್**

**ಅತ್ತನೋ ಕಮ್ಮ ಕುಬ್ಬಾನಜ್ ತಜ ಜನೋ ಕುರುತೇ ಪಿಯಜ್**

**ಚಂದಜಾತೋ ಅನಕ್ಖಾತೇ ಮನಸಾ ಚ ಫುಟೋ ಸಿಯಾ**

**ಕಾಮೇಸು ಚ ಅಪ್ಪಟಬದ್ಧಚಿತ್ತೋ ಉದ್ಧಜ್ ಸೋತೋ ತಿ ವುಚ್ಚತಿ**

**ಚಿರಪ್ಪವಾಸಿಜ್ ಪುರಿಸಜ್ ದೂರತೋ ಸೊತ್ತಿಮ್ ಆಗತಮ್**

**ಞಾತಿಮತ್ತಾ ಸುಹಜ್ಜಾ ಚ ಅಭಿಮಂದಂತಿ ಆಗತಜ್**[23]

ಮಾಡುವುದನ್ನು ಬಿಟ್ಟು ಮಾಡಬಾರದನ್ನು ಮಾಡುತ್ತಿದ್ದರೆ ಅಂತಹವರ ಆಸ್ರವಗಳು ಹೆಚ್ಚುತ್ತವೆ. ಕಾಮ, ಭವ, ಅವಿದ್ಯೆಗಳೇ ಮುಂತಾದವು ಆಸ್ರವಗಳು. ಬುದ್ಧನು ನಾವು ಆಚರಿಸಬೇಕಾದ ಧಮ್ಮದ ಸ್ವರೂಪದ ಬಗ್ಗೆ ನಿರ್ದಿಷ್ಟವಾಗಿದ್ದಾನೆ. ಆತನ ಪ್ರಕಾರ ನಾವು ಮಾಡುವ ಕರ್ಮವು ಬೇಜವಾಬ್ದಾರಿಯುತವಾಗಿರಬಾರದು, ಕ್ಲೇಶಗಳಿಂದ ಕೂಡಿರಬಾರದು, ಆಚರಿಸಲ್ಪಟ್ಟ ಬ್ರಹ್ಮಚರ್ಯವು ಸ್ವಇಚ್ಛೆಯಿಂದ ಹೊರಹೊಮ್ಮಬೇಕೇ ಹೊರತು ಮತ್ತೊಬ್ಬರ ಭಯದಿಂದಲ್ಲ. ಎಂದರೆ ಸಂಘದವರು ಎಲ್ಲಿ ಹೊರಹಾಕುವರೋ ಎಂಬ ಭಯದಿಂದ

ಬ್ರಹ್ಮಚರ್ಯೆಯು ಆಚರಿಸಲ್ಪಡಬಾರದು. ಹಾಗೇ ಮಾಡಿದ ಕರ್ಮ, ವ್ರತ, ಕ್ಲೇಶಗಳು ಫಲಕಾರಿಯಲ್ಲ. ಕ್ಲೇಶಗಳಿಂದ ಒಡಗೂಡಿದ ವ್ರತವನ್ನು ನಿರಾಕರಿಸುವಲ್ಲಿ ಮಧ್ಯಮ ಮಾರ್ಗದ ಮಹತ್ವವು ಎದ್ದು ಕಾಣುತ್ತದೆ.

**ಯಜ್ ಕಿಂಚಿ ಸಿಥಿಲಜ್ ಕಮ್ಮಜ್**

**ಸಂಕಿಲಿಟ್ಠಜ್ ಚ ಯಜ್ ವತಜ್**

**ಸಂಕಸ್ಸರಜ್ ಬ್ರಹ್ಮಚರಿಯಜ್**

**ನ ತಜ್ ಹೋತಿ ಮಹಪ್ಫಲಜ್**[24]

ಮಾಡಿದರೆ ಚೆನ್ನಾಗಿ ಮಾಡಬೇಕೆನ್ನುವಾಗ ಬುದ್ಧನು **"ಯೋಗಃ ಕರ್ಮಸು ಕೌಶಲಂ"** ಎಂದರೆ ಕರ್ಮದಲ್ಲಿನ ಕೌಶಲವೇ ಯೋಗವೆಂಬ ಗೀತೆಯ ಹೇಳಿಕೆಯನ್ನು ನೆನಪಿಗೆ ತರುತ್ತಾನೆ.[25] ಯಾವ ಪರಿವ್ರಾಜಕನು ತನ್ನ ಚರ್ಯೆಯಲ್ಲಿ ಹೊಣೆಗೇಡಿಯಾಗಿರುವನೋ ಅವನು ಧೂಳನ್ನು ಮೈಮೇಲೆ ಹಾಕಿಕೊಂಡಂತೆ ಮಲಿನನಾಗುತ್ತಾನೆ.

**ಕಯಿರಾ ಚೆ ಕರಿರಾಥೇತಜ್ ದಳ್ಹಂ ಏನಂ ಪರಕ್ಕಮೆ**

**ಸಠಿಲೋ ಹಿ ಪರಿಬ್ಬಾಜೋ ಭೀಯೋ ಆತಿರತೆ ರಜಜ್**[26]

ಹೀಗೆ ಕಾರ್ಯದಲ್ಲಿನ ಕೌಶಲತೆ ಮತ್ತು ಪರಿಪೂರ್ಣತೆಗಳಿಗೆ ಬುದ್ಧನು ಮಹತ್ವವನ್ನು ನೀಡುತ್ತಾನೆ. ಬೇಜವಾಬ್ದಾರಿತನ ಭಿಕ್ಷುವಿಗಾಗಲೀ ಜನಸಾಮಾನ್ಯನಿಗಾಗಲೀ ಸಲ್ಲದು. ದುಷ್ಕೃತ್ಯವನ್ನು ಮಾಡದಿರುವುದು ಒಳ್ಳೆಯದು. ಇಲ್ಲದಿದ್ದರೇ ಮನುಷ್ಯನು ಪಶ್ಚಾತ್ತಾಪಪಡಬೇಕಾಗುತ್ತದೆ. ಹಾಗೆಯೇ ಸುಕೃತ್ಯವನ್ನು ಮಾಡುವುದು ಒಳ್ಳೆಯದು. ಅದನ್ನು ಮಾಡಿದರೆ ಮನುಷ್ಯನು ಪಶ್ಚಾತ್ತಾಪ ಪಡಬೇಕಿರುವುದಿಲ್ಲ.

**ಅಕತಜ್ ದುಕ್ಕತಜ್ ಸೆಯ್ಯೋ ಪಚ್ಛಾ ತಪತಿ ದುಕ್ಕತಜ್**

**ಕತಜ್ ಚೆ ಸುಕತಜ್ ಸೆಯ್ಯೋ ಯಜ್ ಕತ್ವಾ ನಾನುತಪ್ಪತಿ**[27]

ಪಳಗಿಸಿದ ನಂತರ ಪ್ರಾಣಿಗಳು ಶ್ರೇಷ್ಠವೆನಿಸಬಹುದಾದರೂ ತಾನು ತನ್ನನ್ನು ನಿಯಂತ್ರಿಸಿಕೊಂಡವನೇ ಶ್ರೇಷ್ಠ. ಏಕೆಂದರೆ ದಾಂತನು ಈ ಯಾವುದೇ ಪ್ರಾಣಿಗಳು ಬಳಸಲ್ಪಡುವ ವಾಹನಗಳಿಂದ ತಲುಪಲಾಗದ ಸ್ಥಾನವನ್ನು ಎಂದರೆ ಮೋಕ್ಷವನ್ನು ಪಡೆದುಕೊಳ್ಳುತ್ತಾನೆ. ನಿರ್ವಾಣವು ಪಡೆಯುವ ಗತಿಯಲ್ಲವೆಂದು ವಿವರಿಸುವಾಗ ಧಮ್ಮಪದವು ಮೋಕ್ಷವು ಪ್ರಾಪ್ಯವಲ್ಲ ಎಂಬ ಅದ್ವೈತದ ನಿಲುವನ್ನು ನಮ್ಮ ನೆನಪಿಗೆ ತರುತ್ತದೆ. ಅದ್ವೈತವು ಈ ಅಪ್ರಾಪ್ಯತೆಯನ್ನು ಬೇರೆ ಅರ್ಥದಲ್ಲಿ ವಿವರಿಸುವುದಾದರೂ ಧಮ್ಮಪದದ ಪ್ರಕಾರ ಈ ಅಪ್ರಾಪ್ಯತೆಯ ಅರ್ಥ ನಿರ್ವಾಣವನ್ನು ಸಾಧಿಸುವುದು ಅಷ್ಟು ಸುಲಭವಲ್ಲವೆಂಬುದು. **"ಅಗತಜ್ ದಿಸಜ್"** ಎಂದರೆ ಹೋಗಿ ಪಡೆಯುವ ಗತಿಯಲ್ಲದ್ದು ಎಂದರ್ಥ. ಇದೊಂದು ವಿರೋಧಾಭಾಸಾತ್ಮಕವಾದ ವಿವರಣೆ. ಸಾಧಾರಣ ವಾಹನಗಳಿಂದ ಸುಲಭವಾಗಿ ತಲುಪಬಹುದಾದ ಗುರಿಯು ನಿರ್ವಾಣವಲ್ಲ ಎಂದು ಇದರ ಅರ್ಥ.

**ವರಂ ಅಸ್ಸತರಾ ದಂತಾ ಆಜನೀಯಾ ಚ ಸಿಂಧವಾ**

**ಕುಂಜರಾ ಮಹಾನಾಗಾ ಅತ್ತದಂತೋ ತತೋ ವರಜ್**

**ನ ಹಿ ಏತೇಹಿ ಯಾನೇಹಿ ಗಚ್ಛೆಯ್ಯ ಅಗತಜ್ ದಿಸಜ್**

**ಯಥಾತ್ತನಾ ಸುದಂತೇನ ದಂತೋ ದಂತೇನ ಗಚ್ಛತಿ**[28]

ಶರೀರವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದನ್ನು **ಸಂವರ**ವೆಂದು ಕರೆಯುತ್ತಾರೆ. ಇದಕ್ಕೆ **ಸಂಯಮ**ವೆಂಬ ಹೆಸರೂ ಇದೆ. ಬುದ್ಧನು ಪಂಚೇಂದ್ರಿಯಗಳ, ಕಾಯದ, ವಚನದ ಮತ್ತು ಪಂಚಕರ್ಮೇಂದ್ರಿಯಗಳ ಸಂವರದ ಬಗ್ಗೆ ಮಾತನಾಡುತ್ತಾನೆ. ಮನುಷ್ಯನ ಹಿತಕ್ಕೆ ಸಂವರವೆಂಬ ಮೌಲ್ಯವು ಒಳ್ಳೆಯದು.

**ಚಕ್ಖುನಾ ಸಂವರೋ ಸಾಧು ಸಾಧು ಸೋತೇನ ಸಂವರೋ**

**ಘಾಣೇನಾ ಸಂವರೋ ಸಾಧು ಸಾಧು ಜಿಹ್ವಾಯ ಸಂವರೋ**

**ಕಾಯೆನ ಸಂವರೋ ಸಾಧು ಸಾಧು ವಾಚಾಯ ಸಂವರೋ**

**ಮನಸಾ ಸಂವರೋ ಸಾಧು ಸಾಧು ಸಬ್ಬತ್ತ ಸಂವರೋ**

**ಸಬ್ಬತ್ತ ಸಂವುತೋ ಭಿಕ್ಕು ಸಬ್ಬದುಕ್ಖಾ ಪಮುಚ್ಚತಿ**

**ಹತ್ಥಸಞ್ಞತೋ ಪಾದಸಞ್ಞತೋ ವಾಚಾಸಞ್ಞತೋ ಸಞ್ಞತುತ್ತಮೋ**

**ಅಜ್ಞತ್ತರತೋ ಸಮಾಹಿತೋ ಏಕೋ ಸಂತುಸಿತೋ ತಂ ಆಹು ಭಿಕ್ಕುಜ್**

**ಯೋ ಮುಖಸಞ್ಞತೋ ಭಿಕ್ಕು ಮತ್ತಭಾಣಿ ಅನುದ್ಧತೋ**

**ಅತ್ಥಜ್ ಧಮ್ಮಜ್ ಚ ದೀಪೇತಿ ಮಧುರಜ್ ತಸ್ಸ ಭಾಸಿತಜ್**[29]

ತ್ರಿಕರಣಪೂರ್ವಕವಾಗಿ ಶಾಂತನೂ, ಸಮಾಧಾನಿಯೂ ಹಾಗೂ ಪ್ರಾಪಂಚಿಕ ಸುಖವೆಂಬ ಮಾಂಸವನ್ನು ಹೊರಗೆ ಕಕ್ಕಿರುವ ಭಿಕ್ಷುವು ಉಪಶಾಂತನೆನಿಸುವನು.

**ಸಂತಕಾಯೋ ಸಂತವಾಚೋ ಸಂತವಾ ಸುಸಮಾಹಿತೋ**

**ವಂತಲೋಕಾಮಿಸೋ ಭಿಕ್ಖು ಉಪಸಂತೋ ತಿ ವುಚ್ಚತಿ**[30]

ಇಂದ್ರಿಯ ನಿಗ್ರಹವಿಲ್ಲದವನು ದುರ್ಬಲವಾಗಿರುವ ಮರದಂತೆ. ದುರ್ಬಲ ಮರವನ್ನು ಗಾಳಿಯು ಬೀಳಿಸುವಂತೆ ಅವನನ್ನು ಮಾರನು ನಾಶ ಮಾಡುವನು. ಮಾರನೆಂದರೆ ಸಾಧಕನನ್ನು ಕೆಟ್ಟ ದಾರಿಗೆ ಎಳೆಯುವ ಕೆಟ್ಟ ದೇವತೆ. ಮಾರನನ್ನು ನಿಗ್ರಹಿಸಿದುದರಿಂದಲೇ ಬುದ್ಧನಿಗೆ **'ಮಾರಜಿತ್'** ಎನ್ನುವ ಹೆಸರಿದೆ. ಯಾರು ಶುಭಾನುಪಶ್ಯನೋ, ಇಂದ್ರಿಯಗಳನ್ನು ನಿಗ್ರಹಿಸಿರುವುದಿಲ್ಲವೋ, ಊಟದಲ್ಲಿ ಅಳತೆಯಿಲ್ಲದವನೋ, ಸೋಮಾರಿಯಾಗಿರುವನೋ ಅವನು ದುರ್ಬಲನೇ ಸರಿ ಎಂದು ಬುದ್ಧನು ಹೇಳುತ್ತಾನೆ. ಗಾಳಿಯು ದುರ್ಬಲವಾದ ಮರವನ್ನು ಬೀಳಿಸುವಂತೆ ಮಾರನು ದುರ್ಬಲ ವ್ಯಕ್ತಿತ್ವವುಳ್ಳ ಅಂತಹವನನ್ನು ವಶಪಡಿಸಿಕೊಳ್ಳುತ್ತಾನೆ. ಇಲ್ಲಿ ಶುಭಾನುಪಶ್ಯನೆಂದರೆ ದೇಹದಲ್ಲಿ ಉತ್ತಮ ಬುದ್ಧಿಯನ್ನು ಮಾಡುವನೆಂದರ್ಥ. ದೇಹದಲ್ಲಿ ತುಚ್ಛಬುದ್ಧಿಯಿರಬೇಕೆಂದು ಬೌದ್ಧಧರ್ಮದ ನಿಯಮ. ಇದಕ್ಕೆ ವಿರುದ್ಧವಾದವನೇ

**ಶುಭಾನುಪಶ್ಯ**. ಒಟ್ಟಾರೆ ದೇಹವು ಶಾಶ್ವತ ಎಂದು ತಿಳಿದು ಇಂದ್ರಿಯಲೋಲುಪನಾಗಿ ಅಳತೆ ಮೀರಿ ಊಟ ಮಾಡುವ ಸೋಮಾರಿಗೆ ಭವಿಷ್ಯವಿಲ್ಲವೆಂದು ಬುದ್ಧನ ಸಂದೇಶ. ಆಹಾರವಿರಬೇಕು, ಅದರಲ್ಲಿ ಮಿತಿಯಿರಬೇಕು. ನಿರ್ವಾಣ ಸಾಧನೆಗೆ ಉಪಯುಕ್ತವಾಗುವಷ್ಟರ ಮಟ್ಟಿಗೆ ಆಹಾರವು ಅಗತ್ಯವೆಂಬುದನ್ನು ಇಲ್ಲಿ ಒತ್ತಿ ನುಡಿಯಲಾಗಿದೆ. ವಿರುದ್ಧವಾದ ಲಕ್ಷಣಗಳಿರುವವನು ಮಾರನ ಪ್ರಲೋಭನೆಗಳಿಗೆ ಒಳಗಾಗಲಾರ. ಇಂದ್ರಿಯನಿಗ್ರಹ, ಊಟದಲ್ಲಿ ಮಿತಿ, ಶ್ರದ್ಧೆ – ಈ ಮೌಲ್ಯಗಳಿರುವವನು ಬಂಡೆಯಂತೆ ಗಟ್ಟಿಯಾಗಿರುತ್ತಾನೆ. ಗಾಳಿಯು ಗಟ್ಟಿಯಾದ ಬಂಡೆಯನ್ನು ಅಲುಗಾಡಿಸಲು ಅಸಾಧ್ಯವಾಗುವಂತೆ ಇಂದ್ರಿಯನಿಗ್ರಹವಿರುವವನನ್ನು ಮಾರನು ವಿಚಲಿತಗೊಳಿಸಲಾರ.

**ಸುಭಾನುಪಸ್ಸಿಜ್ ವಿಹರಂತಜ್ ಇಂದ್ರಿಯೇಸು ಅಸಜ್ವುತಜ್**

**ಭೋಜನಮ್ಹಿ ಅಮತ್ತಣ್ಣುಜ್, ಕುಸೀತಜ್ ಹೀನವೀರಿಯಜ್**

**ತಜ್ ವೇ ಪಸಹತಿ ಮಾರೋ ವಾತೋ ರುಕ್ಖಜ್ ವ ದುಬ್ಬಲಜ್**[31]

ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದನ್ನು **ಸಂವರ**ವೆಂದು ಕರೆಯುತ್ತಾರೆ. ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯಗಳ ಸಂವರದ ಬಗ್ಗೆ ಭಿಕ್ಷುವರ್ಗವೆಂಬ ಅಧ್ಯಾಯದಲ್ಲಿ ಅತಿ ಸರಳವಾಗಿ ವಿವರಿಸಲಾಗಿದೆ. ಕಣ್ಣು, ಕಿವಿ, ಮೂಗು, ನಾಲಿಗೆಗಳ ಹಾಗೂ ಕಾಯ, ವಚನ ಮತ್ತು ಮನಸ್ಸುಗಳ ಸಂವರವನ್ನು ವೈಭವೀಕರಿಸಲಾಗಿದೆ. ಕರ್ಮೇಂದ್ರಿಯಗಳಲ್ಲಿ ಕೈ, ಕಾಲು ಮತ್ತು ಮಾತುಗಳ ಸಂಯಮದ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ರೀತಿ ಸಂಯಮವುಳ್ಳವರೇ ಭಿಕ್ಷುಗಳೆನಿಸುವರು.

**ಚಕ್ಖುನಾ ಸಂವರೋ ಸಾಧು ಸಾಧು ಸೋತೇನ ಸಂವರೋ**

**ಘಾಣೇನಾ ಸಂವರೋ ಸಾಧು ಸಾಧು ಜಿಹ್ವಾಯ ಸಂವರೋ**[32]

ಭಿಕ್ಷುವಿನ ಮೂಲಲಕ್ಷಣವೇ ಇಂದ್ರಿಯಗಳನ್ನು ಕಾಪಾಡಿಕೊಳ್ಳುವುದು. ಇದರ ಜೊತೆಗೆ ತೃಪ್ತಿ, ಸೋಮಾರಿಯಾಗದಿರುವಿಕೆಯೆಂಬ ಲಕ್ಷಣಗಳೂ ಸೇರುತ್ತವೆ.

ಮನಸ್ಸಿನ ಬಗ್ಗೆ ಧಮ್ಮಪದದ ಮೊದಲ ಗಾಥೆಯಲ್ಲೇ ಪ್ರಸ್ತಾಪವಿದೆ. ನಾವು ಮಾಡುವ ಯಾವುದೇ ಕೆಲಸಕ್ಕೆ ಮನಸ್ಸೇ ಮುಂದಾಳು. ಎಲ್ಲಾ ಧರ್ಮಗಳಿಗೂ ಮನಸ್ಸೇ ಒಡೆಯ. ಎಲ್ಲವೂ ಮನೋಮಯವಾಗಿರುವುವು. ಅಶುದ್ಧವಾದ ಮನಸ್ಸಿನಿಂದ ಮಾತನಾಡುವವನು ಅಥವಾ ಕೆಲಸ ಮಾಡುವವನನ್ನು ಬಂಡಿಯನ್ನು ಎಳೆಯುವ ಪ್ರಾಣಿಯನ್ನು ಗಾಲಿಯು ಹೇಗೋ ಹಾಗೆ ದುಃಖವು ಹಿಂಬಾಲಿಸುತ್ತದೆ. ಸ್ವಚ್ಛವಾದ ಮನಸ್ಸಿನಿಂದ ನಾವು ಮಾಡುವ ಯಾವುದೇ ಕೆಲಸವು ಸುಖದ ರೂಪದಲ್ಲಿ ಮನಸ್ಸನ್ನು ಹಿಂಬಾಲಿಸುತ್ತದೆ.

**ಮನೋಪುಬ್ಬಂಗಮಾ ಧಮ್ಮಾ ಮನೋಸೆಟ್ಠಾ ಮನೋಮಯಾ**

**ಮನಸಾ ಚೇ ಪದುಟ್ಠೇನ ಭಾಸತಿ ವಾ ಕರೋತಿ ವಾ**

**ತತೋ ನಜ್ ದುಕ್ಖಜ್ ಅನ್ವೇತಿ ಚಕ್ಕಂ ವ ವಹತೋ ಪದಜ್**

**ಮನೋಪುಬ್ಬಂಗಮಾ ಧಮ್ಮಾ ಮನೋಸೆಟ್ಠಾ ಮನೋಮಯಾ**

**ಮನಸಾ ಚೇ ಪಸನ್ನೇನ ಭಾಸತಿ ವಾ ಕರೋತಿ ವಾ**

**ತತೋ ನಜ್ ಸುಖಂ ಅನ್ವೇತಿ ಛಾಯಾ ವ ಅನಪಾಯಿನೀ**[33]

ಮನಸ್ಸು ಚಂಚಲತೆಗೆ ಪ್ರಸಿದ್ಧವಾದುದು. ಅದನ್ನು ನಿಯಂತ್ರಿಸುವುದು ದುಸ್ಸಾಧ್ಯವೇ ಸರಿ. ಮನಸ್ಸಿನ ಸ್ವಭಾವವನ್ನು ಕುರಿತು ಚರ್ಚಿಸುವ **ಚಿತ್ತವಗ್ಗ** ಎಂಬ ಅಧ್ಯಾಯವೇ ಧಮ್ಮಪದದಲ್ಲಿದೆ. ಭಗವದ್ಗೀತೆಯಲ್ಲೂ ಇದೇ ರೀತಿಯ ಒಂದು ಶ್ಲೋಕವು ಬರುತ್ತದೆ. **"ವಾಯೋರಿವ ಸುದುಷ್ಕರಮ್"** ಎಂದರೆ "ಗಾಳಿಯನ್ನು ನಿಯಂತ್ರಿಸುವುದಕ್ಕಿಂತಲೂ ಮನಸ್ಸನ್ನು ನಿಯಂತ್ರಿಸುವುದು ಬಲು ಕಷ್ಟ" ಎಂಬ ಮಾತು ಬರುತ್ತದೆ.[34] ಅಲುಗಾಡುತ್ತಿರುವ, ಚಂಚಲವಾದ, ಹಿಡಿತದಲ್ಲಿಡಲು ಕಷ್ಟವಾದ, ತಡೆಯಲಾಗದ ಎಂಬ ಇಷ್ಟೂ ವಿಶೇಷಣಗಳು

ಚಿತ್ತಕ್ಕೆ ಅನ್ವಯಿಸಲಾಗಿದೆ. ಅಂತಹ ಚಿತ್ತವನ್ನು ನಿಯಂತ್ರಿಸುವವನನ್ನು **ಮೇಧಾವಿ** ಎಂದು ಕರೆಯಲಾಗಿದೆ. ಬಾಣವನ್ನು ಮಾಡುವಾತನು ಬಾಣದ ಬಿದಿರನ್ನು ನೆಟ್ಟಗೆ ಮಾಡುವಂತೆ ಜಾಣನಾದವನು ಚಂಚಲವಾದ ಚಿತ್ತವನ್ನು ಏಕಮುಖಿಯನ್ನಾಗಿ ಮಾಡಲು ಸಮರ್ಥನಾಗುತ್ತಾನೆ. ಮನಸ್ಸಿನ ದುಸ್ಥಿತಿಯನ್ನು ಬಣ್ಣಿಸಲು ನೀರಿನಿಂದ ನೆಲಕ್ಕೆ ಬಿಸುಟಲ್ಪಟ್ಟ ಮೀನಿಗೆ ಹೋಲಿಸಲಾಗಿದೆ. ನೆಲದಿಂದಾಚೆಗೆ ಬಿದ್ದ ಮೀನು ಪುನಃ ನೀರಿಗೆ ಹೋಗಲು ಹೇಗೆ ಒದ್ದಾಡುತ್ತಿರುತ್ತದೋ ಹಾಗೆಯೇ ಚಾಂಚಲ್ಯಬಾಧೆಗೆ ಒಳಗಾದ ಮನಸ್ಸು ಏಕಮುಖಿಯಾಗಲು ಹವಣಿಸುತ್ತಿರುತ್ತದೆ.

**ಫಂದನಜ್ ಚಪಲಜ್ ಚಿತ್ತಜ್ ದುರಕ್ಖಜ್ ದುನ್ನಿವಾರಯಜ್**

**ಉಜುಜ್ ಕರೋತಿ ಮೇಧಾವಿ ಉಸುಕಾರೋ ವಾ ತೇಜನಜ್**

**ವಾರಿಜೋ ವಾ ಥಲೆ ಖಿತ್ತೋ ಓಕಮೋಕತ ಉಬ್ಭತೋ**

**ಪರಿಫಂಡಿತಿದಜ್ ಚಿತ್ತಜ್ ಮಾರಧೆಯ್ಯಜ್ ಪಹಾತವೆ**[35]

ತನಗಿಷ್ಟವಾದೆಡೆಗೆ ನುಗ್ಗುತ್ತಿರುವ ಚಿತ್ತವನ್ನು ಪಳಗಿಸುವುದು ಒಳ್ಳೆಯದೆಂದು ಬುದ್ಧನು ಉಪದೇಶಿಸುತ್ತಾನೆ. ಪಳಗಿದ ಚಿತ್ತವು ಸುಖಕ್ಕೆ ದಾರಿಮಾಡಿಕೊಡುತ್ತದೆ. ವಾಸ್ತವವಾಗಿ ಚಿತ್ತವು ಅಮೂರ್ತ. ಅದು ಇಂದ್ರಿಯಗ್ರಾಹ್ಯವಲ್ಲ, ಅದು ಬಲುಸೂಕ್ಷ್ಮವಾದುದು. ಅದು ಎಲ್ಲೆಂದರಲ್ಲಿ ಚಲಿಸುತ್ತಿರುತ್ತದೆ. ಜಾಣನಾದವನು ಚಿತ್ತವನ್ನು ಕಾಪಾಡಿಕೊಳ್ಳಲೇಬೇಕಾಗುತ್ತದೆ. ಭಾರತೀಯ ತತ್ತ್ವಶಾಸ್ತ್ರದಲ್ಲಿ ಇದೊಂದು ಬಹಳ ಮುಖ್ಯವಾದ ಅಂಶ. ಎಂದರೆ ಚಿತ್ತಕ್ಕೆ ಚಲನಶಕ್ತಿಯಿದೆ. ಅದು ಇಂದ್ರಿಯದ್ವಾರದ ಮೂಲಕ ಹೊರಚಲಿಸಿ ವಸ್ತುವಿನ ಆಕಾರವನ್ನು ಪಡೆಯುತ್ತದೆ. ವಿಷಯಜ್ಞಾನವು ಚಿತ್ತ ಮತ್ತು ಇಂದ್ರಿಯಗಳ ಸಂಪರ್ಕದಿಂದ ಮತ್ತು ಇಂದ್ರಿಯ ಹಾಗೂ ಇಂದ್ರಿಯ ವಿಷಯಗಳ ಸಂಪರ್ಕದಿಂದ ಉಂಟಾಗುತ್ತದೆ. ಇದು ಪಾಶ್ಚಾತ್ಯ ತತ್ತ್ವಶಾಸ್ತ್ರಕ್ಕಿಂತಲೂ ವಿಭಿನ್ನವಾದ ಧೋರಣೆ. ಪಾಶ್ಚಾತ್ಯ ಅನುಭವವಾದಿಗಳ ಪ್ರಕಾರ

ವಿಷಯವೇ ತನ್ನ ಸಂವೇದನೆಗಳನ್ನು ಇಂದ್ರಿಯಗಳೆಡೆಗೆ ಹರಿದುಬಿಟ್ಟು ಇಂದ್ರಿಯಗಳನ್ನು ಪ್ರಚೋದಿಸುತ್ತದೆ. ಅನಂತರ ಇಂದ್ರಿಯದ್ವಾರದ ಮೂಲಕ ಮನಸ್ಸೆಂಬ ಕೊಠಡಿಯನ್ನು ಪ್ರವೇಶಿಸಿ ಮನಸ್ಸಿನ ಮೇಲೆ ತಮ್ಮ ಮುದ್ರಣವನ್ನು ಒತ್ತುತ್ತದೆ. ಮನಸ್ಸು ತಾನು ಚಲಿಸದೆಯೇ ಸಂವೇದನೆಗಳನ್ನು ಸ್ವೀಕರಿಸಿ ಅವುಗಳಿಗೊಂದು ಆಕಾರವನ್ನು ನೀಡಿ ವಿಷಯವನ್ನು ಕುರಿತ ಜ್ಞಾನವನ್ನು ಪಡೆಯುತ್ತದೆ. ಇದು ಪಾಶ್ಚಾತ್ಯ ಆಧುನಿಕ ತತ್ತ್ವಶಾಸ್ತ್ರದ ಅಭಿಪ್ರಾಯ.[36] ಆದರೆ ಬುದ್ಧನ ಪ್ರಕಾರ ಮನಸ್ಸಿಗೆ ಚಲನಶಕ್ತಿಯಿದೆ. ಅದು ತನಗಿಷ್ಟವಾದೆಡೆಗೆ ನುಗ್ಗುವ ಸಾಮರ್ಥ್ಯವನ್ನು ಹೊಂದಿದೆ. ಅದು ದೂರಕ್ಕೆ ಹೋಗಬಲ್ಲದು. ಅದಕ್ಕೆ ಯಾವ ಶರೀರವೂ ಇಲ್ಲ. ಈ ಚಲನಶೀಲ ಚಿತ್ತವನ್ನು ನಿಯಂತ್ರಿಸುವುದು ಮನುಷ್ಯನಿಗೆ ಒಂದು ಸವಾಲೇ ಸರಿ. ಅದು ಇಂದ್ರಿಯಗ್ರಾಹ್ಯವಲ್ಲವಾದರೂ ಎಲ್ಲೆಂದರಲ್ಲಿಗೆ ಚಲಿಸಬಲ್ಲದು. ಮನಸ್ಸಿನ ಚಲನಶೀಲ ಶಕ್ತಿಯ ಬಗ್ಗೆ ಇತ್ತೀಚೆಗೆ ಅನೇಕ ಸಂಶೋಧನೆಗಳೇ ಜರುಗುತ್ತಿವೆ. ಮನುಷ್ಯನು ತಾನಿರುವ ಸ್ಥಳದಿಂದಲೇ ಬೇರೆಲ್ಲೋ ಇರುವ ವಸ್ತುಗಳನ್ನು ತಿಳಿಯುವುದಕ್ಕೆ ಕಾರಣ, ಮನಸ್ಸಿನ ಈ ಚಲನಶೀಲ ಸ್ವಭಾವ. ಇದನ್ನೇ ಧಮ್ಮಪದವು **"ದೂರಕ್ಕೆ ಹೋಗಬಲ್ಲ, ತಾನೊಂದೇ ಸಂಚರಿಸಬಲ್ಲ ಮತ್ತು ಯಾವ ಶರೀರವೂ ಇಲ್ಲದ"** ಎಂದು ವಿವರಿಸುತ್ತದೆ.

**ದೂರಂಗಮಙ್ ಏಕಚರಙ್ ಅಸರೀರಙ್ ಗುಹಾಸಯಙ್**

**ಯೇ ಚಿತ್ತಙ್ ಸಞ್ಞಮೆಸ್ಸಂತಿ ಮೊಕ್ಖಂತಿ ಮಾರಬಂಧನಾ**[37]

ಈ ಮನಸ್ಸನ್ನು ಬಿಗಿಹಿಡಿದಿರುವವನೇ ಮಾರನ ಬಂಧನದಿಂದ ಮುಕ್ತ ಹಾಗೂ ಸುಖಿ. ಯಾರ ಚಿತ್ತವು ನಿಲುಗಡೆಗೆ ಬಂದಿಲ್ಲವೋ ಅವನಿಗೆ ಚಿತ್ತಪ್ರಸನ್ನತೆಯು ಇಲ್ಲ. ಅವನ ಮನಸ್ಸು ಹೊಯ್ದಾಡುತ್ತಿರುತ್ತದೆ. ಅವನು ಇನ್ನೂ ಧರ್ಮವನ್ನು ಅರಿತಿಲ್ಲವೆಂದರ್ಥ. ಚಂಚಲವಿಲ್ಲದ ಚಿತ್ತವನ್ನು ಹೊಂದಿರುವ ಜಾಗರೂಕನಿಗೆ ಭಯವಿಲ್ಲ.

**ದುನ್ನಿಗಹಸ್ಸ ಲಹನೋ ಯತ್ಥಕಾಮಿನಿಪಾತಿನೋ**

**ಚಿತ್ತಸ್ಸ ದಮಥೋ ಸಾಧು ಚಿತ್ತಜ್ ದಂತಜ್ ಸುಖಾವಹಜ್**

**ಸುದುದ್ದಸಜ್ ಸುನಿಪುನಜ್ ಯತ್ಥಕಾಮಿನಿಪಾತಿನಜ್**

**ಚಿತ್ತಜ್ ರಕ್ಖೇಥ ಮೇಧಾವೀಜ್ ; ಚಿತ್ತಜ್ ಗುತ್ತಜ್ ಸುಖಾವಹಜ್**[38]

**ಅನವಟ್ಠಿತಚಿತ್ತಸ್ಸ ಸದ್ಧಮ್ಮಜ್ ಅವಿಜಾನತೋ**

**ಪರಿಪ್ಲವಪಸಾದಸ್ಸ ಪಞ್ಞಾ ನ ಪರಿಪೂರತಿ**

**ಅನವಸ್ಸುತಚಿತ್ತಸ್ಸ ಅನನ್ವಾಹತ ಚೇತಸೋ**

**ಪುಞ್ಞ – ಪಪ ಪಹೀನಸ್ಸ ಸತ್ಥಿ ಜಾಗರತೋ ಭಯಜ್**[39]

ಸರಿಯಾದ ದಾರಿಯಲ್ಲಿಟ್ಟ ಚಿತ್ತವು ಮನುಷ್ಯನಿಗೆ ಎಷ್ಟು ಶ್ರೇಯಸ್ಸನ್ನುಂಟುಮಾಡುವುದೆಂದರೆ ಬುದ್ಧನ ಪ್ರಕಾರ ತಂದೆ ತಾಯಿಗಳು ಮತ್ತು ಬಂಧು ಬಳಗವೂ ಕೂಡ ಮನುಷ್ಯನಿಗೆ ಅಷ್ಟು ಶ್ರೇಯಸ್ಸನ್ನುಂಟುಮಾಡಲಾರರು. ಆದರೆ ಚಿತ್ತನಿಗ್ರಹಕ್ಕೆ ಇಚ್ಛಾಶಕ್ತಿಯು ಅಗತ್ಯ. ಇದನ್ನು ನಿಗ್ರಹಿಸಲು ಮನುಷ್ಯನು ಹೇಗೆ ಸಂಕಲ್ಪಿಸಬೇಕೆಂದು ಬುದ್ಧನು ಉಪದೇಶಿಸುತ್ತಾನೆ, "ಈ ಚಿತ್ತವು ಈ ಹಿಂದೆ ತನ್ನ ಇಚ್ಛೆಗೆ ಬಂದಂತೆ ಕಂಡ ಕಂಡ ಕಡೆಗೆ ಹರಿದಾಡುತ್ತಿತ್ತು. ಈಗ ನಾನು ಮಾವುತನು ಆನೆಯನ್ನು ಅಂಕುಶದಿಂದ ತಿವಿದು ಹತೋಟಿಯಲ್ಲಿಡುವಂತೆ ಅದನ್ನು ಸಂಪೂರ್ಣವಾಗಿ ನಿಗ್ರಹಿಸುವೆನು". ಎಂದರೆ ಚಿತ್ತನಿಗ್ರಹಕ್ಕೆ ಅಗಾಧವಾದ ಇಚ್ಛಾಶಕ್ತಿಯು ಅಗತ್ಯವೆಂಬುದನ್ನು ಬುದ್ಧನು ಇಲ್ಲಿ ಒತ್ತಿನುಡಿಯುತ್ತಾನೆ. ಇದಕ್ಕೆ ಎಚ್ಚರಿಕೆಯು ಎಂದರೆ ಅಪ್ರಮಾದವೆಂಬ ಮೌಲ್ಯವನ್ನು ಮನುಷ್ಯನು ರೂಢಿಸಿಕೊಳ್ಳಬೇಕು.

**ನ ತಜ್ ಮಾತಾ – ಪಿತಾ ಕಯಿರಾ ಅಞ್ಞೇ ವಾ ಪಿ ಚ ಞಾತಕಾ**

**ಸಮ್ಮಾಪಣಿಹಿತಞ್ ಚಿತ್ತಜ್ ಸೆಯ್ಯಸೋ ನಜ್ ತತೋ ಕರೇ**[40]

**ಅಪ್ಪಮಾದರತಾ ಹೋಥ ಸಚಿತ್ತಂ ಅನುರಕ್ಖಥ**

**ದುಗ್ಗಾ ಉದ್ಧರಥತ್ತಾನಜ್ ಪಂಕೇ ಸತ್ತೋ ವ ಕುಂಜರೋ**[41]

ಮನಸ್ಸನ್ನು ಎತ್ತಲೋ ಇಟ್ಟು ವ್ಯವಹರಿಸುತ್ತಿರುವವನನ್ನು ಹಳ್ಳಿಯನ್ನು ಹೊಳೆಯು ಕೊಚ್ಚಿಕೊಂಡು ಹೋಗುವಂತೆ ಮೃತ್ಯುವು ಕೊಂಡ್ಯೊಯುತ್ತದೆ. ಪ್ರಜ್ಞೆ ಅಥವಾ ವಿವೇಕವೆಂಬ ಆಯುಧದಿಂದ ಚಿತ್ತವನ್ನು ನಿಗ್ರಹಿಸಬೇಕು. ಚಿತ್ತನಿಗ್ರಹವನ್ನು ಸಾಧಿಸಿದ ಮೇಲೂ ಅದನ್ನು ಎಚ್ಚರದಿಂದ ಹಿಡಿತದಲ್ಲಿಟ್ಟುಕೊಂಡಿರಬೇಕು. ಏಕೆಂದರೆ ಯಾವುದೇ ಕ್ಷಣದಲ್ಲೂ ಚಿತ್ತವು ಜಾರುವ ಸಂದರ್ಭವುಂಟು.

**ಕುಂಭೂಪಮಙ್ ಕಾಯಂ ಇಮಙ್ ವಿದಿತ್ವಾ**

**ನಗರೂಪಙ್ ಚಿತ್ತಙ್ ಇದಙ್ ಠಪೆತ್ವಾ**

**ಯೋದೇಥ ಮಾರಙ್ ಪಞ್ಞಾವುಧೇನ ;**

**ಜಿತಙ್ ಚ ರಕ್ಖೇ ಅನಿವೇಸನೋ ಸಿಯಾ**[42]

ಚಿತ್ತದ ಸೋರಿಕೆಯ ಬಗ್ಗೆಯೂ ಪ್ರಸ್ತಾಪವಿದೆ. ಸೋರುವ ಚಿತ್ತವೆಂದರೆ ರಾಗಕ್ಕೊಳಗಾಗಿರುವ ಚಿತ್ತವೆಂದರ್ಥ.

**ಅನವಸ್ಸುತಚಿತ್ತಸ್ಸ ಅನನ್ವಾಹತ ಚೇತಸೋ**

**ಪುಞ್ಞ – ಪಪ ಪಹೀನಸ್ಸ ನತ್ಥಿ ಜಾಗರತೋ ಭಯಙ್**[43]

ಹೆಚ್ಚು ಕಡಿಮೆ ಶಿಶುನಾಳ ಷರೀಪ ಇದೇ ರೀತಿಯ ಮಾತನ್ನು ಆಡುತ್ತಾನೆ, **"ಸೋರುತಿಹುದು ಮನೆಯ ಮಾಳಿಗೆ"** ಎಂದಾಗ ಆತನ ಪ್ರಕಾರ ಮನುಷ್ಯನನ್ನು ಅಜ್ಞಾನವು ಆವರಿಸಿದೆ ಎಂದರ್ಥ.[44] ಆದರೆ ಇಲ್ಲಿಯ ಸೋರಿಕೆಯು ಚಿತ್ತಕ್ಕೆ ಅನ್ವಯಿಸಿ ರಾಗದಿಂದ ಕೂಡಿದ ಮನಸ್ಸನ್ನೇ ಸೋರಿಕೆ ಎನ್ನಲಾಗಿದೆ. ಶೂನ್ಯಾಗಾರವನ್ನು ಹೊಕ್ಕು ಚಿತ್ತವನ್ನು ಶಾಂತಿಗೊಳಿಸಿಕೊಂಡ ಭಿಕ್ಷುವಿಗೆ ಯಾರಿಗೂ ದೊರೆಯದ ಮಹದಾನಂದವು ದೊರೆಯುತ್ತದೆ ಎಂದು ಬುದ್ಧನು ಸಾರುತ್ತಾನೆ. ನಿರ್ವಾಣದಲ್ಲಿ ಚಿತ್ತ ಅಥವಾ ಮನಸ್ಸು ಸಂಪೂರ್ಣವಾಗಿ ಚಂಚಲತೆಯಿಂದ ಹೊರಗಿರುತ್ತದೆ.

ಯಾವುದು ಮನುಷ್ಯನ ಬದುಕಿಗೆ ಉಪಯುಕ್ತವೋ ಅದನ್ನು ಮೌಲ್ಯವೆಂದು ಕರೆಯಲಾಗಿದೆ. ಈ ಉಪಯುಕ್ತತೆಯು ಭೌತಿಕ ಹಂತದಲ್ಲೂ ಇರಬಹುದು ಅಥವಾ ಮಾನಸಿಕ ಹಂತದಲ್ಲೂ ಇರಬಹುದು ಅಥವಾ ಆಧ್ಯಾತ್ಮಿಕ ಹಂತದಲ್ಲಿ ಇರಬಹುದು. ಆಧ್ಯಾತ್ಮಿಕ ಬದುಕಿನಲ್ಲಿ ಭೌತಿಕ ಮೌಲ್ಯಗಳನ್ನು ಭಾರತೀಯ ತತ್ವಶಾಸ್ತ್ರದಲ್ಲಿ ಕಡೆಗಣಿಸಲಾಗಿಲ್ಲ. ಅಷ್ಟಾಂಗಿಕ ಮಾರ್ಗದ **ಸಮ್ಯಗಾಜೀವ**ದಲ್ಲಿ ನ್ಯಾಯಮಾರ್ಗದಿಂದ ಮನುಷ್ಯನು ಜೀವನ ನಿರ್ವಹಣೆ ನಡೆಸಬೇಕಾದ ಬಗ್ಗೆ ಪ್ರಸ್ತಾಪವಿದೆ. ಮನುಷ್ಯನ ಆಧ್ಯಾತ್ಮಿಕ ಸಾಧನೆಗೆ ಭೌತಿಕ ಮೌಲ್ಯಗಳು ಎಂದರೆ, ಅನ್ನ ವಸ್ತ್ರ, ವಸತಿಗಳು ಅಗತ್ಯವಾದ್ದರಿಂದ ಆಧ್ಯಾತ್ಮಿಕ ಸಾಧನೆಗೆ ಅಗತ್ಯವಾದಷ್ಟೇ ಭೌತಿಕ ಮೌಲ್ಯಗಳ ಸಂಪಾದನೆಯನ್ನು ವಿಧಿಸಲಾಗಿದೆ. ಈ ಹಂತದಲ್ಲಿ ಬೌದ್ಧಧರ್ಮವೇನೂ ಇದಕ್ಕೆ ಅಪವಾದವಲ್ಲ. ಬೌದ್ಧಧರ್ಮವೆಂದಿಗೂ ಜೀವನ ವಿರೋಧಿ ಧೋರಣೆಯನ್ನು, ಕಠಿಣ ತಪಸ್ಸನ್ನು, ಬದುಕಿನ ನಿರಾಕರಣೆಯನ್ನು ಉತ್ತೇಜಿಸಲಿಲ್ಲ. ನಿರ್ವಾಣ ಸಾಧನೆಗೆ ಅಗತ್ಯವಾದಷ್ಟು ಅನ್ನ, ವಸ್ತ್ರ ಮತ್ತು ವಸತಿಗಳ ಸಂಪಾದನೆಯನ್ನು ಅದು ಉತ್ತೇಜಿಸಿತು. ಆದರೆ ಮಿತಿಮೀರಿದ ಭೌತಿಕ ಮೌಲ್ಯಗಳ ಸಂಗ್ರಹಣೆ ಮನುಷ್ಯನ ಗುರಿಸಾಧನೆಗೆ ಅಡಚಣೆಯಾಗುತ್ತದೆ, ಮನುಷ್ಯನ ಸ್ವಾರ್ಥತೆಯನ್ನು ಹೆಚ್ಚಿಸುತ್ತದೆ. ಈ ಹಿನ್ನೆಲೆಯಲ್ಲಿ ಬುದ್ಧನು ಬಿಕ್ಕುಗಳಿಗೆ ಎಚ್ಚರಿಕೆಯನ್ನು ನೀಡುತ್ತಾನೆ. ದೇಹದಲ್ಲಿ ತುಚ್ಛಬುದ್ಧಿಯನ್ನು ಮಾಡುವವನು **'ಅಶುಭಾನುಪಶ್ಯ'**. ಎಂದರೆ ಅಶುಭಾನುಪಶ್ಯನು ದೇಹದಲ್ಲಿ ಅಶುಭಭಾವನೆಯನ್ನು ಮಾಡುತ್ತಾನೆ. ಯಾರು ದೇಹದಲ್ಲಿ ಉತ್ತಮ ಬುದ್ಧಿಯನ್ನು ಎಂದರೆ ಅದೇ ಒಳ್ಳೆಯದೆಂದು ಭಾವಿಸುವನೋ ಅವನು **ಶುಭಾನುಪಶ್ಯ**. ಬುದ್ಧನ ಪ್ರಕಾರ ಮನುಷ್ಯನು ಶುಭಾನುಪಶ್ಯನಾಗಿರಬಾರದು. ಎಂದರೆ ದೇಹ ಪೋಷಣೆಯೇ ಶ್ರೇಷ್ಠವೆಂದು, ಅದೇ ಮನುಷ್ಯನು ಸಾಧಿಸಬೇಕಾದ ಅಂತಿಮ ಗುರಿಯೆಂದು ತಿಳಿಯಬಾರದು. ಯಾರು ಶುಭಾನುಪಶ್ಯನಾಗಿ ಇಂದ್ರಿಯನಿಗ್ರಹವಿಲ್ಲದೇ ಊಟವನ್ನು ಅಳತೆಯಿಲ್ಲದೇ ತಿಂದು,

ಸೋಮಾರಿಯಾಗಿ ಹೀನವೀರ್ಯನಾಗಿರುವನೋ ಅವನನ್ನು ದುರ್ಬಲವಾದ ಮರವನ್ನು ಗಾಳಿಯು ಹೇಗೋ ಹಾಗೆ ಮಾರನು ಬೀಳಿಸುತ್ತಾನೆ. ಇದಕ್ಕೆ ವಿರುದ್ಧವಾಗಿರುವವನು ಬಂಡೆಗಳ ಪರ್ವತವನ್ನು ಗಾಳಿಯು ಹೇಗೋ ಹಾಗೆ ಮಾರನು ಅಲುಗಾಡಿಸಲಾರ. ಎಂದರೆ ಊಟನಿದ್ದೆಭೋಗಗಳಲ್ಲಿ ಸಾಧಕನು ಮಿತವಾಗಿರಬೇಕೆಂದು ಅರ್ಥ.

**ಸುಭಾನುಪಸ್ಸಿಜ್ ವಿಹರಂತಜ್ ಇಂದ್ರಿಯೇಸು ಅಸಜ್ವುತಜ್**

**ಭೋಜನಮ್ಹಿ ಅಮತ್ತಣ್ಣುಜ್, ಕುಸೀತಜ್ ಹೀನವೀರಿಯಜ್**

**ತಜ್ ವೇ ಪಸಹತಿ ಮಾರೋ ವಾತೋ ರುಕ್ಖಜ್ ವ ದುಬ್ಬಲಜ್**[45]

**ಪರಿಜಿಣ್ಣಂ ಇದಜ್ ರೂಪಜ್ ರೋಗನಿಡ್ಡಜ್ ಪಭಂಗುರುಜ್**

**ಭಿಜ್ಜತಿ ಪೂತಿಸಂದೇಹೋ ಮರಣಂತಜ್ ಹಿ ಜೀವಿತಜ್**[46]

ಮನುಷ್ಯನಿಗೆ ತಾನು ತನ್ನವರು ಎಂಬ ಆಸಕ್ತಿ ತೀವ್ರವಾಗಿರುತ್ತದೆ. ತನ್ನ ಏಕಾಕಿತನವನ್ನು ಕಳೆಯಲು ಮನುಷ್ಯನು ತನಗೆ ಹೆಂಡತಿ ಮಕ್ಕಳಿರುವರೆಂದು, ಹಣವಿರುವುದೆಂದು ತಪ್ಪು ತಿಳಿಯುತ್ತಾನೆ. ಆದರೆ ವಾಸ್ತವವಾಗಿ ಯಾರು ನಮ್ಮನ್ನು ಪ್ರೀತಿಸುವರೆಂದು ನಾವು ತಿಳಿದಿರುತ್ತೇವೋ, ಅವರೇ ನಮ್ಮನ್ನು ಏಕಾಂಗಿಗಳನ್ನಾಗಿ ಎಂದರೆ ಪರಾವಲಂಬಿಗಳನ್ನಾಗಿ ಮಾಡುವುದು. ಇದನ್ನೇ ಬುದ್ಧನು ಹೀಗೆ ಹೇಳುತ್ತಾನೆ, "ನನಗೆ ಮಕ್ಕಳಿರುವರು ಮತ್ತು ಹಣವಿರುವುದು ಎಂಬುದು ತಿಳಿಗೇಡಿಯ ಭಾವನೆ. ಈ ಭಾವನೆಯಿಂದ ಅವನು ಕೆಡುಕನ್ನು ಅನುಭವಿಸುತ್ತಾನೆ. ಆದರೆ ತಾನೇ ತನಗಿಲ್ಲ. ಹೀಗಿರುವಾಗ ಎಲ್ಲಿಯ ಮಕ್ಕಳು ಎಲ್ಲಿಯ ಹಣ" ಎಂದು ಪ್ರಶ್ನಿಸುತ್ತಾನೆ. **"ಅತ್ತಾ ಹಿ ಅತ್ತನೋ ನತ್ಥಿ"** ಎಂದರೆ ಅಶಾಶ್ವತವಾದುದನ್ನು ಶಾಶ್ವತವೆಂದು ತಿಳಿದು ಮನುಷ್ಯನು ಕೆಡುತ್ತಾನೆ.

**ಪುತ್ತಾ ಮತ್ಥಿ ಧನಂ ಮತ್ಥಿ ಇತಿ ಬಾಲೋ ವಿಹಣ್ಣತಿ**

**ಅತ್ತಾ ಹಿ ಅತ್ತನೋ ನತ್ಥಿ ಕುತೋ ಪುತ್ತಾ ? ಕುತೋ ದನಜ್ ?**[47]

ಒಂದು ಪಕ್ಷ ತಿಳಿಗೇಡಿಗೆ ತನ್ನ ಅಜ್ಞಾನದ ಅರಿವಿದ್ದರೆ ಅವನು ಅಷ್ಟರ ಮಟ್ಟಿಗೆ ಪಂಡಿತನೆಂದು ಬುದ್ಧನು ಸಾರುತ್ತಾನೆ. ಆದರೆ ತಾನೊಬ್ಬನೇ ಪಂಡಿತನೆಂದು ಭಾವಿಸಿದರೆ ಅವನು ತಿಳಿಗೇಡಿ. ಈ ತಿಳಿಗೇಡಿಯು ತನ್ನ ಜೀವಿತ ಕಾಲವೆಲ್ಲ ಪಂಡಿತನ ಸೇವೆಯಲ್ಲಿದ್ದರೂ ಅವನಿಗೆ ಧಮ್ಮದ ರಹಸ್ಯವು ತಿಳಿಯದು. ಬುದ್ಧನು ಇದಕ್ಕೆ ಒಂದು ಉಪಮೆಯನ್ನು ನೀಡುತ್ತಾನೆ. ಸೌಟು ತವ್ವೆಯೊಳಗೆ ಮುಳುಗಿದ್ದರೂ ಅದಕ್ಕೆ ತವ್ವೆಯ ರುಚಿಯು ತಿಳಿಯದಿರುವಂತೆ ತಿಳೀಗೇಡಿಯು ಪಂಡಿತನ ಸಂಗದಲ್ಲಿದ್ದರೂ ಅವನಿಗೆ ಧಮ್ಮದ ರಹಸ್ಯವು ತಿಳಿಯಲಾರದು.

**ಯೋ ಬಾಲೋ ಮಣ್ಣತೀ ಬಾಲ್ಯಜ್ ಪಂಡಿತೋ ವಾ ಪಿ ತೇನ ಸೋ**

**ಬಾಲೋ ಚ ಪಂಡಿತಮಾನಿ ಸ ವೇ ಬಾಲೋ ತಿ ವುಚ್ಚತಿ**

**ಯಾವ ಜೀವಂಪಿ ಚೆ ಬಾಲೋ ಪಂಡಿತಜ್ ಪಯಿರುಪಾಸತಿ**

**ನ ಸೋ ಧಮ್ಮಜ್ ವಿಜಾನಾತಿ ದಬ್ಬೀ ಸೂಪರಸಜ್ ಯಥಾ**[48]

ಆದರೆ ಬುದ್ಧನೆಂದಿಗೂ ಹಣ ಸಂಪಾದನೆಯನ್ನು ತಿರಸ್ಕರಿಸಲಿಲ್ಲ. ಮೌಲ್ಯಗಳ ಚೌಕಟ್ಟಿನಲ್ಲಿ ಧಮ್ಮ ಮತ್ತು ನಿರ್ವಾಣಗಳು ಎಷ್ಟು ಪ್ರಮುಖವೋ ಅಷ್ಟೇ ಅರ್ಥಕಾಮಗಳೂ ಮುಖ್ಯ. ಈ ಅರ್ಥ ಕಾಮಗಳನ್ನು ಧಮ್ಮದಿಂದ ಮನುಷ್ಯನು ಸಂಪಾದಿಸಬೇಕೆಂದು ಬುದ್ಧನು ನಮಗೆ ನೆನಪಿಸುತ್ತಾನೆ. ಆತನ ಪ್ರಕಾರ ಬ್ರಹ್ಮಚರ್ಯವನ್ನು ಮಾಡದೇ ಮತ್ತು ಯೌವ್ವನದಲ್ಲಿ ಹಣವನ್ನು ಸಂಪಾದಿಸದೇ ಇರುವವರು ಮೀನುಗಳಿಲ್ಲದ ಕೊಳದಲ್ಲಿರುವ ಮುದಿ ಬಕದಂತೆ ಕ್ಷೀಣಿಸುವರು. ಅವರು ಮುರಿದ ಬಿಲ್ಲಿನಂತೆ ನಿಷ್ಪ್ರಯೋಜಕರಾಗಿ ತಮ್ಮ ಹಿಂದಿನ ಕೃತ್ಯಗಳಿಗೆ ಪಶ್ಚಾತ್ತಾಪ ಪಡುತ್ತಾ ಬಿದ್ದಿರುವರು.

**ಅಚರಿತ್ವಾ ಬ್ರಹ್ಮಚರಿಯಜ್ ಅಲದ್ಧಾ ಯೊಬ್ಬನೇ ಧನಜ್**

**ಜಿಣ್ಣ – ಕೊಂಚಾ ವಾ ಝಾಯಂತಿ ಖೀಣಮಚ್ಛೇ ವ ಪಲ್ಲಲೇ**

**ಅಚರಿತ್ವಾ ಬ್ರಹ್ಮಚರಿಯಜ್ ಅಲದ್ಧಾ ಯೊಬ್ಬನೇ ಧನಜ್**

**ಸೇಂತಿ ಚಾಪಾತಿಖೀಣಾವಾ ಪುರಾಣಾನಿ ಅನುತ್ಥುನಜ್[49]**

ಆದರೆ ಅತಿಯಾದ ಅರ್ಥ ಕಾಮಗಳಿಂದ ಮನುಷ್ಯನಿಗೆ ಸುಖವಿಲ್ಲ. ಕಶ್ಯಪಣದ (ಬುದ್ಧನ ಕಾಲದಲ್ಲಿ ಚಲಾವಣೆಯಲ್ಲಿದ್ದ ಚಿನ್ನದ ನಾಣ್ಯ) ಮಳೆಯೇ ಸುರಿದರೂ ಮನುಷ್ಯನಿಗೆ ತೃಪ್ತಿಯಿರುವುದಿಲ್ಲ. ಕಾಮಗಳ ರುಚಿಯು ತಾತ್ಕಾಲಿಕವಾದುದು. ಅನಂತರ ಮನುಷ್ಯನನ್ನು ಕೊರತೆ ದುಃಖಗಳು ಕಾಡುತ್ತವೆ. ಎಂದರೆ ಮನುಷ್ಯನಿಗೆ ಹಣವು ಬೇಕಿದ್ದರೆ ಅವನು ಅದನ್ನು ತನ್ನ ಬದುಕಿನ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುವಷ್ಟು ಮಾತ್ರ ಸಂಪಾದಿಸಬೇಕು. ಈ ಮಿತಿಯ ಆಚೆ ಅವನ ಮನಸ್ಸು ಅರ್ಥಕಾಮಗಳೆಡೆಗೆ ಓಲಿದರೆ ಅವನ ಬದುಕು ದುಃಖಭರಿತವಾಗುವುದು ಖಂಡಿತ. ಈ ಅಂಶವನ್ನು ತಿಳಿದಾತನೇ ಪಂಡಿತ.

**ನ ಕಹಾಪಣ ವಸ್ಸೇನ ತಿತ್ತಿ ಕಾಮೇಸು ವಿಜ್ಜತಿ**

**ಅಪ್ಪಸ್ಸಾದಾ ದುಕ್ಖ ಕಾಮಾ ಇತಿ ವಿಞ್ಞಾಯ ಪಂಡಿತೋ[50]**

ಈ ಹಿನ್ನೆಲೆಯಲ್ಲೇ ಬುದ್ಧನು ಪದೇ ಪದೇ ಆಹಾರದಲ್ಲಿ ಮಿತಿಯನ್ನು ವಿಧಿಸುತ್ತಾನೆ. ಬದುಕಿನ ಸರಿಯಾದ ದೃಷ್ಟಿಕೋನಕ್ಕೆ ಮಿತಾಹಾರವು ಪ್ರಮುಖ ಪಾತ್ರವನ್ನು ವಹಿಸುವುದೆಂದು ಬುದ್ಧನು ಹೇಳಿದ.

**ಅನೂಪವಾದೋ ಅನೂಪಘಾತೋ ಪಾತಿಮೊಕ್ಖೇ ಚ ಸಂವರೋ**

**ಮತ್ತಞ್ಞುತಾ ಚ ಭತ್ತಸ್ಮಿಜ್ ಪಂತಞ್ ಚ ಸಯನಾಸನಜ್**

**ಅಧಿಚಿತ್ತೇ ಚ ಅಯೋಗೋ ಏತಜ್ ಬುದ್ಧಾನ ಸಾಸನಜ್[51]**

ಲೋಭವು ಎಲ್ಲಕ್ಕಿಂತ ತುಚ್ಛವಾದ ರೋಗ. ಮಿತವಾದ ಆಹಾರ ಮತ್ತು ಮಿತವಾದ ಹಣ ಸಂಪಾದನೆ ಬದುಕಿನ ಉನ್ನತಿಗೆ ಸಾಧನ. **ಜಿಘಚ್ಛ** ಎಂಬ ಶಬ್ದಕ್ಕೆ ಸಚ್ಚಿದಾನೇಂದ್ರ ಸರಸ್ವತಿಗಳು[52] ಮತ್ತು ಮ್ಯಾಕ್ಸ್‌ಮುಲ್ಲರ್ **ಹಸಿವೆಂದು[53]** ಹಾಗೂ ಎಸ್.ರಾಧಾಕೃಷ್ಣನ್‌ರವರು

**ಗ್ರೀಡಿನೆಸ್** ಎಂದು ಅರ್ಥೈಸುತ್ತಾರೆ.[54] ಎಸ್.ರಾಧಾಕೃಷ್ಣನ್‌ರವರ ಅರ್ಥವೇ ಸಮಂಜಸವೆನ್ನಿಸುತ್ತವೆ.

**ಜಿಘಚ್ಛಾಪರಮಾ ರೋಗಾ ಸಂಖಾರಪರಮಾ ದುಕ್ಖಾ**

**ಏತಜ್ ನತ್ವಾ ಯಥಾ ಭೂತಜ್ ನಿಬ್ಬಾಣಜ್ ಪರಮಜ್ ಸುಖಜ್**[55]

ಅತ್ಯಂತ ಮೂಲಭೂತ ಭೌತಿಕ ಮೌಲ್ಯವೆಂದರೆ ಆರೋಗ್ಯ. ಬುದ್ಧನ ಪ್ರಕಾರ ಎಲ್ಲಕ್ಕಿಂತಲೂ ಆರೋಗ್ಯವೇ ಹೆಚ್ಚಿನ ಲಾಭ. ಆರೋಗ್ಯವೇ ಭಾಗ್ಯವೆಂಬ ಗಾದೆಯೇ ಇದೆ. ಸಂತುಷ್ಟಿಯೇ ಅಥವಾ ತೃಪ್ತಿಯೇ ಧನ, ವಿಶ್ವಾಸವು ಹೆಚ್ಚಿನ ನೆಂಟ. ನಿರ್ವಾಣವು ಅತ್ಯಂತ ಹೆಚ್ಚಿನ ಸುಖ. ಮೌಲ್ಯವನ್ನು ಸಾಧನಭೂತಮೌಲ್ಯ (Instrumental Value) ಮತ್ತು ಅಂತಸ್ಥಮೌಲ್ಯವೆಂದು (Intrinsic Value) ಎರಡು ದೃಷ್ಟಿಕೋನಗಳಿಂದ ನೋಡುವುದುಂಟು. ಯಾವ ಮೌಲ್ಯವು ಇನ್ನೊಂದು ಮೌಲ್ಯಕ್ಕೆ ಸಾಧನವಾಗಿದೆಯೋ ಅದೇ ಸಾಧನಭೂತ ಮೌಲ್ಯ. ಯಾವ ಮೌಲ್ಯವು ಇನ್ನೊಂದು ಮೌಲ್ಯಕ್ಕೆ ಸಾಧನಭೂತವಲ್ಲವೋ ಮತ್ತು ಅದಕ್ಕೆ ಅದೇ ಮೌಲ್ಯವುಳ್ಳದ್ದಾಗಿದೆಯೋ ಅದು ಅಂತಸ್ಥ ಮೌಲ್ಯ. ಆರೋಗ್ಯವು ಸಾಧನಭೂತ ಮೌಲ್ಯವೋ ಅಥವಾ ಅಂತಸ್ಥ ಮೌಲ್ಯವೋ ಎಂಬುದು ಪ್ರಶ್ನೆ. ಇದು ಬುದ್ಧನ ಸಂದೇಶದ ನೆಲೆಗಟ್ಟಿನಲ್ಲಿ ಸಾಧನಭೂತ ಮೌಲ್ಯವೆಂದು ನಾವು ಹೇಳಬೇಕಾಗುತ್ತದೆ. ನಿರ್ವಾಣ ಸಾಧನೆಗೆ ದೃಢಕಾಯವು, ದೇಹಾರೋಗ್ಯವು ಬಹಳ ಮುಖ್ಯ. ಆರೋಗ್ಯವಿಲ್ಲದೇ ಮನುಷ್ಯನು ಆಧ್ಯಾತ್ಮಿಕವಾದ ನಿರ್ವಾಣವಿರಲಿ ಲೌಕಿಕ ಗುರಿಯನ್ನೂ ಸಾಧಿಸಲಾರ. ಆದ್ದರಿಂದಲೇ ಉಪನಿಷತ್ತುಗಳು ಗುರಿಯ ಪರಿಕಲ್ಪನೆಯಲ್ಲಿ ಬುದ್ಧನಿಗಿಂತ ಭಿನ್ನವಾಗಿದ್ದರೂ **ನಾಯಮಾತ್ಮಾ ಬಲಹೀನೇನ ಲಭ್ಯಃ** ಎಂದರೆ **ಬಲಹೀನನಿಂದ ಆತ್ಮವು ಸಾಧಿಸತಕ್ಕದ್ದಲ್ಲ** ಎಂದು ಸಾರುವುದು. ಹಾಗೆಯೇ ತೃಪ್ತಿವಿಶ್ವಾಸಗಳು ನಿರ್ವಾಣ ಸಾಧನೆಗೆ ಉಪಕರಣಗಳಾಗಿವೆ. ಇರುವುದರಲ್ಲಿ

ಬೆಳಿಸಿಕೊಳ್ಳಬೇಕಾದ ತೃಪ್ತಿಯನ್ನು ಸಂತುಷ್ಟಿಯೆನ್ನುವರು. ಸ್ನೇಹ ಪ್ರೀತಿ ವಿಶ್ವಾಸಗಳೇ ನೆಂಟ. ಇವೆಲ್ಲ ಮೌಲ್ಯಗಳೂ ವ್ಯಕ್ತಿಯ ಆಧ್ಯಾತ್ಮಿಕ ಗುರಿಸಾಧನೆಗೆ ನೆರವಾಗುತ್ತದೆ.

**ಆರೋಗ್ಯ ಪರಮಾ ಲಾಭಾ ಸಂತುಟ್ಠಿ ಪರಮಜ್ ಧನಜ್**

**ವಿಸ್ಸಾಸ ಪರಮಾ ಞಾತಿ ನಿಬ್ಬಾಣಜ್ ಪರಮಜ್ ಸುಖಮ್**[56]

ಬುದ್ಧನು ತನ್ನ ಉಪದೇಶಗಳಲ್ಲಿ ಎಷ್ಟು ಪ್ರಾಯೋಗಿಕನಾಗಿದ್ದನೆಂದರೆ ಆತನು ಮೌಲ್ಯಗಳ ಆಯ್ಕೆಯ ಹಿನ್ನೆಲೆಯಲ್ಲಿರುವ ತತ್ವವನ್ನು ನಮ್ಮ ಮುಂದಿಟ್ಟನು. ನಮಗೆ ಎರಡು ಸುಖಗಳು ದತ್ತವಾದಾಗ ನಾವು ಸಣ್ಣ ಸುಖವನ್ನು ಬಿಟ್ಟು ಹೆಚ್ಚಿನ ಸುಖವನ್ನು ಆಯ್ದುಕೊಳ್ಳಬೇಕಾಗುತ್ತದೆ. ಹೀಗೆ ಮಾಡಿದರೆ ಮಾತ್ರ ನಾವು ಜಾಣರೆನಿಸಿಕೊಳ್ಳುತ್ತೇವೆ. ಈ ಹೆಚ್ಚಿನ ಸುಖವನ್ನು ನಮಗೆ ದೊರಕಿಸಿಕೊಡುವುದೇ ನಿರ್ವಾಣ. ನಾವು ಆಯ್ದುಕೊಳ್ಳಬೇಕಿರುವುದು ನಿರ್ವಾಣವನ್ನೇ ಹೊರತು ಅಲ್ಪಸುಖಗಳನ್ನಲ್ಲ.

**ಮತ್ತಾಸುಖ ಪರಿಚ್ಚಾಗಾ ಪಸ್ಸೇ ಚೆ ವಿಪುಲಜ್ ಸುಖಜ್**

**ಚಜೆ ಮತ್ತಾ ಸುಖಜ್ ಧೀರೋ ಸಂಪಸ್ಸಜ್ ವಿಪುಲಜ್ ಸುಖಜ್**[57]

ನಿರ್ವಾಣ ಸಾಧನೆಗೆ ಅಪಮೌಲ್ಯಗಳಾಗಿ ಪರಿಣಮಿಸುವ ವಿಷಯಗಳನ್ನು ಬುದ್ಧನು ನಿಷ್ಠುರ ಮಾತುಗಳಲ್ಲಿ ಖಂಡಿಸುತ್ತಾನೆ. ಯಾರು ಹಂದಿಯಂತೆ ಮಿತಿಮೀರಿ ತಿಂದು ಆಲಸ್ಯವುಳ್ಳವನಾಗಿ, ನಿದ್ರಾಳುವಾಗಿ ಹೊರಳಾಡುತ್ತ ಮಲಗಿರುವನೋ ಆ ಮೂಢನಿಗೆ ಮತ್ತೆ ಮತ್ತೆ ಜನ್ಮವು ಉಂಟಾಗುತ್ತದೆ.

**ಮಿದ್ಧಿ ಯದಾ ಹೋತಿ ಮಹಗ್ಘಸೋ ಚ**

**ನಿದ್ದಾಯಿತಾ ಸಂಪರಿವತ್ತಸಾಯೀ**

**ಮಹಾವರಾಹೋ ವ ನಿವಾಪಪುಟ್ಠೋ**

**ಪುನಪ್ಪುನಜ್ ಗಬ್ಭಂ ಉಪೇತಿ ಮಂದೋ**[58]

# ಅಡಿ ಟಿಪ್ಪಣಿಗಳು

1. ಗಾಥೆ 103
2. ಗಾಥೆಗಳು 104–105
3. ಗಾಥೆಗಳು 110–115
4. ಗಾಥೆ 116
5. ಗಾಥೆಗಳು 117–118
6. ಗಾಥೆಗಳು 119–120
7. ಗಾಥೆ 121
8. ಗಾಥೆ 122
9. ಗಾಥೆಗಳು 123–124
10. ಗಾಥೆ 125
11. ಗಾಥೆ 126
12. ಗಾಥೆಗಳು 127–128
13. ಗಾಥೆ 136
14. ಗಾಥೆಗಳು 160–161
15. ಗಾಥೆ 163
16. ಗಾಥೆ 165
17. ಗಾಥೆ 166
18. ಗಾಥೆ 225
19. ಗಾಥೆಗಳು 231–234
20. ಗಾಥೆ 244
21. ಗಾಥೆ 241
22. William S. Sahakian, ***History of Philosophy***, Barnes and Noble, New York, 1968, ಪು.331
23. ಗಾಥೆಗಳು 216–219
24. ಗಾಥೆ 312
25. ಗೀತೆ 2–50
26. ಗಾಥೆ 313
27. ಗಾಥೆ 314
28. ಗಾಥೆಗಳು 322–323

29. ಗಾಥೆಗಳು 360–363

30. ಗಾಥೆ 378

31. ಗಾಥೆ 7

32. ಗಾಥೆ 360

33. ಗಾಥೆಗಳು 1–2

34. ಗೀತೆ 6–34

35. ಗಾಥೆಗಳು 33–34

36. William S. Sahakian, ***History of Philosophy*** ಪೂರ್ವೋಕ್ತ, ಪು.154

37. ಗಾಥೆ 37

38. ಗಾಥೆಗಳು 35–36

39. ಗಾಥೆಗಳು 38–39

40. ಗಾಥೆ 43

41. ಗಾಥೆ 27

42. ಗಾಥೆ 40

43. ಗಾಥೆ 39

44. ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ***ಶಿಶುನಾಳ ಶರೀಫ ಸಾಹೇಬರ ಗೀತೆಗಳು,*** ಕ್ಷಮಾ ಪ್ರಕಾಶನ, ಬೆಂಗಳೂರು, ಪು.15

45. ಗಾಥೆ 7

46. ಗಾಥೆ 148

47. ಗಾಥೆ 62

48. ಗಾಥೆಗಳು 63–64

49. ಗಾಥೆಗಳು 155–156

50. ಗಾಥೆ 186

51. ಗಾಥೆ 185

52. ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು, ***ಧಮ್ಮಪದ,*** ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, 1997, ಪು.53–54

53. F. Max Muller, ***The Dhammapada***, Motilal Banarsidass Publishers Private Limited, Delhi, 2013, ಪು.55

54. S.Radhakrishnan, ***The Dhammapada***, Oxford University Press, London, 1950, ಪು.126

55. ಗಾಥೆ 203

56. ಗಾಥೆ 204

57. ಗಾಥೆ 290

58. ಗಾಥೆ 325

**********

# ಅಧ್ಯಾಯ–9

# ನೈತಿಕ ಅಂಶಗಳು – ಅಪ್ರಮಾದ

# ಅಧ್ಯಾಯ–9

# ನೈತಿಕ ಅಂಶಗಳು – ಅಪ್ರಮಾದ

ಬುದ್ಧನು ಜೀವನದಲ್ಲಿ ಅಪಮೌಲ್ಯಗಳು ಹೇಗೆ ಮನುಷ್ಯನ ಅವನತಿಗೆ ಕಾರಣವೆಂಬುದನ್ನು ಅನೇಕ ಕಡೆ ನಿರೂಪಿಸುತ್ತಾನೆ. 16ನೆಯ ಅಧ್ಯಾಯದಲ್ಲಿ ಈ ಅಪಮೌಲ್ಯಗಳ ಪ್ರಸ್ತಾಪ ಬರುತ್ತದೆ. ವಿಷಯಾಸಕ್ತಿ ಒಂದು ಅಪಮೌಲ್ಯ. ಬುದ್ಧನು ಇದನ್ನು **ಅಯೋಗ**ವೆಂದು ಕರೆಯುತ್ತಾನೆ. ಯೋಗಮಾರ್ಗವನ್ನು ಹಿಡಿಯದೇ ಮತ್ತು ಪುರುಷಾರ್ಥವನ್ನು ಬಿಟ್ಟು ಯಾರು ಪ್ರಿಯಕ್ಕೆ ಅಂಟಿಕೊಳ್ಳುವರೋ ಅವರು ಆತ್ಮಾನುಯೋಗಿಯನ್ನು ಕಂಡು ತಾನು ಅವನಂತಾಗಲಿಲ್ಲವೆಂದು ದುಃಖಿಸುವನಂತೆ. ಇಲ್ಲಿ ಪ್ರಿಯವೆಂದರೆ ವಿಷಯದ ಮಾರ್ಗವೆಂದರ್ಥ. ಯೋಗವೆಂದರೆ ನಿರ್ವಾಣದ ಮಾರ್ಗವೆಂದರ್ಥ. ನಿರ್ವಾಣದ ಮಾರ್ಗಕ್ಕೆ **ಯೋಗ** ಶಬ್ದವನ್ನು ಬಳಸಿರುವುದು ಇಲ್ಲಿ ಗಮನಾರ್ಹವಾದುದು. ಆತನನ್ನು ಬುದ್ಧನು **ಆತ್ಮಾನುಯೋಗಿ** ಎಂದು ಕರೆಯುತ್ತಾನೆ. ಇಂದ್ರಿಯ ವಿಷಯದ ಮಾರ್ಗವನ್ನು **ಪ್ರಿಯಮಾರ್ಗ**ವೆಂದು ಕರೆಯುತ್ತಾನೆ.

**ಆಯೋಗೇ ಯುಂಜಂ ಅತ್ತಾನಜ್ ಯೋಗಸ್ಮಿಜ್ ಚ ಅಯೋಜಯಜ್**

**ಅತ್ಥಜ್ ಹಿತ್ವಾ ಪಿಯಗ್ಗಾಹೀ ಪಿಹೇತತ್ಥಾನುಯೋಗಿನಜ್**[1]

ಬುದ್ಧನು ಪ್ರಿಯ ಮತ್ತು ಅಪ್ರಿಯ ಮಾರ್ಗಗಳೆರಡನ್ನೂ ಮನುಷ್ಯನು ಬಿಡಬೇಕೆಂದು ಸಾರುತ್ತಾನೆ. ಏಕೆಂದರೆ ಎರಡರಿಂದಲೂ ಮನುಷ್ಯನಿಗೆ ನಾಶವು ಕಟ್ಟಿಟ್ಟ ಬುತ್ತಿ. ಇಂದ್ರಿಯವಿಷಯದ ಆಸಕ್ತಿಯೇ ಪ್ರಿಯ. ಈ ವಿಷಯಾನಂದ ತಾತ್ಕಾಲಿಕವಾದುದು. ಈ ಆನಂದವು ತೀರಿದ ಬಳಿಕ ಮನುಷ್ಯನು ದುಃಖವನ್ನು ಅನುಭವಿಸಲೇಬೇಕು. ವಿಷಯಸುಖದ ತಾತ್ಕಾಲಿಕತೆಯು ಮನುಷ್ಯನ ದುಃಖಕ್ಕೆ ಕಾರಣ. ಈ ಆನಂದವು ತೀರಿದ ಬಳಿಕ ಮನುಷ್ಯನನ್ನು ದುಃಖವು ಕಾಡುವುದು ಸಹಜವೇ.ದುಃಖವು ಅವನಿಗೆ ಅಪ್ರಿಯ. ಈ

ಅರ್ಥದಲ್ಲಿ ಪ್ರಿಯಾಪ್ರಿಯಗಳೆರಡೂ ಕೆಟ್ಟದ್ದೇ ಎಂದು ಬುದ್ಧನು ಸಾರುತ್ತಾನೆ. ಪ್ರಿಯವನ್ನು ಕಳೆದುಕೊಂಡರೂ ದುಃಖ, ಅಪ್ರಿಯವು ಬಂದರೆ ಇನ್ನೂ ದುಃಖ. ಈ ಪ್ರಿಯಾಪ್ರಿಯಾಗಳನ್ನು ಮೀರಿದವರಿಗೆ ಗ್ರಂಥಗಳಿಲ್ಲವೆಂದು ಹೇಳಲಾಗಿದೆ. ಇಲ್ಲಿ ಗ್ರಂಥವೆಂದರೆ ಪುಸ್ತಕವೆಂದರ್ಥವಲ್ಲ. ಗ್ರಂಥವು **ಗಂಟು** ಎಂಬರ್ಥವನ್ನು ನೀಡುತ್ತದೆ. ಈ ಶಬ್ದವು ಉಪನಿಷತ್ತುಗಳಲ್ಲೂ ಬಳಸಲ್ಪಟ್ಟಿದೆ ಎಂದು ಈಗಾಗಲೇ ವಿವರಿಸಲಾಗಿದೆ. ಮುಂಡಕೋಪನಿಷತ್ತು **ಹೃದಯಗ್ರಂಥಿ**ಯೆಂಬ ಶಬ್ದವನ್ನು ಉಲ್ಲೇಖಿಸುತ್ತದೆ. ಹೃದಯಗ್ರಂಥಿಯೆಂದರೆ **ಅಜ್ಞಾನ**ವೆಂದರ್ಥ.[2] ಧಮ್ಮಪದದ ಪ್ರಕಾರ ಗ್ರಂಥಗಳು **ಅಭಿದ್ಯಾ, ವ್ಯಾಪಾದ, ಶೀಲವ್ರತಪರಾಮರ್ಶ** ಮತ್ತು **ಇದಂಸತ್ಯಾಭಿನಿವೇಶ** ಎಂದು ನಾಲ್ಕು. ಇವಕ್ಕೆ **ಕಾಯಗ್ರಂಥ**ಗಳೆಂದು ಹೆಸರು.

**ತಸ್ಮಾ ಪಿಯಜ್ ನ ಕಯಿರಾಥಾ ಪಿಯಾಪಯೋ ಹಿ ಪಾಪಕೋ**

**ಗಂಥಾ ತೇಸಜ್ ನ ವಿಜ್ಜಂತಿ ಯೇಸಜ್ ಪಿಯಪ್ಪಿಯಜ್**[3]

ಒಟ್ಟಾರೆ ಪ್ರಿಯಾಪ್ರಿಯಗಳೆರಡೂ ಮಾನವ ಬದುಕಿಗೆ ಅಪಮೌಲ್ಯಗಳು. ಅವು ಮನುಷ್ಯನ ಕೆಡುಕಿಗೆ ಕಾರಣವಾಗಿವೆ. ಪ್ರಿಯದಿಂದ ಮನುಷ್ಯನಿಗೆ ಶೋಕಭಯಗಳುಂಟಾಗುತ್ತವೆ. ಇದರಿಂದ ಮುಕ್ತನಾದವನಿಗೆ ಶೋಕಭಯಗಳೆಲ್ಲಿಯದು ಎಂದು ಈಶೋಪನಿಷತ್ತಿನ ದಾಟಿಯಲ್ಲಿ ಕೇಳಲಾಗಿದೆ.[4]

**ಪಿಯತೋ ಜಾಯತೀ ಸೋಕೋ ಪಿಯತೋ ಜಾಯತೀ ಭಯಜ್**

**ಪಿಯತೋ ವಿಪ್ಪಮುತ್ತಸ್ಸ ನತ್ಥಿ ಸೋಕೋ ಕುತೋ ಭಯಜ್**

ಅದೇರೀತಿ ಪ್ರೇಮ, ರತಿ, ಕಾಮ ಮತ್ತು ತೃಷ್ಣೆಗಳೂ ಮನುಷ್ಯನ ಭಯಶೋಕಗಳಿಗೆ ಕಾರಣವಾಗುತ್ತವೆ. ಈ ಶಬ್ದಗಳು ಪರ್ಯಾಯಾತ್ಮಕವೆಂದು ಮೇಲ್ನೋಟಕ್ಕೆ ತೋರುವುದಾದರೂ ಇವು ಯಾವ ಅರ್ಥದಲ್ಲಿ ಭಿನ್ನವೆಂಬುದು ಗ್ರಂಥದಲ್ಲಿ ಸ್ಪಷ್ಟವಿಲ್ಲ.

ಇವೆಲ್ಲವೂ ಇಂದ್ರಿಯಸುಖವು ಬೇಕೆಂಬ ತೀವ್ರ ಹಂಬಲದ ವಿವಿಧ ಮಜಲುಗಳಿರಬಹುದಷ್ಟೆ. ಈ ಸಂದರ್ಭದಲ್ಲಿ ಆಸೆಗೂ ತೃಷ್ಣೆಗೂ ಇರುವ ವ್ಯತ್ಯಾಸವು ಉಲ್ಲೇಖಾರ್ಹವಾದುದು. ಒಂದು ವಿಷಯವನ್ನು ನೋಡಿದೊಡನೆ ಅದು ಬೇಕೆಂಬ ತುಡಿತಕ್ಕೆ **ಆಸೆ** ಎಂದು ಹೆಸರು. ಆಸೆಯಲ್ಲಿ ಇಂದ್ರಿಯವಿಷಯವು ನಮ್ಮ ಮುಂದಿರುತ್ತದೆ. ಅದನ್ನು ಭೋಗಿಸಿದ ನಂತರ ಆ ವಿಷಯವು ಇನ್ನೂ ಬೇಕೆಂಬ ತೀವ್ರ ಹಂಬಲವನ್ನೇ **ತೃಷ್ಣೆ** ಎಂದು ಕರೆಯುತ್ತಾರೆ. ತೃಷ್ಣೆಯಲ್ಲಿ ವಿಷಯವು ನಮ್ಮ ಮುಂದಿರುವುದಿಲ್ಲ. ಆದರೆ ಅದು ಬೇಕೆಂಬ ತೀವ್ರ ಹಂಬಲವಿರುತ್ತದೆ. ನಮ್ಮೆಲ್ಲ ದುಃಖಕ್ಕೂ ಈ ತೃಷ್ಣೆಯೇ ಕಾರಣ. ಪ್ರತೀತ್ಯ ಸಮುತ್ಪಾದದ 12 ಕೊಂಡಿಗಳಲ್ಲಿ ತೃಷ್ಣೆಯ ಪ್ರಸ್ತಾಪವಿದೆ. ಈ ತೃಷ್ಣೆಯಿಂದ ಮನುಷ್ಯನಿಗೆ ಭಯ ಶೋಕಗಳುಂಟಾಗುತ್ತವೆ. ಭಗವದ್ಗೀತೆಯು ತೃಷ್ಣೆಗೆ **ರಸ** ಎಂಬ ಮತ್ತೊಂದು ಹೆಸರನ್ನು ನೀಡುತ್ತದೆ.[5] ಯಾರು ತೃಷ್ಣೆಯಿಂದ ವಿಮುಕ್ತರಾಗಿರುತ್ತಾರೋ ಅವರಿಗೆ ಭಯಶೋಕಗಳಿರುವುದಿಲ್ಲ. ವಸ್ತುವಿನ ಮೇಲಿನ ಪ್ರೇಮದಿಂದಾಗಿ ಅದು ನಮಗೆ ಪ್ರಿಯವಾಗುತ್ತದೆ. ಪ್ರೇಮವು ಆ ವಸ್ತುವಿನಲ್ಲಿ ಮನಸ್ಸನ್ನಿರಿಸುವ ರತಿಯಿಂದುಂಟಾಗುತ್ತದೆ. ರತಿಯು ಆ ವಸ್ತುವು ಬೇಕೆಂಬ ಕಾಮದಿಂದ ಉಂಟಾಗುತ್ತದೆ. ಕಾಮವು ಈ ಹಂಬಲದ ತೀವ್ರತೆಯ ಸ್ವರೂಪವಾದ ತೃಷ್ಣೆಯಿಂದ ಉಂಟಾಗುತ್ತದೆ. ಆದ್ದರಿಂದ ಮನುಷ್ಯನ ದುಃಖಕ್ಕೆ ತೃಷ್ಣೆಯೇ ಮೂಲ. ತೃಷ್ಣೆಯಿಂದಲೇ ಭಯಾತಂಕಗಳಿರುವುದು. ಬುದ್ಧನು ಒಬ್ಬ ಅದ್ಭುತ ಮನೋವಿಜ್ಞಾನಿಯಾಗಿದ್ದನು. ಮಾನವ ಬದುಕಿನ ಬಿಕ್ಕಟ್ಟಿಗೆ ಕಾರಣ ಈ ತೃಷ್ಣೆಯೇ ಕಾರಣವೆಂದನು. ಮಾನವ ವ್ಯಕ್ತಿತ್ವವನ್ನು ಅದ್ಭುತವಾಗಿ ವಿಶ್ಲೇಷಿಸಿದ್ದ ಆತನು ಮಾನವನಲ್ಲಿ ಮನೆ ಮಾಡಿಕೊಂಡಿರುವ ಅಲ್ಪ ಭಾವನೆಗಳನ್ನು ಹೆಕ್ಕಿ ತೋರಿಸಿದನು. ತೃಷ್ಣೆ ಮತ್ತು ಅದಕ್ಕೂ ಮೂಲಭೂತವಾದ ಅವಿದ್ಯೆಯೇ ಮನುಷ್ಯನ ಬದುಕಿನ ಬಿಕ್ಕಟ್ಟಿಗೆ ಕಾರಣ ಎಂಬುದನ್ನು ಧಮ್ಮಪದದಲ್ಲಿ ಪದೇ ಪದೇ ಬುದ್ಧನು ತೋರಿಸುತ್ತಾನೆ.

ಧಮ್ಮಪದವು ಆಸೆಗೆ ಕಟ್ಟುಬಿದ್ದು ಸುಖವನ್ನು ಬಯಸುವವರು ಹುಟ್ಟು ಮತ್ತು ಮುಪ್ಪನ್ನು ಅನುಭವಿಸುವರೆಂದು ಸಾರುತ್ತದೆ. ತೃಷ್ಣೆ ಇರುವ ಪ್ರಾಣಿಗಳು ಬಲೆಗೆ ಸಿಲುಕಿದ ಮೊಲದಂತೆ ಹೊರಬರಲು ಕಷ್ಟಪಡುತ್ತಿರುತ್ತವೆ.

**ಸರಿತಾನಿ ಸಿನೇಹಿತಾನಿ ಚ ಸೋಮನಸ್ಸಾನಿ ಭವಂತಿ ಜಂತುನೋ**

**ತೇ ಸಾತಸಿತಾ ಸುಖೇಸಿನೋ ತೇ ವೇ ಜಾತಿಜರೂಪಗಾ ನರಾ**

**ತಸಿಣಾಯ ಪುರಕ್ಖತಾ ಪಜಾ ಪರಿಸಪ್ಪಂತಿ ಸಸೋ ವ ಬಾಧಿತೋ**

**ಸಂಯೋಜನ ಸಂಗಸತ್ತಾ ದುಕ್ಖಜ್ ಉಪೆಂತಿ ಪುನಪ್ಪುನಜ್ ಚಿರಾಯ**

**ತಸಿಣಾಯ ಪುರಕ್ಖತಾ ಪಜಾ ಪರಿಸಪ್ಪಂತಿ ಸಸೋ ವ ಬಾಧಿತೋ**

**ತಸ್ಮಾ ತಸಿನಜ್ ವಿನೋದಯೇ ಭಿಕ್ಕು ಆಕಂಖಿ ವಿರಾಗಂ ಅತ್ತನೋ**[6]

ತೃಷ್ಣೆಯಿಂದ ಮನುಷ್ಯನು ತನ್ನನ್ನಷ್ಟೇ ಅಲ್ಲ, ಇತರರನ್ನೂ ಹಾಳು ಮಾಡುತ್ತಾರೆ. ಆದ್ದರಿಂದ ಮನುಷ್ಯನು ತೃಷ್ಣೆಯಿಂದ ಮುಕ್ತನಾಗಿರಬೇಕು. ಇವುಗಳಿಂದ ಮುಕ್ತಿ ಹೊಂದುವ ವಿಧಾನವೆಂದರೆ ಈ ಅಪಮೌಲ್ಯಗಳಿಗೆ ವಿರುದ್ಧವಾದ ಮೌಲ್ಯಗಳನ್ನು ಮನುಷ್ಯನು ಜೀವನದಲ್ಲಿ ಬೆಳೆಸಿಕೊಳ್ಳುವುದು. ಶೀಲ ಮತ್ತು ದರ್ಶನಗಳಿಂದ ಕೂಡಿರುವಾತನು, ಧರ್ಮಿಷ್ಠನೂ, ಸತ್ಯವಾದಿಯೂ ಆಗಿರುವವನು ಮಾತ್ರ ಈ ಅಪಮೌಲ್ಯಗಳನ್ನು ಮೀರಲು ಸಾಧ್ಯ. ಆತನು ಮಾತ್ರ ಸಮಾಜಕ್ಕೆ ಉಪಕಾರಿಯಾಗಿರುತ್ತಾನೆ. ಬುದ್ಧನ ಪ್ರಕಾರ ಸಮಾಜಕ್ಕೆ ಹತ್ತಿರವಾದವನು ಕೇವಲ ಮಾತುಗಾರನಾಗಿರದೇ ಕ್ರಿಯಾಶೀಲನಾಗಿರುತ್ತಾನೆ. ಅಂತಹವನನ್ನು **ಊರ್ಧ್ವಸ್ರೋತ** ಎಂದು ಕರೆಯಲಾಗಿದೆ. ಊರ್ಧ್ವಸ್ರೋತನು ನಿರ್ವಾಣವನ್ನು ಮನಸ್ಸಿನಿಂದ ಸ್ಫುಟವಾಗಿ ತಿಳಿದಿರುತ್ತಾನೆ. ಎಂದರೆ ನಿರ್ವಾಣವು ಅವನ ಮನಸ್ಸನ್ನು ಪೂರ್ಣವಾಗಿ ಆವರಿಸಿರುತ್ತದೆ, ಅದರಲ್ಲೇ ಅವನ ಮನಸ್ಸು ನಿಂತಿರುತ್ತದೆ ಮತ್ತು ಪಕ್ವತೆಯನ್ನು ಪಡೆದಿರುತ್ತದೆ.

**ಸೀಲದಸ್ಸನ ಸಂಪನ್ನಜ್ ಧಮ್ಮಟ್ಠಜ್ ಸಚ್ಚವೇದಿನಙ್**

**ಅತ್ತನೋ ಕಮ್ಮ ಕುಬ್ಬಾನಜ್ ತಜ್ ಜನೋ ಕುರುತೇ ಪಿಯಜ್**

**ಚಂದಜಾತೋ ಅನಕ್ಖಾತೇ ಮನಸಾ ಚ ಫುಟೋ ಸಿಯಾ**

**ಕಾಮೇಸು ಚ ಅಪ್ಪಟಬದ್ಧಚಿತ್ತೋ ಉದ್ಧಜ್ ಸೋತೋ ತಿ ವುಚ್ಚತಿ[7]**

ಹುಟ್ಟಿನಿಂದಲೂ ಮನುಷ್ಯನೊಳಗೆ ಹುದುಗಿರುವ ಈ ತೃಷ್ಣೆಯು ಮನುಷ್ಯನ ಶೋಕವನ್ನು ಗದ್ದೆಯಲ್ಲಿ ಬೆಳೆಯುವ ಅನಗತ್ಯವಾದ ಕಳೆಯಂತೆ ಹೆಚ್ಚಿಸುತ್ತದೆ. ತೃಷ್ಣೆಯ ಬೇರನ್ನು ಕಿತ್ತು ಹಾಕಲು ಬುದ್ಧನು ನಮ್ಮನ್ನು ತ್ವರೆಗೊಳಿಸುತ್ತಾನೆ. ಲಾಮಂಚವು ಬೇಕೆನ್ನುವವನು ಬೀರಣವೆಂಬ ಕಳೆಯನ್ನು ಕೀಳುವುದು ಅಗತ್ಯ.

**ತಜ್ ವೋ ವದಾಮಿ ಭದ್ಧಜ್ ವೊ ಯಾವಂತೆತ್ಥ ಸಮಾಗತಾ**

**ತನ್ಹಾಯ ಮೂಲಜ್ ಖಣಥ ಉಸೀರತ್ಥೋವ ಬೀರಣಜ್**

**ಮಾ ವೊ ನಳಜ್ ವ ಸೋತೋ ವ ಮಾರೋ ಭಂಜಿ ಪುನಪ್ಪುನಜ್[8]**

ಆದರೆ ಈ ತೃಷ್ಣೆಯ ನಾಶ ಅಷ್ಟು ಸುಲಭ ಸಾಧ್ಯವಲ್ಲ. ಮೇಲ್ನೋಟಕ್ಕೆ ಅದನ್ನು ಗೆಲ್ಲಲು ನಾವು ಎಷ್ಟೇ ಪ್ರಯತ್ನಿಸಿದರೂ ಅದು ಪುನಃ ಪುನಃ ಬೇರೊಂದು ರೂಪದಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತದೆ. ಬೇರು ಗಟ್ಟಿಯಾಗಿರುವವರೆಗೆ ಮರವನ್ನು ನಾವು ಎಷ್ಟೇ ಕಡಿದು ಹಾಕಲು ಪ್ರಯತ್ನಿಸಿದರೂ ಅದು ಮತ್ತೆ ಚಿಗುರುತ್ತಲೇ ಇರುತ್ತದೆ. ಅದೇ ರೀತಿ ಈ ತೃಷ್ಣೆಯ ಮೂಲವಾದ ಅವಿದ್ಯೆಯನ್ನು ನಾಶಗೊಳಿಸದಿರುವವರೆಗೆ ವಿಷಯ ಬೇಕೆಂಬ ತೀವ್ರ ಹಂಬಲವು ದುಃಖವು ಮತ್ತೆ ಮತ್ತೆ ಕಾಡುತ್ತಲೇ ಇರುತ್ತದೆ. ಈ ತೃಷ್ಣೆಯ ಶೇಷವನ್ನು ಬುದ್ಧನು **ಅನುಶಯ**ವೆಂದು ಕರೆಯುತ್ತಾನೆ.

**ಯಥಾ ಪಿ ಮೂಲೇ ಅನುಪ್ಪದವೆ ದಳ್ಹೇ**
**ಚಿನ್ನೋ ಪಿ ರುಕ್ಖೋ ಪುನಪೇವ ರೂಹತಿ**
**ಏವಂ ಪಿ ತನ್ಹಾನುಸಯೆ ಅನೂಹತೇ**
**ನಿಬ್ಬತ್ತತಿ ದುಕ್ಖಂ ಇದಜ್ ಪುನಪ್ಪುನಜ್[9]**

ಇದೇನೇ ಇರಲಿ, ತೃಷ್ಣೆಯ ಮೂಲವನ್ನು ಪ್ರಜ್ಞೆಯಿಂದ ಕತ್ತರಿಸಬೇಕು.[10] ಹಿಂದಿನ ನೆನಪುಗಳು ಮನುಷ್ಯನಿಗೆ ಹಿತವಾಗಿರುತ್ತದೆ. ಅವುಗಳ ಆಸೆಗೆ ಕಟ್ಟುಬಿದ್ದು ಯಾರು ಸುಖವನ್ನು ಅರಸುವರೋ ಅವರು ಹುಟ್ಟು ಮತ್ತು ಮುಪ್ಪುಗಳನ್ನು ಅನುಭವಿಸುತ್ತಾರೆ. ಈ ತೃಷ್ಣೆಯನ್ನು ವೈರಾಗ್ಯದಿಂದಲೇ ನಿವಾರಿಸಿಕೊಳ್ಳಬೇಕು.

ಈ ತೃಷ್ಣೆಯನ್ನು ಕುರುಚಲು ಗಿಡಗಳಿಗೆ ಹೋಲಿಸಲಾಗಿದೆ.[11] ಈ ತೃಷ್ಣೆಯ ಬಂಧನವು ಕಬ್ಬಿಣ ಕಟ್ಟಿಗೆ ಅಥವಾ ಬೀರಣ ಹುಲ್ಲಿನ ಬಂಧನಕ್ಕಿಂತಲೂ ಪ್ರಬಲವಾದುದು. ಮನುಷ್ಯನು ಬದ್ಧನಾಗುವುದು ಧನ, ಕನಕ, ಮಕ್ಕಳು ಮತ್ತು ಮಡದಿಯನ್ನು ಕುರಿತ ರಾಗದಿಂದ. ಈ ರಾಗವೇ ಮನುಷ್ಯನನ್ನು ಎಳೆದು ಜಗ್ಗಿಸುವುದು. ಈ ರಾಗದಿಂದ ಕೂಡಿರುವವರು ಜೇಡರ ಹುಳುವು ತನ್ನ ಬಲೆಗೆ ತಾನೇ ಬೀಳುವಂತೆ ತಾವೇ ನಿರ್ಮಿಸಿಕೊಂಡ ಬಂಧನಕ್ಕೆ ಒಳಗಾಗುವರು. ಬುದ್ಧನು ಬಂಧನಕ್ಕೆ ಸ್ಥೂಲವಾಗಿ 3 ಕಾರಣಗಳನ್ನು ವಿಶ್ಲೇಷಿಸುತ್ತಾನೆ. ಮೊದಲನೆಯದು ವಿತರ್ಕ ಅಥವಾ ಸಂದೇಹ. ಬದುಕಿನ ಗುರಿಯ ಬಗ್ಗೆ ಖಚಿತವಾದ ಮನವರಿಕೆಯಿಲ್ಲದೇ ಸಂದೇಹಿಸುವುದೇ ವಿತರ್ಕ. ಎರಡನೆಯದು ಮಡದಿ ಮಕ್ಕಳ ವಿಷಯದಲ್ಲಿ ತೀವ್ರವಾದ ರಾಗ. ಕೊನೆಯದು ಶುಭಾನುಪಶ್ಯ. ಶುಭಾನುಪಶ್ಯವೆಂದರೆ ದೇಹವು ಒಳ್ಳೆಯದು ಮತ್ತು ಶಾಶ್ವತವಾದುದು ಎಂಬ ಭಾವನೆ. ಇದಕ್ಕೆ ವಿರುದ್ಧವಾದುದು ಅಶುಭಾನುಪಶ್ಯ. ದೇಹದಲ್ಲಿ ಕುತ್ಸಿತ ಬುದ್ಧಿಯುಳ್ಳವನೇ ಅಶುಭಾನುಪಶ್ಯ. ಈ ಶರೀರವು ಒಂದು ಕೋಟೆಯಿದ್ದಂತೆ. ಅದು ಅಸ್ಥಿಗಳಿಂದ ರಚಿತವಾಗಿದೆ. ಈ ಅಸ್ಥಿಗಳಲ್ಲಿ ಮಾಂಸರಕ್ತಗಳು ತುಂಬಿರುತ್ತವೆ. ಇದರೊಳಗೆ ಇದ್ದಿರಬಹುದಾದ ಮುಪ್ಪು, ಸಾವು, ನಾನೆಂಬ ಅಭಿಮಾನ ಮತ್ತು ಹೊಟ್ಟೆಕಿಚ್ಚುಗಳ ಬಗ್ಗೆ ಬುದ್ಧನು ಪ್ರಸ್ತಾಪಿಸುತ್ತಾನೆ. ಬುದ್ಧನ ಪ್ರಕಾರ ರಾಗಕ್ಕೆ ಸಮನಾದ ಬೆಂಕಿಯಿಲ್ಲ, ದ್ವೇಷಕ್ಕೆ ಸಮನಾದ ದೋಷವಿಲ್ಲ ಮತ್ತು ಸ್ಕಂದಗಳಿಗೆ ಸಮನಾದ ದುಃಖವಿಲ್ಲ.

**ನ ತಜ್ ದಳ್ಹಜ್ ಬಂಧನಂ ಆಹು ಧೀರಾ**

**ಯದ್ ಆಯಸಜ್ ದಾರುಜಜ್ ಒಬ್ಬಜಞ್ ಚ**

**ಸಾರತ್ತರತ್ತ ಮಣಿಕುಂಡಲೇಸು**

**ಪುತ್ತೇಸು ದಾರೇಸು ಚ ಯಾ ಅಪೇಕ್ಖಾ**

**ಏತಜ್ ದಳ್ಹಜ್ ಬಂಧನಂ ಆಹು ಧೀರಾ**

**ಓಹಾರಿನಜ್ ಸಿಥಿಲಜ್ ದಿಪ್ಪಮುಂಚಜ್**

**ಏತಂ ಪಿ ಚೆತ್ವಾನ ಪರಿಬ್ಬಜಂತಿ**

**ಅನಪೆಕ್ಖಿನೋ ಕಾಮಸುಖಜ್ ಪಹಾಯ**

**ಯೇ ರಾಗರತ್ತಾನುಪತಂತಿ ಸೋತಜ್**

**ಸಯಜ್ ಕತಜ್ ಮಕ್ಕಟಕೋ ವ ಜಾಲಜ್**

**ಏತಂ ಪಿ ಚೆತ್ವಾನಿ ವಜಂತಿ ಧೀರಾ**

**ಅನಪೇಕ್ಖಿನೋ ಸಬ್ಬದುಕ್ಖಜ್ ಪಹಾಯ**[12]

**ನತ್ಥಿ ರಾಗಸಮೋ ಅಗ್ಗಿ ನತ್ಥಿ ದೋಸಸಮೋ ಕಲಿ**

**ನತ್ಥಿ ಖಂಧಾದಿಸಾ ದುಕ್ಖಾ ನತ್ಥಿ ಸಂತಿಪರಜ್ ಸುಖಜ್**[13]

ಯಾರು ಜೀವನದ ನಿಜವಾದ ಗುರಿಯನ್ನು ಅರಸುವುದಿಲ್ಲವೋ ಅವರು ಭೋಗದಾಸರಾಗಿ ನಾಶವಾಗುತ್ತಾರೆಂದು ಬುದ್ಧನು ಹೇಳುತ್ತಾನೆ. ಭೋಗಗಳ ತೃಷ್ಣೆಯಿಂದ ಬುದ್ಧಿಹೀನನಾಗಿ ತನ್ನನ್ನಷ್ಟೇ ಅಲ್ಲ, ಇತರರನ್ನೂ ಹಾಳು ಮಾಡುತ್ತಾನೆ. ಆದ್ದರಿಂದ ಮನುಷ್ಯನು ವಿತರ್ಕ ಅಥವಾ ಸಂದೇಹವನ್ನು ನಾಶ ಮಾಡಬೇಕು, ರಾಗರಹಿತನಾಗಬೇಕು ಮತ್ತು ಅಶುಭಾನುಪಶ್ಯನಾಗಬೇಕು. ಆತನು ಮಾತ್ರ ಸಂಸಾರದ ಮುಳ್ಳುಗಳನ್ನು ನಾಶ ಮಾಡುತ್ತಾನೆ. ಆತನಿಗೆ ಅದೇ ಕಡೆಯ ಜನ್ಮವೆಂದು ಬುದ್ಧನು ಸಾರುತ್ತಾನೆ. ಆತನನ್ನು **ಮಹಾಪ್ರಾಜ್ಞನೆಂ**ದು ಕರೆಯುತ್ತಾನೆ. ತೃಷ್ಣೆಯ ನಾಶವು ದುಃಖದ ನಾಶ.

ಭಿಕ್ಷುವಿಗೆ ಕಾಮನಿಗ್ರಹವನ್ನು ವಿಧಿಸಲಾಗಿದೆ. ಬುದ್ಧನು ಕಾಮದ ಅಪಾಯವನ್ನು ನಮಗೆ ಪದೇ ಪದೇ ನೆನಪಿಸುತ್ತಾನೆ. ಕಾಮವನ್ನು ತೃಪ್ತಿಗೊಳಿಸುವುದರಿಂದ ಅದು ಶಮನವಾಗಿರಲಾರದು. ಚಿನ್ನದ ಮಳೆ ಸುರಿಸಿದರೂ ಮನುಷ್ಯನ ಬಯಕೆಗೆ ಕೊನೆಯಿಲ್ಲ. ಕಾಮತೃಪ್ತಿಯಿಂದ ಮನುಷ್ಯನಿಗೆ ದೊರೆಯುವ ಸುಖವು ಕ್ಷಣಿಕ. ಅದು ದುಃಖಮಯವಾದುದೇ ಹೊರತು ಸುಖಮಯವಲ್ಲ. ಈ ವಸ್ತುಸ್ಥಿತಿಯನ್ನು ಅರಿತ ಬಲಾಢ್ಯನೇ ಪಂಡಿತನೆಂದು ಬುದ್ಧನು ಸಾರುತ್ತಾನೆ. ಪರಸ್ತ್ರೀ ಗಮನವನ್ನು ಮಾಡುವ ಹಾಗೂ ಮದ್ಯಪಾನ ಮಾಡುವವನು ಪಡೆಯುವ ಅಧೋಗತಿಯ ಬಗ್ಗೆ ಬುದ್ಧನು ಘಂಟಾಘೋಷವಾಗಿ ಪ್ರಸ್ತಾಪಿಸುತ್ತಾನೆ.

**ನ ಕಹಾಪಣ ವಸ್ಸೇನ ತಿತ್ತಿ ಕಾಮೇಸು ವಿಜ್ಜತಿ**

**ಅಪ್ಪಸ್ಸಾದಾ ದುಕ್ಖ ಕಾಮಾ ಇತಿ ವಿಞ್ಞಾಯ ಪಂಡಿತೋ**[14]

**ಯೋ ಪಾಣಂ ಅತಿಪಾತೇತಿ ಮುಸಾವಾದಙ್ ಚ ಭಾಸತಿ**

**ಲೋಕೇ ಅದಿನ್ನಙ್ ಆದಿಯತಿ ಪರದಾರಙ್ ಚ ಗಚ್ಛತಿ**

**ಸುರಮೇರಯ ಪನಙ್ ಚ ಯೋ ನರೋ ಅನುಯಂಜತಿ**

**ಇಧೇವಮೇಸೋ ಲೋಕಸ್ಮಿಙ್ ಮೂಲಙ್ ಖಣತಿ ಅತ್ತನೋ**[15]

ಮತ್ತೊಬ್ಬನ ಹೆಂಡತಿಯನ್ನು ಗಮಿಸುವಾತನಿಗೆ ಪಾಪ, ಸುಖನಿದ್ರೆಯಿಲ್ಲದಿರುವುದು, ನಿಂದೆ ಮತ್ತು ನರಕಗಳೆಂಬ ನಾಲ್ಕು ಗತಿಗಳುಂಟಾಗುತ್ತದೆ.

**ಚತ್ತಾರಿ ಠಾನಾನಿ ನರೋ ಪಮತ್ತೋ**

**ಆಪಜ್ಜತೀ ಪರದಾರೂಪಸೇವೀ**

**ಅಪುಞ್ಞಲಾಭಙ್ ನ ನಿಕಾಮಸೆಯ್ಯಙ್**

**ನಿಂದಙ್ ತತೀಯಙ್ ನಿರಯಙ್ ಚತುತ್ಥಙ್**[16]

ಪರಸ್ತ್ರೀ ಗಮನವನ್ನು ಕಟುವಾಗಿ ಟೀಕಿಸುವುದನ್ನು ನಾವು ಕಾಣುತ್ತೇವೆ. ಬುದ್ಧನು ಭಿಕ್ಷುವಿಗೆ ಹೀಗೆ ಬೋಧಿಸುತ್ತಾನೆ, "ಭಿಕ್ಷುವೇ ಧ್ಯಾನ ಮಾಡು, ಎಚ್ಚರ ತಪ್ಪಬೇಡ, ನಿನ್ನ ಚಿತ್ತವು ಕಾಮಗುಣದಲ್ಲಿ ಸುತ್ತಾಡದಿರಲಿ, ಪ್ರಮತ್ತನಾಗಿ ಕಾದ ಕಬ್ಬಿಣದ ಗುಂಡನ್ನು ನರಕದಲ್ಲಿ ತಿನ್ನದಿರು, ಅದು ನಿನ್ನನ್ನು ಸುಡುವಾಗ ದುಃಖದಿಂದ ನರಳಾಟಕ್ಕೆ ಅವಕಾಶವನ್ನು ಮಾಡಿಕೊಳ್ಳದಿರು". ಬ್ರಹ್ಮಚರ್ಯವನ್ನು ಮಾಡದಿರುವವನನ್ನು ಮೀನುಗಳಿಲ್ಲದ ಕುಂಟೆಯ ಬಳಿಯಲ್ಲಿರುವ ಮುದಿ ಬಕನಿಗೆ ಹಾಗೂ ಮುರಿದ ಬಿಲ್ಲುಗಳಿಗೆ ಹೋಲಿಸಲಾಗಿದೆ. ಕ್ಷೀಣರಾಗಿರುವ ಅಂತಹವರು ತಮ್ಮ ಹಿಂದಿನ ಕೃತ್ಯಗಳಿಗೆ ಪಶ್ಚಾತ್ತಾಪ ಪಡುತ್ತಾ ಬಿದ್ದಿರುವರು.

**ಅಚರಿತ್ವಾ ಬ್ರಹ್ಮಚರಿಯಜ್ ಅಲದ್ಧಾ ಯೊಬ್ಬನೇ ಧನಜ್**

**ಜಿಣ್ಣ – ಕೊಂಚಾ ವಾ ಝಾಯಂತಿ ಖೀಣಮಚ್ಛೇ ವ ಪಲ್ಲಲೇ**

**ಅಚರಿತ್ವಾ ಬ್ರಹ್ಮಚರಿಯಜ್ ಅಲದ್ಧಾ ಯೊಬ್ಬನೇ ಧನಜ್**

**ಸೇಂತಿ ಚಾಪಾತಿಕೀಣಾವಾ ಪುರಾಣಾನಿ ಅನುತ್ಥುನಜ್**[17]

ಎಲ್ಲಿಯವರೆಗೆ ಮನುಷ್ಯನಿಗೆ ಸ್ತ್ರೀಯರಲ್ಲಿ ಕಾಮನೆಯು ಅಣುಮಾತ್ರವಾದರೂ ಕತ್ತರಿಸದೇ ಉಳಿದಿರುವುದೋ ಅಲ್ಲಿಯವರೆಗೆ ಅವನು ಹಾಲು ಕುಡಿಯುವ ಕರುವು ತಾಯಿಗೆ ಕಟ್ಟುಬಿದ್ದಿರುವಂತೆ ಬಂಧನಕ್ಕೆ ಒಳಗಾಗಿರುತ್ತಾನೆ.

**ಯಾವಜ್ ಹಿ ವನಥೋ ನ ಛಿಜ್ಜತಿ ಅನುಮತ್ತೋ ಪಿ ನರಸ್ಸ ನಾರಿಸು**

**ಪಟಿಬದ್ಧಮ್ಮನೋ ವ ತಾವ ಸೋ ವಚ್ಛೋ ಖೀರಪಾಕೋ ವ ಮಾತರಿ**[18]

## ಅಪ್ರಮಾದ

ಧಮ್ಮಪದವು ಜನಸಾಮಾನ್ಯ ಮತ್ತು ಬಿಕ್ಕುಗಳ ದೈನಂದಿನ ನಡವಳಿಗಳನ್ನು ಕುರಿತ ಒಂದು ಚಿತ್ರಣವನ್ನು ನೀಡುತ್ತದೆ. ಮನುಷ್ಯನು ಹೇಗೆ ನಡೆದುಕೊಳ್ಳಬೇಕು, ಹೇಗೆ ನಡೆದರೆ ಧಮ್ಮವಾಗುತ್ತದೆ, ಯಾವುದು ಅಧಮ್ಮವಾಗುತ್ತದೆ ಎಂಬುದರ ವಿವರಣೆ ಧಮ್ಮಪದದ ಸಾರ.

ಧಮ್ಮಪದದಲ್ಲಿ ಅಪ್ರಮಾದವೆಂಬ ಮೌಲ್ಯದ ಬಗ್ಗೆ ಅನೇಕ ಕಡೆ ಪ್ರಸ್ತಾಪವಿದೆ. ವಾಸ್ತವವಾಗಿ ಎರಡನೇ ಅಧ್ಯಾಯದ ಹೆಸರೇ ಅಪ್ರಮಾದ ವಗ್ಗವೆಂದು. ಅಪ್ರಮಾದವೆಂದರೆ ಎಚ್ಚರಿಕೆ ಎಂದರ್ಥ. ಈ ಎಚ್ಚರಿಕೆಯು ಅಮೃತತ್ವಕ್ಕೆ ಎಂದರೆ ನಿರ್ವಾಣಕ್ಕೆ ಹಾದಿಯಾಗಿದೆ. ಎಚ್ಚರಿಕೆಯುಳ್ಳವರು ಪುನರ್‌ಜನ್ಮವನ್ನು ಅನುಭವಿಸುವುದಿಲ್ಲ. ಎಚ್ಚರಿಕೆಯಿಲ್ಲದಿರುವುದು ಮೃತ್ಯುವಿಗೆ ಹಾದಿ. ಎಚ್ಚರಿಕೆಯಿಲ್ಲದವರು ಬದುಕಿದ್ದರೂ ಸತ್ತಂತೆ. ಅಪ್ರಮಾದಿಗಳು ಸತತವಾಗಿ ಧ್ಯಾನನಿರತರಾಗಿ ದೃಢ ಪರಾಕ್ರಮಗಳನ್ನು ಹೊಂದಿದ ಧೀರರಾಗಿ ನಿರ್ವಾಣವನ್ನು ಮುಟ್ಟುವರು. ಅಪ್ರಮಾದವೆಂದರೆ ವಿವೇಚನೆ, ಎಚ್ಚರಿಕೆ ಮತ್ತು ಗಾಢವಾದ ಚಿಂತನೆ ಎಂದರ್ಥ. ಇದೇ ಇತರ ಎಲ್ಲ ಮೌಲ್ಯಗಳಿಗೂ ಮೂಲ. ಇದಕ್ಕೆ ವಿರುದ್ಧವಾದುದು ಪ್ರಮಾದ. ಪ್ರಮಾದವೆಂದರೆ ಆಲಸ್ಯ ಮತ್ತು ಎಚ್ಚರಿಕೆಯಿಲ್ಲದಿರುವುದು ಎಂದರ್ಥ. ಆಲಸ್ಯದಿಂದ ಕೂಡಿ ಮನಬಂದಂತೆ ನಡೆಯುವುದು ಪ್ರಮಾದ. ಪ್ರಯತ್ನಶೀಲನೂ, ಸ್ಮೃತಿವಂತನೂ ಮತ್ತು ಸತ್ಕರ್ಮ ನಿರತನೂ, ಮನೋನಿಗ್ರಹಿಯೂ ಮತ್ತು ಧರ್ಮದಿಂದಲೇ ಬಾಳುವವನು ಅಪ್ರಮಾದಿ. **ಕೆಟ್ಟಮಾರ್ಗಕ್ಕೆ ಬೀಳದಂತೆ ಧಮ್ಮಮಾರ್ಗದಲ್ಲೇ ಸತತವಾಗಿ ನಡೆಯಲು ಎಚ್ಚರವಹಿಸುವುದೇ ಅಪ್ರಮಾದ.** ಎಚ್ಚರಿಕೆಯಿಂದ ಇರುವವರನ್ನು ಬುದ್ಧನು **ಆರ್ಯ**ರೆನ್ನುತ್ತಾರೆ. ಅಪ್ರಮಾದವು ಆರ್ಯರ ಲಕ್ಷಣ. ಪಂಡಿತರು ಈ ಎಚ್ಚರಿಕೆಯಲ್ಲಿ ನಿರತರಾಗಿ ಅದರಲ್ಲೇ ಪ್ರಮೋದ ಎಂದರೆ ಆನಂದವನ್ನು ಕಂಡುಕೊಳ್ಳುವರು.

ಈತನ ಕೀರ್ತಿಯು ಎಲ್ಲೆಲ್ಲೂ ಹಬ್ಬುತ್ತದೆ ಎಂದು ಸಾರಲಾಗಿದೆ. ಮನುಷ್ಯನು ಅಪ್ರಮಾದವೆಂಬ ಗುಣವನ್ನು ಸಂಪಾದಿಸಿಕೊಂಡು ಪ್ರವಾಹವು ಕೊಚ್ಚಿಕೊಂಡು ಹೋಗಲಾರದಂತಹ ದ್ವೀಪವನ್ನು ಮಾಡಿಕೊಳ್ಳಬೇಕೆಂದು ಬುದ್ಧನು ಬೋಧಿಸುತ್ತಾನೆ. ಇಲ್ಲಿ ಪ್ರವಾಹವೆಂದರೆ ಕ್ಲೇಶಗಳ ಹೊಳೆಯೆಂದರ್ಥ. ದ್ವೀಪವೆಂದರೆ ಅರಿಹಂತ ಪದವಿ ಎಂದರ್ಥ. ಮೂರ್ಖರು ಮತ್ತು ಅವಿವೇಕಿಗಳು ಪ್ರಮಾದಿಗಳಾಗಿರುತ್ತಾರೆ. ಜಾಣನಾದವನು

ಅಪ್ರಮಾದಿಯಾಗಿರುತ್ತಾನೆ. ಅವನು ಅಪ್ರಮಾದವನ್ನು ನಿಧಿಯಂತೆ ಕಾಪಾಡಿಕೊಳ್ಳುತ್ತಾನೆ. ಮನುಷ್ಯನು ಕರ್ಮದೆಡೆಗೆ ಸೇರಿಕೊಳ್ಳದೇ ಪ್ರತಿಕ್ಷಣ ಎಚ್ಚರಿಕೆಯಿಂದ ಧ್ಯಾನ ಮಾಡುವುದೇ ಅಪ್ರಮಾದ. ಇದರಿಂದ ಅವನಿಗೆ ವಿಪುಲವಾದ ಸುಖವು ಬರುತ್ತದೆ. ಪ್ರಮಾದವನ್ನು ನಾಶಪಡಿಸಿಕೊಂಡಿರುವ ಧೀರನು ಪ್ರಜ್ಞೆಯ ಉಪ್ಪರಿಗೆಯನ್ನೇರಿ ಯಾವ ಶೋಕವೂ ಇಲ್ಲದೇ ಶೋಕಕ್ಕೊಳಗಾಗಿರುವ ಅಜ್ಞಾನಿಯನ್ನು ನೋಡುತ್ತಾನೆ. ಅವನು ಎಚ್ಚರಿಕೆಯಿಲ್ಲದವರಲ್ಲಿ ಮತ್ತು ನಿದ್ರಿಸುವವರಲ್ಲಿ ಪೂರ್ಣ ಎಚ್ಚೆತ್ತವನಾಗಿ ದುರ್ಬಲವಾದ ಕುದುರೆಯನ್ನು ವೇಗವಾಗಿ ಓಡುವ ಕುದುರೆಯು ಹಿಂದಕ್ಕೆ ಹಾಕುವಂತೆ ಅವರನ್ನು ಬಿಟ್ಟು ಮುಂದೆ ಹೋಗುತ್ತಾನೆ. ಬುದ್ಧನು ಅಪ್ರಮಾದ ಗುಣವನ್ನು ವೈಭವೀಕರಿಸುತ್ತಾನೆ. ಈ ಅಪ್ರಮಾದದಿಂದಲೇ ಮಾಘವಂತನು ದೇವತೆಗಳಿಗೆ ಒಡೆಯನಾದನು. ಮಾಘವಂತನೆಂದರೆ ಇಂದ್ರನೆಂದರ್ಥ. ಅಪ್ರಮಾದದಿಂದ ಭಿಕ್ಷುವು ಎಲ್ಲ ಸಂಯೋಜನೆಗಳನ್ನೂ ಎಂದರೆ ನಿರ್ವಾಣದ 10 ಅಡಚಣೆಗಳನ್ನು ಬೆಂಕಿಯಂತೆ ಸುಟ್ಟು ಹಾಕಿಬಿಡುವನು.

**ಅಪ್ಪಮಾದೋ ಅಮತಪದಙ್ ; ಪಮಾದೋ ಮಚ್ಚುನೋಪದಙ್**

**ಅಪ್ಪಮಾತ್ತಾ ನ ಮೀಯಂತಿ ; ಯೇ ಪಮತ್ತಾ ಯಥಾ ಮತಾ**

**ಏತಙ್ ವಿಸೇಸತೋ ಇತ್ವಾ ಅಪ್ಪಮಾದಮ್ಹಿ ಪಂಡಿತಾ**

**ಅಪ್ಪಮಾದೇ ಪಮೋದಂತಿ ಅರಿಯಾನಙ್ ಗೋಚರೇ ರತಾ**[19]

ಎಚ್ಚರಿಕೆಯ ಲಕ್ಷಣಗಳನ್ನು ಬುದ್ಧನು ಇನ್ನೂ ಸ್ಪಷ್ಟಪಡಿಸುತ್ತಾನೆ. ಎಚ್ಚರಿಕೆಯಿಂದ ಇರುವವರು ಯಾವಾಗಲೂ ಧ್ಯಾನಮಗ್ನರಾಗಿರುತ್ತಾರೆ, ತಮ್ಮ ಯತ್ನದಲ್ಲಿ ದೃಢರಾಗಿರುತ್ತಾರೆ. ಅಂತಹ ಧೀರರು ನಿರ್ವಾಣವನ್ನು ತಲುಪುತ್ತಾರೆ. ನಿರ್ವಾಣಕ್ಕೆ **ಯೋಗಕ್ಷೇಮ** ಮತ್ತು **ಅನುತ್ತರ** ಎಂಬ ಎರಡು ವಿಶೇಷಣಗಳನ್ನು ಬುದ್ಧನು ನೀಡುವುದು ಗಮನಾರ್ಹ. **ಅನುತ್ತರ** ಎಂದರೆ ಮಿಗಿಲಿಲ್ಲದ ಸದ್ಗತಿಯೆಂದರ್ಥ. **ಯೋಗಕ್ಷೇಮ**ವೆಂದರೆ ಮಂಗಳಕರವೆಂದರ್ಥ. ಈ

**ಯೋಗಕ್ಷೇಮ** ಶಬ್ದ ಪ್ರಯೋಗವು ಭಗವದ್ಗೀತೆಯಲ್ಲೂ ಬರುತ್ತದೆ. ಗೀತೆಯ ಹಿನ್ನೆಲೆಯಲ್ಲಿ ಯೋಗವೆಂದರೆ ನಮ್ಮ ಬಳಿಯಿಲ್ಲದ ಮೋಕ್ಷವನ್ನು ದೊರಕಿಸಿಕೊಡುವುದೆಂದರ್ಥ. ಕ್ಷೇಮವೆಂದರೆ ಬಂದ ಮೇಲೆ ಅದು ನಮ್ಮ ಬಳಿ ಸ್ಥಿರವಾಗಿರಿಸುವುದೆಂದರ್ಥ. ಗೀತೆಯ ಪ್ರಕಾರ ಮೋಕ್ಷವು ದೈವಕೃಪೆಯ ಸಹಾಯದಿಂದ ದೊರೆಯುವುದು. ಮೋಕ್ಷ ಸಾಧನೆಗೆ ಪುರುಷ ಪ್ರಯತ್ನವು ಅಗತ್ಯವಾದರೂ ದೈವ ಕೃಪೆಯಿಲ್ಲದೇ ಅದು ನಮಗೆ ಲಭಿಸಲಾರದು.[20] ಆದರೆ ಬುದ್ಧನ ಪ್ರಕಾರ ಮೋಕ್ಷ ಸಾಧನೆಯು ಯಾವ ಬಾಹ್ಯ ಅಂಶದಿಂದಲೂ ನಿರ್ಧಾರಿತವಾಗಿಲ್ಲ. ಮೋಕ್ಷವು ದೇವರಾಗಲೀ, ಗುರುವಾಗಲೀ ಯಾವುದೇ ಹೊರಗಿನ ಅಂಶಗಳಿಂದ ನಿರ್ಧಾರಿತವಾಗಿಲ್ಲ. ಬುದ್ಧನ ಪ್ರಕಾರ ನಮ್ಮ ಮೋಕ್ಷವನ್ನು ನಾವೇ ಕಂಡುಕೊಳ್ಳಬೇಕು. ಈಗ ನಮ್ಮ ಬಳಿಯಿಲ್ಲದ ನಿರ್ವಾಣವನ್ನು ನಮ್ಮ ಪ್ರಯತ್ನದಿಂದ ನಾವೇ ಸಾಧಿಸಿಕೊಳ್ಳುವುದು **ಯೋಗ.** ಅದು ನಮ್ಮಲ್ಲಿ ಸ್ಥಿರವಾಗಿಸಿಕೊಳ್ಳಲು ನಾವು ನಡೆಸುವ ಪ್ರಯತ್ನವೇ **ಕ್ಷೇಮ.** ಹೀಗೆ ಯೋಗಕ್ಷೇಮಕ್ಕೆ ಬುದ್ಧನ ಪ್ರಕಾರ ದೈವವೆಂಬ ಹೊರಗಿನ ಶಕ್ತಿಯು ಅಗತ್ಯವಿಲ್ಲ. ಗುರುವೂ ಕೂಡ ಮಾರ್ಗವನ್ನು ತೋರಿಸಬಲ್ಲನೇ ಹೊರತು ಆ ಮಾರ್ಗದಲ್ಲಿ ಪ್ರಯತ್ನಪೂರ್ವಕವಾಗಿ ನಡೆಯಬೇಕಾದುದು ನಾವೇ.

**ತೇ ಝಾಯಿನೋ ಸಾತತಿಕಾ ನಿಚ್ಚಙ್ ದಲ್ಹಪರಕ್ಕಮಾ**

**ಫುಸಂತಿ ಧೀರಾ ನಿಬ್ಬಾನಙ್ ಯೋಗಕ್ಖೇಮಙ್ ಅನುತ್ತರಙ್**[21]

ಅಪ್ರಮಾದಿಯು ಸ್ಮೃತಿವಂತನಾಗಿರುತ್ತಾನೆ. ವಸ್ತುಸ್ಥಿತಿಯ ಸರಿಯಾದ ಅರಿವನ್ನು ಸ್ಮೃತಿಯೆನ್ನುತ್ತಾರೆ. ಆರ್ಯ ಅಷ್ಟಾಂಗಿಕ ಮಾರ್ಗದಲ್ಲಿ ಸಮ್ಯಕ್‌ಸ್ಮೃತಿ ಎಂಬುದು ಒಂದು ಹಂತ. ವಸ್ತುಸ್ಥಿತಿಯ ಸರಿಯಾದ ತಿಳುವಳಿಕೆಯೇ ಸ್ಮೃತಿ. 21ನೇ ಅಧ್ಯಾಯದಲ್ಲಿ **ಕಾಯಗತ ಸ್ಮೃತಿ, ಬುದ್ಧಗತ ಸ್ಮೃತಿ, ಧರ್ಮಗತಸ್ಮೃತಿ** ಮತ್ತು **ಸಂಘಗತ ಸ್ಮೃತಿ** ಎಂಬ ನಾಲ್ಕು ರೀತಿಯ ಸ್ಮೃತಿಗಳ ಪ್ರಸ್ತಾಪವು ಬರುತ್ತದೆ. ಶರೀರವು ಕ್ಷಣಿಕವೂ, ಮಲಿನವೂ ಮತ್ತು ದುಃಖಮಯವೂ

ಆಗಿದೆ ಎಂದು ತಿಳಿಯುವುದು **ಕಾಯಗತ ಸ್ಮೃತಿ.** ಮಧ್ಯಮ ನಿಕಾಯದಲ್ಲಿ ಕಾಯಗತ ಸ್ಮೃತಿಯನ್ನು ಕುರಿತ ಒಂದು ಸೂತ್ರವೇ ಇದೆ.[22] ಇನ್ನು ಬುದ್ಧನ ಕಲ್ಯಾಣ ಗುಣಗಳನ್ನು ಚಿಂತಿಸುವುದು **ಬುದ್ಧಗತ ಸ್ಮೃತಿ.** ಬೌದ್ಧಧರ್ಮದ ಸತ್ವವನ್ನು ಅರಿತುಕೊಳ್ಳುವುದು **ಧರ್ಮಗತಸ್ಮೃತಿ.** ಸಂಘದ ಉತ್ತಮ ಗುಣಗಳನ್ನು ಸ್ಮರಿಸಿಕೊಳ್ಳುವುದು **ಸಂಘಗತ ಸ್ಮೃತಿ.** ಅಪ್ರಮಾದಿಯು ಈ ನಾಲ್ಕು ರೀತಿಯ ಸ್ಮೃತಿಗಳನ್ನೂ ಹೊಂದಿರುವನು. ಆತನು ಯಾವುದೇ ಕೆಲಸಗಳನ್ನು ಮಾಡಿದರೂ ಆಲೋಚನೆ ಮಾಡಿಯೇ ಮಾಡುತ್ತಾನೆ. ಮನಸ್ಸನ್ನು ನಿಯಂತ್ರಣದಲ್ಲಿರಿಸಿಕೊಂಡು ಮತ್ತು ಧಮ್ಮದಿಂದ ಬಾಳುತ್ತಾನೆ.

ಬುದ್ಧನು ಈ ಎಲ್ಲ ಗುಣಗಳನ್ನೂ ಮನುಷ್ಯನು ಮೈಗೂಡಿಸಿಕೊಳ್ಳಬೇಕೆಂದು ಬೋಧಿಸುತ್ತಾ ಪ್ರವಾಹವು ಕೊಚ್ಚಿಕೊಂಡು ಹೋಗಲಾರದಂತಹ ದ್ವೀಪವನ್ನು ನಿರ್ಮಿಸಿಕೊಳ್ಳಬೇಕೆಂದು ಮಾರ್ಮಿಕವಾಗಿ ನುಡಿಯುತ್ತಾನೆ. ಇಲ್ಲಿ ಪ್ರವಾಹವೆಂದರೆ ಕ್ಲೇಶಗಳ ಹೊಳೆಯೆಂದರ್ಥ. ಡಾ.ಎಸ್.ರಾಧಾಕೃಷ್ಣನ್ **ಪ್ರವಾಹ** ಶಬ್ದಕ್ಕೆ (ಓಘ) ಅವಿದ್ಯೆ ಮತ್ತು ತೃಷ್ಣೆ ಎಂದು ಅರ್ಥೈಸುತ್ತಾರೆ.[23] ದ್ವೀಪವು ಸಮುದ್ರದ ಮಧ್ಯದಲ್ಲಿದ್ದರೂ ಸಮುದ್ರದ ಓಘಕ್ಕೆ ಕೊಚ್ಚಿಕೊಂಡು ಹೋಗದಿರುವಂತೆ ಮನುಷ್ಯನು ಸಂಸಾರವೆಂಬ ಸಮುದ್ರದ ಮಧ್ಯದಲ್ಲಿದ್ದರೂ ಅವಿದ್ಯೆ ಮತ್ತು ತೃಷ್ಣೆಗಳ ಓಘಕ್ಕೆ ಬಲಿಯಾಗದಿರುವಂತೆ ತನ್ನನ್ನು ತಾನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕೆಂದರ್ಥ. ದ್ವೀಪವೆಂದರೆ ಅರಿಹಂತ ಪದವಿಯೆಂದರ್ಥ.

**ಉತ್ಥಾನೇನಪ್ಪಮಾದೇನ ಸಞ್ಞಮೇನ ದಮೇನ ಚ**

**ದೀಪಙ್ ಕಯಿರಾಥ ಮೇಧಾವಿ ಯಙ್ ಓಘೋ ನಾಭಿಕೀರತಿ**[24]

ಅಪ್ರಮಾದವೆಂಬುದನ್ನು ಜಾಣನಾದವನು ನಿಧಿಯಂತೆ ಕಾಪಾಡಿಕೊಳ್ಳುತ್ತಾನೆ. ಎಂದರೆ ಆತನು ಸದಾ ಎಚ್ಚರಿಕೆಯಿಂದ ಇರುತ್ತಾನೆ. ಮನಸ್ಸನ್ನು ಸಡಿಲಗೊಳಿಸುವುದಿಲ್ಲ ಮತ್ತು ಕಾಮರತಿಗೆ ಅಂಟಿಕೊಳ್ಳುವುದಿಲ್ಲ. ಅಂತಹವನಿಗೆ ದುಃಖವಿಲ್ಲ. ಪರ್ವತದ

ಮೇಲಿರುವವನು ನೆಲದ ಮೇಲಿರುವವನನ್ನು ನೋಡುವಂತೆ ಅವನು ಪ್ರಜ್ಞೆಯ ಉಪ್ಪರಿಗೆಯನ್ನೇರಿ ಅಜ್ಞಾನಿಗಳನ್ನು ಸಹಾನುಭೂತಿಯಿಂದ ನೋಡುತ್ತಿರುತ್ತಾನೆ. ಆತನು ಎಚ್ಚರಿಕೆಯಿಲ್ಲದವರಲ್ಲಿ ತಾನು ಎಚ್ಚರಿಕೆಯನ್ನು ಕಳೆದುಕೊಳ್ಳದೇ ಮತ್ತು ನಿದ್ರಿಸುವವರಲ್ಲಿ ಪೂರ್ಣವಾಗಿ ಎಚ್ಚೆತ್ತವನಾಗಿ ಶಕ್ತಿಯಿಲ್ಲದ ಕುದುರೆಯನ್ನು ವೇಗವಾಗಿ ಓಡುವ ಕುದುರೆಯು ಹಿಂದಕ್ಕೆ ಹಾಕುವಂತೆ ಅವರನ್ನು ಬಿಟ್ಟು ಮುಂದಕ್ಕೆ ಹೋಗುತ್ತಾನೆ.

**ಪಮಾದಂ ಅನುಯುಂಜಂತಿ ಬಾಲಾ ದುಮ್ಮೇಧಿನೋ ಜನಾ ;**

**ಅಪ್ಪಮಾದಞ್ ಚ ಮೇಧಾವಿ ಧನಜ್ ಸೆಟ್ಠಜ್ ವಾ ರಕ್ಖತಿ**

**ಮಾ ಪಮಾದಂ ಅನುಯುಂಜೇಥ ಮಾ ಕಾಮರತಿ – ಸಂತವಜ್**

**ಅಪ್ಪಮತ್ತೋ ಹಿ ಝಾಯಂತೋ ಪಪ್ಪೋತಿ ವಿಪುಲಜ್ ಸುಖಜ್**

**ಪಮಾದಜ್ ಅಪ್ಪಮಾದೇನ ಯದಾ ನುದತಿ ಪಂಡಿತೋ**

**ಪಞ್ಞಾಪಾಸದಂ ಆರುಯ್ಹ ಅಸೋಕೋ ಸೋಕಿನಿಜ್ ಪಜಞ್**

**ಪಬ್ಬತಟ್ಠೋ ವಾ ಭುಮ್ಮಟ್ಠೇ ಧೀರೋ ಬಾಲೇ ಅವೆಕ್ಖತಿ**

**ಅಪ್ಪಮತ್ತೋ ಪಮತ್ತೇಸು ಸುತ್ತೇಸು ಬಹುಜಾಗರೋ**

**ಅಬಲಸ್ಸಜ್ ವಾ ಸೀಘಸ್ಸೋ ಹಿತ್ವಾ ಯಾತಿ ಸುಮೇಧಸೋ**[25]

ಬುದ್ಧನು ಮಾಘವಂತನ ಬಗ್ಗೆ ಪ್ರಸ್ತಾಪಿಸುತ್ತಾನೆ. ಇಲ್ಲಿ ಮಾಘವಂತನೆಂದರೆ ಇಂದ್ರನೆಂದರ್ಥ. ಬೌದ್ಧಧರ್ಮದಲ್ಲೂ ಪೌರಾಣಿಕ ಅಂಶಗಳಿವೆ ಎಂಬುದಕ್ಕೆ ಇದೊಂದು ನಿದರ್ಶನ. ಬುದ್ಧನ ಪ್ರಕಾರ ಈ ಅಪ್ರಮಾದವೆಂಬ ಗುಣದಿಂದಲೇ ಮಾಘವಂತನು ದೇವತೆಗಳಲ್ಲಿ ಶ್ರೇಷ್ಠನಾದ.

**ಅಪ್ಪಮಾದೇನ ಮಾಘವ ದೇವಾನಜ್ ಸೆಟ್ಠತಜ್ ಗತೋ**

**ಅಪ್ಪಮಾದಜ್ ಪಸಜ್ ಸತಿ ಪಮಾದೋ ಗರಹಿತೋ ಸದಾ**[26]

ಬುದ್ಧನು ದೇವತೆಗಳನ್ನು ಒಪ್ಪಿಕೊಳ್ಳುತ್ತಾನೆ. ಆತನ ಪ್ರಕಾರ ಯಾರು ಆತ್ಯಂತಿಕ ಜ್ಞಾನವನ್ನು ಹೊಂದಿರುವುದಿಲ್ಲವೋ, ಆದರೆ ತಮ್ಮ ಧಾರ್ಮಿಕ ಬದುಕಿನಿಂದ ಪುಣ್ಯವನ್ನು ಸಂಪಾದಿಸುತ್ತಾರೋ ಅವರು ದೇವಲೋಕವನ್ನು ಪಡೆಯುವರು. ಆದರೆ ದೇವಲೋಕವು ಶಾಶ್ವತವಲ್ಲ. ಪುಣ್ಯವಿರುವವರೆಗೆ ಮನುಷ್ಯರಿಗೆ ದೇವಲೋಕ ವಾಸ. ಪುಣ್ಯವು ಕ್ಷೀಣಿಸುತ್ತಲೇ ಅವರು ಮರಳಿ ಭೂಮಿಗೆ ಬರುತ್ತಾರೆ. ಈ ಕಲ್ಪನೆಯು ಧಮ್ಮಪದದಲ್ಲಿ ಕಾಣದಿದ್ದರೂ ವೇದೋಪನಿಷತ್ತುಗಳಲ್ಲಿ ಕಾಣಬರುತ್ತದೆ. ಒಂದು ಉಪನಿಷತ್ **"ಕ್ಷೀಣೆ ಪುಣ್ಯೇ ಮರ್ತ್ಯಲೋಕೇ ವಿಶಂತಿ"** ಎಂದು ಸಾರುತ್ತದೆ. ಭಗವದ್ಗೀತೆಯಲ್ಲೂ ಈ ಕಲ್ಪನೆ ಇದೆ.[27] ಧಮ್ಮಪದದಲ್ಲಿ ದೇವಲೋಕವಾಸವು ಅಶಾಶ್ವತವೆಂಬ ಕಲ್ಪನೆಯು ಎದ್ದು ಕಾಣದಿದ್ದರೂ ಅದು ಸೂಚ್ಯವಾಗಿ ಇದ್ದೇ ಇದೆ. ಏಕೆಂದರೆ ಅದರ ಪ್ರಕಾರ ಮನುಷ್ಯನ ಗುರಿಯು ಸ್ವರ್ಗ ಸುಖ ಪ್ರಾಪ್ತಿಯಾಗಿರದೇ ನಿರ್ವಾಣ ಸುಖ ಪ್ರಾಪ್ತಿಯಾಗಿದೆ. ನಿರ್ವಾಣದ ಸುಖದ ಮುಂದೆ ಸ್ವರ್ಗ ಸುಖವು ಕೇವಲ ನಶ್ವರ.[28]

ಅಪ್ರಮಾದಿಯು ಎಲ್ಲ ಸಂಯೋಜನಗಳನ್ನೂ ಬೆಂಕಿಯಂತೆ ಸುಟ್ಟುಹಾಕುತ್ತಾನೆ. ಇಲ್ಲಿ ಸಂಯೋಜನವೆಂದರೆ ಬಂಧನಗಳೆಂದರ್ಥ. ಈ ಬಂಧನಗಳ ಸಂಖ್ಯೆ ಹತ್ತು ಎಂದು ಹೇಳಲಾಗಿದೆ. ಯಾವುವೆಂದರೆ

1. ಆತ್ಮನಿರುವನೆಂಬ ನಂಬಿಕೆ
2. ಸಂಶಯ
3. ಬಾಹ್ಯಾಚಾರಗಳಲ್ಲಿ ಕೃತಕೃತ್ಯತೆಯ ಭಾವ
4. ಭೋಗದ ಆಸೆ
5. ಮರ್ತ್ಯಲೋಕದಲ್ಲಿ ಭೋಗದ ಆಸೆ

6. ದೇವಲೋಕದಲ್ಲಿನ ಭೋಗದ ಆಸೆ

7. ಹಿಂಸೆ

8. ಅಭಿಮಾನ

9. ಉದ್ಧಟನಾಗಿರುವುದು

10. ಅವಿದ್ಯೆ

ಅಪ್ರಮಾದಿಯು ಈ ಮೇಲಿನ ಪ್ರತಿಬಂಧಕಗಳನ್ನು ಬೆಂಕಿಯಂತೆ ಸುಟ್ಟುಹಾಕುತ್ತಾನೆ. ಅವನು ಸದಾ ನಿರ್ವಾಣಕ್ಕೆ ಹತ್ತಿರವಾಗಿರುತ್ತಾನೆ. ಈ ಪ್ರಪಂಚದಲ್ಲಿ ಮೋದದಿಂದ ಇರುವವನು ಸತ್ತ ಮೇಲೂ ಎಂದರೆ ಇಹಪರಗಳೆರಡರಲ್ಲೂ ಮೋದದಿಂದಿರುತ್ತಾನೆ.

**ಇಧ ಮೋದತಿ, ಪೆಚ್ಚಮೋದತಿ, ಕಟಪುಇಞ್ಞೋ ಉಭಯತ್ಥ ಮೋದತಿ**

**ಸೋ ಮೇದತಿ ಸೋ ಪಮೋದತಿ ದಿಸ್ವಾ ಕಮ್ಮವಿಸುದ್ಧಿಂ ಅತ್ತನೋ**[29]

ಪಾಪಿಯು ಇಹಪರಗಳೆರಡರಲ್ಲೂ ದುಃಖವನ್ನು ಅನುಭವಿಸುತ್ತಾನೆ. ತಾನು ಪಾಪವನ್ನು ಮಾಡಿದೆನೆಂದು ದುರ್ಗತಿಯನ್ನು ಹೊಂದಿದ ಮೇಲೆ ಮತ್ತೂ ಕುದಿಯುತ್ತಾನೆ.

ಮನುಷ್ಯನು ತನಗೆ ತಾನು ಅತ್ಯಂತ ಪ್ರಿಯನೆಂದು ಭಾವಿಸಿಕೊಂಡಿದ್ದರೆ ತನ್ನನ್ನು ತಾನು ಚೆನ್ನಾಗಿ ಕಾಪಾಡಿಕೊಳ್ಳಬೇಕು. 3 ಯಾಮಗಳಲ್ಲಿ ಅವನು ಒಂದರಲ್ಲಾದರೂ ಎಚ್ಚರದಿಂದಿರಬೇಕು.

**ಅತ್ತಾನಜ್ ಚೆ ಪಿಯಂ ಜಞ್ಞಾರಕ್ಖೆಯ್ಯ ನಜ್ ಸುರಕ್ಖಿತಜ್**

**ತಿಣ್ಣಂ ಅಞ್ಞತರಜ್ ಯಾಮಜ್ ಪತಿಜಗ್ಗೆಯ್ಯ ಪಂಡಿತೋ**[30]

ನಿದ್ರೆಗೆ ಒಳಗಾಗಿ ಕೆಟ್ಟ ಆಲೋಚನೆಗಳು ತೊಡಗದಿರುವುದೇ ಅಪ್ರಮಾದ. ಈ ಕೆಟ್ಟ ಆಲೋಚನೆಗಳು ಬರದಂತೆ ಸದಾ ಎಚ್ಚರ ವಹಿಸುವುದೇ ಅಪ್ರಮಾದದ ಲಕ್ಷಣ. ಯಾರು

ಸದಾ ಎಚ್ಚರದಿಂದಿರುವರೋ, ಹಗಲಿರುಳು ಸಾಧನೆ ಮಾಡುತ್ತಿರುವರೋ ಅವರ ಆಸ್ರವಗಳು ನಾಶವಾಗಿ ಅವರು ಮುಕ್ತರಾಗುತ್ತಾರೆ.

**ಸದಾ ಜಾಗರಮಾನಾನಜ್ ಅಹೋರತ್ತಾನುಸಿಕ್ಖತಜ್**

**ನಿಬ್ಬಾಣಜ್ ಅಧಿಮುತ್ತಾನಜ್ ಅತ್ಥಜ್ ಗಚ್ಛಂತಿ ಆಸವ**[31]

ದೇಶದ ತುದಿಯಲ್ಲಿರುವ ಕೋಟೆಯನ್ನು ಹೇಗೆ ಕಾವಲಿಟ್ಟು ನೋಡಿಕೊಂಡಿರುವರೋ ಹಾಗೇ ತನ್ನನ್ನು ತಾನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕೆಂದು ಬುದ್ಧನು ಬೋಧಿಸುತ್ತಾನೆ. ಕ್ಷಣವನ್ನು ಕಳೆಯಬಾರದು, ಕ್ಷಣವನ್ನು ಕಳೆದುಕೊಂಡವರು ಕ್ಷಣವನ್ನು ವ್ಯರ್ಥಗೊಳಿಸುವವರು ನಿರಯಕ್ಕೆ (ನರಕ) ಹೋಗುತ್ತಾರೆ. ಬುದ್ಧನು ಪದೇ ಪದೇ ಹೀಗೆ ಬೋಧಿಸುತ್ತಾನೆ, "ಎಚ್ಚರಿಕೆಯಲ್ಲಿ ವ್ರತರಾಗಿ ನಿಮ್ಮ ಚಿತ್ತವನ್ನು ಕಾಪಾಡಿಕೊಳ್ಳಿ, ಕೆಸರಿನಲ್ಲಿ ಸಿಲುಕಿಕೊಂಡಿರುವ ಆನೆಯು ಬಿಡಿಸಿಕೊಳ್ಳಲಾಗದೇ ಕಷ್ಟಪಡುತ್ತಿರುವಂತೆ ನೀವು ಕಷ್ಟಪಡಬೇಡಿ. ಸಂಸಾರವೆಂಬ ಕಷ್ಟದಿಂದ ನಿಮ್ಮನ್ನು ನೀವು ಉದ್ಧರಿಸಿಕೊಳ್ಳಿ".

**ಅಪ್ಪಮಾದರತಾ ಹೋಥ ಸಚಿತ್ತಂ ಅನುರಕ್ಖಥ**

**ದುಗ್ಗಾ ಉದ್ಧರಥತ್ತಾನಜ್ ಪಂಕೇ ಸತ್ತೋ ವ ಕುಂಜರೋ**[32]

ಹಾಗೆಯೇ ಮುಂದುವರೆಸುತ್ತಾ ಬುದ್ಧನು ಹೀಗೆ ಉಪದೇಶಿಸುತ್ತಾನೆ, "ಭಿಕ್ಷುವೇ ಧ್ಯಾನ ಮಾಡು, ಎಚ್ಚರ ತಪ್ಪಬೇಡ. ನಿನ್ನ ಚಿತ್ತವು ಕಾಮದಲ್ಲಿ ಸುತ್ತಾಡದಿರಲಿ, ಪ್ರಮಾದನಾಗಿ ಕಾದ ಕಬ್ಬಿಣದ ಗುಂಡನ್ನು ನುಂಗದಿರು, ಅದು ನಿನ್ನನ್ನು ಸುಡುವಾಗ ಅಯ್ಯೋ ಎಂದು ನರಳದಿರು. ಬುದ್ಧನು ಸುಭಾಷಿತ ರೂಪದಲ್ಲಿ ಅಪ್ರಮಾದದ ಬಗ್ಗೆ ಹೀಗೆ ಹೇಳುತ್ತಾನೆ, "ಕೆಟ್ಟ ನಡತೆಯಿಂದ ಕೂಡಿರಬಾರದು, ಎಚ್ಚರಿಕೆ ಇಲ್ಲದೇ ಇರಬಾರದು, ಮಿಥ್ಯಾದೃಷ್ಟಿಯನ್ನು ಎಂದರೆ ಪ್ರಾಪಂಚಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬಾರದು, ಸದಾ ಎಚ್ಚೆತ್ತುಕೊಂಡಿರಬೇಕು, ಮೈಮರೆತಿರಬಾರದು, ಸದ್ಧರ್ಮ ನಿರತನಾಗಿರಬೇಕು".

**ಹೀನಜ್ ಧಮ್ಮಜ್ ನ ಸೇವೆಯ್ಯ ಪಮಾದೇನ ನ ಸಜ್ವಸೇ**

**ಮಿಚ್ಛಾದಿಟ್ಠಿಜ್ ನ ಸೇವೆಯ್ಯ ನ ಸಿಯಾ ಲೋಕವದ್ಧನೋ**

**ಉತ್ತಿಟ್ಠೇ ನಪ್ಪಮಜ್ಜೆಯ್ಯ ಧಮ್ಮಜ್ ಸುಚರಿತಜ್ ಚರೆ**

**ಧಮ್ಮಚಾರೀ ಸುಖಜ್ ಸೇತಿ ಅಸ್ಮಿಜ್ ಲೋಕೇ ಪರಮ್ಹಿ ಚ**[33]

ಮೊದಲು ಮೈಮರೆತು ಅನಂತರ ಎಚ್ಚೆತ್ತುಕೊಳ್ಳುವವನು ಮೋಡದಿಂದ ಬಿಡುಗಡೆ ಹೊಂದಿದ ಚಂದ್ರನಂತೆ ಲೋಕವನ್ನು ಬೆಳಗುವವನು.

**ಯೋ ಚ ಪುಬ್ಬೇ ಪಮಜ್ಜಿತ್ವಾ ಪಚ್ಛಾ ಸೋ ನಪ್ಪಮಜ್ಜತಿ**

**ಸೋ ಇಮಜ್ ಲೋಕಜ್ ಪಭಾಸೇತಿ ಅಬ್ಭಾ ಮುತ್ತೋ ವ ಚಂದಿಮಾ**[34]

ಅಪ್ರಮಾದವೆಂಬುದು ಶ್ರಾವಕರ ಲಕ್ಷಣವೂ ಹೌದು. ಗೌತಮನ ಪ್ರಕಾರ ಶ್ರಾವಕರು ಸದಾ ಎಚ್ಚರಿಕೆಯಿಂದಿರುತ್ತಾರೆ. ಅವರ ಮನಸ್ಸು ಹಗಲಿರುಳು ಭಾವನೆಯಲ್ಲಿಯೇ ಎಂದರೆ ಮೈತ್ರಿ ಭಾವನೆಯಲ್ಲಿಯೇ ನಿರತವಾಗಿರುತ್ತದೆ.

**ಇಧ ತಪ್ಪತಿ, ಪೆಚ್ಚತಪ್ಪತಿ ಪಾಪಕಾರೀ ಉಭಯತ್ಥ ತಪ್ಪತಿ**

**'ಪಾಪಂ ಮೇ ಕತಂ' ತಿ ತಪ್ಪತಿ ಭೀಯೋ ತಪ್ಪತಿ ದುಗ್ಗತಿಜ್ ಗತೋ**

**ಇಧ ನಂದತಿ, ಪೆಚ್ಚನಂದತಿ ಕಟಪುಞ್ಞೋ ಉಭಯತ್ಥ ನಂದತಿ ;**

**'ಪುಞ್ಞಂ ಮೇ ಕತಂ' ತಿ ನಂದತಿ ಭೀಯೋ ನಂದತಿ ಸುಗ್ಗತಿಜ್ ಗತೋ**[35]

ಮನುಷ್ಯನು ಅಧ್ಯಯನ ಆಚಾರಗಳೆರಡರಲ್ಲೂ ಒಂದೇ ರೀತಿ ಇರಬೇಕು. ಧಮ್ಮಪದವು ಬೋಧನೆ ಮತ್ತು ಆಚರಣೆಗಳೆರಡಕ್ಕೂ ಸಮನಾದ ಪ್ರಾಧಾನ್ಯವನ್ನು ನೀಡುತ್ತದೆ. ಒಬ್ಬನು ಬೌದ್ಧಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿರಬಹುದು. ಆದರೆ ಅದರಂತೆ ಆಚರಿಸದೇ ಮೈಮರೆತಿದ್ದರೆ ಅವನು ಮತ್ತೊಬ್ಬರ ಗೋವುಗಳನ್ನು ಎಣಿಕೆ ಮಾಡುವ ಗೊಲ್ಲನಂತೆ ಮೂರ್ಖ. ತಾನು ಆಚರಿಸದೆ ಇತರರಿಗೆ ಬೋಧಿಸುವವನು ನಿರ್ವಾಣವನ್ನು ಹೊಂದಲಾರ. ಬುದ್ಧನ ಪ್ರಕಾರ ಜ್ಞಾನಿಯೆನಿಸಿದವನು ಇಡೀ ಬೌದ್ಧಶಾಸ್ತ್ರವನ್ನು ಅಧ್ಯಯನ

ಮಾಡಬೇಕಿಲ್ಲ, ಅದರಲ್ಲಿ ಸ್ವಲ್ಪವೇ ಅಧ್ಯಯನ ಮಾಡಿ ಅದರಂತೆ ನಡೆದರೆ ಸಾಕು, ಅವನಿಗೆ ನಿರ್ವಾಣ ಲಭಿಸುತ್ತದೆ. ಅಂತಹವನು ರಾಗ, ದ್ವೇಷ, ಮೋಹಗಳನ್ನು ಬಿಟ್ಟು ಮುಕ್ತಚಿತ್ತನಾಗಿ ಇಹಪರಗಳೆರಡರಲ್ಲೂ ಆಸಕ್ತಿಯಿಲ್ಲದೇ ನಿರ್ವಾಣವನ್ನು ಹೊಂದುತ್ತಾನೆ.

**ಬಹುಂ ಪಿ ಚೆ ಸಾಹಿತಿಂ ಭಾಸಮಾನೋ**

**ನ ತಕ್ಕರೋ ಹೋತಿ ನರೋ ಪಮತ್ತೋ**

**ಗೋಪೋ ವಾ ಗಾವೋ ಗಣಯಂ ಪರೇಸಜ್**

**ನ ಭಾಗವಾ ಸಾಮಞ್ಞಸ್ಸ ಹೋತಿ**

**ಅಪ್ಪಂ ಪಿ ಚೆ ಸಾಹಿತಜ್ ಭಾಸಮಾನೋ**

**ಧಮ್ಮಸ್ಸ ಹೋತಿ ಅನುಧಮ್ಮಚಾರೀ**

**ರಾಗಂ ಚ ದೋಸಂ ಚ ಪಹಾಯ ಮೋಹಾಜ್**

**ಸಮ್ಮಪ್ಪಜಾನೋ ಸುವಿಮುತ್ತ – ಚಿತ್ತೋ**

**ಅನುಪಾದಿಯಾನೋ ಇಧ ವಾ ಹುರಜ್ ವಾ**

**ಸಾ ಭಾಗವಾ ಸಾಮಞ್ಞಸ್ಸ ಹೋತಿ**[36]

ಬುದ್ಧನು ಕೆಲವು ಪ್ರಶ್ನೆಗಳನ್ನು ಹಾಕಿಕೊಂಡು ಹೀಗೆ ಉತ್ತರಿಸುತ್ತಾನೆ. ಯಾರು ಪೃಥ್ವಿಯನ್ನು ಗೆಲ್ಲುವರು? ಯಮಲೋಕವನ್ನು ಗೆಲ್ಲುವರು? ಈ ಪ್ರಶ್ನೆಗಳಿಗೆ ಬುದ್ಧನು ನೀಡುವ ಉತ್ತರ ಶೈಕ್ಷ ಎಂಬುದು. ಇಲ್ಲಿ **ಶೈಕ್ಷ**ನೆಂದರೆ ಒಳ್ಳೆಯ ಶಿಷ್ಯನೆಂದರ್ಥ. ಈತನು ನಿರ್ವಾಣ ಮಾರ್ಗದಲ್ಲಿರುತ್ತಾನೆ, ಆದರೆ ಇನ್ನೂ ಅರಿಹಂತನಾಗಿರುವುದಿಲ್ಲ .

**ಕೋ ಇಮಜ್ ಪಠವಿಜ್ ವಿಜೆಸ್ಸತಿ**

**ಯಮಲೋಕಜ್ ಚ ಇಮಜ್ ಸದೇವಕಜ್?**

**ಕೋ ಧಮ್ಮಪದಜ್ ಸುದೇಸಿತಜ್**

**ಕುಸಲೋ ಪುಪ್ಫಂ ಇವ ಪಚೆಸ್ಸತಿ**

**ಸೇಖೋ ಪಠವಿಜ್ ವಿಜೆಸ್ಸತಿ**

**ಯಮಲೋಕಜ್ ಚ ಇಮಜ್ ಸದೇವಕಜ್**

**ಸೇಖೋ ಧಮ್ಮಪದಜ್ ಸುದೇಸಿತಜ್**

**ಕುಸಲೋ ಪುಪ್ಫಜ್ ಇವ ಪಚೆಸ್ಸತಿ**[37]

ತಿಳಿಗೇಡಿಗೆ ಸಂಸಾರವು ದುಸ್ಥಿರವಾಗಿರುತ್ತದೆ. ಜಾಗರಣೆ ಮಾಡುವವನಿಗೆ ಒಂದು ರಾತ್ರಿಯೇ ಬಲುದೀರ್ಘವಾಗಿರುತ್ತದೆ. ಬಳಲಿದವನಿಗೆ ಒಂದು ಯೋಜನವೇ ಬಲುದೂರವಾಗಿರುತ್ತದೆ. ಸದ್ಧರ್ಮವನ್ನು ತಿಳಿಯದ ಮೂರ್ಖನಿಗೆ ಸಂಸಾರವು ದುಸ್ತರವಾಗಿರುತ್ತದೆ. ಈ ಹೇಳಿಕೆಯು ಮುಪ್ಪಿನ ದುರ್ಬಲತೆಯನ್ನು ಮನಗಾಣಿಸುತ್ತದೆ. ಮುಪ್ಪಿನಲ್ಲಿ ಮನುಷ್ಯನಿಗೆ ಒಂದೊಂದು ದಿನವೂ ದೀರ್ಘವಾಗಿ ತೋರುತ್ತದೆ. ಅವನನ್ನು ಏಕಾಕಿತನವು ಕಾಡುತ್ತದೆ. ಈ ಒಂಟಿತನಕ್ಕೆ ಕಾರಣ ನಮ್ಮ ಅವಿದ್ಯೆ. ಜೀವನದ ನಶ್ವರ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದೇ ಅವಿದ್ಯೆ.

**ದೀಘಾ ಜಾಗರತೋ ರತ್ತಿ ದೀಘಜ್ ಸಂತಸ್ಸ ಯೋಜನಜ್**

**ದೀಘೋ ಬಾಲಾನಜ್ ಸಂಸಾರೋ ಸದ್ಧಮ್ಮಜ್ ಅವಿಜಾನತಜ್**[38]

ಬುದ್ಧನು ಇದಕ್ಕೆ ಕಾರಣವನ್ನು ವಿಶ್ಲೇಷಿಸುತ್ತಾ, ಇದಕ್ಕೆ ಕಾರಣವು ನಮ್ಮ ಕರ್ಮವೆಂದು ಹೇಳುತ್ತಾನೆ. ಯಾವುದನ್ನು ಮಾಡಿದರೆ ಅನುತಾಪವು ಉಂಟಾಗುತ್ತದೋ ಮತ್ತು ಯಾವುದರ ಫಲವನ್ನು ಮನುಷ್ಯನು ಕಣ್ಣೀರಿನಿಂದ ಅನುಭವಿಸಬೇಕಾಗುವುದೋ, ಆ ಕರ್ಮವನ್ನು ಮಾಡುವುದು ಸರಿಯಲ್ಲ.

**ನ ತಜ್ ಕಮ್ಮಜ್ ಕತಜ್ ಸಾಧು ಯಜ್ ಕತ್ವಾ ಅನುತಪ್ಪತಿ**

**ಯಸ್ಸ ಅಸ್ಸುಮುಖೋ ರೋದಜ್ ವಿಪಾಕಜ್ ಪಟಸೇವತಿ**[39]

ಹಾಗಿಲ್ಲದೇ ಯಾವುದನ್ನು ಮಾಡಿದರೆ ಮನುಷ್ಯನಿಗೇ ಪಶ್ಚಾತ್ತಾಪ ಉಂಟಾಗದೋ, ಯಾವುದರ ಫಲವನ್ನು ಮನುಷ್ಯನು ಹಿಗ್ಗುತ್ತಾ ಅನುಭವಿಸುತ್ತಾನೋ ಆ ಕರ್ಮವನ್ನು ಅವನು ಮಾಡಬೇಕು.

**ಸಾರಜ್ ಚ ಸಾರತೋ ನತ್ವಾ ಅಸಾರಜ್ ಚ ಅಸಾರತೋ**

**ತೋ ಸಾರಂ ಅಧಿಗಚ್ಛಂತಿ ಸಮ್ಮಾಸಂಕಪ್ಪಗೋಚರಾ**[40]

ಎಂದರೆ ದುಃಖಪಶ್ಚಾತ್ತಾಪಗಳಿಗೆ ಒಯ್ಯುವ ಕರ್ಮವು ತ್ಯಾಜ್ಯವಾದದ್ದು ಮತ್ತು ಸುಖಸೌಮನಸ್ಯಗಳಿಗೆ ಒಯ್ಯುವ ಕರ್ಮವು ಸ್ವೀಕಾರಾರ್ಹವಾದುದು. ಈ ಪಾಪಕರ್ಮದ ರಹಸ್ಯವು ವಿಚಿತ್ರವಾದುದು. ಹೊಸಹಾಲು ಕೂಡಲೇ ಒಡೆಯದಿರುವಂತೆ ಪಾಪಕರ್ಮವು ಮಾಡಿದ ಕೂಡಲೇ ಪಕ್ವವಾಗುವುದಿಲ್ಲ. ಅದು ಬೂದಿಮುಚ್ಚಿದ ಕೆಂಡದಂತೆ ಪಾಪಿಯನ್ನು ಕ್ರಮೇಣ ಸುಡುತ್ತದೆ.

**ನ ಹಿ ಪಾಪಜ್ ಕತಜ್ ಕಮ್ಮಜ್ ಸಜ್ಜು ಖೀರಜ್ ವ ಮುಚ್ಚತಿ**

**ದಹಜ್ ತಜ್ ಬಾಲಂ ಅನ್ವೇತಿ ಭಸ್ಮಚ್ಛನ್ನೋ ವ ಪಾವಕೋ**[41]

ಪಂಡಿತನಾದವನು ಧರ್ಮದ ಪಾನದಿಂದ ಪ್ರಸನ್ನಚಿತ್ತನಾಗಿ ನಿದ್ರಿಸುವನು. ಏಕೆಂದರೆ ಅವನು ಆರ್ಯರು ಹಾಕಿಕೊಟ್ಟ ಧರ್ಮಮಾರ್ಗದಲ್ಲಿ ನಡೆಯುವನು. ಅವನು ದಾಟಲು ಬಹಳ ಕಷ್ಟವಾದ ಮೃತ್ಯುವನ್ನು ದಾಟುವನು.

**ಧಮ್ಮಪೀತಿ ಸುಖಜ್ ಸೇತಿ ವಿಪ್ಪಸನ್ನೇನ ಚೇತಸಾ**

**ಅರಿಯಪ್ಪವೇದಿತೇ ಧಮ್ಮೇ ಸದಾ ರಮತಿ ಪಂಡಿತೋ**[42]

**ಯೇ ಚ ಖೋ ಸಮ್ಮದಕ್ಖಾತೇ ಧಮ್ಮೇ ಧಮ್ಮಾನುವತ್ತಿನೋ**

**ತೇ ಜನಾ ಪಾರಂ ಎಸ್ಸಂತಿ ಮಚ್ಚುಧೆಯ್ಯಜ್ ಸುದುತ್ತರಜ್**[43]

ಬುದ್ಧನು ಪಾಪಕರ್ಮವನ್ನು **ಕೃಷ್ಣಧರ್ಮ**ವೆಂದು ಪುಣ್ಯಕರ್ಮವನ್ನು **ಶುಕ್ಲಧರ್ಮ**ವೆಂದು ಕರೆಯುತ್ತಾನೆ. ಮನುಷ್ಯನ ಉದ್ದೇಶ ಭಿಕ್ಷುವಾಗಿ ನಿರ್ವಾಣ ಹೊಂದುವುದು. ಮನೆಮಠಗಳನ್ನು ತೊರೆದು ವಿವೇಕವನ್ನು ಮತ್ತು ಏಕಾಂತವಾಸವನ್ನು ಹೊಂದಿ ಕಾಮಗಳನ್ನು ತೊರೆದು ತನ್ನದೇನೂ ಇಲ್ಲದೇ ಅಭಿರತಿಯಿಂದಲೂ ಚಿತ್ತಕ್ಲೇಶವು ಎಂದಿಗೂ ಕಾಡದಂತೆ ತನ್ನನ್ನು ತಾನು ಶುದ್ಧಗೊಳಿಸಿಕೊಳ್ಳುವುದು. ಇಲ್ಲಿ ಚಿತ್ತಕ್ಲೇಶಗಳೆಂದರೆ ರಾಗ, ದ್ವೇಷ, ಮೋಹ, ಮದ ಮತ್ತು ಅಹಂಕಾರಗಳು.

**ಕಣ್ಹಂ ಧಮ್ಮಂ ವಿಪ್ಪಹಾಯ ಸುಖಂ ಭಾವೇತ ಪಂಡಿತೋ**

**ಓಕಾ ಅನೋಕಂ ಆಗಮ್ಮ ವಿವೇಕೇ ಯತ್ಥ ದೂರಮಂ**

**ತತ್ರಾಭಿರತಿಂ ಇಚ್ಛೆಯ್ಯಾ ಹಿತ್ವಾ ಕಾಮೇ ಅಕಿಂಚನೋ**

**ಪರಿಯೋದಪೆಯ್ಯ ಅತ್ತಾನಂ ಚಿತ್ತಕ್ಲೇಸೇಹಿ ಪಂಡಿತೋ**[44]

ಯಾರಿಗೆ ಕಾಯಗತ ಸ್ಮೃತಿಯು ಸಿದ್ಧಿಯಾಗಿದೆಯೋ ಅವರು ಅಕೃತ್ಯವನ್ನು ಮಾಡುವುದಿಲ್ಲ. ಅವರು ಸದಾ ಎಚ್ಚರಿಕೆಯಿಂದ ಕೂಡಿದ್ದು, ತಮ್ಮ ಕರ್ತವ್ಯದಲ್ಲಿ ಸದಾ ನಿರತರಾಗಿರುತ್ತಾರೆ. ಕಾಯಗತ ಸ್ಮೃತಿಯೆಂದರೆ ಶರೀರವು ಕ್ಷಣಿಕ, ಮಲಿನ ಮತ್ತು ದುಃಖಮಯವೆಂಬ ಅರಿವು. ಇವರು ಹಗಲಿರುಳು ಬುದ್ಧನಲ್ಲಿಯೇ ಧರ್ಮದಲ್ಲಿಯೇ ಮತ್ತು ಸಂಘದಲ್ಲಿಯೇ ಸ್ಮೃತಿವಂತರಾಗಿರುತ್ತಾರೆ.

**ಯೇಸಂ ಚ ಸುಸಮಾರದ್ಧಾ ನಿಚ್ಚಂ ಕಾಯಗತಾ ಸತೀ**

**ಅಕಿಚ್ಚಂ ತೇ ನ ಸೇವಂತಿ ಕಿಚ್ಚೇ ಸಾತಚ್ಚಕಾರಿನೋ**

**ಸತಾನಂ ಸಂಪಜಾನಾನಂ ಅತ್ಥಂ ಗಚ್ಛಂತಿ ಆಸವಾ**[45]

**ಸುಪ್ಪಬುದ್ಧಂ ಪಬುಜ್ಝಂತಿ ಸದಾ ಗೋತಮಸಾವಕಾ**

**ಯೇಸಂ ದಿವಾ ಚ ರತ್ತೋ ಚ ನಿಚ್ಚಂ ಬುದ್ಧಗತಾ ಸತಿ**

**ಸುಪ್ಪಬುದ್ಧಂ ಪಬುಜ್ಝಂತಿ ಸದಾ ಗೋತಮಸಾವಕಾ**

**ಯೇಸಙ್ ದಿವಾ ಚ ರತ್ತೋ ಚ ನಿಚ್ಚಙ್ ಧಮ್ಮಗತಾ ಸತಿ**

**ಸುಪ್ಪಬುದ್ಧಙ್ ಪಬುಜ್ಝಂತಿ ಸದಾ ಗೋತಮಸಾವಕಾ**

**ಯೇಸಙ್ ದಿವಾ ಚ ರತ್ತೋ ಚ ನಿಚ್ಚಙ್ ಸಂಘಗತಾ ಸತಿ**[46]

# ಅಡಿ ಟಿಪ್ಪಣಿಗಳು

1. ಗಾಥೆ 209
2. ಮುಂಡಕೋಪನಿಷತ್ತು II.ii.8
3. ಗಾಥೆ 211; ಗಾಥೆ 90ನ್ನು ನೋಡಿ
4. ಈಶೋಪನಿಷತ್ತು 7ನೇ ಮಂತ್ರ
5. ಗೀತೆ 2–59
6. ಗಾಥೆಗಳು 341–343
7. ಗಾಥೆಗಳು 217–218
8. ಗಾಥೆ 337
9. ಗಾಥೆ 338
10. ಗಾಥೆ 340
11. ಗಾಥೆ 344
12. ಗಾಥೆಗಳು 345–347
13. ಗಾಥೆ 202
14. ಗಾಥೆ 186
15. ಗಾಥೆಗಳು 246–247
16. ಗಾಥೆ309
17. ಗಾಥೆಗಳು 155–156
18. ಗಾಥೆ 284
19. ಗಾಥೆಗಳು 21–22
20. ಗೀತೆ 9–22; 18–66
21. ಗಾಥೆ 23
22. ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು, ***ಧಮ್ಮಪದ***, ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, 1997, ಪು.76
23. S.Radhakrishnan, ***The Dhammapada***, Oxford University Press, London, 1950, ಪು.67
24. ಗಾಥೆ 25
25. ಗಾಥೆಗಳು 26–29
26. ಗಾಥೆ 30
27. ಗೀತೆ 9–21

28. S.Radhakrishnan, ***The Dhammapada***, ಪೂರ್ವೋಕ್ತ, ಪು.68

29. ಗಾಥೆ 16

30. ಗಾಥೆ 157

31. ಗಾಥೆ 226

32. ಗಾಥೆ 327

33. ಗಾಥೆಗಳು 167–168

34. ಗಾಥೆ 172

35. ಗಾಥೆಗಳು 17–18

36. ಗಾಥೆಗಳು 19–20

37. ಗಾಥೆಗಳು 44–45

38. ಗಾಥೆ 60

39. ಗಾಥೆ 67

40. ಗಾಥೆ 12

41. ಗಾಥೆ 71

42. ಗಾಥೆ 79

43. ಗಾಥೆ 86

44. ಗಾಥೆಗಳು 87–88

45. ಗಾಥೆ 293

46. ಗಾಥೆಗಳು 296–298

**********

# ಅಧ್ಯಾಯ–10

# ಸಂಸಾರ ಮತ್ತು ವೈರಾಗ್ಯ

## ಅಧ್ಯಾಯ–10

# ಸಂಸಾರ ಮತ್ತು ವೈರಾಗ್ಯ

ಸಂಸಾರವು ನಶ್ವರವೆಂಬ ವಾಸ್ತವತೆಯನ್ನು ಅರಿಯದಿರುವುದೇ ಮಾನವ ಬದುಕಿನ ದುರಂತ. ಆದರೆ ಮನುಷ್ಯನು ತಾನು ಅವಿವೇಕಿಯಾದರೂ ಪಂಡಿತನೆಂದು ಭ್ರಮಿಸುತ್ತಾನೆ. ಸಂಸಾರದಿಂದ ಪಾರುಗಾಣಬಯಸುವವರು ತೀರ ವಿರಳ. ಉಳಿದವರೆಲ್ಲರೂ ಸಂಸಾರ ಸಾಗರದ ಈಚಿನ ಎಂದರೆ ಅಜ್ಞಾನದದಡದಲ್ಲೇ ಇರುತ್ತಾರೆ.

**ಅಪ್ಪಕಾ ತೇ ಮನುಸ್ಸೇಸು ಯೇ ಜನಾ ಪಾರಗಾಮಿನೋ**

**ಅಥಾಯಜ್ ಇತರಾ ಪಜಾ ತೀರಂ ಏವನುಧಾವತಿ**[1]

ಅವರಿಗೆ ತಮ್ಮ ಅಜ್ಞಾನದ ಅರಿವು ಇಲ್ಲ. ಯಾವಾಗಲೂ ಬೆಂಕಿ ಹೊತ್ತಿ ಉರಿಯುವಾಗ ನಗೆಯೇನು, ಆನಂದವೇನು? ಕತ್ತಲಲ್ಲಿ ಮುಂಗಾಣದಿದ್ದುದು ಬೆಳಕನ್ನು ಅರಸದಿರುವುದು ಒಂದು ವಿಡಂಬನೆ. ಕತ್ತಲೆಯೇ ಬೆಳಕಾಗಿರುವುದು ಅಜ್ಞಾನಿಯ ಬದುಕಿನ ದುರಂತ.

**ಕೋ ನು ಹಾಸೋ? ಕಿಮ್ ಆನಂದೋ ನಿಚ್ಚಜ್ ಪಜ್ಜಕಲಿತೇ ಸತಿ?**

**ಅಂಧಕಾರೇನ ಓನದ್ಧಾ ಪದೀಪಜ್ ನ ಗವೆಸ್ಸಥ?**[2]

ಹೆದರಿಕೆಯಿಂದ ಬೆಟ್ಟಗುಡ್ಡಗಳನ್ನು, ಕಾಡುಗಳನ್ನು, ಉದ್ಯಾನಗಳನ್ನು, ಮರಗಳನ್ನು, ಚೈತ್ಯಗಳನ್ನು ಮೊರೆಹೊಕ್ಕರೂ ಮನುಷ್ಯನಿಗೆ ದುಃಖವೊದಗುವುದು ತಪ್ಪದು. ಪ್ರಪಂಚದಲ್ಲಿ ಎಲ್ಲೆಲ್ಲೂ ದುಃಖವು ತಾಂಡವವಾಡುತ್ತಿದೆ. ಎಲ್ಲ ವಸ್ತುಗಳೂ ದುಃಖದ ನೆಲೆಯಾಗಿವೆ.

**ಬಹೂ ವೆ ಸರಣಜ್ ಯಂತಿ ಪಬ್ಬತ್ತಾನಿ ವನಾನಿ ಚ**

**ಆರಾಮರುಕ್ಖ ಚೇತ್ಯಾನಿ ಮನುಸ್ಸಾ ಭಯ ತಜ್ಜಿತಾ**

**ನೇತಜ್ ಖೋ ಸರಣಜ್ ಖೇಮಜ್ ನೇತಜ್ ಸರಣಜ್ ಉತ್ತಮಜ್**

**ನೇತಜ್ ಸರಣಜ್ ಆಗಮ್ಮ ಸಬ್ಬದುಕ್ಖಾ ಪಮುಚ್ಚತಿ**[3]

ಯಾವಾಗ ಮನುಷ್ಯನು ಬುದ್ಧ-ಧಮ್ಮ-ಸಂಘಗಳೆಂಬ ರತ್ನತ್ರಯವನ್ನು ಮೊರೆಹೋಗುವನೋ, ಚತುರಾರ್ಯ ಸತ್ಯಗಳನ್ನು ಪ್ರಜ್ಞೆಯಿಂದ ಕಂಡುಕೊಳ್ಳುವನೋ, ಆರ್ಯಅಷ್ಟಾಂಗಿಕ ಮಾರ್ಗವನ್ನು ಪಾಲಿಸುವನೋ ಆಗ ಅವನ ದುಃಖಗಳೆಲ್ಲವೂ ನಾಶವಾಗುತ್ತವೆ.

**ಯೋ ಚ ಬುದ್ಧಜ್ ಚ ಧಮ್ಮಜ್ ಚ ಸಂಘಜ್ ಚ ಸರಣಜ್ ಗತೋ**

**ಚತ್ತಾರಿ ಅರಿಯಸಚ್ಚಾನಿ ಸಮ್ಮಪ್ಪಞ್ಞಾಯ ಪಸ್ಸತಿ**

**ದುಕ್ಖಜ್ ದುಕ್ಖಸಮುಪ್ಪದಜ್ ದುಕ್ಖಸ್ಸ ಚ ಅತಿಕ್ಕಮಜ್**

**ಅರಿಯಜ್ ಚಟ್ಠಂಗಿಕಜ್ ಮಗ್ಗಜ್ ದುಕ್ಖೂಪಸಮಗಾಮಿನಿಜ್**

**ಏತಜ್ ಖೋ ಸರಣಜ್ ಖೇಮಜ್ ಏತಜ್ ಸರಣಜ್ ಉತ್ತಮಜ್**

**ಏತಜ್ ಸರಣಜ್ ಆಗಮ್ಮ ಸಬ್ಬದುಕ್ಖಾ ಪಮುಚ್ಚತಿ**[4]

ಸರ್ವದುಃಖಗಳಿಗೂ ಮೂಲ ಕಾರಣ ಅವಿದ್ಯೆ ಎಂಬುದನ್ನು ಸುಭಾಷಿತ ರೂಪದಲ್ಲಿ ಹೀಗೆ ವಿವರಿಸಲಾಗಿದೆ, "ಜಪಿಸದಿರುವುದು ಮಂತ್ರಗಳಿಗೆ ಮಲ, ಕೆಲಸ ಮಾಡದಿರುವುದು ಮನೆಗಳಿಗೆ ಮಲ, ಆಲಸ್ಯವು ಮೈಬಣ್ಣಕ್ಕೆ ಮಲ, ಎಚ್ಚರದಪ್ಪುವುದು ಕಾವಲುಗಾರನಿಗೆ ಮಲ, ಕೆಟ್ಟ ನಡತೆ ಹೆಂಗಸಿಗೆ ಮಲ, ಹೊಟ್ಟೆಕಿಚ್ಚು ಕೊಡುಗೈವುಳ್ಳನಿಗೆ ಮಲ, ಪಾಪ ಕರ್ಮಗಳು ಇಹಪರಗಳೆರಡರಲ್ಲೂ ಮಲ. ಆದರೆ ಈ ಎಲ್ಲ ಮಲಗಳಿಗಿಂತಲೂ ದೊಡ್ಡ ಮಲವೆಂದರೆ ಅವಿದ್ಯೆ. ಭಿಕ್ಷುವು ಈ ಮೂಲ ಮಲವನ್ನು ತೊಡೆದು ಹಾಕುವುದು ಅಗತ್ಯ".

**ಅಸಜ್ಝಾಯಮಲಾ ಮಂತಾ ಅನುಟ್ಠಾನಮಲಾ ಘರಾ**

**ಮಲಜ್ ವಣ್ಣಸ್ಸ ಕೋಸಜ್ಜಜ್ ಪಮಾದೋ ರಕ್ಖತೋ ಮಲಜ್**

**ಮಲಿಟ್ಠಿಯಾ ದುಚ್ಚರಿತಜ್ ಮುಚ್ಚಿರಜ್ ದದತೋ ಮಲಜ್**

**ಮಲಾವೇ ಪಾಪಕಾ ಧಮ್ಮಾ ಅಸ್ಮಿಜ್ ಲೋಕೇ ಪರಮ್ಹಿ ಚ**

**ತತೋ ಮಲ ಮಲತರಜ್ ಅವಿಜ್ಜಾ ಪರಮಜ್ ಮಲಜ್**

**ಏತಜ್ ಮಲಜ್ ಪಹತ್ವಾನ ನಿಮ್ಮಲಾ ಹೋಥ ಬಿಕ್ಕವೋ**[5]

ಇಲ್ಲಿ ಅವಿದ್ಯೆಯೆಂದರೆ ಚತುರಾರ್ಯ ಸತ್ಯಗಳನ್ನು ಸರಿಯಾಗಿ ತಿಳಿಯದಿರುವುದು. ಪ್ರತಿಯೊಬ್ಬನಿಗೂ ಮೃತ್ಯುವು ಸನ್ನಿಹಿತ. ಮೃತ್ಯುವಿನಿಂದ ಮನುಷ್ಯನನ್ನು ಮಕ್ಕಳಾಗಲೀ, ತಂದೆಯಾಗಲೀ, ನೆಂಟರಾಗಲೀ ಯಾರೂ ಕಾಪಾಡಲಾರರು. ಬದುಕನ್ನು ಕಾಡುವ ಅತ್ಯಂತ ದೊಡ್ಡ ಸಮಸ್ಯೆಯೆಂದರೆ ಸಾವು. ಈ ಸಾವೆಂಬ ವಾಸ್ತವತೆಯ ಅರಿವೇ ಬುದ್ಧನನ್ನು ಬದುಕಿನ ರಹಸ್ಯವನ್ನು ಕಂಡುಕೊಳ್ಳಲು ಪ್ರಚೋದಿಸಿದುದು. ಬುದ್ಧಿವಂತನಾದವನು ಈ ವಾಸ್ತವತೆಯನ್ನು ತಿಳಿದು ಶೀಲದಿಂದ ಕೂಡಿರುವವನಿಗೆ ನಿರ್ವಾಣಕ್ಕೆ ಒಯ್ಯುವ ಮಾರ್ಗವನ್ನು ಬೇಗನೇ ಹುಡುಕಿಕೊಳ್ಳಬೇಕು.

**ನ ಸಂತಿ ಪುತ್ತಾ ತಾಣಾಯ ನ ಪಿತಾ ನ ಪಿ ಬಾಂಧವಾ**

**ಅಂತಕೇನಾಧಿಪನ್ನಸ್ಸ ನತ್ಥಿ ಞಾತೀಸು ತಾಣತಾ**

**ಏತಜ್ ಅತ್ಥವಸಜ್ ಞತ್ವಾ ಪಂಡಿತೋ ಸೀಲಸಂವುತೋ**

**ನಿಬ್ಬಾಣ ಗಮನಜ್ ಮಗ್ಗಜ್ ಖಿಪ್ಪಜ್ ಏವ ವಿಸೋಧಯೇ**[6]

## ವೈರಾಗ್ಯ

ಪ್ರಪಂಚವನ್ನು ತೊರೆದು ಓಡಿಹೋಗುವುದೇ ವೈರಾಗ್ಯವಲ್ಲ. ಹಾಗೇ ಪ್ರಪಂಚವನ್ನು ಬಿಟ್ಟು ಒಬ್ಬನು ಬದುಕಲು ಸಾಧ್ಯವೇ ಇಲ್ಲ. ಮನುಷ್ಯನಿಗೂ ಪ್ರಪಂಚಕ್ಕೂ ಅವಿನಾಸಂಬಂಧವಿದೆ. ಹಾಗಾದರೆ ವೈರಾಗ್ಯವೆಂದರೇನು? ಪ್ರಪಂಚದಲ್ಲಿದ್ದು ಅದಕ್ಕೆ ಅಂಟಿಕೊಳ್ಳದಂತಿರುವುದೇ ವೈರಾಗ್ಯ. ದುಂಬಿಯು ಹೂವಿನ ಬಣ್ಣವನ್ನಾಗಲೀ, ವಾಸನೆಯನ್ನಾಗಲೀ ಕೆಡಿಸದೇ ರಸವನ್ನು ಹೀರುವಂತೆ ಮುನಿಯಾದವನು ಗ್ರಾಮಕ್ಕೆ ಅಂಟಿಕೊಳ್ಳದೇ ಸಂಚರಿಸುತ್ತಿರಬೇಕು.

**ಯಥಾ ಪಿ ಭಮರೋ ಪುಪ್ಫಜ್ ವಣ್ಣಗಂಧಜ್ ಅಹೇಠಯಜ್**

**ಪಲೇತಿ ರಸಂ ಆದಾಯ ಏವಜ್ ಗಾಮೇ ಮುನೀ ಚರೇ**[7]

ತಿಳಿಗೇಡಿಯು ತನಗೆ ಮಕ್ಕಳು ಸಂಪತ್ತಿರುವುದೆಂದು ಭ್ರಮಿಸುವನು. ಆದರೆ ತಾನೇ ತನಗಿಲ್ಲ. ಇನ್ನು ಹಣ ಮಕ್ಕಳ ಶಾಶ್ವತತೆಯ ಬಗ್ಗೆ ಹೆಚ್ಚು ಹೇಳಬೇಕಾದಿಲ್ಲ. ಮನುಷ್ಯನು ತನ್ನ ಒಂಟಿತನವನ್ನು ನೀಗಲು ಮಕ್ಕಳು ಹಣಗಳಿರುತ್ತವೆಂದು ಭ್ರಮಿಸುವನು. ಆದರೆ ಅವನೇ ಶಾಶ್ವತನಲ್ಲ. ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲವೆಂದು ತಿಳಿದು ವ್ಯವಹರಿಸುವುದೇ ವೈರಾಗ್ಯ. ಮನುಷ್ಯನಿಗೆ ತನ್ನದೆಂಬುದು ಯಾವುದೂ ಇಲ್ಲ. ರಾಗವೇ ದುಃಖದ ಮೂಲ. ವಿರಾಗವೇ ಸುಖದ ನೆಲೆ.

**ಪುತ್ತಾ ಮತ್ಥಿ ಧನಂ ಮತ್ಥಿ ಇತಿ ಬಾಲೋ ವಿಹಞ್ಞತಿ**

**ಅತ್ತಾ ಹಿ ಅತ್ತನೋ ನತ್ಥಿ ಕುತೋ ಪುತ್ತಾ? ಕುತೋ ಧನಜ್?**[8]

**ಸುಸುಖಜ್ ವತ ಜೀವಾಮ ಯೇಸಜ್ ನೋ ನತ್ಥಿ ಕಿಂಚನಜ್**

**ಪೀತಿಭಕ್ಖಾ ಭವಿಸ್ಸಾಮ ದೇವಾ ಅಭಿಸ್ಸರಾ ಯಥಾ**[9]

ಆಸಕ್ತರ ನಡುವೆ ಆಸಕ್ತಿಯಿಲ್ಲದೇ ಬಾಳುವುದೇ ವೈರಾಗ್ಯ. ಪ್ರಪಂಚದಲ್ಲಿದ್ದು ಅದರ ನಶ್ವರತೆಯ ಅರಿವಿರುವುದು ವೈರಾಗ್ಯ. ಪ್ರಪಂಚವನ್ನು ನೀರು ಗುಳ್ಳೆಯಂತೆ ಮತ್ತು ಬಿಸಿಲ್ಗುದುರೆಯಂತೆ ಕಾಣುವವನಿಗೆ ಮೃತ್ಯುವಿಲ್ಲ.

**ಯಥಾ ಬಬ್ಬುಲಕಜ್ ಪಸ್ಸೇ ಯಥಾ ಪಸ್ಸೇ ಮರೀಚಕಜ್**

**ಏವಜ್ ಲೋಕಜ್ ಅವೆಕ್ಖಂತಜ್ ಮಚ್ಚುರಾಜಾ ನ ಪಸ್ಸತಿ**[10]

ಮನುಷ್ಯನಿಗೆ ಸನ್ನಿಹಿತವಾಗಲಿರುವ ಜರಾಮರಣದ ಅರಿವಿರಬೇಕು. ಈ ಅರಿವಿನಿಂದಲೇ, ಈ ವಾಸ್ತವತೆಯ ಭಯದಿಂದಲೇ ಅವನು ಪುಣ್ಯಕರ್ಮಗಳನ್ನು ಮಾಡುವುದು. ಬುದ್ಧನು ಹೀಗೆ ಉಪದೇಶಿಸುತ್ತಾನೆ, "ನೀನು ಬಿಳಿಚಿಕೊಂಡಿರುವ ಮುತ್ತುಗದೆಲೆಯಂತೆ ಇದ್ದೀಯೆ, ಯಮನಾಳುಗಳು ನಿನ್ನ ಬಳಿಗೆ ಬಂದಿರುವರು. ಅವರೊಡನೆ ನೀನು ಹೊರಡಲು ಸಿದ್ಧನಾಗಿರುವೆ. ನಿನಗೆ (ಪುಣ್ಯವೆಂಬ) ಪಯಣದ

ಬುತ್ತಿಯಿಲ್ಲ. ಆದ್ದರಿಂದ ನಿನಗಾಗಿ ನೀನು ದ್ವೀಪವನ್ನು (ಅರ್ಹಂತನ ಪದವಿಯನ್ನು) ಮಾಡಿಕೋ, ಪ್ರಯತ್ನಶೀಲನಾಗು, ಪಂಡಿತನಾಗು, ಮಲವನ್ನು ತೊಳೆದುಕೋ. ಆರ್ಯಭೂಮಿಯನ್ನು (ನಿರ್ವಾಣವನ್ನು) ಪಡೆಯುವೆ".

**ಪಂಡುಪಲಾಸೋ ವ ದಾನಿಸಿ ಯಮಪುರಿಸಾ ಪಿ ಚ ತಜ್ ಉಪಟ್ಠಿತಾ**

**ಉಯ್ಯೋಗಮುಖೆ ಚ ತಿಟ್ಠಿಸಿ ಪಾಥೆಯ್ಯಂ ಪಿ ಚ ತೇ ನ ವಿಜ್ಜತಿ**

**ಸೋ ಕರೋಹಿ ದೀಪಂ ಅತ್ತನೋ ಖಿಪ್ಪಜ್ ವಾಯಾಮ ಪಂಡಿತೋ ಭವ**

**ನಿದ್ಧಂತಮಲೋ ಅನಂಗಣೋ ದಿಬ್ಬಜ್ ಅರಿಯಭೂಮಿಂ ಏಹಿಸಿ**[11]

ಮನುಷ್ಯನಿಗೆ ವಯಸ್ಸು ಕಳೆಯುತ್ತಾ ಬಂದಿದೆ, ಅಕ್ಕಸಾಲಿಗನು ಸ್ವಲ್ಪಸ್ವಲ್ಪವಾಗಿ ಬೆಳ್ಳಿಯಲ್ಲಿರುವ ಕೊಳೆಯನ್ನು ಊದಿ ಕರಗಿಸುವಂತೆ ಮೇಧಾವಿಯು ಹಂತಹಂತವಾಗಿ ತನ್ನಲ್ಲಿರುವ ಮಲವನ್ನು ಕರಗಿಸಬೇಕು.

**ಅನುಪ್ಪುಬ್ಬೇನ ಮೇಧಾವಿ ಥೋಕ ಥೋಕಜ್ ಖಣೇ ಖಣೇ**

**ಕಮ್ಮಾರೋ ರಜತಸ್ಸೇವ ನಿದ್ಧಮೇ ಮಲಂ ಅತ್ತನೋ**[12]

ವೈರಾಗ್ಯವು ಪ್ರಜ್ಞೆಯಿಂದ ಉಗಮವಾಗಬೇಕು. ಎಲ್ಲವೂ ಅನಿತ್ಯವೆಂದು, ಅನಾತ್ಮಗಳೆಂದು ಮತ್ತು ದುಃಖಮಯವೆಂದು ಯಾವಾಗ ಪ್ರಜ್ಞೆಯಿಂದ ಕಂಡುಕೊಳ್ಳುವನೋ ಆಗ ಮನುಷ್ಯನು ವಿರಕ್ತನಾಗುವನು. ವಿಶುದ್ಧಿಗೆ ಇದೇ ಮಾರ್ಗ.

**ಸಬ್ಬೇ ಸಂಖಾರಾ ಅನಿಚ್ಚಾತಿ ಯದಾ ಪಞ್ಞಾಯ ಪಸ್ಸತಿ**

**ಅಥ ನಿಬ್ಬಿಂದತಿ ದುಕ್ಖೇ ಏಸ ಮಗ್ಗೋ ವಿಸುದ್ಧಿಯಾ**

**ಸಬ್ಬೇ ಸಂಖಾರಾ ದುಕ್ಖಾತಿ ಯದಾ ಪಞ್ಞಾಯ ಪಸ್ಸತಿ**

**ಅಥ ನಿಬ್ಬಿಂದತಿ ದುಕ್ಖೇ ಏಸ ಮಗ್ಗೋ ವಿಸುದ್ಧಿಯಾ**

**ಸಬ್ಬೇ ಸಂಖಾರಾ ದುಕ್ಖಾತಿ ಯದಾ ಪಞ್ಞಾಯ ಪಸ್ಸತಿ**

**ಅಥ ನಿಬ್ಬಿಂದತಿ ದುಕ್ಖೇ ಏಸ ಮಗ್ಗೋ ವಿಸುದ್ಧಿಯಾ**[13]

ಸಾವಿನ ನಿಶ್ಚಿತತೆಯ ಅರಿವು ಆಧ್ಯಾತ್ಮಿಕ ಪ್ರಗತಿಗೆ ಕಾರಣವೆಂಬುದನ್ನು ಎಲ್ಲ ಸಂತರೂ ಸಾರುತ್ತಾರೆ. ಪ್ರಪಂಚದಲ್ಲಿ ನಾವು ಶಾಶ್ವತರೆಂಬ ತಪ್ಪು ತಿಳುವಳಿಕೆಯೇ ದುಃಖಕ್ಕೆ ಕಾರಣ. ಇದನ್ನು **ಅವಿದ್ಯೆ** ಅಥವಾ **ಅವಿಜ್ಜಾ** ಎಂದು ಕರೆಯುವರು. ಯಾರಿಗೆ ಸಾವು ನಿಶ್ಚಿತವೆಂಬ ಅರಿವು ಇರುವುದಿಲ್ಲವೋ ಅವರು ಅಜ್ಞಾನಿಗಳು. ಯಾರಿಗೆ ಸಾವಿನ ನಿಶ್ಚಿತತೆ ಅರಿವು ಇರುತ್ತದೆಯೋ ಅವರು ಪಂಡಿತರು. ಅವರಿಗೆ ಯಾವ ವಿಕಾರಗಳೂ ಇರುವುದಿಲ್ಲ. ಅವರ ಮನಸ್ಸಿನ ಎಲ್ಲಾ ವಿಕಾರಗಳು ಶಾಂತವಾಗಿರುತ್ತದೆ. ಅವರು ಈ ಶರೀರವು ಸಮುದ್ರದ ನೊರೆಯಂತೆ ಮತ್ತು ಬಿಸಿಲ್ಗುದುರೆಯಂತೆ ಅಶಾಶ್ವತವೆಂದು ತಿಳಿದುಕೊಂಡಿರುತ್ತಾ. ಮಾರನನ್ನು ಗೆಲ್ಲಬಲ್ಲ.

**ಪರೇ ಚ ನ ವಿಜಾನಂತಿ ಮಯಂ ಎಟ್ಥ ಯಮಾಮಸೆ ;**

**ಯೇ ಚ ತಟ್ಥ ವಿಜಾನಂತಿ, ತತೋ ಸಮ್ಮಂತಿ ಮೇಧಗಾ**[14]

**ಫೇಣೂಪಮಜ್ ಕಾಯಂ ಇಮಜ್ ವಿದಿತ್ವಾ**

**ಮರೀಚಿಧಮ್ಮಜ್ ಅಭಿಸಂಬುಧಾನೋ**

**ಚೆತ್ವಾನ ಮಾರಸ್ಸ ಪಾಪುಪ್ಫಕಾನಿ**

**ಅದಸ್ಸನಜ್ ಮಚ್ಚುರಾಜಸ್ಸ ಗಚ್ಛೇ**[15]

ಜರಾಮರಣಗಳು ಹೇಗೆ ದನಗಾಹಿಯು ಕೋಲಿನಿಂದ ದನಗಳನ್ನು ಅಟ್ಟಿಸಿಕೊಂಡು ಹೋಗುವನೋ ಹಾಗೆಯೇ ಪ್ರಾಣಿಗಳನ್ನು ಅಟ್ಟಿಸಿಕೊಂಡು ಹೋಗುತ್ತಾನೆ. ಜೀವನವು ದುಃಖದಿಂದ ಕೂಡಿದುದು. ಯಾವಾಗಲೂ ಬೆಂಕಿ ಹತ್ತಿಕೊಂಡು ಉರಿಯುತ್ತಿರುವಾಗ ಜೀವನದಲ್ಲಿ ನಗೆಯೆಲ್ಲಿ, ಆನಂದವೆಲ್ಲಿ ಎಂದು ಬುದ್ಧನು ಪ್ರಶ್ನಿಸುತ್ತಾನಾದರೂ ಆತನು ತನ್ನ ನಿಲುವನ್ನು ನಿರಾಶಾವಾದದಲ್ಲೇ ಅಂತ್ಯಗೊಳಿಸುವುದಿಲ್ಲ. ಬದಲಾಗಿ ಕತ್ತಲೆಯಲ್ಲಿ ಬೆಳಕನ್ನು ಅರಸಲು ನಮಗೆ ಬೋಧಿಸುತ್ತಾನೆ. ಈ ಶರೀರವನ್ನು ವಸ್ತ್ರಾಭರಣಗಳಿಂದ ಅಲಂಕೃತವಾಗಿ

ವಿಚಿತ್ರವಾಗಿರುವ ಬಿಂಬಕ್ಕೆ ಹೋಲಿಸಲಾಗಿದೆ. ಆದರೆ ಅದು ಹುಣ್ಣುಗಳಿಂದ ಕೂಡಿದೆ, ಬೇನೆಗಳಿಂದ ಬೇಯುತ್ತಿದೆ. ಇದರ ಜನ್ಮವೇ ನಾನು ಇರಬೇಕೆಂಬ ಸಂಕಲ್ಪದಿಂದ ಉಂಟಾದುದು. ಇದಕ್ಕೆ ನಿಗದಿತ ಸ್ಥಳವಿರುವುದಿಲ್ಲ. ಇದಕ್ಕೆ ಅನೇಕ ಯೋನಿಗಳಲ್ಲಿ, ಸ್ಥಳಗಳಲ್ಲಿ ಜನ್ಮವಿದೆ. ಇದರ ಆಕಾರವು ಜೀರ್ಣವಾಗಿ ಬೇನೆಗಳ ಗೂಡಾಗಿ ನಾಶವಾಗತಕ್ಕದ್ದಾಗಿದೆ. ಅದು ನಾತದ ತಿಪ್ಪೆಯಾಗಿ ಪರಿಣಮಿಸಿದೆ. ದಿಟವಾಗಿ ಬದುಕೆಂಬುದು ಸಾವಿನಲ್ಲಿ ಕೊನೆಗೊಳ್ಳುತ್ತದೆ. ಶರತ್ ಕಾಲದಲ್ಲಿ ಸೋರೆಕಾಯಿಗಳನ್ನು ಹೇಗೋ ಹಾಗೆ ಎಸೆಯಲ್ಪಟ್ಟ ಬಿಳಿಯ ಮೂಳೆಗಳನ್ನು ನೋಡಿದವನಿಗೆ ಇವುಗಳ ಮೇಲೆ ಯಾವ ಪ್ರೀತಿಯೂ ಬರುವುದಿಲ್ಲ. ಈ ಶರೀರವು ಅಸ್ಥಿಗಳ ಕೋಟೆಯಿಂದ ರಚಿತವಾಗಿದೆ. ಇದರೊಳಗೆ ರಕ್ತಮಾಂಸಗಳು ತುಂಬಿರುತ್ತವೆ. ಎಷ್ಟೇ ಚಿತ್ರಾಲಂಕೃತವಾದ ರಾಜರಥಗಳೂ ಕೂಡ ಹಳೆಯದಾಗುತ್ತವೆ. ಇನ್ನು ಈ ಶರೀರದ ಬಗ್ಗೆ ಹೇಳುವುದೇನಿದೆ? ಅಜ್ಞಾನಿಯಾದ ಪುರುಷನು ಎತ್ತಿನಂತೆ ವೃದ್ಧಿಸುವುದಿಲ್ಲ.

**ಯಥಾ ದಂಡೇನ ಗೋಪಾಲೊ ಗಾವೋ ಪಾಜೇತಿ ಗೋಚರಜ್**

**ಏವಜ್ ಜರಾ ಚ ಮಚ್ಚೂ ಚ ಆಯುಜ್ ಪಾಜೆಂತಿ ಪಾಣಿನಜ್**[16]

**ಯಾನಿಮಾನಿ ಅಪತ್ಥಾನಿ ಅಲಾಪೂನೇವ ಸಾರದೆ**

**ಕಾಪೋತಕಾನಿ ಅಟ್ಠೀನಿ ತಾಗಿ ದಿಸ್ವಾನ ಕಾ ರತಿ**

**ಅತ್ಥಿನಜ್ ನಗರಜ್ ಕತಜ್ ಮಜ್ಸ್ – ಲೋಹಿತ – ಲೇಪನಜ್**

**ಯತ್ಥ ಜರಾ ಚ ಮಚ್ಚೂ ಚ ಮಾನೋ ಮಕ್ಖೋ ಚ ಓಹಿತೋ**

**ಜೀರಂತಿ ವೇ ರಾಜರಥಾ ಸುಚಿತ್ತಾ**

**ಅಥೋ ಸರೀರಂ ಪಿ ಜರಜ್ ಉಪೇತಿ**

**ಸತಜ್ ಚ ಧಮ್ಮೋ ನ ಜರಜ್ ಉಪೇತಿ**

**ಸಂತೋ ಹವೇ ಸಬ್ಭಿ ಪವೇದಯಂತಿ**

**ಅಪ್ಪಸುತ್ತಾಯಂ ಪುರಿಸೋ ಬಲಿವದ್ದೋ ವ ಜೀವತಿ**

**ಮಜ್‌ಸಾನಿ ತಸ್ಸ ವಡ್ಢಂತಿ ಪಞ್ಞಾ ತಸ್ಸ ನ ವಡ್ಢತಿ[17]**

ಇದಕ್ಕೆ ಹಸಿವೆಂಬ ರೋಗವು ಬೇರೆ ಅಂಟಿಕೊಂಡಿರುತ್ತದೆ . ಒಟ್ಟಾರೆ ಈ ಶರೀರಕ್ಕೆ ಸಾವು ಕಟ್ಟಿಟ್ಟ ಬುತ್ತಿ. ಅದು ಯಾವ ಕಾಲದಲ್ಲಾದರೂ ಜೀವನರಹಿತವಾಗಿ ಯಾವ ಕೆಲಸಕ್ಕೂ ಬಾರದ ಕೊರಡಿನಂತೆ ತುಚ್ಛನಾಗಿ ನೆಲದ ಮೇಲೆ ಬಿದ್ದುಕೊಳ್ಳುತ್ತದೆ.

**ಜಿಘಚ್ಛಾಪರಮಾ ರೋಗಾ ಸಂಖಾರಪರಮಾ ದುಕ್ಖಾ**

**ಏತಜ್ ನತ್ವಾ ಯಥಾ ಭೂತಜ್ ನಿಬ್ಬಾಣಜ್ ಪರಮಜ್ ಸುಖಜ್[18]**

**ಅಚಿರಜ್ ವತಯಜ್ ಕಾಯೋ ಪಠವಿಜ್ ಅಧಿಸೆಸ್ಸತಿ,**

**ಛದ್ದೋ ಅಪೇತವಿಞ್ಞಾಣೋ ನಿರತ್ಥಜ್ ವಾ ಕಳಿಂಗರಜ್[19]**

## ಪ್ರಜ್ಞೆ ಮತ್ತು ವಿವೇಕ

ಮೂರ್ಖರು ಕಹಿಫಲಕ್ಕೆ ಒಯ್ಯುವಂತಹ ಪಾಪಕರ್ಮವನ್ನು ಮಾಡುತ್ತಾ ತಮಗೆ ತಾವೇ ಶತ್ರುಗಳಾಗುತ್ತಾರೆ. ಅವರ ಪಾಪವು ಪಕ್ವವಾಗದಿರುವವರೆಗೆ ಅದನ್ನು ಜೇನುತುಪ್ಪವೆಂದೇ ಅವರು ಭಾವಿಸುತ್ತಾರೆ. ಆದರೆ ಪಾಪವು ಪಕ್ವವಾದಾಗ ದುಃಖವನ್ನು ಅನುಭವಿಸುತ್ತಾರೆ. ಹೊಸ ಹಾಲು ತಕ್ಷಣವೇ ಒಡೆಯಲಾರದು. ಅದೇ ರೀತಿ ಪಾಪ ಕರ್ಮವೂ ಕೂಡ ತಕ್ಷಣವೇ ಪಕ್ವವಾಗುವುದಿಲ್ಲ. ಅದು ಬೂದಿ ಮುಚ್ಚಿದ ಕೆಂಡದ ಹಾಗೆ ಅವಿವೇಕಿಯನ್ನು ಸುಡಲು ಹಿಂಬಾಲಿಸುವುದು. ಅವನ ಜ್ಞಾನವೆಲ್ಲವೂ ಅನರ್ಥಕ್ಕಾಗಿಯೇ ಇರುವುದು. ಅದು ಅವನ ಶುಕ್ಲ ಅಂಶವನ್ನು ಎಂದರೆ ಪುಣ್ಯ ಭಾಗವನ್ನು ಮತ್ತು ತಲೆಯನ್ನು ಅಥವಾ ಪ್ರಜ್ಞೆಯನ್ನು ನಾಶ ಮಾಡುವುದು.

**ಚರಂತಿ ಬಾಲಾ ದುಮ್ಮೇಧಾ ಅಮಿತ್ತೇನೇವ ಅತ್ತನಾ**

**ಕರೊಂತಾ ಪಾಪಕಜ್ ಕಮ್ಮಜ್ ಯಜ್ ಹೋತಿ ಕಟುಕಪ್ಫಲಜ್[20]**

**ನ ಹಿ ಪಾಪಙ್ ಕತಙ್ ಕಮ್ಮಙ್ ಸಜ್ಜು ಖೀರಙ್ ವ ಮುಚ್ಚತಿ**

**ದಹಙ್ ತಙ್ ಬಾಲಂ ಅನ್ವೇತಿ ಭಸ್ಮಚ್ಛನ್ನೋ ವ ಪಾವಕೋ**

**ಯಾವದ್ ಏವ ಅನತ್ಥಾಯ ಞತ್ತಙ್ ಬಾಲಸ್ಸ ಜಾಯತಿ**

**ಹಂತಿ ಬಾಲಸ್ಸ ಸುಕ್ಕಙ್ಸಙ್ ಮುದ್ಧಂ ಅಸ್ಸ ವಿಪಾತಯಙ್**[21]

ತಿಳಿಗೇಡಿಯು ತನಗೆ ಯೋಗ್ಯತೆ ಇಲ್ಲದಿದ್ದರೂ ಜನರಲ್ಲಿ ಮನ್ನಣೆಯನ್ನು ಬಯಸುತ್ತಾನೆ. ಭಿಕ್ಷುಗಳಲ್ಲಿ ಪುರಸ್ಕಾರಗಳನ್ನು, ಮಠಗಳಲ್ಲಿ ಒಡೆತನವನ್ನು ಮತ್ತು ಮತ್ತೊಬ್ಬರ ಮನೆಯಲ್ಲಿ ಪೂಜೆಯನ್ನು ನಿರೀಕ್ಷಿಸುತ್ತಾನೆ. ಶ್ರಮಣನು ಶ್ರಾವಕರನ್ನು ತಾನು ಮಾಡಿದ್ದನ್ನೇ ಒಪ್ಪಲಿ ಎಂದು ಬಯಸುತ್ತಾನೆ. ಮಾಡಬೇಕಾದ ಮತ್ತು ಮಾಡಬಾರದ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಅಭಿಮತವನ್ನೇ ಅನುಸರಿಸಲಿ ಎಂದು ಇಚ್ಛಿಸುತ್ತಾನೆ. ಇದು ಅವನ ಸಂಕಲ್ಪ, ಇಚ್ಛೆ ಮತ್ತು ಅಹಂಕಾರ.

**ಅಸತಙ್ ಭಾವನಙ್ ಇಚ್ಛೆಯ್ಯ ಪುರೇಕ್ಖಾರಞ್ ಚ ಭಿಕ್ಖೂಸು**

**ಆವಾಸೇಸು ಚ ಇಸ್ಸರಿಯಙ್ ಪೂಜಾ ಪರಕುಲೇಸು ಚ**

**ಮಾಮೇವ ಕತಂ ಮಣ್ಣಂತು ಗಿಹೀ ಪಬ್ಬಜಿತಾ ಉಭೋ**

**ಮಾಮೇವ ಅತಿವಸಾ ಅಸ್ಸು ಕಿಚ್ಚಾಕಿಚ್ಚೇಸು ಕಿಸ್ಮಿಚಿ**

**ಇತಿ ಬಾಲಸ್ಸ ಸಂಕಪ್ಪೋ ಇಚ್ಛಾ ಮಾನೋ ಚ ವಡ್ಢತಿ**[22]

## ಪುಣ್ಯಗ್ರಂಥಗಳ ಅಧ್ಯಯನ ಮತ್ತು ಆಚರಣೆ

ಒಬ್ಬನು ಸದ್ಗ್ರಂಥಗಳನ್ನು ಅಧ್ಯಯನ ಮಾಡಿರಬಹುದು. ಬಹುಸಂಹಿತೆಗಳನ್ನು, ಬುದ್ಧವಚನಗಳನ್ನು ಉಲ್ಲೇಖಿಸಬಹುದಾದರೂ ಅವನು ಅದರಂತೆ ಆಚರಿಸದಿದ್ದರೆ ಅವನು ಶ್ರಮಣನ ಅರ್ಹತೆಯನ್ನು ಪಡೆಯಲಾರ.

**ಬಹುಂ ಪಿ ಚೆ ಸಾಹಿತಿಂ ಭಾಸಮಾನೋ**

**ನ ತಕ್ಕರೋ ಹೋತಿ ನರೋ ಪಮತ್ತೋ**

**ಗೋಪೋ ವಾ ಗಾವೋ ಗಣಯಂ ಪರೇಸಜ್**

**ನ ಭಾಗವಾ ಸಾಮಞ್ಞಸ್ಸ ಹೋತಿ**[23]

ಯಾರು ಸ್ವಲ್ಪವೇ ಸಂಹಿತೆಯನ್ನು ಕಲಿತಿದ್ದರೂ ಅದರಂತೆ ಆಚರಿಸುವರೋ, ಯಾರಿಗೆ ರಾಗ,ದ್ವೇಷ, ಮೋಹಗಳಿಲ್ಲವೋ ಮತ್ತು ಲೌಕಿಕ ಮತ್ತು ಅಲೌಕಿಕ ಸುಖದ ಆಸಕ್ತಿಯಿಲ್ಲವೋ ಅವನು ಶ್ರಮಣನ ಅರ್ಹತೆಯನ್ನು ಪಡೆಯುತ್ತಾನೆ.

**ಅಪ್ಪಂ ಪಿ ಚೆ ಸಾಹಿತಜ್ ಭಾಸಮಾನೋ**

**ಧಮ್ಮಸ್ಸ ಹೋತಿ ಅನುಧಮ್ಮಚಾರೀ**

**ರಾಗಂ ಚ ದೋಸಂ ಚ ಪಹಾಯ ಮೋಹಜ್**

**ಸಮ್ಮಪ್ಪಜಾನೋ ಸುವಿಮುತ್ತ – ಚಿತ್ತೋ**

**ಅನುಪಾದಿಯಾನೋ ಇಧ ವಾ ಹುರಜ್ ವಾ**

**ಸಾ ಭಾಗವಾ ಸಾಮಞ್ಞಸ್ಸ ಹೋತಿ**[24]

ಎಂದರೆ ಬುದ್ಧನ ಪ್ರಕಾರ ಒಬ್ಬನು ಎಷ್ಟು ಬೌದ್ಧ ವಚನಗಳನ್ನು ಕಲಿತಿರುವನೆಂಬುದು ಮುಖ್ಯವಲ್ಲ ಆಚರಣೆಯು ಮುಖ್ಯ. ಕಲಿತಿರುವುದೂ ಕಡಿಮೆಯಾಗಿದ್ದರೂ ಅದರಂತೆ ಆಚರಿಸಿದರೆ ಆತನು ಈಗ ನಿಜವಾದ ಶ್ರಮಣ.[25]

## ಅಡಿ ಟಿಪ್ಪಣಿಗಳು

1. ಗಾಥೆ 85
2. ಗಾಥೆ 146
3. ಗಾಥೆಗಳು 188–189
4. ಗಾಥೆಗಳು 190–192
5. ಗಾಥೆಗಳು 241–243
6. ಗಾಥೆಗಳು 288–289
7. ಗಾಥೆ 49
8. ಗಾಥೆ 62
9. ಗಾಥೆ 200
10. ಗಾಥೆ 170
11. ಗಾಥೆಗಳು 235–236
12. ಗಾಥೆ 239
13. ಗಾಥೆಗಳು 277–279
14. ಗಾಥೆ 6
15. ಗಾಥೆ 46
16. ಗಾಥೆ 135
17. ಗಾಥೆಗಳು 149–152
18. ಗಾಥೆ 203
19. ಗಾಥೆ 41
20. ಗಾಥೆ 66
21. ಗಾಥೆಗಳು 71–72
22. ಗಾಥೆಗಳು 73–74
23. ಗಾಥೆ 19
24. ಗಾಥೆ 20
25. ಈ ಕುರಿತು ಡಾ.ಬಿ.ಆರ್.ಅಂಬೇಡ್ಕರ್‌ರವರು ಬುದ್ಧನ ಒಂದು ಕಥೆಯನ್ನು ಉಲ್ಲೇಕಿಸುತ್ತಾರೆ. ನೋಡಿ: Dr.B.R.Ambedkar, ***The Buddha and His Dhamma***, Buddha Bhoomi Publication, Nagpur, 1997, ಪು.272–275

**********

# ಅಧ್ಯಾಯ–11
# ಅರಿಹಂತನ ಲಕ್ಷಣಗಳು

# ಅಧ್ಯಾಯ –11

# ಅರಿಹಂತನ ಲಕ್ಷಣಗಳು

## ಸತ್ಪುರುಷ

ಬುದ್ಧನು ವಿವೇಕಿ ಮತ್ತು ಸತ್ಪುರುಷನ ಲಕ್ಷಣಗಳನ್ನು ಹೀಗೆ ವಿವರಿಸುತ್ತಾನೆ. ಸತ್ಪುರುಷನ ಖ್ಯಾತಿ ಎಂಬ ಪರಿಮಳವು ಎಷ್ಟರಮಟ್ಟಿಗೆ ಹಬ್ಬುವುದೆಂದರೆ ಅದು ಹೂಗಳ ವಾಸನೆಯನ್ನು ಮೀರಿಸುತ್ತದೆ. ಹೂಗಳ ವಾಸನೆಯು ಗಾಳಿಗೆ ಎದುರಾಗಿ ಹಬ್ಬಲಾರದು. ಚಂದನ, ತಗರ, ಮಲ್ಲಿಗೆಗಳ ವಾಸನೆಗಳು ಗಾಳಿಯ ತೀವ್ರತೆಯನ್ನು ಎದುರಿಸಲಾರವು. ಆದರೆ ಸತ್ಪುರುಷನ ಸಾತ್ವಿಕತೆಯ ಪರಿಮಳವು ಎಲ್ಲೆಲ್ಲೂ ಪಸರಿಸಬಲ್ಲದ್ದಾಗಿದ್ದು ವಾಯುವು ಅದರ ಪರಿಮಳದ ತೀವ್ರತೆಯ ಮುಂದೆ ದುರ್ಬಲವಾಗಿ ಹೋಗುತ್ತದೆ.

**ನ ಪುಪ್ಫಗಂಧೋ ಪಟವಾತಜ್ ಏತಿ**

**ನ ಚಂದನಜ್ ತಗರಮಲ್ಲಿಕಾ ವಾ**

**ಸತಂ ಚ ಗಂಧೋ ಪಟವಾತಂ ಏತಿ**

**ಸಬ್ಬಾ ದಿಸಾ ಸಪ್ಪುರಿಸೋ ಪವಾತಿ**[1]

ಬುದ್ಧನ ಪ್ರಕಾರ ಯಾರು ತನಗೇನೂ ತಿಳಿಯದೆಂದು ತಿಳಿದಿರುವನೋ ಅವನು ಅಷ್ಟರಮಟ್ಟಿಗೆ ಪಂಡಿತನೇ ಸರಿ. ಆದರೆ ಯಾರು ತಾನೇ ಪಂಡಿತನೆಂದು ಭಾವಿಸುವನೋ ಅವನೇ ತಿಳಿಗೇಡಿ ಮತ್ತು ಅವಿವೇಕಿ.

**ಯೋ ಬಾಲೋ ಮಣ್ಣತೀ ಬಾಲ್ಯಜ್ ಪಂಡಿತೋ ವಾ ಪಿ ತೇನ ಸೋ**

**ಬಾಲೋ ಚ ಪಂಡಿತಮಾನಿ ಸ ವೇ ಬಾಲೋ ತಿ ವುಚ್ಚತಿ**[2]

ಕೇನೋಪನಿಷತ್ತು ಕೂಡ ಇದೇ ರೀತಿ ಸಾರುತ್ತದೆ. ಅದರ ಪ್ರಕಾರ ಯಾರು ತನಗೆ ಸತ್ಯವು ತಿಳಿದಿದೆ ಎಂದು ಭಾವಿಸುತ್ತಾನೋ ಅವನಿಗೆ ಅದು ತಿಳಿದಿಲ್ಲ ಮತ್ತು ಯಾರು ತನಗೆ

ಏನೂ ತಿಳಿಯದೆಂದು ಹೇಳುತ್ತಾನೋ ಅವನಿಗೆ ಸತ್ಯವು ತಿಳಿದಿದೆ. ಜ್ಞಾನ ಪ್ರಕ್ರಿಯೆಯು ಪ್ರಾರಂಭವಾಗುವುದು ಮನುಷ್ಯನ ಅಜ್ಞಾನದ ಅರಿವಿನಿಂದ ಎಂಬುದನ್ನು ಸೂಚಿಸಲು ಸಾಕ್ರಟೀಸನು ಒಂದು ಹೇಳಿಕೆಯನ್ನು ನೀಡುತ್ತಾನೆ, "ನನಗೆ ತಿಳಿದಿರುವ ಏಕೈಕ ವಿಷಯವೆಂದರೆ ತನಗೆ ಏನೂ ತಿಳಿಯದೆಂಬುದು". "The only thing I know is that I know nothing".[3] ತಿಳಿಗೇಡಿಯಾದರೋ ತನಗೆಲ್ಲವೂ ತಿಳಿದಿದೆ ಎಂದು ಭಾವಿಸುತ್ತಾನೆ. ಅವನು ಪಂಡಿತರ ಸಹವಾಸದಲ್ಲಿದ್ದರೂ ಕೂಡ ಅವರ ಮಹತ್ವವು ಅವನಿಗೆ ಸ್ವಲ್ಪವೂ ತಿಳಿಯುವುದಿಲ್ಲ. ಸೌಟು ತವ್ವೆಯಲ್ಲಿ ಮುಳುಗಿದ್ದರೂ ಅದಕ್ಕೆ ತವ್ವೆಯ ರುಚಿ ತಿಳಿಯದಂತೆ ಅವರು ಪಂಡಿತರ ಸಂಸರ್ಗದಲ್ಲಿದ್ದರೂ ಅವರ ಪ್ರಭಾವವು ಅವನಿಗೆ ಸ್ವಲ್ಪವೂ ಬರುವುದಿಲ್ಲ. ಇದಕ್ಕೆ ವಿರುದ್ಧವಾಗಿ ಜಾಣನು ಪಂಡಿತನ ಸೇವೆಯಲ್ಲಿ ಒಂದೇ ಮುಹೂರ್ತದವರೆಗಿದರೂ ಸಾಕು. ಅವನು ತಕ್ಷಣವೇ ಅವರ ಪ್ರಭಾವವನ್ನು ಅರಿತುಕೊಳ್ಳುವರು.

**ಯಾವಜೀವಂಪಿ ಚೆ ಬಾಲೋ ಪಂಡಿತಜ್ ಪಯಿರುಪಾಸತಿ**

**ನ ಸೋ ಧಮ್ಮಜ್ ವಿಜಾನಾತಿ ದಬ್ಬೀ ಸೂಪರಸಜ್ ಯಥಾ**

**ಮುಹತ್ತಂ ಅಪಿ ಚೆ ವಿಞ್ಞೂ ಪಂಡಿತಜ್ ಪಯಿರುಪಾಸತಿ**

**ಖಿಪ್ಪಜ್ ಧಮ್ಮಜ್ ವಿಜಾನಾತಿ ಜಿಹ್ವ ಸೂಪರಸಜ್ ಯಥಾ**[4]

ಒಳ್ಳೆಯವನ ಲಕ್ಷಣ ಮತ್ತೊಬ್ಬರನ್ನು ಗದರಿಸಿ ಅವರ ಕೆಟ್ಟ ನಡತೆಯನ್ನು ಬಿಡಿಸುವುದು. ಅಂತಹವನು ಒಳ್ಳೆಯವರಿಗೆ ಪ್ರಿಯನೂ ಮತ್ತು ಕೆಟ್ಟವರಿಗೆ ಅಪ್ರಿಯನೂ ಆಗುತ್ತಾನೆ.

**ಓವದೆಯ್ಯನುಸಾಸೆಯ್ಯ ಅಸಬ್ಭಾ ಚ ನಿವಾರಯೆ,**

**ಸತಜ್ ಹಿ ಸೋ ಪಿಯೋ ಹೋತಿ ಅಸತಜ್ ಹೋತಿ ಅಪ್ಪಿಯೋ**[5]

ಪಂಡಿತನಾದ ಅವನು ಧರ್ಮಿಷ್ಠನಾಗಿರುವುದರಿಂದ ಅವನ ಚಿತ್ತವು ಪ್ರಸನ್ನತೆಯಿಂದ ಕೂಡಿರುವುದು. ಅವನಿಗೆ ಸುಖ ನಿದ್ರೆ ಇರುತ್ತದೆ. ಕಾರಣ ಅವನು ಆರ್ಯರು ತೋರಿಸಿಕೊಟ್ಟ ಹಾದಿಯಲ್ಲೇ ಯಾವಾಗಲೂ ಇರುವನು. ಪಂಡಿತನು ಸತತವಾಗಿ ಆತ್ಮಶೋಧನೆಯಲ್ಲಿ ಇರುತ್ತಾನೆ. ತನ್ನನ್ನು ತಾನು ತಿಳಿದುಕೊಳ್ಳುವ ಸತತ ಪ್ರಯತ್ನದಲ್ಲಿ ತೊಡಗಿರುತ್ತಾನೆ. ನೀರು ಹಾಯಿಸುವವರು ನೀರನ್ನು ತಮಗಿಷ್ಟ ಬಂದೆಡೆಗೆ ಹಾಯಿಸುವಂತೆ, ಬಾಣಗಳನ್ನು ತಯಾರಿಸುವವರು ಬಿದಿರನ್ನು ತಮಗೆ ಅನುಕೂಲವಾದಂತೆ ಬಗ್ಗಿಸಿಕೊಳ್ಳುವಂತೆ ಮತ್ತು ಬಡಗಿಗಳು ಮರವನ್ನು ತಮಗೆ ಬೇಕಾದ ರೀತಿಯಲ್ಲಿ ರೂಪಿಸಿಕೊಳ್ಳುವಂತೆ ಪಂಡಿತರು ತಮ್ಮನ್ನು ತಾವು ತಿಳಿದುಕೊಳ್ಳುತ್ತಾ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ. ಪರರನ್ನು ದೂಷಿಸುವ ಬದಲು ತಮ್ಮ ತಪ್ಪಿನೆಡೆಗೆ ಗಮನಹರಿಸುತ್ತಾ ಆ ತಪ್ಪನ್ನು ತಿದ್ದಿಕೊಳ್ಳುವುದು ಪಂಡಿತರ ಲಕ್ಷಣ. ಆತ್ಮವಿಶ್ಲೇಷಣೆ ಎಂಬುದು ಅವರು ಜೀವನದಲ್ಲಿ ನೀಡುವ ಆದ್ಯತೆ. ಪಂಡಿತನು ಸ್ಥಿತಪ್ರಜ್ಞನಂತೆ. ದೊಡ್ಡ ಬಂಡೆಯು ಗಾಳಿಗೆ ಅಲುಗಾಡದೇ ಇರುವಂತೆ ಅವನು ನಿಂದನೆ ಹೊಗಳಿಕೆಗಳಿಗೆ ವಿಚಲಿತನಾಗದೇ ಇರುತ್ತಾನೆ. ಸ್ಥಿತಪ್ರಜ್ಞನ ಲಕ್ಷಣವು ಭಗವದ್ಗೀತೆಯ ಎರಡನೇ ಅಧ್ಯಾಯದಲ್ಲೂ ಬರುತ್ತದೆ. ಬಗ್ಗಡವಿಲ್ಲದ ಮಡುವಿನಂತೆ ಅವನು ಸ್ವಚ್ಛವಾಗಿರುತ್ತಾನೆ.

**ಉದಕಙ್ ಹಿ ನಯಂತಿ ನೇತ್ತಿಕಾ ಉಸುಕಾರಾ ನಮಯಂತಿ ತೇಜನಙ್**

**ದಾರುಙ್ ನಮಯಂತಿ ತಚ್ಚಕಾ ಅತ್ತಾನಙ್ ದಮಯಂತಿ ಪಂಡಿತಾ**

**ಸೇಲೋ ಯಥಾ ಏಕಘನೋ ವಾತೇನ ನ ಸಮೀರತಿ**

**ಏವಙ್ ನಿಂದಾ – ಪಸಙ್ಸಾಸು ನ ಸಮಿಂಜಂತಿ ಪಂಡಿತಾ**

**ಯಥಾ ಪಿ ರಹದೋ ಗಂಭೀರೋ ವಿಪ್ಪಸನ್ನೋ ಅನಾವಿಲೋ**

**ಏವಙ್ ಧಮ್ಮಾನಿ ಸುತ್ವಾನಿ ವಿಪ್ಪಸೀದಂತಿ ಪಂಡಿತಾ**[6]

ಅವನು ಮನಬಂದಂತೆ ನಡೆಯುವುದಿಲ್ಲ. ಅವನಾಡುವ ಮಾತಿನ ಹಿನ್ನೆಲೆಯಲ್ಲಿ ಸುಖದ ಆಸೆಯಿಲ್ಲ. ಸುಖ ದುಃಖಗಳು ಏನೇ ಬಂದೊದಗಿದರೂ ಅವನು ಹಿಗ್ಗುವುದೂ ಇಲ್ಲ, ಕುಗ್ಗುವುದೂ ಇಲ್ಲ.[7] ಅವನು ತನಗೋಸ್ಕರ ಏನನ್ನೂ ಬಯಸುವುದಿಲ್ಲ. ಅಂತಹ ಯೋಗ್ಯನಾದ ಪುರುಷನು ದುರ್ಲಭ ಎಂಬುದನ್ನು ಬುದ್ಧನು ಸಾರುತ್ತಾನೆ. ಆತನು ಸರ್ವೇ ಸಾಧಾರಣನೂ ಅಲ್ಲ, ಆತನು ಹುಟ್ಟುವ ಕುಲವು ಸುಖವನ್ನು ಪಡೆಯುತ್ತದೆಂದು ಬುದ್ಧನು ಹೇಳುತ್ತಾನೆ. ಬುದ್ಧನು ಈತನನ್ನು ಸತ್ಪುರುಷ, ಉತ್ತಮ, ಜಾಣ, ಪಂಡಿತ, ಪ್ರಜ್ಞಾವಂತ, ಶೀಲವಂತ, ಧರ್ಮಸ್ಥ ಎಂದು ನಾನಾ ವಿಧವಾಗಿ ಕರೆಯುತ್ತಾನೆ. ಅವನ ಮತ್ತೊಂದು ವಿಶೇಷ ಲಕ್ಷಣವೆಂದರೆ ಯಾವುದೇ ವಿಷಯವನ್ನು ಅದು ಹೀಗೆಯೇ ಎಂದು ತಕ್ಷಣವೇ ತೀರ್ಮಾನಿಸಿ ಬಿಡುವುದಿಲ್ಲ. ಈ ತೀರ್ಮಾನದ ಹಿನ್ನೆಲೆಯಲ್ಲಿ ಅಪಕ್ವತೆ ಇರಬಹುದು, ಬಾಹ್ಯ ಏರಿಕೆ ಇರಬಹುದು. ಇವೆರಡು ಧರ್ಮಸ್ಥನ ಲಕ್ಷಣಗಳಲ್ಲ. ಯಾವುದೇ ವಿಷಯವನ್ನು ಕುರಿತು ತೀರ್ಮಾನವನ್ನು ಅವನು ತಡೆಹಿಡಿಯುತ್ತಾನೆ. ಪಾಶ್ಚಾತ್ಯ ಸಂವೃತಿಶಾಸ್ತ್ರಜ್ಞನಾದ (Phenomenologist) ಎಡ್ಮಂಡ್ ಹಸ್ರೆಲ್ ಪರಿಭಾಷೆಯನ್ನು ಬಳಸಬೇಕೆಂದರೆ Ephoche ಪಂಡಿತನ ಲಕ್ಷಣವಾಗಿರುತ್ತದೆ.[8] ಅವನು ಅರ್ಥಾನರ್ಥಗಳೆರಡನ್ನೂ ನಿಶ್ಚಯಿಸಿ ಯಾರ ಒತ್ತಡಕ್ಕೂ ಒಳಗಾಗದೇ ತೀರ್ಮಾನಕ್ಕೆ ಬರುತ್ತಾನೆ. ಅಷ್ಟೇ ಅಲ್ಲ ಅವನಿಗೆ ಸಾಮಾಜಿಕ ಕಳಕಳಿಯಿರುತ್ತದೆ. ಏಕೆಂದರೆ ಆತನು ಬಾಹ್ಯ ಒತ್ತಡವಿಲ್ಲದೇ ಇತರರನ್ನು ಉಪಾಯವಾಗಿ ತಿದ್ದುತ್ತಾನೆ. ಈ ಸಂದರ್ಭದಲ್ಲಿ ಪಂಡಿತನನ್ನು ಕುರಿತ ಅಂಬೇಡ್ಕರ್‌ರವರ ನಿಲುವು ನಮಗೆ ಮುಖ್ಯವಾಗುತ್ತದೆ. ಅವರ ಪ್ರಕಾರ ಸರ್ವಾಧಿಕಾರರಹಿತ ಸಮತಾವಾದವನ್ನು ಸ್ಥಾಪಿಸಿದ ಬುದ್ಧನು ಬದಲಾವಣೆಯನ್ನು ಎತ್ತಿ ಹಿಡಿದನಾದರೂ ಆ ಬದಲಾವಣೆಯು ಹೊರಗಿನಿಂದ ಮತ್ತು ಒತ್ತಾಯದಿಂದ ಹೇರಲ್ಪಟ್ಟುದ್ದಾಗಿರಲಿಲ್ಲ. ಈ ವಿಷಯದಲ್ಲೇ ಅಂಬೇಡ್ಕರ್‌ರವರ ಪ್ರಕಾರ ಮಾರ್ಕ್ಸ್‌ವಾದ ಸೋತಿದ್ದು. ಏನೇ ಮಾಡಿದರೂ ಮನುಷ್ಯನು ಅದನ್ನು ಸ್ವಇಚ್ಛೆಯಿಂದ

ಮಾಡುವಂತಿರಬೇಕೇ ಹೊರತು ಹೊರಗಿನ ಅಧಿಕಾರದಿಂದಾಗಲೀ, ಹೇರಿಕೆಯಿಂದಾಗಲೀ ಮಾಡಬಾರದೆಂಬುದು ಬುದ್ಧನ ನಿಲುವಾಗಿತ್ತು. ಒಳ್ಳೆಯದಾಗಿದ್ದರೂ ಜನರು ಅದನ್ನು ಮನಸ್ಸಿಲ್ಲದೇ ಮಾಡಲು ಒತ್ತಾಯಪಡಿಸುವುದು ಬುದ್ಧನ ನೀತಿಯಾಗಿರಲಿಲ್ಲ. ಆತನ ವಿಧಾನ ಜನರ ಸ್ವಭಾವವನ್ನು ಬದಲಾಯಿಸುವುದಾಗಿತ್ತೇ ಹೊರತು ಅವರನ್ನು ಒತ್ತಡಕ್ಕೆ ಸಿಲುಕಿಸುವುದಾಗಿರಲಿಲ್ಲ. ಆತನ ಪ್ರಕಾರ ಸ್ವಇಚ್ಛೆಯಿಂದ ಮೌಲ್ಯಗಳ ಪಾಲನೆ ಧಮ್ಮವಾದರೆ ಹೇರಿಕೆಯಿಂದಾಗಿ ಮೌಲ್ಯಗಳನ್ನು ಪಾಲಿಸುವುದು ಅಧಮ್ಮ.[9]

ಬುದ್ಧನ ಪ್ರಕಾರ ಮನುಷ್ಯನು ಪಂಡಿತ ಅಥವಾ ಸತ್ಪುರುಷನ ಸಹವಾಸವನ್ನು ಮಾಡಬೇಕು. ಸತ್ಪುರುಷನ ಲಕ್ಷಣಗಳನ್ನು ಈಗಾಗಲೇ ವಿವರಿಸಲಾಗಿದೆ. ನಿಧಿಗಳನ್ನು ತಿಳಿದು ಹೇಳುವವನಂತೆ ಮಾಡಬಾರದ್ದನ್ನು ಕಂಡು ಕಟ್ಟಪ್ಪಣೆ ಮಾಡುವ ಜಾಣ ಅಥವಾ ಪಂಡಿತನನ್ನು ಮಾತ್ರ ಸೇವಿಸಬೇಕು. ನಿಧಿಗಳು ಸಾಮಾನ್ಯರಿಗೆ ತಿಳಿಯದಿರುವಂತೆ ಯಾವುದನ್ನು ಮಾಡಬಾರದೆಂಬುದನ್ನು ಸಾಮಾನ್ಯರಿಗೆ ತಿಳಿದಿರುವುದಿಲ್ಲ. ಅಂತಹ ಜ್ಞಾನವು ಇರುವುದು ಮೇಧಾವಿಗೆ ಮಾತ್ರ. ಅಂತಹವನನ್ನು ಸೇವಿಸಬೇಕೇ ಹೊರತು ಕೆಟ್ಟವರನ್ನಲ್ಲ.

**ನಿಧೀನಙ್ ವ ಪವತ್ತಾರಙ್ ಯಙ್ ಪಸ್ಸೇ ವಜ್ಜದಸ್ಸನಙ್**

**ನಿಗ್ಗಯ್ಹವಾದಿಙ್ ಮೇಧಾವಿಙ್ ತಾದಿಸಙ್ ಪಂಡಿತಙ್ ಭಜೇ**

**ತಾದಿಸಙ್ ಭಜಮಾನಸ್ಸ ಸೆಯ್ಯೋ ಹೋತಿ ನ ಪಾಪಿಯೋ**[10]

ಕೆಟ್ಟ ಮಿತ್ರರನ್ನು ಪುರುಷಾಧಮರನ್ನು ಸೇರಬಾರದು. ಕಲ್ಯಾಣಮಿತ್ರರನ್ನು, ಪುರುಷೋತ್ತಮರನ್ನು ಮಾತ್ರ ಸೇರಬೇಕು. ಕಲ್ಯಾಣಮಿತ್ರರೆಂದರೆ ಮನುಷ್ಯನಿಗೆ ಸದ್ಭಾವನೆಗಳನ್ನು, ಧನಾತ್ಮಕ ಚಿಂತನೆಗಳನ್ನು ತಿಳಿಸಿಕೊಡುವವರೆಂದರ್ಥ.

**ನ ಭಜೇ ಪಾಪಕೇ ಮಿತ್ತೇ ನ ಭಜೇ ಪುರಿಸಾಧಮೇ**

**ಭಜೇಥಾ ಮಿತ್ತೆ ಕಲ್ಯಾಣೇ ಭಜೇಥಾ ಪುರಿಸುತ್ತಮೇ**[11]

## ಭಿಕ್ಷು ಮತ್ತು ಅರಿಹಂತನ ಲಕ್ಷಣ

ನಿರ್ವಾಣ ಹಂತವನ್ನು ತಲುಪಲು ಒಬ್ಬನು ಶ್ರಮಣ ಅಥವಾ ಭಿಕ್ಷುವಾಗಬೇಕು. ಭಿಕ್ಷು ಕಾಷಾಯ ವಸ್ತ್ರವನ್ನು ಧರಿಸಿರುತ್ತಾನೆ. ಆದರೆ ಈ ಕಾಷಾಯ ವಸ್ತ್ರಧಾರಣೆಗೂ ಅರ್ಹತೆಯಿರಬೇಕು. ಆದರೆ ರಾಗ ದ್ವೇಷಾದಿ ಮಲಗಳನ್ನು ಹೊರಹಾಕದೇ ಧಮ್ಮ ಮತ್ತು ಸತ್ಯಗಳನ್ನು ಪಾಲಿಸದೇ ಒಬ್ಬನು ಕಾಷಾಯವಸ್ತ್ರವನ್ನು ಧರಿಸಲು ಯೋಗ್ಯನಲ್ಲ.

**ಅನಿಕ್ಕಿಸಾವೋ ಕಾಸಾವಜ್ ಯೋ ವತ್ಥಜ್ ಪರಿದಹಿಸ್ಸತಿ**

**ಅಪೇತೋ ದಮಸಚ್ಚೇನ ನ ಸೋ ಕಾಸಾವಂ ಅರಹತಿ**[12]

ಶೀಲಗಳಲ್ಲಿ ಮನಸ್ಸಿಟ್ಟು ಸತ್ಯಧರ್ಮಗಳಿಂದ ಕೂಡಿರುವವನು ಮಾತ್ರ ಈ ಕಾಷಾಯ ವಸ್ತ್ರವನ್ನು ಧರಿಸಲು ಎಂದರೆ ಭಿಕ್ಷುವಾಗಲು ಅರ್ಹನು. ಶೀಲಗಳು ಮುಖ್ಯವಾಗಿ ಐದು. ಅವು ಯಾವುವೆಂದರೆ ಕೊಲ್ಲದಿರುವುದು (ಪ್ರಾಣಾತಿಪಾತವಿರತಿ), ಸುಳ್ಳಾಡದಿರುವುದು (ಮೃಷವಚನವಿರತಿ), ಕಳ್ಳತನ ಮಾಡದಿರುವುದು (ಅದಾತಃಪಾನವಿರತಿ), ಪರಸ್ತ್ರೀ ಸಂಗ ಮಾಡದಿರುವುದು (ವ್ಯಭಿಚಾರವಿರತಿ) ಮತ್ತು ಮಾದಕ ದ್ರವ್ಯವನ್ನು ಪಾನ ಮಾಡದಿರುವುದು (ಸುರಾಮೈರೇಯ ಪಾನವಿರತಿ). ಇವುಗಳ ಜೊತೆಗೆ ಅಪರಾಹ್ನ ಭೋಜನ ತ್ಯಾಗ, ನೃತ್ಯಗೀತಾ ತ್ಯಾಗ, ಮಾಲಾದಿ ಅಲಂಕಾರ ತ್ಯಾಗ, ಮಹರ್ಷಶೈಯತ್ಯಾಗ, ಸ್ವರ್ಣರಜತ ತ್ಯಾಗ – ಇವು ಐದನ್ನು ಭಿಕ್ಷುಗಳು ಪಾಲಿಸಬೇಕು.

**ಯೋ ಚ ವಂತಕಸಾವಸ್ಸ ಸೀಲೇಸು ಸುಸಮಾಹಿತೋ**

**ಉಪೇತೋ ದಮಸಚ್ಚೇನ ಸಾ ವೇ ಕಾಸಾವಂ ಅರಹತಿ**[13]

ಮತ್ತೊಂದು ಕಡೆ ಹೀಗೆ ಹೇಳಲಾಗಿದೆ. ಯಾರು ಅಲಂಕಾರ ಮಾಡಿಕೊಂಡಿದ್ದರೂ ಶೀಲವನ್ನು ಆಚರಣೆಯಲ್ಲಿಟ್ಟುಕೊಂಡಿರುವನೋ, ಶಾಂತನೋ, ದಾಂತನೋ, ನಿಯಮವಂತನೋ, ಬ್ರಹ್ಮಚಾರಿಯೂ ಆಗಿ ಯಾವ ಪ್ರಾಣಿಯನ್ನು ದಂಡಿಸದಿರುವನೋ

ಅವನೇ ಭಿಕ್ಷು ಅಥವಾ ಶ್ರಮಣ. ಬುದ್ಧನು ಆತನನ್ನು ಬ್ರಾಹ್ಮಣನೆಂದು ಸಂಬೋಧಿಸುತ್ತಾನೆ. ಭಿಕ್ಷುವಿಗೆ ಕ್ಷಾಂತಿಯೇ ತಪಸ್ಸು, ತಿತಿಕ್ಷೆಯೇ ನಿರ್ವಾಣ. ಆತನು ಇನ್ನೊಬ್ಬರ ಹಿಂಸೆಯನ್ನು ಸಹಿಸಿಕೊಳ್ಳುವನೇ ಹೊರತು ಮತ್ತೊಬ್ಬನಿಗೆ ಪ್ರತಿಹಿಂಸೆ ಮಾಡುವನಲ್ಲ. ಇನ್ನೊಬ್ಬರನ್ನು ಕೊಲ್ಲುವವನು, ಹಿಂಸಿಸುವವನು ಶ್ರಮಣನಲ್ಲ ಅಥವಾ ಸಂನ್ಯಾಸಿಯಲ್ಲ. ಮತ್ತೊಬ್ಬರನ್ನು ನಿಂದಿಸದಿರುವುದು ಮತ್ತು ಕೊಲ್ಲದಿರುವುದು ಆಹಾರದಲ್ಲಿ ಮಿತವಿರುವುದು, ಏಕಾಂತದಲ್ಲಿ ಮಲಗುವುದು, ಕೂರುವುದು ಮತ್ತು ಧ್ಯಾನದಲ್ಲಿ ನಿರತನಾಗಿರುವುದು ಭಿಕ್ಷು ನಿಯಮ.

**ಖಂತೀಪರಮಜ್ ಕಪೋತಿತಿಕ್ಖಾ**

**ನಿಬ್ಬಾಣಜ್ ಪರಮಜ್ ವದಂತಿ ಬುದ್ಧಾ**

**ನ ಹಿ ಪಬ್ಬಜಿತೋ ಪರೂಪಘಾತಿ**

**ಸಮಣೋ ಹೋತಿ ಪರಜ್ ವಿಹೇಥಯಂತೋ**

**ಅನೂಪವಾದೋ ಅನೂಪಘಾತೋ ಪಾತಿಮೊಕ್ಖೇ ಚ ಸಂವರೋ**

**ಮತ್ತಞ್ಞುತಾ ಚ ಭತ್ತಸ್ಮಿಜ್ ಪಂತಞ್ ಚ ಸಯನಾನಜ್**

**ಅಧಿಚಿತ್ತೇ ಚ ಆಯೋಗೋ ಏತಜ್ ಬುದ್ಧಾನ ಸಾಸನಜ್**[14]

ವ್ರತಗಳನ್ನು ಪಾಲಿಸದೇ ಸುಳ್ಳಾಡುವವನು ಇಚ್ಛಾ ಲೋಭಗಳಿಂದ ಕೂಡಿರುವವನು ಕೇವಲ ಕೇಶಮಂಡನದಿಂದ ಶ್ರಮಣನಾಗಲಾರ. ಎಲ್ಲ ಪಾಪಗಳನ್ನು – ಅವು ದೊಡ್ಡದಿರಲಿ, ಚಿಕ್ಕದಿರಲಿ – ಶಮನಮಾಡಿಕೊಂಡಿರುವುದರಿಂದಲೇ ಒಬ್ಬನು ಶ್ರಮಣನೆನಿಸುವವನು. ಇತರ ಎಲ್ಲ ನಿಯಮಗಳನ್ನು ಅನುಸರಿಸಿದರೂ ಮತ್ತೊಬ್ಬರನ್ನು ತಿರಿದು ತಿಂದ ಮಾತ್ರಕ್ಕೆ ಒಬ್ಬನು ಭಿಕ್ಷುವಾಗಲಾರ.

**ನ ಮುಂದಕೇನ ಸಮಣೋ ಅಬ್ಬತೋ ಅಲಿಕಂ ಭಣಜ್**

**ಇಚ್ಛಾಲೋಭ ಸಮಾಪನ್ನೋ ಸಮಣೋ ಕಿಂ ಭವಿಸ್ಸತಿ**

**ಯೋ ಚ ಸಮೇತಿ ಪಾಪಾನಿ ಅಣುಜ್ ಥೂಲಾನಿ ಸಬ್ಬಸೋ**

**ಸಮಿತತ್ತಾ ಹಿ ಪಾಪಾನಜ್ ಸಮಣೋ ತಿ ಪವುಚ್ಚತಿ**

**ನ ತೇನ ಭಿಕ್ಖು ಹೋತಿ ಯಾವತಾ ಭಕ್ಖತೇ ಪರೇ**

**ವಿಸ್ಸಜ್ ಧಮ್ಮಜ್ ಸಮಾದಾಯ ಭಿಕ್ಖು ಹೋತಿ ನ ತಾವತಾ**[15]

ಎಂದರೆ ಭಿಕ್ಷು ಜೀವನಕ್ಕೆ ಅಹಿಂಸಾ ಪಾಲನೆ ಬಹಳ ಮುಖ್ಯವೆಂಬುದನ್ನು ಒತ್ತಿ ನುಡಿಯಲಾಗಿದೆ. ಮೂಢನು ಆ ವಿದ್ವಾಂಸನು ಕೇವಲ ಹೊರಗಿನ ಮೌನಾಚಾರಣೆಯಿಂದ ಮುನಿಯೆನಿಸುವುದಿಲ್ಲ. ಯಾರು ತಕ್ಕಡಿಯನ್ನು ತೂಕಮಾಡುವಂತೆ ಉತ್ತಮವಾದುದನ್ನು ಗ್ರಹಿಸಿ ಪಾಪಗಳನ್ನು ಬಿಡುತ್ತಾನೇ ಅವನೇ ಮುನಿ. ಒಳಿತು ಕೆಡುಕುಗಳೆರಡನ್ನು ಮನನ ಮಾಡಿ ಒಳಿತನ್ನು ಮಾತ್ರ ಸ್ವೀಕರಿಸಿ ಕೆಡುಕನ್ನು ಬಿಡುವವನು ಮುನಿ. ಬುದ್ಧನು ಮತ್ತೆ ಹೇಳುತ್ತಾನೆ ಪ್ರಾಣಿಗಳನ್ನು ಹಿಂಸಿಸುವುದರಿಂದ ಒಬ್ಬನು ಆರ್ಯನೆನಿಸುವುದಿಲ್ಲ. ಯಾರು ಯಾವ ಪ್ರಾಣಿಯನ್ನು ಕೊಲ್ಲುವುದಿಲ್ಲವೋ ಅವನೇ ಆರ್ಯ.

**ನ ಮೊನೇನ ಮುನೀ ಹೋತಿ ಮೂಳ್ಹರೂಪೋ ಅವಿದ್ದಸು**

**ಯೋ ಚ ತುಲಜ್ ವ ಪಗ್ಗಯ್ಹ ವರಂ ಆದಾಯ ಪಂಡಿತೋ**

**ಪಾಪಾನಿ ಪರಿವಜ್ಜೇತಿ ಸ ಮುನೀ ತೇನ ಸೋ ಮುನಿ**

**ಯೋ ಮುನಾತಿ ಉಭೋ ಲೋಕೇ ಮುನಿ ತೇನ ಪವುಚ್ಚತಿ**

**ನ ತೇನ ಅರಿಯೋ ಹೋತಿ ಯೇನ ಪಾಣಾನಿ ಹಿಂಸತಿ**

**ಅಹಿಂಸಾ ಸಬ್ಬ ಪಾಣಾನಜ್ ಅರಿಯೋ ತಿ ಪವುಚ್ಚತಿ**[16]

ಕೊನೆಗೆ ಬುದ್ಧನು ಹೀಗೆ ಸಾರುತ್ತಾನೆ. ಬರಿ ಶೀಲವ್ರತದಿಂದ, ಅಧ್ಯಯನದಿಂದ, ಸಮಾಧಿಯನ್ನು ಹೊಂದುವುದರಿಂದ, ಏಕಾಂತಶಯನದಿಂದ, ನೈಷಕರ್ಮ್ಯಸುಖ ದೊರಕುತ್ತದೆಂದು ಭಿಕ್ಷುವು ನಂಬಲಾರದು.ಅಶ್ರವಗಳು ಸವೆಯುವವರೆಗೂ ಎಂದರೆ ಚಿತ್ತದ ಮಲಗಳು ಸವೆಯುವರೆಗೂ ಒಬ್ಬನು ನೈಷಕರ್ಮ್ಯವನ್ನು ಪಡೆಯಲಾರ.

ಧಮ್ಮಪದವು ಇಡೀ ಒಂದು ವರ್ಗವನ್ನೇ ಭಿಕ್ಷುವಿನ ಲಕ್ಷಣಗಳನ್ನು ವಿವರಿಸಲು ಮುಡಿಪಾಗಿಸಿದೆ. 25ನೇ ಅಧ್ಯಾಯಕ್ಕೆ ಭಿಕ್ಷವರ್ಗವೆಂದು ಹೆಸರು. ಇದರಲ್ಲಿ 21 ಗಾಥೆಗಳಿದ್ದು ಈ ಅಧ್ಯಾಯವು ಭಿಕ್ಷುವಿನ ಲಕ್ಷಣಗಳನ್ನು ಮತ್ತು ಆತನು ಅನುಸರಿಸಬೇಕಾದ ನೀತಿ ನಿಯಮಗಳನ್ನು ವಿವರಿಸುತ್ತದೆ. ಭಿಕ್ಷುವು ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಂಡಿರುತ್ತಾನೆ. ಇಂದ್ರಿಯನಿಗ್ರಹಕ್ಕೆ **ಸಂವರ**ವೆಂದು ಕರೆಯುತ್ತಾರೆ. ಸಂವರ ಶಬ್ದದ ಪ್ರಯೋಗವು ಜೈನಧರ್ಮದಲ್ಲೂ ಬರುತ್ತದೆ. ಮುಕ್ತಿ ಪ್ರಕ್ರಿಯೆಯಲ್ಲಿ ಜೈನಧರ್ಮದ ಪ್ರಕಾರ ಸಂವರವು ಒಂದು ಹಂತ. ಭಿಕ್ಷುವಿಗೆ ಕಣ್ಣು, ಕಿವಿ, ಮೂಗು, ನಾಲಿಗೆ, ಕಾಯಾ, ವಚನ ಮತ್ತು ಮನಸಿನ ಸಂವರದ ಅಗತ್ಯವನ್ನು ಒತ್ತಿ ನುಡಿಯಲಾಗಿದೆ. ಅಂತಹ ಭಿಕ್ಷುವು ಮಾತ್ರ ದುಃಖದಿಂದ ಮುಕ್ತನಾಗುವನು. ವಾಕ್, ಪಾಣಿ ಮತ್ತು ಪಾಲಗಳನ್ನು ಬಿಗಿಯಲ್ಲಿಟ್ಟುಕೊಂಡು ಆಧ್ಯಾತ್ಮದಲ್ಲೇ ನಿರತರಾಗಿರುವವರೇ ಭಿಕ್ಷುಗಳು.

**ಚಕ್ಕುನಾ ಸಂವರೋ ಸಾಧು ಸಾಧು ಸೋತೇನ ಸಂವರೋ**

**ಘಾಣೇನಾ ಸಂವರೋ ಸಾಧು ಸಾಧು ಜಿಹ್ವಾಯ ಸಂವರೋ**

**ಕಾಯೇನ ಸಂವರೋ ಸಾಧು ಸಾಧು ವಾಚಾಯ ಸಂವರೋ**

**ಮನಸಾ ಸಂವರೋ ಸಾಧು ಸಾಧು ಸಬ್ಬತ್ತ ಸಂವರೋ**

**ಸಬ್ಬತ್ತ ಸಂವುತೋ ಭಿಕ್ಕು ಸಬ್ಬದುಕ್ಖಾ ಪಮುಚ್ಚತಿ**[17]

ಭಿಕ್ಷು ಮಾತನಾಡುವಾಗ ಯೋಚಿಸಿ ಮಾತನಾಡುತ್ತಾನೆ. ಆತನು ಮಾತಿನಲ್ಲಿ ಸಂಯಮವಿರುತ್ತದೆ ಮತ್ತು ಮೃದುತ್ವವಿರುತ್ತದೆ.

**ಯೋ ಮುಖಸಞ್ಞತೋ ಭಿಕ್ಕು ಮತ್ತಭಾಣಿ ಅನುದ್ಧತೋ**

**ಅತ್ಥಜ್ ಧಮ್ಮಜ್ ಚ ದೀಪೇತಿ ಮಧುರಜ್ ತಸ್ಸ ಭಾಸಿತಜ್**[18]

ತ್ರಿಕರಣಪೂರ್ವಕವಾಗಿ ಧರ್ಮದಲ್ಲಿ ನಿರತನಾಗಿರುತ್ತಾನೆ. ತನಗೆ ದೊರಕಿದ್ದನ್ನು ಆಸಕ್ತಿಯಿಂದ ತಿರಸ್ಕರಿಸದೇ ಸ್ವೀಕರಿಸುತ್ತಾನೆ. ಮತ್ತೊಬ್ಬರ ವಸ್ತುಗಳಿಗೆ ಆಸೆ ಪಡುವುದಿಲ್ಲ.

ಅದನ್ನು ಅಸಡ್ಡೆ ಮಾಡದೇ ಅದರಲ್ಲಿ ಜೀವಿಸುವರು. ಶುದ್ಧಜೀವಿಕೆಯುಳ್ಳವವೆನಿಸುತ್ತಾನೆ. ಆರ್ಯಅಷ್ಟಾಂಗಿಕ ಮಾರ್ಗದಲ್ಲಿ ಇದನ್ನು ಸಮ್ಯಗಾಜೀವ ಎಂದು ಕರೆಯುತ್ತಾರೆ. ಆಲಸ್ಯರಹಿತನಾದ ಈತನನ್ನು ದೇವತೆಗಳು ಕೊಂಡಾರುವರು ಎಂದು ಬುದ್ಧನು ಸಾರುತ್ತಾನೆ. ಯಾರಿಗೆ ಯಾವ ವಿಷಯದಲ್ಲೂ ನನ್ನದು ಎಂಬ ಭಾವನೆಯಿಲ್ಲವೋ, ಯಾವುದು ಇಲ್ಲದಿದ್ದರೆ ಅವನು ಶೋಕಿಸುವುದಿಲ್ಲವೋ ಆತನೇ ಭಿಕ್ಷು. ಆತನಿಗೆ ಮೈತ್ರಿ ಭಾವನೆ ಇರುತ್ತದೆ. ಬುದ್ಧನ ಉಪದೇಶದಲ್ಲಿ ತನ್ನ ಮನಸ್ಸನ್ನು ತಿಳಿಗೊಳಿಸಿಕೊಂಡಿರುವನಲ್ಲದೇ ಸಂಸ್ಕಾರಗಳನ್ನೆಲ್ಲ ನಾಶಗೊಳಿಸಿ ನಿರ್ವಾಣ ಪದವಿಯನ್ನು ಆತನು ಹೊಂದಿರುತ್ತಾನೆ. ಜೀವನವೆಂಬ ದೋಣಿಯಿಂದ ಮಿಥ್ಯವಿತರ್ಕವೆಂಬ ನೀರನ್ನು ತೆಗೆದುಹಾಕಬೇಕೆಂದು ಹಾಗೇ ಮಾಡಿದರೆ ದೋಣಿಯು ಹಗುರವಾಗಿ ನಿರ್ವಾಣದೆಡೆಗೆ ಚಲಿಸುತ್ತದೆಂದು ಬುದ್ಧನು ಮಾರ್ಮಿಕವಾಗಿ ಉಪದೇಶಿಸುತ್ತಾನೆ.

**ಸಲಾಭಜ್ ನಾತಿಮಞ್ಞೆಯ್ಯ ನಾಞ್ಞೆಸಜ್ ಪಿಹಯಜ್ ಚರೆ**

**ಅಞ್ಞೇಸಜ್ ಪಿಹಯಜ್ ಭಿಕ್ಕು ಸಮಾಧಿಜ್ ನಾಧಿಗಚ್ಛತಿ**

**ಅಪ್ಪಲಾಭೋ ಪಿ ಚೆ ಭಿಕ್ಕು ಸಲಾಭಜ್ ನಾತಿಮಞ್ಞತಿ**

**ತಜ್ ವೆ ದೇವಾ ಪಸಜ್ಸಂತಿ ಸುದ್ಧಾಜೀವಜ್ ಅತಂದಿತಿಜ್**

**ಸಬ್ಬಸೋ ನಾಮರೂಪಸ್ಮಿಜ್ ಯಸ್ಸ ನತ್ಥಿ ಮಮಾಯಿತಜ್**

**ಅಸತಾ ಚ ನ ಸೋಚತಿ ಸ ವೆ ಭಿಕ್ಖೂತಿ ವುಚ್ಚತಿ**

**ಮೆತ್ತಾವಿಹಾರಿ ಯೋ ಭಿಕ್ಕು ಪಸನ್ನೋ ಬುದ್ಧಸಾಸನೋ**

**ಅಧಿಗಚ್ಛೆ ಪದಜ್ ಸಂತಜ್ ಸಂಖಾರೂಪಸಮಜ್ ಸುಖಜ್**

**ಸಿಂಚಾ ಭಿಕ್ಕು ಇಮಜ್ ನಾವಜ್ ಸಿತ್ತಾ ತೆ ಲಹುಂ ಎಸ್ಸತಿ**

**ಚೆತ್ವಾ ರಾಗಂ ಚ ದೋಸಂ ಚ ತತೋ ನಿಬ್ಬಾನಮೇಗಿಸಿ**[19]

ಈಗಾಗಲೇ ನಾವು ಪ್ರಸ್ತಾಪಿಸಿರುವಂತೆ ಭಿಕ್ಷುವನ್ನು ಒಗಟಿನ ರೂಪದಲ್ಲೂ ವಿವರಿಸಲಾಗಿದೆ. ಬುದ್ಧನ ಪ್ರಕಾರ ಭಿಕ್ಷುವು ಐದನ್ನು ಕತ್ತರಿಸಬೇಕು, ಐದನ್ನು ಬಿಡಬೇಕು, ಐದನ್ನು ಪ್ರಯತ್ನದಿಂದ ಬೆಳೆಸಬೇಕು ಮತ್ತು ಐದರ ಸಂಘವನ್ನು ಮೀರಬೇಕು. ಆಗ ಆತನು ಓಘೋತಿಣ್ಣೊ ಎಂದೆನಿಸುತ್ತಾನೆ. ಓಘವೆಂದರೆ ಪ್ರವಾಹ, ಕಾಮ, ಭವ, ದೃಷ್ಟಿ ಮತ್ತು ಅವಿದ್ಯೆಗಳೆಂಬ ಪ್ರವಾಹವನ್ನು ದಾಟಿರುವನೇ ಓಘೋತಿಣ್ಣಾ. ಆತನೇ ನಿಜವಾದ ಭಿಕ್ಷು. ಐದು ಎಂಬ ಸಂಖ್ಯೆಯನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಇಲ್ಲಿ ಕತ್ತರಿಸಬೇಕಾದ ಐದು ಸತ್ಕಾಯದೃಷ್ಟಿ, ವಿಚಿಕಿತ್ಸಾ, ಶೀಲವ್ರತಪರಾಮರ್ಶ, ಕಾಮರಾಗ, ಪ್ರತೀಗ ಎಂಬ ಐದು ಸಂಯೋಜನೆಗಳನ್ನು ಇಲ್ಲಿ ಬಿಡಬೇಕಾದುದು. ರೂಪರಾಗ, ಅರೂಪರಾಗ, ಮಾನ, ಔದಾತ್ಯ, ಅವಿದ್ಯಾ ಎಂಬುದನ್ನು ಭಾವನೆ ಮಾಡಬೇಕಾದುದ್ದು ಸ್ಮೃತಿ, ವೀರ್ಯ, ಸಮಾಧಿ, ಪ್ರಜ್ಞಾ ಎಂಬುವನು ಸಂಘವನ್ನು ಮೀರಬೇಕಾದುದ್ದು ರಾಗ, ದ್ವೇಷ, ಮೋಹ, ಮಾನ ಮತ್ತು ದೃಷ್ಟಿ ಎಂಬುದನ್ನು ಇಲ್ಲಿ ಉಲ್ಲೇಖಿಸಲಾಗುವ ಐದರ ಗುಂಪಿನ ಪದಗಳ ಅರ್ಥ ಅಸ್ಪಷ್ಟವಿಲ್ಲ.

ಭಿಕ್ಷುವು ದಾನ ಮಾಡಬೇಕು, ಎಚ್ಚರ ತಪ್ಪಬಾರದು ಮತ್ತು ಕಾಮಗುಣದಲ್ಲಿ ಅವನ ಚಿತ್ತವು ಸುಳ್ಳಾಡಬಾರದು. ಎಚ್ಚರ ತಪ್ಪಿ ಕಾದ ಕಬ್ಬಿಣದ ಗುಂಡನ್ನು ನುಂಗುವಾಗ ಆಗುವ ನೋವಿನಂತೆ ದುಃಖವನ್ನು ಅನುಭವಿಸಬಾರದು.

ಧ್ಯಾನ ಮತ್ತು ಪ್ರಜ್ಞೆಗಳಿಲ್ಲದ ಭಿಕ್ಷುವು ನಿರ್ವಾಣವನ್ನು ಹೊಂದುವುದಿಲ್ಲ. ಶೂನ್ಯಗಾರವನ್ನು ಹೊಕ್ಕು ಎಂದರೆ ಏಕಾಂತವಾಸಿಯಾಗಿ ಚಿತ್ತವನ್ನು ಶಾಂತಿಗೊಳಿಸಿಕೊಂಡ ಭಿಕ್ಷುವಿಗೆ ಅಲಭ್ಯವಾದ ಆನಂದವು ದೊರಕುತ್ತದೆಂದು ಬುದ್ಧನು ಬೋಧಿಸುತ್ತಾನೆ. ಸ್ಕಂದಗಳ ಹುಟ್ಟು ನಾಶಗಳ ರಹಸ್ಯವನ್ನು ಅರಿತವನು ಅಮೃತಪದವಿಯನ್ನು ಹೊಂದುತ್ತಾನೆ. ಇಂದ್ರಿಯನಿಗ್ರಹ, ತೃಪ್ತಿ, ಶುದ್ಧ ಜೀವನ, ಸೋಮಾರಿತನವಿಲ್ಲದಿರುವುದು, ಮತ್ತೊಬ್ಬರ

ವಿಷಯದಲ್ಲಿ ಸತ್ಕಾರಬುದ್ಧಿ, ಆಚಾರದಲ್ಲಿ ಕುಶಲತೆ ಮತ್ತು ಕಲ್ಯಾಣಮಿತ್ರರ ಸಹವಾಸ ಇವು ಭಿಕ್ಷುವು ಅನುಸರಿಸಬೇಕಾದ ನಿಯಮಗಳು. ಭಿಕ್ಷುಗಳು ಅನುಸರಿಸಬೇಕಾದ ಅಂಶಗಳನ್ನು ಪ್ರಾತಿಮೋಕ್ಷವೆನ್ನುವರು. ಕಾಯ, ವಾಚಾ, ಮನಸ್ಸು ಶಾಂತನಾಗಿ ಪ್ರಾಪಂಚಿಕ ಸುಖವೆಂಬ ಮಾಂಸವನ್ನು ಕಕ್ಕಿರುವ ಭಿಕ್ಷುವನ್ನು ಉಪಶಾಂತನೆನ್ನುತ್ತಾರೆ.

**ಪಂಚ ಚಿಂದೆ ಪಂಚ ಜಹೆ ಪಂಚ ಚುತ್ತರಿ ಭಾವಯೆ**

**ಪಂಚ ಸಂಗಾತಿಗೋ ಭಿಕ್ಕು ಓಘತಿಣ್ಣೋ ತಿ ವುಚ್ಚತಿ**

**ಝಾಯ ಭಿಕ್ಕು ಮಾ ಚ ಪಮಾದೋ**

**ಮಾ ತೇ ಕಾಮಗುಣೇ ಭಮಸ್ಸು ಚಿತ್ತಜ್**

**ಮಾ ಲೋಹಗುಳಜ್ ಗಿಲೀ ಪಮುತ್ತೋ**

**ಮಾ ಕಂದೀ ದುಕ್ಖಂ ಇದಂ ತಿ ಡಯ್ಹಮಾನೋ**

**ನತ್ಥಿ ಝಾನಜ್ ಅಪಞ್ಞಸ್ಸ ಪಞ್ಞಾ ನತ್ಥಿ ಅಝಾಯತೋ**

**ಯಮ್ಹಿ ಝಾನಜ್ ಚ ಪಞ್ಞಾ ಚ ಸ ವೇ ನಿಬ್ಬಾಣಸಂತಿಕೇ**

**ಸುಞ್ಞಾಗಾರಜ್ ಪವಿಟ್ಠಸ್ಸ ಸಂತ ಚಿತ್ತಸ್ಸ ಭಿಕ್ಕುನೋ**

**ಅಮಾನುಸೀ ರತೀ ಹೋತಿ ಸಮ್ಮಾ ಧಮ್ಮಜ್ ವಿಪಸ್ಸತೋ**

**ಯತೋ ಯತೋ ಸಮ್ಮಸತಿ ಖಂಧಾನಜ್ ಉದಯಬ್ಬಯಜ್**

**ಲಭತೀ ಪೀತಿಪಾಮೊಜ್ಜಜ್ ಅಮತಜ್ ತಜ್ ವಿಜಾನತಜ್**

**ತತ್ರಾಯಂ ಆದಿ ಭವತಿ ಇಧಾ ಪಞ್ಞಾಸ್ಸ ಭಿಕ್ಕುನೋ**

**ಇಂದ್ರಿಯಗುತ್ತಿ ಸಂತುಟ್ಠೀ ಪಾತಿಮೋಕ್ಖೇ ಚ ಸಂವರೋ**

**ಮಿತ್ತೇ ಭಜಸ್ಸು ಕಲ್ಯಾಣೆ ಸುದ್ಧಜೀವೇ ಅತಂಡಿತೇ**

**ಪಟಿಸಂಥಾರವುತ್ಯಸ್ಸ ಆಚಾರ ಕುಸಲೋ ಸಿಯಾ**

**ತತೋ ಪಾಮುಜ್ಜಬಹುಳೋ ದುಕ್ಖಸ್ಸಂತಜ್ ಕರಿಸ್ಸಸಿ**

**ಸಂತಕಾಯೋ ಸಂತವಾಚೋ ಸಂತವಾ ಸುಸಮಾಹಿತೋ**

**ವಂತಲೋಕಾಮಿಸೋ ಭಿಕ್ಖು ಉಪಸಂತೋ ತಿ ವುಚ್ಚತಿ**[20]

ಭಿಕ್ಷು ಜೀವನ ಅಥವಾ ಆಧ್ಯಾತ್ಮಿಕ ಜೀವನದ ವಯಸ್ಸನ್ನು ಬುದ್ಧನು ನಿಗಧಿಪಡಿಸುತ್ತಾನೆ. ಭಿಕ್ಷುವು ಇನ್ನೂ ಚಿಕ್ಕವನಿರುವಾಗಲೇ ತನ್ನ ಮನಸ್ಸನ್ನು ಬುದ್ಧನು ಉಪದೇಶದಲ್ಲಿ ತೊಡಗಿಸಬೇಕೆಂದು ಬೋಧಿಸುತ್ತಾನೆ.

**ಯೋ ಹವೆ ದಾಹರೋ ಭಿಕ್ಖು ಯುಂಜತಿ ಬುದ್ಧಸಾಸನೆ**

**ಸೋ ಇಮಜ್ ಲೋಕಜ್ ಪಭಾಸೇತಿ ಅಬ್ಭಾ ಮುತ್ತೋ ವ ಚಂದಿಮಾ**[21]

ಅರಿಹಂತನಾಗ ಬಯಸುವವನು ಬಹಳ ವಿರಳ. ಸಂಸಾರ ಸಾಗರವನ್ನು ಪಾರುಗಾಣ ಬಯಸುವವನು ಬಹಳ ಕಡಿಮೆ ಎಂದು ಬುದ್ಧನು ಸಾರುತ್ತಾನೆ. ಬಹುತೇಕ ಮಂದಿ ಈಚಿನ ದಡದಲ್ಲಿ ಓಡಾಡುತ್ತಿರುತ್ತಾರೆ. ಬಲ್ಲವರು ಧರ್ಮವನ್ನು ಸರಿಯಾಗಿ ತಿಳಿಸಿದ ನಂತರ ಧರ್ಮವನ್ನೇ ಹಿಂಬಾಲಿಸುವವರು ಮಾತ್ರ ದಾಟಲು ಅಸಾಧ್ಯವಾದ ಮೃತ್ಯುವಿನ ಆಚೆಯ ದಡವನ್ನು ಸೇರುತ್ತಾರೆ.

**ಅಪ್ಪಕಾ ತೇ ಮನುಸ್ಸೇಸು ಯೇ ಜನಾ ಪಾರಗಾಮಿನೋ**

**ಅಥಾಯಜ್ ಇತರಾ ಪಜಾ ತೀರಂ ಏವನುಧಾವತಿ**

**ಯೇ ಚ ಖೋ ಸಮ್ಮದಕ್ಖಾತೇ ಧಮ್ಮೇ ಧಮ್ಮಾನುವತ್ತಿನೋ**

**ತೇ ಜನಾ ಪಾರಂ ಎಸ್ಸಂತಿ ಮಚ್ಚುಧೆಯ್ಯಜ್ ಸುದುತ್ತರಜ್**[22]

ಯಾರ ಚಿತ್ತವು ಸಂಬೋಧಿಯ ಅಂಗಗಳಲ್ಲಿ ಚೆನ್ನಾಗಿ ನುರಿತಿರುವುದೋ, ಯಾರು ಉಪದಾನವಿಲ್ಲದೇ ಪರಿಗ್ರಹವನ್ನು ತೊರೆದಿರುವರೋ, ಯಾರು ಆಸ್ರವಗಳನ್ನು ಸವೆಸಿಕೊಂಡಿರುವರೋ ಅವರೇ ಈ ಲೋಕದಲ್ಲಿ ಪರಿನಿರ್ವಾಣವನ್ನು ಹೊಂದಿರುತ್ತಾರೆ. ಸಂಬೋಧಿಯ ಅಂಗಗಳು ಸ್ಮೃತಿ, ಧರ್ಮ ವಿಜಯ (ಧರ್ಮವನ್ನು ಹುಡುಕುವುದು), ವೀರ್ಯ (ಸಾಧನದಲ್ಲಿ ತೊಡಗುವಿಕೆ), ಪ್ರೀತಿ (ಹರ್ಷ), ಪ್ರಶ್ರುಬ್ಧಿ (ಶಾಂತಿ), ಸಮಾಧಿ, ಉಪೇಕ್ಷ (ಮನಸ್ಸನ್ನು ಏರುಪೇರಿಲ್ಲದೆ ಇರಿಸಿಕೊಂಡಿರುವುದು) – ಈ ಏಳು ಸಂಬೋಧಿಯ

ಅಂಗಗಳು ಎಂದರೆ ಇವು ಪರಮಜ್ಞಾನವನ್ನು ಕೊಡಲು ಸಹಾಯಕವಾಗಿರುವಂತಹ ಉಪದಾನವೆಂದರೆ ವಿಷಯಕ್ಕೆ ಅಂಟಿಕೊಳ್ಳುವುದು. ಇದು ದ್ವಾದಸ ನಿಧಾನಗಳಲ್ಲಿ ಒಂದು. ಕಾಮ, ಭವ, ದೃಷ್ಟಿ (ತಪ್ಪು ತಿಳುವು) ಮತ್ತು ಅವಿದ್ಯೆಗಳು, ಆಸ್ರವಗಳು. ಆಸ್ರವಗಳೆಂದರೆ ಚಿತ್ತದ ಮಲಗಳೆಂದರ್ಥ. ಇವುಗಳನ್ನು ನಾಶಪಡಿಸಿಕೊಂಡಾಗ ಮಾತ್ರ ಪರಿನಿರ್ವಾಣವು ಸಾಧ್ಯ.

**ಯೇಸಜ್ ಸಂಬೋದಿ – ಅಂಗೇಸು ಸಮ್ಮಾಚಿತ್ತಜ್ ಸುಭಾವಿತಜ್**

**ಆದಾನಪಟಿನಿಸ್ಸಗ್ಗೇ ಅನುಪಾದಾಯ ಯೇ ರತಾ**

**ಖೀನಾಸವಾ ಜುತಿಮಂತೋ ತೇ ಲೋಕೇ ಪರಿನಿಬ್ಬುತಾ**[23]

ಅರಿಹಂತನು ದಾರಿಯನ್ನು ನಡೆದು ಮುಗಿಸಿರುತ್ತಾನೆ. ಎಂದರೆ ತನ್ನ ಸಾಧನೆಗಳನ್ನೆಲ್ಲಾ ಮುಗಿಸಿರುತ್ತಾನೆ. ಆತನು ಯಾವ ಶೋಕವೂ ಇಲ್ಲದೇ ಎಲ್ಲಾ ಬಗೆಯ ಅಡಚಣೆಗಳಿಂದಲೂ ಮುಕ್ತನಾಗಿ ಸರ್ವಗ್ರಂಥಗಳನ್ನು ಬಿಚ್ಚಿಕೊಂಡಿರುತ್ತಾನೆ. ಈಗಾಗಲೇ ನಾವು ತಿಳಿಸಿರುವಂತೆ ಗ್ರಂಥಗಳು ನಾಲ್ಕು. ಯಾವುವೆಂದರೆ ಅವಿದ್ಯೆ, ವ್ಯಾಪಾದ, ಶೀಲವ್ರತಪರಾಮರ್ಶ ಮತ್ತು ಇದಂಸತ್ಯಾಭಿನಿವೇಷ. ಇವುಗಳನ್ನು ಕಾಯಗ್ರಂಥಗಳೆಂದು ಕರೆಯುತ್ತಾರೆ. ಅರಿಹಂತರು ಗೃಹಸ್ಥ ಜೀವನಕ್ಕೆ ಅಂಟಿಕೊಳ್ಳುವುದಿಲ್ಲ. ಅವರು ಸ್ವಂತ ಮನೆಯನ್ನು ಬಿಟ್ಟಿರುತ್ತಾರೆ. ಅವರಿಗೆ ಮನೆಯಲ್ಲಿ ಅಭಿರತಿಯಿರುವುದಿಲ್ಲ. ಹಂಸಗಳು ಕ್ಷುದ್ರಜಲಾಶಯವನ್ನು ಬಿಟ್ಟು ಹೋಗುವಂತೆ ಅವರು ಮನೆಯನ್ನು ಬಿಟ್ಟು ಹೋಗುವರು.

**ಗತದ್ಧಿನೋ ವಿಸೋಕಸ್ಸ ವಿಪ್ಪಮುತ್ತಸ್ಸ ಸಬ್ಬಧಿ**

**ಸಬ್ಬಗಂಥಪ್ಪಹಿಣ್ಣಸ್ಸ ಪರಿಳಾಹೋ ನ ವಿಜ್ಜತಿ**

**ಉಯ್ಯುಂಜಂತಿ ಸತಿಮಂತೋ ನ ನಿಕೇತೇ ರಮಂತಿ ತೇ**

**ಹಂಸ ವ ಪಲ್ಲಲಂ ಹಿತ್ವಾ ಓಕಮೋಕಜ್ ಜಹಂತಿ ತೇ**[24]

ಇವರು ಆಹಾರದಲ್ಲಿ, ಪರತಂತ್ರದಲ್ಲಿ ಎಂದರೆ ಅವರು ಆಹಾರ ವಿಷಯದಲ್ಲಿ ಉದಾಸೀನರಾಗಿರುತ್ತಾರೆ. ಅವರಿಗೆ ಶೂನ್ಯತಾಅನಿಮಿತ್ತ ಎಂಬ ಮೋಕ್ಷವು ಲಭಿಸಿರುತ್ತದೆ. ಎಂದರೆ ಎಲ್ಲದರ ಶೂನ್ಯತೆ ಸಾಕ್ಷಾತ್ಕಾರವು ಆಗಿರುತ್ತದೆ. ಆಕಾಶದಲ್ಲಿ ಹಕ್ಕಿಗಳ ಓರೆಯನ್ನು ಗುರುತಿಸುವುದು ಹೇಗೆ ಕಷ್ಟವೋ ಹಾಗೆಯೇ ಇವರನ್ನು ಅರಿಯಲು ಕಷ್ಟವಾಗುತ್ತದೆ. ಅವರು ಇಂದ್ರಿಯಗಳೆಂಬ ಕುದುರೆಗಳನ್ನು ಪಳಗಿಸಿ ಶಾಂತಿಯನ್ನು ಹೊಂದಿರುತ್ತಾರೆ ಮತ್ತು ಅಭಿಮಾನರಹಿತರಾಗಿರುತ್ತಾರೆ. ಅಂತಹ ಜ್ಞಾನಿಗಳನ್ನು ಕಂಡು ದೇವತೆಗಳಿಗೂ ತಾವು ಅವನಂತಿರಬೇಕೆಂಬ ಆಸೆಯಾಗುತ್ತದೆ. ಅವರು ಪೃಥ್ವಿಯಂತೆ ಕ್ಷಮಾಶೀಲರು, ಇಂದ್ರಿಯಕೀಲದಂತೆ (ಊರ ಬಾಗಿಲ ಬಳಿ ನೆಟ್ಟಿರುವ ಕಂಬ) ಅಚಲರಾಗಿ ಸುವ್ರತದಲ್ಲಿ ನಿರತರಾಗಿರುತ್ತಾರೆ. ಅವರು ಮಡುವಿನಲ್ಲಿರುವ ಬಗಡದಂತೆ ಅಶುದ್ಧರಾಗಿರುವುದಿಲ್ಲ.

**ಯಾಸ್ಸಾಸವಾ ಪರಕ್ಖೀಣಾ ಆಹಾರೇ ಚ ಅನಿಸ್ಸಿತೋ**

**ಸುಞ್ಞಾತೋ ಅನಿಮಿತ್ತೋ ಚ ವಿಮುಕ್ಖೋ ಯಸ್ಸ ಗೋಚರೋ**

**ಆಕಾಸೇವ ಸಕುಂತಾನಜ್ ಪದಜ್ ತಸ್ಸ ದುರನ್ನಯಜ್**

**ಯಸ್ಸಿಂದ್ರಿಯಾನಿ ಸಮತಜ್ ಗತಾನಿ ಅಸ್ಸ ಯಥಾ ಸಾರಥಿನಾ ಸುದಂತಾ**

**ಪಹೀಣಮಾನಸ್ಸ ಅನಾಸವಸ್ಸ ದೇವ ಪಿ ತಸ್ಸ ಪಿ ಹಯಂತಿ ತಾದಿನೋ**

**ಪಠವೀಸಮೋ ನೊ ವಿರುಜ್ಝತಿ ಇಂದಖೀಲುಪಮೋ ತಾದಿ ಸುಬ್ಬತೋ**

**ರಹದೋ ವ ಅವೇತಕದ್ದಮೋ ಸಂಸಾರ ನ ಭವಂತಿ ತಾದಿನೋ**[25]

ನಡೆನುಡಿಮನಗಳಲ್ಲಿ ಶಾಂತರಾಗಿರುವ ಅವರನ್ನು ಉಪಶಾಂತರೆನ್ನುತ್ತಾರೆ. ಅವರು ಯಾವುದನ್ನೂ ವಿವೇಕವಿಲ್ಲದೇ ಸುಮ್ಮನೆ ಒಂದು ವಿಷಯವನ್ನು ನಂಬುವುದಿಲ್ಲ. ಅವರಿಗೆ ಅಕೃತವಾದ ನಿರ್ವಾಣ ಪದವಿಯು ಲಭ್ಯವಾಗಿರುತ್ತದೆ. ಅದ್ವೈತಿಗಳು ಕೂಡ ಮೋಕ್ಷವನ್ನು ಅಕೃತವೆಂದು ಕರೆಯುತ್ತಾರೆ. ಅಕೃತವಾದ ಮೋಕ್ಷವನ್ನು ಕೃತದಿಂದ ಪಡೆಯಲು ಸಾಧ್ಯವಿಲ್ಲ ಎಂಬುದು ಅದ್ವೈತಿಗಳ ನಿಲುವು. ಹಾಗೆಯೇ ಬೌದ್ಧರು ಕೂಡ ನಿರ್ವಾಣವನ್ನು ಅಕೃತವೆಂದು

ಕರೆಯುತ್ತಾರೆ. ಏಕೆಂದರೆ ಅದು ಯಾವುದೊಂದರ ಕಾರ್ಯವೂ ಅಲ್ಲ ಎಂಬುದು ಅವರ ನಿಲುವು (ನಾಸ್ತಿ ಅಕೃತಾಃ ಕೃತೇನ) ಅವರು ಸಂಸಾರದ ಸಂಧಿಗಳನ್ನು ಕತ್ತರಿಸಿರುತ್ತಾರೆ. ಮತ್ತು ಆಸೆಗಳನ್ನೆಲ್ಲ ಕಕ್ಕಿರುತ್ತಾರೆ.

**ಅಸ್ಸದ್ಧೋ ಅಕತಞ್ಞೂ ಚ ಸಂಧಿಚ್ಛೇದೋ ಚ ಯೋ ನರೋ**

**ಹತಾವಕಾಸೋ ವಂತಾಸೋ ಸಾವೆ ಉತ್ತಮಪೋರಿಸೋ[26]**

ಒಂದು ಪರಿಸರಕ್ಕೆ ಸೌಂದರ್ಯ ಬರುವುದು ಈ ಅರಿಹಂತದ ಅಸ್ತಿತ್ವದಿಂದ ಮಾತ್ರ. ಪರಿಸರದ ಸೌಂದರ್ಯವು ರಮಣೀಯತೆಯು ಅರಿಹಂತರ ಸಾನ್ನಿಧ್ಯದಿಂದ ಬರುತ್ತದೆಂಬುದು ಬುದ್ಧನ ನಿಲುವು. ಆಧ್ಯಾತ್ಮದ ನೆಲೆಗಟ್ಟಿಲ್ಲದ ಬಾಹ್ಯಸೌಂದರ್ಯವು ಸೌಂದರ್ಯವೇ ಅಲ್ಲ. ಪರಿಸರಕ್ಕೆ ಸೌಂದರ್ಯದ ಆಂತರಿಕ ಕಂಪನ ಉಂಟಾಗುವುದು ಅಲ್ಲಿ ವಾಸಿಸುವ ಅರಿಹಂತರಿಂದ ಮಾತ್ರವೆಂಬುದು ಬುದ್ಧನ ನಿಲುವು. ಇದು ಬುದ್ಧನ ಪರಿಸರವಾದದ ಮೂಲಭೂತ ಪರಿಕಲ್ಪನೆ. ಪರಿಸರದ ಸಮತೋಲನವು ನಿಂತಿರುವುದು ಆ ಪರಿಸರದಲ್ಲಿ ವಾಸಿಸುವ ನಮ್ಮ ಆಧ್ಯಾತ್ಮಿಕ ಸಾಧನೆಯ ಮೇಲೆ ಎಂಬ ಧ್ವನಿ ಇಲ್ಲಿದೆ. ಮನುಷ್ಯ ಮತ್ತು ಪರಿಸರಗಳಿಗೆ ಅವಿಭಾಜ್ಯ ಸಂಬಂಧವಿದೆ. ಪರಿಸರಕ್ಕೆ ಒಂದು ದಿವ್ಯತೆ ಬರುವುದು. ಆ ಪರಿಸರದಲ್ಲಿ ವಾಸಿಸುವ ನೈಜಮೌಲ್ಯಗಳನ್ನು ಬೆಳೆಸಿಕೊಂಡು ಜೀವನದ ಗುರಿಯನ್ನು ತಲುಪಿರುವ ಅರಿಹಂತರಿಂದ ಮಾತ್ರ ಎಂಬುದು ಬುದ್ಧನ ಖಚಿತ ನಿಲುವು. ನಮ್ಮೆಲ್ಲ ಪರಿಸರದ ಸಮಸ್ಯೆಗಳಿಗೂ ಪರಿಹಾರವು ಧಮ್ಮಪದದ ಈ ಹೇಳಿಕೆಗಳಲ್ಲಿದೆ. ಬುದ್ಧನು ಹೀಗೆ ಸಾರುತ್ತಾನೆ, "ಊರಿನಲ್ಲಾಗಲೀ, ಕಾಡಿನಲ್ಲಾಗಲೀ, ತಗ್ಗಿನಲ್ಲಾಗಲೀ, ತಿಟ್ಟಿನಲ್ಲಾಗಲೀ ಎಲ್ಲಿ ಅರಿಹಂತರು ಓಡಾಡುತ್ತಿರುವರೋ ಆ ಭೂಮಿಯೇ ರಮಣೀಯ. ಜನಸಾಮಾನ್ಯನಿಗೆ ಇಂತಹ ರಮಣೀಯ ಸ್ಥಳದ ಬಗ್ಗೆ ಆಸಕ್ತಿಯಿರುವುದಿಲ್ಲ. ಕಾರಣ ಅವನು ಕಾಮಾಸಕ್ತನಾಗಿರುತ್ತಾನೆ. ಅರಿಹಂತರಿಗೆ ಮಾತ್ರ ರಮಣೀಯವಾದ ಅರಣ್ಯವನ್ನು ಕಂಡರೆ

ಪ್ರೀತಿ. ಕಾರಣ ಅವರು ರಾಗರಹಿತರಾಗಿರುತ್ತಾರೆ. ಅರಣ್ಯವನ್ನು ಕಾಪಾಡಲು ಬೇಕಾದ ನೈತಿಕ ಅಗತ್ಯಗಳು ನಮಗಿಲ್ಲಿ ಪ್ರಮುಖವಾಗುತ್ತದೆ. ರಾಗದ್ವೇಷಗಳಿರುವವರೆಗೆ ಅರಣ್ಯವನ್ನು ಕಾಪಾಡುವ ಅರ್ಹತೆಯಿರುವುದಿಲ್ಲ. ನಿಜವಾದ ಅರ್ಥದಲ್ಲಿ ಅರ್ಹತೆಯಿರುವುದು ಅರಿಹಂತನಿಗೆ ಮಾತ್ರ. ಒಬ್ಬನು ಅರಿಹಂತನಾಗದೇ ನೈಜಅರ್ಥದಲ್ಲಿ ಪರಿಸರವಾದಿಯೆನಿಸಲು ಸಾಧ್ಯವಿಲ್ಲ.

**ಗಾಮೇ ವಾ ಯದಿ ವಾರಞ್ಞೇ ನಿನ್ನೇ ವಾ ಯದಿ ವಾ ಥಾಲೇ**

**ಯತ್ಥಾರಹಂತೋ ವಿಹರಂತಿ ತಜ್ ಭೂಮಿ ರಾಮಣೆಯ್ಯಕಜ್**

**ರಮಣೀಯಾನಿ ಅರಞ್ಞಾನಿ ಯತ್ಥಾ ನ ರಮತೀ ಜನೋ**

**ವೀತರಾಗಾ ರಮಿಸ್ಸಂತಿ ನ ತೇ ಕಾಮಗವೇಸಿನೋ**[27]

ಅರಿಹಂತನನ್ನು ಬುದ್ಧನೆಂದು ಕರೆಯುತ್ತಾರೆ. ಆತನ ನಿರ್ವಾಣದ ಗೆಲುವು ಸೋಲಾಗಲು ಸಾಧ್ಯವಿಲ್ಲ. ಎಂದರೆ ಒಮ್ಮೆ ಮುಕ್ತನಾದ ಆತನು ಬಂಧನಕ್ಕೆ ಒಳಗಾಗುವುದಿಲ್ಲ. ಅನಂತ ಜ್ಞಾನವುಳ್ಳ ಆತನಿಗೆ ಯಾವ ಹೆಜ್ಜೆಯ ಗುರುತು ಇಲ್ಲ. ವ್ಯಾಖ್ಯಾನಕಾರರ ಪ್ರಕಾರ ಹೆಜ್ಜೆ ಗುರುತುಗಳೆಂದರೆ ರಾಗದ್ವೇಷಗಳು. ಆತನ ರಹಸ್ಯವನ್ನು ಬಲ್ಲವರಿಲ್ಲ. ಆತನು ತೃಷ್ಣೆಯೆಂಬ ವಿಷಾತ್ಮಕವಾದ ಬಲೆಯಲ್ಲಿ ಸಿಲುಕಿಕೊಂಡಿರುವುದಿಲ್ಲ. ಧೀರನಾದ ಆತನು ಧ್ಯಾನದಲ್ಲೇ ಇದ್ದು ನೈಷ್ಕರ್ಮ್ಯ ಮತ್ತು ಉಪಶಮಗಳನ್ನು ಸಂಪಾದಿಸಿಕೊಂಡಿರುತ್ತಾನೆ. ಮನುಷ್ಯ ಜನ್ಮವನ್ನು ಪಡೆಯುವುದು ಕಷ್ಟ. ಮನುಷ್ಯನಾಗಿ ಬದುಕುವುದು ಇನ್ನೂ ಕಷ್ಟ. ಸದ್ಧರ್ಮದ ಶಮನವು ದೊರಕುವುದು ಮತ್ತೂ ಕಷ್ಟ. ಇವೆಲ್ಲಕ್ಕಿಂತಲೂ ಕಷ್ಟತಮವಾಗುವುದು ಬುದ್ಧನಾಗುವುದು.

ಈ ಸಮ್ಯಕ್ ಸಂಬುದ್ಧನಿಗೆ ದಿವ್ಯಭೋಗಗಳು ಬೇಕಾಗಿರುವುದಿಲ್ಲ.

ಯಸ್ಸ ಜಾಲಿನಿ ವಿಸಟ್ಟಿಕಾ ತನ್ಹಾ ನತ್ಥಿ ಕುಹಿಂಚಿ ನೆತವೆ

ತಜ್ ಬುದ್ಧಜ್ ಅನಂತಗೋಚರಜ್ ಅಪದಜ್ ಕೇನ ಪದೇನ ನೆಸ್ಸಥ

ಯೇ ಝಾನಪಸುತಾ ಧೀರಾ ನೆಕ್ಖಮ್ಮೂಪಸಮೇ ರತಾ

ದೇವಾ ಪಿ ತೇಸಜ್ ಪಿಹಯಂತಿ ಸಂಬುದ್ಧಾನಜ್ ಸತೀಮತಜ್

ಕಿಚ್ಛೋ ಮನುಸ್ಸಪಟಲಾಭೋ ಕಿಚ್ಚಜ್ ಮಚ್ಚಾನ ಜೀವಿತಜ್

ಕಿಚ್ಚಜ್ ಸದ್ಧಮ್ಮಸವಣಜ್ ಕಿಚ್ಛೊ ಬುದ್ಧಾನಜ್ ಉಪ್ಪಾದೋ[28]

ಅಪಿ ದಿಬ್ಬೇಸು ಕಾಮೇಸು ರತಿಜ್ ಸೋ ನಾಧಿಗಚ್ಛತಿ

ತನ್ಹಕ್ಖಯರತೋ ಹೋತಿ ಸಮ್ಮಾಸಂಬುದ್ಧ ಸಾವಕೋ[29]

ಪೂಜ್ಯರಾದ ಬುದ್ಧರನ್ನಾಗಲೀ ಅವರ ಶ್ರಾವಕರನ್ನಾಗಲೀ ಪೂಜಿಸುವುದು ಸಾಧನೆ. ಅಂತಹ ನಿರ್ವಾಣವನ್ನು ಹೊಂದಿದವರನ್ನು ಮತ್ತು ಯಾವುದಕ್ಕೂ ಅಂಜದ ವ್ಯಕ್ತಿಗಳನ್ನು ಪೂಜಿಸುವವನ ಪುಣ್ಯವನ್ನು ನಿಗದಿ ಮಾಡಲು ಬರುವುದಿಲ್ಲವೆಂದು ಬುದ್ಧನು ಸಾರುತ್ತಾನೆ.

ಪೂಜಾರಹೆ ಪೂಜಾಯತೋ ಬುದ್ಧೇ ಯದಿ ವ ಸಾವಕೇ

ಪಪಂಚ ಸಮತಿಕ್ಕಂತೇ ತಿಣ್ಣಸೋಕ ಪರಿದ್ದವೇ

ತೇ ತಾದಿಸೇ ಪೂಜಾಯತೋ ನಿಬ್ಬುತೇ ಅಕುತೋಭಯೇ

ನ ಸಕ್ಕಾ ಪುಞ್ಞಜ್ ಸಂಖಾತುಜ್ ಇದಮತ್ತನ್ ತಿ ಕೇನ ಚಿ[30]

ಅರಿಹಂತನು ಅತ್ಯಂತ ಸುಖ ಜೀವನವನ್ನು ನಡೆಸುತ್ತಿರುತ್ತಾನೆ. ವೈರಿಯಾಗಲೀ, ಅವೈರಿಯಾಗಲೀ, ದುಃಖಿಸುವವರ ಮಧ್ಯೆ ಸುಖಿಯಾಗಿ, ಆಸಕ್ತಕರ ನಡುವೆ ಅನಾಸಕ್ತರಾಗಿ ಸುಖವಾಗಿ ಬಾಳುತ್ತಾನೆ. ಕಾರಣ ಆತನಿಗೆ ತನ್ನದು ಎಂಬುದು ಯಾವುದೂ ಇಲ್ಲ. ಆತನಿಗೆ ಪ್ರೀತಿಯೇ ಭಿಕ್ಷೆಯಾಗಿರುತ್ತದೆ.

ಸುಸಖಿಞ್ ವತ ಜೀವಾಮ ವೇರಿನೇಸು ಅವೇರಿನೋ

ವೇರಿನೇಸು ಮನುಸ್ಸೇಸು ವಿಹರಾಮ ಅವೇರಿನೋ

**ಸುಸುಖಙ್ ವತ ಜೀವಾಮ ಆತುರೇಸು ಅನಾತುರಾ**

**ಆತುರೇಸು ಮನುಸ್ಸೇಸು ವಿಹರಾಮ ಅನಾತುರಾ**

**ಸುಸುಖಙ್ ವತ ಜೀವಾಮ ಉಸ್ಸುಕೇಸು ಅನುಸ್ಸುಕಾ**

**ಉಸ್ಸುಕೇಸು ಮನುಸ್ಸೇಸು ವಿಹರಾಮ ಅನುಸ್ಸುಕಾ**

**ಸುಸುಖಙ್ ವತ ಜೀವಾಮ ಯೇಸಙ್ ನೋ ನತ್ಥಿ ಕಿಂಚನಙ್**

**ಪೀತಿಭಕ್ಖಾ ಭವಿಸ್ಸಾಮ ದೇವಾ ಅಭಿಸ್ಸರಾ ಯಥಾ**[31]

ಆತನ ನಡತೆಯಲ್ಲಿ ಯಾವ ದೋಷವೂ ಇರುವುದಿಲ್ಲ. ಪ್ರಜ್ಞಾ ಶೀಲ ಸಮಾಧಿಗಳಿಂದ ಕೂಡಿದ ಆತನು ಚಿನ್ನದ ನಾಣ್ಯದಂತೆ ಪರಿಶುದ್ಧನಾಗಿರುತ್ತಾನೆ. ನಿಂದಿಸಲು ಆತನಲ್ಲಿ ಯಾವ ದೋಷವೂ ಕಾಣಬರುವುದಿಲ್ಲ. ಎಂದರೆ ಹುಡುಕಿದರೂ ಆತನಲ್ಲಿ ದೋಷವೂ ಕಾಣುವುದಿಲ್ಲ. ನೈತಿಕ ಪರಿಪೂರ್ಣತೆಯನ್ನು ಸಾಧಿಸಿದ ಆತನನ್ನು ಬ್ರಹ್ಮಾದಿದೇವತೆಗಳು ಕೂಡ ಕೊಂಡಾಡುತ್ತಾರೆ.

**ಯಙ್ ಚೆ ವಿಙ್ಞೂ ಪಸಙ್ಸಂತಿ ಅನುವಿಚ್ಚ ಸುವೇ ಸುವೇ**

**ಅಚ್ಚಿದ್ದವುತ್ತಿಙ್ ಮೇಧಾವಿಙ್ ಪುಞ್ಞಸೀಲ ಸಮಾಹಿತಙ್**

**ನೆಕ್ಖಙ್ ಜಂಬೋನದಸ್ಸೇವ ಕೋತಙ್ ನಿಂದಿತುಂ ಅರಹತಿ**

**ದೇವಾ ಪಿ ನಙ್ ಪಸಙ್ಸಂತಿ ಬ್ರಾಹ್ಮಣಾ ಪಿ ಪಸಙ್ಸಿತೋ**[32]

ಅಂಜದಿರುವಿಕೆಯು ಅರಿಹಂತನ ಪ್ರಮುಖ ಲಕ್ಷಣ. ಅವನು ಪಾಪಪುಣ್ಯಗಳ ದ್ವಂದ್ವವನ್ನು ಮೀರಿರುತ್ತಾನೆ. ಆತನಲ್ಲಿ ಅಂಗಣವಿರುವುದಿಲ್ಲ. ಅಂಗಣವೆಂದರೆ ಪಾಪಕರ್ಮವನ್ನು ಮಾಡುವ ಇಚ್ಛೆ. ಅಂತಹ ಪಾಪದ ಇಚ್ಛೆಯು ಇಲ್ಲದಿರುವವನೇ ಅರಿಹಂತ. ಆತನಿಗೆ ಇದೇ ಕೊನೆಯ ದೇಹ. ಬೌದ್ಧಗ್ರಂಥಗಳನ್ನು ಚೆನ್ನಾಗಿ ವಿವರಿಸಿ ಹೇಳಬಲ್ಲ ನಿಪುಣನಾದ ಆತನು ಅಂತಿಮ ಶರೀರನು ಮತ್ತು ಮಹಾಪ್ರಾಜ್ಞನೆನಿಸುವನು.

**ನಿಟ್ಠಂಗತೋ ಅಸಂತಾಸೀ ವೀತತನ್ಹೋ ಅನಂಗಣೋ**

**ಅಚ್ಛಿಂದಿ ಭವಸಲ್ಲಾನಿ ಅಂತಿಮೋಯಜ್ ಸಮುಸ್ಸಯೋ**

**ಸಾ ವೇ ಅಮತಿಮಸಾರೀರೋ**

**ಮಹಾಪಞ್ಞೋ ಮಹಾಪುರಿಸೋ ತಿ ವುಚ್ಚತಿ**[33]

## ಸಾಮಾಜಿಕ ಅಂಶಗಳು

ಯಾವುದೇ ದಾರ್ಶನಿಕನ ಸಾಮಾಜಿಕ ಚಿಂತನೆಯಲ್ಲಿ ಪ್ರಮುಖವಾದ ಅಂಶಗಳೆಂದರೆ ಜಾತಿಪದ್ಧತಿ ಮತ್ತು ಸಮಾಜದಲ್ಲಿ ಸ್ತ್ರೀಗೆ ನೀಡಲಾಗಿರುವ ಸ್ಥಾನಮಾನ. ಬುದ್ಧನು ಧಮ್ಮಪದದಲ್ಲಿ ಈ ವಿಷಯಗಳ ಬಗ್ಗೆ ಏನು ಹೇಳುವನೆಂಬುದನ್ನು ಚರ್ಚಿಸುವ ಮುನ್ನ ಪೂರ್ವಭಾವಿಯಾಗಿ ವೈದಿಕ ದರ್ಶನಗಳು ಪ್ರತಿಪಾದಿಸುವ ವರ್ಣಧರ್ಮವನ್ನು ಕುರಿತು ಒಂದು ಸ್ಥೂಲ ಪರಿಚಯವನ್ನು ನೀಡುವುದು ಇಲ್ಲಿ ಅಗತ್ಯವೆನಿಸುತ್ತದೆ. ಏಕೆಂದರೆ ವರ್ಣಧರ್ಮದ ವಿಕೃತ ರೂಪವಾದ ಜಾತಿಪದ್ಧತಿಯನ್ನು ವಿರೋಧಿಸಿ ಬುದ್ಧನು ತನ್ನ ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಪಾದಿಸಿದ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದ ಪ್ರಾಚೀನ ವರ್ಣಧರ್ಮದ ಒಂದು ಸ್ಥೂಲ ವಿವರಣೆಯು ಈ ಸಂದರ್ಭದಲ್ಲಿ ಅವಶ್ಯಕ.

ಪ್ರಾಚೀನ ಧರ್ಮಶಾಸ್ತ್ರಜ್ಞರ ಪ್ರಕಾರ ಧರ್ಮ ನೀತಿ ಮತ್ತು ಸಂಸ್ಕೃತಿ – ಇವೆಲ್ಲವೂ ಹೆಚ್ಚು ಕಡಿಮೆ ಪರ್ಯಾಯ ಪದಗಳು. ಭಾರತೀಯ ಧರ್ಮಶಾಸ್ತ್ರವು ಮನುಷ್ಯನಲ್ಲಿ ಸಂಸ್ಕೃತಿಯನ್ನು ಮೂಡಿಸುವ ನೀತಿಶಾಸ್ತ್ರವೂ ಹೌದು. ಅಷ್ಟೇ ಅಲ್ಲ ಅದು ಅವನನ್ನು ಆಧ್ಯಾತ್ಮಿಕ ಗುರಿಯತ್ತ ಕೊಂಡೊಯ್ಯುವ ಸಾಧನವೂ ಹೌದು. **ಧರ್ಮ** ಎಂಬುದು ದುರ್ಬಲ ನಂಬಿಕೆ ಎಂಬ ಸಂಕುಚಿತ ಅರ್ಥವನ್ನು ಸೂಚಿಸುವುದಿಲ್ಲ. ಅದಕ್ಕೆ ಅನುಷ್ಠೇಯ ಅಥವಾ ಪ್ರಾಯೋಗಿಕ ಔಚಿತ್ಯವುಂಟು. ತತ್ತ್ವಶಾಸ್ತ್ರವು ಕೃತಕಬೌದ್ಧಿಕತೆಯಲ್ಲ. ಮನುಷ್ಯನ ಬೌದ್ಧಿಕ ಜ್ಞಾನವು ಅಪರೋಕ್ಷಾನುಭವದಲ್ಲಿ ಅಥವಾ ಗೀತೆಯ ಪರಿಭಾಷೆಯಲ್ಲಿ ಹೇಳುವುದಾದರೆ,

**ಜ್ಞಾನವು ವಿಜ್ಞಾನದಲ್ಲಿ** ಪರ್ಯವಸಾನವಾದಾಗ ಮಾತ್ರ ಅವನು ನಿಜವಾದ ಅರ್ಥದಲ್ಲಿ ತಾತ್ತ್ವಿಕನೆನಿಸಿಕೊಳ್ಳುತ್ತಾನೆ.[34] ಸತ್ಯದರ್ಶನ ಮಾನವನ ಗುರಿ. ಭಾರತೀಯ ಸಾಮಾಜಿಕತಜ್ಞರು ಈ ಗುರಿಯನ್ನು ಗಮನದಲ್ಲಿಟ್ಟುಕೊಂಡೇ ಸಾಮಾಜಿಕ ರೀತಿ–ನೀತಿಗಳನ್ನು ರೂಪಿಸುವುದು.

**ಧರ್ಮ** ಎಂಬ ಪದಕ್ಕೆ ಅನೇಕಾರ್ಥಗಳಿವೆ. ಸಾಮಾನ್ಯವಾಗಿ ಧರ್ಮ ಎಂದರೆ **ಬಿಗಿಯಾಗಿ ಹಿಡಿದಿಡು ಎಂದರ್ಥ**. ಎಂದರೆ ಧರ್ಮ ಎಂಬ ಪದವು ಸಾಮಾಜಿಕ ಮತ್ತು ನೈತಿಕ ವ್ಯವಸ್ಥೆಯನ್ನು ಸೂಚಿಸುತ್ತದೆ. **ಧಾರಣಾತ್ ಧರ್ಮ ಇತ್ಯಾಹುಃ, ಧರ್ಮೇಣ ವಿಧೃತಾ ಪ್ರಜಾಃ** ಎಂಬುದು ಮಹಾಭಾರತದ ಉಕ್ತಿ.[35] ಈ ಪದವನ್ನು ನೈಸರ್ಗಿಕ ವ್ಯವಸ್ಥೆ ಎಂಬ ಅರ್ಥದಲ್ಲೂ ಉಪಯೋಗಿಸುತ್ತಾರೆ.[36] ಕೆಲವು ಗ್ರಂಥಗಳು ಈ ಪದವನ್ನು **ಪದಾರ್ಥ** ಎಂಬ ಅರ್ಥದಲ್ಲೂ ಬಳಸುವುದುಂಟು.[37] ಆದರೆ ಪ್ರಸ್ತುತ ಸಂದರ್ಭದಲ್ಲಿ ಧರ್ಮವೆಂಬ ಪದವು ಮುಖ್ಯವಾಗಿ ಸಾಮಾಜಿಕ ಹಾಗೂ ನೈತಿಕ ವ್ಯವಸ್ಥೆಯನ್ನು ಸೂಚಿಸುತ್ತದೆ.

ವೈದಿಕ ದರ್ಶನಗಳಲ್ಲಿ ಧರ್ಮವನ್ನು ಸ್ಥೂಲವಾಗಿ ಸಾಮಾನ್ಯ ಧರ್ಮ ಮತ್ತು ವಿಶೇಷ ಧರ್ಮ ಎಂದು ವಿಂಗಡಿಸುತ್ತಾರೆ. ಮೊದಲನೆಯದು ಎಲ್ಲರಿಗೂ ಅನ್ವಯಿಸುತ್ತದೆ. ಉದಾಹರಣೆಗೆ ಅಹಿಂಸೆ, ಸತ್ಯ, ಅಸ್ತೇಯ ಮುಂತಾದವು ಎಲ್ಲರೂ ಆಚರಿಸಬೇಕಾದ ಕರ್ತವ್ಯಗಳು. ಎರಡನೆಯದು ಸಮಾಜದ ಕೆಲ ಮಂದಿಗೆ ಮಾತ್ರ ಸೀಮಿತವಾಗಿದೆ. ಉದಾಹರಣೆಗೆ ವರ್ಣಾಶ್ರಮ ಧರ್ಮಗಳು ಈ ವಿಶೇಷಧರ್ಮದ ಚೌಕಟ್ಟಿನೊಳಗೆ ಬರುತ್ತವೆ. ಒಬ್ಬನು ತನ್ನ ವರ್ಗ ಮತ್ತು ತನ್ನ ಬದುಕಿನ ನಿರ್ದಿಷ್ಟ ಘಟ್ಟಕ್ಕೆ ಸಂಬಂಧಿಸಿದಂತೆ ತಾನು ಆಚರಿಸಬೇಕಾದ ಕರ್ತವ್ಯಗಳೇ ವರ್ಣಾಶ್ರಮ ಧರ್ಮಗಳು. ಮಾನವನು ತಾನು ಸಮಾಜಕ್ಕೆ ಸಲ್ಲಿಸಬೇಕಾದ ಕರ್ತವ್ಯಗಳ ದೃಷ್ಟಿಯಿಂದ ಸಮಾಜವನ್ನು ಪ್ರಾಚೀನ ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಾಲ್ಕು ಪಂಗಡಗಳಾಗಿ ವಿಭಾಗಿಸಲಾಗಿತ್ತು. ಹಾಗೆಯೇ

ವೈಯಕ್ತಿಕ ಬದುಕಿನಲ್ಲಿ ಪೂರ್ಣತೆಯನ್ನು ಸಾಧಿಸಲು ಮಾನವನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಘಟ್ಟಗಳನ್ನು ಹಾದುಹೋಗಬೇಕಾಗಿತ್ತು.

ಈ ವರ್ಣಾಶ್ರಮ ಧರ್ಮಗಳು ಎಲ್ಲರಿಗೂ ಸಮಾನವಲ್ಲ. ಅವು ಮನುಷ್ಯನ ವರ್ಣ ಮತ್ತು ಆಶ್ರಮಗಳಿಗೆ ಅನುಸಾರವಾಗಿ ವ್ಯತ್ಯಾಸ ಹೊಂದುತ್ತಿರುತ್ತವೆ. ಒಂದು ವರ್ಣದವರಿಗೆ ಧರ್ಮವಾಗಿರುವುದು ಮತ್ತೊಂದು ವರ್ಣದವರಿಗೆ ಅಧರ್ಮವಾಗಬಹುದು. ಉದಾಹರಣೆಗೆ **ಸಂತೋಷ** ಅಥವಾ **ತೃಪ್ತಿ**ಯೆಂಬುದು ಬ್ರಾಹ್ಮಣನ ಧರ್ಮವಾದರೆ, ಕ್ಷತ್ರಿಯನಿಗೆ ಅದು ಅಧರ್ಮವಾಗುತ್ತದೆ, **ಅಸಂತುಷ್ಟೋ ದ್ವಿಜೋ ನಷ್ಟಃ ಸಂತುಷ್ಟಶ್ಚ ಮಹೀಪತಿ:**[38] ಹೀಗೆ ವೈದಿಕರ ಪ್ರಕಾರ ಸಾಮಾನ್ಯ ಧರ್ಮ ಕಲ್ಪನೆ ಮುಖ್ಯವೇನೋ ಹೌದು. ಆದರೆ ಸಮಾಜದ ಅಸ್ತಿತ್ವಕ್ಕೆ ಅದೊಂದೇ ಸಾಲದು. ಸಾಮಾಜಿಕ ಭದ್ರತೆಯು ಒಂದೇ ರೀತಿಯ ಕ್ರಿಯಾಶೀಲತೆಯನ್ನು ಆಧರಿಸಿಲ್ಲ. ಮನುಷ್ಯನ ಸಾಮರ್ಥ್ಯ, ಸ್ವಭಾವ ವೈವಿಧ್ಯಕ್ಕೆ ಮತ್ತು ಸಮಾಜದ ವಿವಿಧ ರೀತಿಯ ಅಗತ್ಯಗಳಿಗೆ ಅನುಸಾರವಾಗಿ ಕರ್ತವ್ಯಗಳಲ್ಲಿ ವೈವಿಧ್ಯವಿರಬೇಕು. ಆದರೆ ಇಲ್ಲಿ ಒಂದು ವಿಷಯವಂತೂ ಸ್ಪಷ್ಟ. ಸಾಮಾನ್ಯ ಧರ್ಮದ ವಿಶಾಲಬುನಾದಿಯಿಲ್ಲದೇ ವಿಶೇಷಧರ್ಮವು ಅರ್ಥಹೀನವಾಗುತ್ತದೆ. ಎಂದರೆ, ಸಾಮಾನ್ಯಧರ್ಮಗಳನ್ನು ತಿರಸ್ಕರಿಸುವವನು ವಿಶೇಷ ಧರ್ಮಗಳನ್ನು ಆಚರಿಸಲು ಅರ್ಹನಲ್ಲವೆಂದರ್ಥ. ಉದಾಹರಣೆಗೆ – ಕಳ್ಳತನದಿಂದ ಆರ್ಜಿಸಿದ ಧನದಿಂದ ಬ್ರಾಹ್ಮಣನು ಮಾಡುವ ಯಜ್ಞವು ಫಲಕಾರಿಯಾಗುವುದಿಲ್ಲ. ಹಾಗೆಯೇ ರಾಮಾಯಣದಲ್ಲಿ ಬರುವ– **'**ಧರ್ಮವನ್ನೇ ತೊರೆದ ನನಗೆ ರಾಜಧರ್ಮದಿಂದ ಏನು ತಾನೇ ಪ್ರಯೋಜನ**?'–** ಎಂಬ ಭರತನ ಉಕ್ತಿಯೂ ಇಲ್ಲಿ ಉಲ್ಲೇಖಾರ್ಹ.[39] ಅಂದರೆ ಮೂಲಭೂತವಾದ ನೀತಿಯನ್ನೇ ಪ್ರಾಮಾಣಿಕವಾಗಿ ಅನುಸರಿಸದವನು ಸೀಮಿತವಾದ ಅರ್ಥದಲ್ಲಿಯೂ ಸಹ ಇತರರಿಗೆ ನೆರವಾಗಲಾರ ಎಂದು ಇದರ ಅರ್ಥ.

ಋಗ್ವೇದದ ಪುರುಷ ಸೂಕ್ತದಲ್ಲಿ ವರ್ಣಧರ್ಮವನ್ನು ಕುರಿತಂತೆ ಉಲ್ಲೇಖವು ಕಂಡು ಬರುತ್ತದೆ. ಅದರ ಪ್ರಕಾರ ದೈವಿಕ ಮೂಲವನ್ನು ಹೊಂದಿರುವ ನಾಲ್ಕು ವರ್ಣಗಳು ವಿರಾಟ್ ಪುರುಷನ ಬೃಹತ್ ಶರೀರದ ನಿರ್ದಿಷ್ಟ ಅಂಗಗಳಿಂದ ಹೊರಹೊಮ್ಮಿವೆ. ವರ್ಣಧರ್ಮದ ಪ್ರಾಚೀನತೆಯನ್ನು ಪ್ರಶ್ನಿಸುವ ಮತ್ತು ಚಾತುರ್ವರ್ಣ್ಯದ ಬಗ್ಗೆ ಉಲ್ಲೇಖಿಸುವ ಪುರುಷಸೂಕ್ತವು ಋಗ್ವೇದದ ಪ್ರಕ್ಷಿಪ್ತಭಾಗವೆಂಬ Zimmer ಮತ್ತು ಇತರ ಸಮಾಜಶಾಸ್ತ್ರಜ್ಞರ ವಾದವನ್ನು Haug ತಳ್ಳಿಹಾಕುತ್ತಾನೆ. Haug ಪ್ರಕಾರ ಪೂರ್ಣರೂಪದಲ್ಲಿ ಅಲ್ಲದಿದ್ದರೂ ಮತ್ತು ಜಾತಿಗಳಲ್ಲಿ ಈಗಿರುವಷ್ಟು ದೀರ್ಘವಾದ ಅಂತರವಿಲ್ಲದಿದ್ದರೂ ವರ್ಣವ್ಯವಸ್ಥೆಯು ಋಗ್ವೇದದ ಕಾಲದಲ್ಲಿತ್ತು.[40] ಒಟ್ಟಿನಲ್ಲಿ ಈ ಸಾಮಾಜಿಕ ವಿಂಗಡಣೆಯ ಹಿನ್ನಲೆಯಲ್ಲಿರುವುದು ಕಾರ್ಯವಿಭಜನಾ ತತ್ವ. ಇಡೀ ಸಮಾಜವು ಒಂದು ಬೃಹತ್ ಶರೀರವಿದ್ದಂತೆ. ಶರೀರದ ವಿವಿಧ ಅಂಗಗಳಲ್ಲಿನ ಸಾಮರಸ್ಯವು ಅದರ ದೃಢತೆಗೆ ಕಾರಣವಾಗಿರುವಂತೆ, ಸಮಾಜದ ದೃಢತೆಯು ಅದರ ಸದಸ್ಯರ ಪೂರ್ಣ ಸಹಕಾರವನ್ನು ಅವಲಂಬಿಸಿದೆ. ಇನ್ನು ನಾಲ್ಕು ವರ್ಣಗಳ ಮುಖ್ಯ ಕರ್ತವ್ಯಗಳ ಬಗ್ಗೆ ಹೇಳಬೇಕೆಂದರೆ ವೇದಾಧ್ಯಯನ, ಅಧ್ಯಾಪನ, ಆತ್ಮನಿಗ್ರಹ, ತಪಸ್ಸು, ಯಜ್ಞಾಚರಣೆ – ಇವು ಬ್ರಾಹ್ಮಣನ ಕರ್ತವ್ಯಗಳು. ಅಧ್ಯಯನ, ಯಜ್ಞಾಚರಣೆ, ದಾನ, ದುಷ್ಟಶಿಕ್ಷಣ, ಶಿಷ್ಟರಕ್ಷಣ – ಇವು ಕ್ಷತ್ರಿಯನ ಕರ್ತವ್ಯಗಳು. ಅಧ್ಯಯನ, ದಾನ, ಯಜ್ಞಾಚರಣೆ, ಪ್ರಾಮಾಣಿಕ ವ್ಯಾಪಾರ (ವಾರ್ತಾ) –ಇವು ವೈಶ್ಯನ ಕರ್ತವ್ಯಗಳು. ಈ ಮೂರು ವರ್ಣದವರಿಗೆ ಸಹಾಯಕನಾಗಿರುವುದು ಶೂದ್ರನ ಕರ್ತವ್ಯ. ಈ ನಾಲ್ಕು ವರ್ಣಗಳಲ್ಲಿ ಕ್ಷತ್ರಿಯನೇ ಸಮಾಜಕ್ಕೆ ಮುಖ್ಯ ಬುನಾದಿ. ಏಕೆಂದರೆ, ಸಮಾಜವು ಬಾಹ್ಯ ಮತ್ತು ಆಂತರಿಕ ಅಪಾಯಗಳಿಲ್ಲದೇ ನಿಂತಿರುವುದು ಆತನ ಶೌರ್ಯ ಪರಾಕ್ರಮಗಳನ್ನು ಅವಲಂಬಿಸಿಯೇ. ಆದರೆ ಇಲ್ಲಿ ನಾವು ಇನ್ನೂ ಒಂದು ವಿಷಯವನ್ನು ನೆನಪಿನಲ್ಲಿಡುವುದು ಅವಶ್ಯಕ. ಕೇವಲ ಬಾಹುಬಲವು ಅಧಿಕಾರದ ಸಾರಸತ್ವವಾಗಲು ಮತ್ತು ಸಾಮಾಜಿಕ ವ್ಯವಸ್ಥೆಗೆ

ಆಧಾರವಾಗಲು ಸಾಧ್ಯವಿಲ್ಲ. ಬಲವೊಂದೇ ಸಾಮಾಜಿಕ ವ್ಯವಸ್ಥೆಗೆ ಆಧಾರವಾದರೆ ರಾಜನು ಸರ್ವಾಧಿಕಾರಿಯಾಗಿ ಪರಿಣಮಿಸಿ ಅವನು ಪ್ರಜೆಗಳನ್ನು ಪಶುಗಳಂತೆ ನಡೆಸಿಕೊಳ್ಳುವ ಸಾಧ್ಯತೆಯುಂಟು. ಇಂತಹ ಸಂದರ್ಭಗಳಲ್ಲಿ ಪ್ರಜೆಗಳು ಸ್ವ–ಇಚ್ಛೆಯಿಂದ ತಮ್ಮ ಕರ್ತವ್ಯಗಳನ್ನು ಆಚರಿಸಲಾರರು. ಈ ಕಾರಣದಿಂದ ನಾಲ್ಕು ವರ್ಣಗಳ ಜೊತೆಗೆ ಶ್ರೇಯೋರೂಪವಾದ ಧರ್ಮವನ್ನು ಸೃಷ್ಟಿಸುವ ಅಗತ್ಯವುಂಟಾಯಿತೆಂದು ಬೃಹದಾರಣ್ಯಕ ಉಪನಿಷತ್ತು ತಿಳಿಸುತ್ತದೆ. ಅಂದರೆ, ಸಾಮಾಜಿಕ ಭದ್ರತೆಗೆ ಆಧಾರ ನಿರ್ದಿಷ್ಟ ವರ್ಣವಲ್ಲ. ಧರ್ಮವೊಂದೇ ಸಾಮಾಜಿಕ ಸ್ಥಿತಿಗೆ ಆಧಾರ. ಬಾಹ್ಯನಾದ ರಾಜ ಮತು ರಾಜ್ಯದ ಪ್ರಭುತ್ವಕಿಂತಲೂ ಆಂತರಿಕವಾದ ಧರ್ಮದ ಪ್ರಭುತ್ವವು ಶ್ರೇಷ್ಠವಾದುದು. ಏಕೆಂದರೆ, ಅದು ವ್ಯಕ್ತಿ – ಸಮಾಜಗಳನ್ನು ಕಾಪಾಡುವ ಮತ್ತು ರಾಜನೂ ಸೇರಿದಂತೆ ಎಲ್ಲರನ್ನೂ ನಿಯಂತ್ರಿಸುವ ಸಾಧನ. ಸರಿ–ತಪ್ಪುಗಳ ವಿವೇಚನೆಯನ್ನು ಮಾಡುವಂತೆ ಮಾನವನನ್ನು ಪ್ರಚೋದಿಸುವುದೇ ಧರ್ಮ. ಈ ಅಂಶವೇ ಮಾನವನನ್ನು ಸೃಷ್ಟಿಯ ಇತರ ಜಂತುಗಳಿಂದ ಪ್ರತ್ಯೇಕಿಸುವುದು. ಆಂತರಿಕ ಮೂಲವನ್ನು ಹೊಂದಿರುವ, ಅಂದರೆ ಮಾನವರಲ್ಲಿ ರೂಢವಾಗಿರುವ ಈ ನೈತಿಕ ಪ್ರಜ್ಞೆಯೇ ವಾಸ್ತವವಾಗಿ ಸಾಮಾಜಿಕ ಭದ್ರತೆಗೆ ಕಾರಣ.

ಮತ್ತೊಂದು ಅಂಶವೆಂದರೆ, ಈ ವರ್ಣಕಟ್ಟಳೆಗಳು ಅಷ್ಟು, ಬಿಗಿಯಲ್ಲವೆಂಬುದನ್ನು ನಾವು ಮರೆಯಬಾರದು. ಸಡಿಲತೆಯು (Flexibility) ಸಾಮಾಜಿಕ ರೀತಿನೀತಿಯ ಒಂದು ಒಳ್ಳೆಯ ಲಕ್ಷಣ. ಮಹಾಭಾರತದ ಭೀಷ್ಮನ ಪ್ರಕಾರ ಧರ್ಮವು ಸಾಪೇಕ್ಷ. ಅದು ದೇಶಕಾಲಗಳಿಂದ ನಿರ್ಧಾರಿತವಾಗುತ್ತದೆ. ಇವುಗಳ ಪ್ರಾಬಲ್ಯ ಎಷ್ಟು ತೀವ್ರವೆಂದರೆ, ಆತನ ಪ್ರಕಾರ ಅದು ಧರ್ಮವನ್ನು ಅಧರ್ಮವನ್ನಾಗಿಯೂ ಮತ್ತು ಅಧರ್ಮವನ್ನು ಧರ್ಮವನ್ನಾಗಿಯೂ ಮಾಡುತ್ತದೆ. ಈ ನೀತಿಯನ್ನನುಸರಿಸಿ ಶಾಸ್ತ್ರಕಾರರು ಒಬ್ಬನು

ಅಪತ್ಕಾಲದಲ್ಲಿ ಮತ್ತೊಂದು ಧರ್ಮವನ್ನು ಆಚರಿಸಲೂ ಅನುಮತಿ ನೀಡುತ್ತಾರೆ. ಅವರ ಪ್ರಕಾರ ಒಬ್ಬನ ವರ್ಣಕ್ಕೂ ಮತ್ತು ನೈತಿಕತೆಗೂ, ಯಾವ ರೀತಿಯ ಸಂಬಂಧವೂ ಇಲ್ಲ. ಒಬ್ಬನ ಶ್ರೇಷ್ಠತೆಯು ಅವನ ಸ್ವಧರ್ಮ ನಿಷ್ಠೆ ಮತ್ತು ಶೀಲ–ನಡತೆಗಳಿಂದ ನಿರ್ಧರಿಸಲ್ಪಡುವುದೇ ಹೊರತು ಅವನ ವರ್ಣದಿಂದಲ್ಲ. ಧರ್ಮರಾಯನ ಪ್ರಕಾರ ಶೀಲ–ನಡತೆಗಳಿರುವ ಶೂದ್ರನು ಬ್ರಾಹ್ಮಣನಾಗುತ್ತಾನೆ ಮತ್ತು ಅವುಗಳಿಲ್ಲದಿರುವ ಬ್ರಾಹ್ಮಣನು–ಶೂದ್ರನಾಗುತ್ತಾನೆ. ಹಾಗೆಯೇ ವಂಶ ಅಥವಾ ಕುಲವು ಒಬ್ಬನ ವೃತ್ತಿಯನ್ನು ನಿರ್ಧರಿಸುವುದಿಲ್ಲ. ಭೃಗುವಂಶಕ್ಕೆ ಸೇರಿದವನೊಬ್ಬ ರಥನಿರ್ಮಾಣತಜ್ಞನಾಗಿದ್ದನೆಂದು ವೇದದಿಂದ ತಿಳಿದು ಬರುತ್ತದೆ. ಋಗ್ವೇದದಲ್ಲಿ ಋಷಿಯೊಬ್ಬನು– 'ನಾನು ಕವಿ, ನನ್ನ ತಂದೆ ವೈದ್ಯ ಮತ್ತು ನನ್ನ ತಾಯಿ ಕಾಳನ್ನು ಕುಟ್ಟುವವಳು' ಎನ್ನುತ್ತಾನೆ.[41]

ಈಗ ಪ್ರಸ್ತುತ ಸಮಾಜದಲ್ಲಿ ವರ್ಣಧರ್ಮವು ಎಷ್ಟು ಸಂಗತವೆಂಬುದು ಪ್ರಶ್ನೆ. ಸಮಾಜದ ವಿವಿಧ ಅಗತ್ಯವನ್ನು ಪೂರೈಸಲು ಒಂದು ವಿಧವಾದ ವರ್ಗೀಕರಣ ಅಗತ್ಯ ಹಾಗೂ ಅನಿವಾರ್ಯವೆಂಬುದನ್ನು ಆಧುನಿಕ ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಈ ವರ್ಗೀಕರಣವು ಮಾನವನ ಸ್ವಭಾವ, ಸಾಮರ್ಥ್ಯ ಹಾಗೂ ಪ್ರತಿಭೆಗಳಲ್ಲಿನ ವೈವಿಧ್ಯವನ್ನು ಅವಲಂಬಿಸಿರುತ್ತದೆ. Kingsley Davis ಮತ್ತು G.E.Moore ಹೇಳುವಂತೆ ಪ್ರಗತಿಪರ ಸಮಾಜಕ್ಕೆ ಈ ರೀತಿಯ ವರ್ಗೀಕರಣವೊಂದು 'Functional necessity' ಆಗಿದೆ. Ward ಎಂಬಾತನು ಯುರೋಪ್, ಗ್ರೀಕ್, ರೋಮ್, ಪಾಲಿನೇಶಿಯದಲ್ಲಿ ವರ್ಣವ್ಯವಸ್ಥೆಯನ್ನು ಹೋಲುವ ನಾಲ್ಕು ಎಸ್ಟೇಟ್‌ಗಳ (ಅಂತಸ್ತು) ಬಗ್ಗೆ ಉಲ್ಲೇಖಿಸುತ್ತಾನೆ. ಪುರೋಹಿತ (clergy) ಕುಲೀನ, ಕ್ಷಾತ್ರ (Noble warriors) ಮತ್ತು ವರ್ತಕ (Merchants) – ಇವು ಮೊದಲ ಮೂರು ವರ್ಗಗಳು. ನಾಲ್ಕನೆಯದನ್ನು ಇಂಗ್ಲೆಂಡಿನಲ್ಲಿ

ಪಾಮರ ವರ್ಗವೆಂದು (commons) ಮತ್ತು ಫ್ರಾನ್ಸಿನಲ್ಲಿ ಬೂರ್ಶ್ವಾಸೀ (Bourgeoisie) – ಎಂದು ಕರೆಯುತ್ತಾರೆ.

ಪ್ರಾಚೀನ ಭಾರತದಲ್ಲಿ ನಿರ್ದಿಷ್ಟವರ್ಗವು ಪ್ರತಿಷ್ಠಿತ ಸ್ಥಾನವನ್ನು ಪಡೆದಿದ್ದಲ್ಲಿ ಅದಕ್ಕೆ ಕಾರಣ ಆರ್ಥಿಕ ಅಂಶವಾಗಿರಲಿಲ್ಲ. ಪ್ರತಿಯೊಬ್ಬನೂ ತನಗಿರುವ ಹೊಣೆಗಾರಿಕೆಯ ದೃಷ್ಟಿಯಿಂದ ಶ್ರೇಷ್ಠನಾಗಿದ್ದನು. ಬ್ರಾಹ್ಮಣನಿಗಂತೂ ಇದು ಹೆಚ್ಚಾಗಿ ಅನ್ವಯಿಸುತ್ತಿತ್ತು. ಧನಸಂಗ್ರಹಣೆ ಅವನಿಗೆ ಪೂರ್ಣ ನಿಷೇಧವಾಗಿತ್ತು. ಸುಖ ನೀಡದ ವಸ್ತುಗಳಲ್ಲಿ ಅವನು ಸುಖವನ್ನು ಕಂಡುಕೊಳ್ಳಬೇಕಿತ್ತು. ಜ್ಞಾನಾರ್ಜನೆ ಅವನ ಮುಖ್ಯ ಕರ್ತವ್ಯವಾಗಿತ್ತು. ಈ ಸಾಮಾಜಿಕ ಹೊಣೆಗಾರಿಕೆಯಿಂದಾಗಿ ಉಳಿದ ವರ್ಣದವರಿಗಿಂತ ಮೊದಲೇ ಅವನು ಶಿಕ್ಷಣವನ್ನು ಪಡೆಯಲು ಪ್ರಾರಂಭಿಸಬೇಕಿತ್ತು. ಹಾಗೆಯೇ ಅವನು ತನ್ನ ಬೌದ್ಧಿಕ ಸಾಮರ್ಥ್ಯವನ್ನು ದುರುಪಯೋಗಿಸಕೊಂಡಲ್ಲಿ ಇತರ ವರ್ಗದವರಿಗಿಂತಲೂ ತೀಕ್ಷ್ಣವಾದ ಶಿಕ್ಷೆಯನ್ನು ಎದುರಿಸಬೇಕಿತ್ತು. ಉದಾಹರಣೆಗೆ ಶೂದ್ರನು ಕದ್ದ ವಸ್ತುವಿನ 8ರಷ್ಟು, ವೈಶ್ಯನು 16ರಷ್ಟು, ಕ್ಷತ್ರಿಯನು 32ರಷ್ಟು ಮತ್ತು ಬ್ರಾಹ್ಮಣನು 64ರಷ್ಟು ಅಥವಾ 100ರಷ್ಟು ಅಥವಾ 124 ರಷ್ಟು ಕೊಡಬೇಕಿತ್ತು.

ಹೀಗೆ ಸಮಾನತೆಯ ಕಲ್ಪನೆಯು ಮನುಷ್ಯನ ಸ್ವಭಾವ ಹಾಗೂ ಸಾಮರ್ಥ್ಯ ವೈವಿಧ್ಯಗಳನ್ನು ಒಳಗೊಂಡಿದೆ. ಆದರೆ ಸಮಾಜದಲ್ಲಿ ವರ್ಗೀಕರಣ ಎಷ್ಟು ಅಗತ್ಯವೋ, ಅದರಲ್ಲಿನ ಉಚ್ಚ–ನೀಚ ಅಂತರವೂ ಅಷ್ಟೇ ಅನಿವಾರ್ಯವಾಗಿರುವುದು ವಿಷಾದನೀಯ. 'ಇತಿಹಾಸದಲ್ಲಿ ವರ್ಗಕಲಹವಿಲ್ಲದ ಕಾಲವೊಂದನ್ನು ನಾನು ನಿಶ್ಚಯವಾಗಿ ಅಪೇಕ್ಷಿಸುತ್ತೇನೆ. ಆದರೆ, ಅಂತಹ ಕಾಲವನ್ನು ನಾನು ಕಂಡೇ ಇಲ್ಲ' ಎಂದು summer ಹೇಳುತ್ತಾನೆ. ಆದರೂ ಇದು ಕಾರ್ಯ ಸಾಧ್ಯವಲ್ಲವೆಂದರ್ಥವಲ್ಲ. ಅಂತಹ ಸಾಧನೆಯು ವ್ಯಕ್ತಿಯ

ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದುದು. ಸಮಾನತೆ ಅಥವಾ ಏಕತೆಯು ವ್ಯಕ್ತಿಯ ನೈತಿಕ ಮತ್ತು ಅಂತರಂಗಿಕ ಜೀವನದಿಂದ ನಿರ್ಧಾರಿತವಾದುದು. ಬಾಹ್ಯ ಅಂಶಗಳಿಂದ ಅದೆಂದಿಗೂ ಸಾಧನೆಯಾಗಲಾರದು.

ಧಮ್ಮಪದದಲ್ಲಿ ಸ್ತ್ರೀಯರ ಸ್ಥಾನಮಾನ ಮತ್ತು ಶಿಕ್ಷಣ ಪದ್ಧತಿಗಳ ಬಗ್ಗೆ ಅಷ್ಟು ಆಳವಾದ ಪ್ರಸ್ತಾಪವಿರದಿದ್ದರೂ ಜಾತಿಯನ್ನು ಕುರಿತ ಚರ್ಚೆಯು ವಿಪುಲವಾಗಿ ಎದ್ದು ಕಾಣುತ್ತದೆ. ಬುದ್ಧನು ಜಾತ್ಯಾತೀತ ಆದರ್ಶಗಳನ್ನು ಪ್ರತಿಪಾದಿಸಿದರೂ ಆತನು ಧಮ್ಮಪದದಲ್ಲಿ ಬ್ರಾಹ್ಮಣ ಶಬ್ದವನ್ನು ಪದೇ ಪದೇ ಪ್ರಯೋಗಿಸುವುದು ಗಮನಾರ್ಹ. ಆದರೆ ಆತನ ಬ್ರಾಹ್ಮಣ ಪರಿಕಲ್ಪನೆಯೇ ಬೇರೆ. ಅದು ಸೀಮಿತವಾದ ಅರ್ಥದಲ್ಲಿ ಅಲ್ಲ. ಎಂದರೆ ಬ್ರಾಹ್ಮಣನು ಹುಟ್ಟಿನಲ್ಲಿ ಅಲ್ಲ, ಅದು ಮನುಷ್ಯನು ತಲುಪಬೇಕಾದ ಒಂದು ಆತ್ಯಂತಿಕ ಆದರ್ಶ. ಆತನ ಪ್ರಕಾರ **ನಿರ್ವಾಣವನ್ನು ಹೊಂದಿದ ಅರಿಹಂತನೇ ಬ್ರಾಹ್ಮಣ**. ಒಂದೆಡೆ ಆತನು ಹೀಗೆ ಹೇಳುತ್ತಾನೆ, **“**ತಂದೆ–ತಾಯಿಗಳನ್ನು ಕೊಂದು ಇಬ್ಬರು ಕ್ಷತ್ರಿಯ ರಾಜರನ್ನು ಕೊಂದು ಮತ್ತು ಅನುಚರಸಹಿತವಾದ ರಾಷ್ಟ್ರವನ್ನು ಕೊಂದು ಬ್ರಾಹ್ಮಣನು ದುಃಖರಹಿತವಾಗುವನು**”**. ನಾವೀಗಾಗಲೇ ಪೂರ್ವಾಧ್ಯಾಯವೊಂದರಲ್ಲಿ ಪ್ರಸ್ತಾಪಿಸಿರುವಂತೆ ಇದೊಂದು ಒಗಟಿನ ಗಾಥೆ. ಈ ಗಾಥೆಗೆ ನಾವು ವಾಚ್ಯಾರ್ಥವನ್ನು ನೀಡಬಾರದು. ಇಲ್ಲಿ ತಾಯಿಯೆಂದರೆ ತೃಷ್ಣೆ, ತಂದೆ ಎಂದರೆ ಅಹಂಕಾರ (ಅಸ್ಮೀಮಾನ). ಶಾಶ್ವತ ದೃಷ್ಟಿ ಮತ್ತು ಉಚ್ಛೇದ ದೃಷ್ಟಿಗಳೇ ಇಬ್ಬರು ರಾಜರು. ಇಂದ್ರಿಯ ವಿಷಯ ಮತ್ತು ಇಂದ್ರಿಯಗಳೇ ರಾಷ್ಟ್ರ, ಆಸಕ್ತಿಯೇ ಅನುಚರರು.

**ಮಾತಾರಙ್ ಪಿತರಙ್ ಹಂತ್ವಾ ರಾಜಾನೋ ದ್ವೇ ಚ ಖತ್ತಿಯೇ**

**ರಟ್ಠಙ್ ಸಾನಚೂರಙ್ ಹಂತ್ವಾ ಅನೀಘೋ ಯಾತಿ ಬ್ರಾಹ್ಮಣೋ**[42]

ಹಾಗೆಯೇ ಮತ್ತೊಂದು ಒಗಟಿನ ಗಾಥೆಯಲ್ಲೂ ಬ್ರಾಹ್ಮಣ ಶಬ್ದದ ಪ್ರಯೋಗವಿದೆ. **“**ತಂದೆ–ತಾಯಿಯರನ್ನು ಕೊಂದು ಇಬ್ಬರು ಶ್ರೋತ್ರಿಯರನ್ನು ಕೊಂದು ಐದನೆಯದಾದ

ಹುಲಿಯನ್ನು ಕೊಂದು ಬ್ರಾಹ್ಮಣನು ದುಃಖರಹಿತನಾಗುತ್ತಾನೆ". ಇಲ್ಲಿ ಶ್ರೋತ್ರಿಯ ರಾಜರೆಂದರೆ ಎರಡು ಅತಿರೇಕಗಳ ದೃಷ್ಟಿಕೋನ. ಹುಲಿಯು ಮಾನಸಿಕ ಅಡಚಣೆಯನ್ನು ಸೂಚಿಸುತ್ತದೆ. ಈ ಶಬ್ದಗಳ ಇಂಗಿತವೇನೇ ಇರಲಿ. ಬ್ರಾಹ್ಮಣ ಶಬ್ದವು ಅರಿಹಂತನನ್ನು ಸೂಚಿಸುವುದು ಖಚಿತ.[43] ಅದೇ ರೀತಿ ಮತ್ತೊಂದು ಗಾಥೆಯು ಹೀಗಿದೆ, "ಲೋಕದಲ್ಲಿ ಮಾತೃಸೇವೆಯು ಸುಖವಾಗಿದೆ. ಹಾಗೆಯೇ ಪಿತೃಸೇವೆಯು ಸುಖವಾಗಿದೆ. ಶ್ರಮಣನಾಗಿರುವುದು ಮತ್ತು ಬ್ರಾಹ್ಮಣನಾಗಿರುವುದು ಇನ್ನೂ ಸುಖಕರವಾಗಿದೆ". ಇಲ್ಲಿ ಬ್ರಾಹ್ಮಣನೆಂದರೆ ಪಾಪರಹಿತನಾದ ಸಂತನೆಂದರ್ಥ. ಇಲ್ಲಿ ಬ್ರಾಹ್ಮಣಶಬ್ದವನ್ನು ಮುನಿ ಅಥವಾ ಸಂತನೆಂಬ ಅರ್ಥದಲ್ಲಿ ಬಳಸಲಾಗಿದೆ. ಕೆಲವು ಕಡೆಗಳಲ್ಲಿ ಮಾತೃಸೇವೆ ಮತ್ತು ಪಿತೃಸೇವೆಗಳನ್ನು ಮಾತೃತ್ವ ಮತ್ತು ಪಿತೃತ್ವವೆಂದು ಅರ್ಥೈಸಲಾಗಿದೆ. ಎಂದರೆ ತಂದೆ ತಾಯಿಯಾಗಿರುವುದು ಸುಖಕ್ಕೆ ಕಾರಣ. ಹಾಗೆಯೇ ಶ್ರಮಣನಾಗಿರುವುದು ಮತ್ತು ಬ್ರಾಹ್ಮಣನಾಗಿರುವುದು ಮತ್ತೂ ಸುಖಕರ.

**ಸುಖಾ ಮತ್ತೆಯ್ಯತಾ ಲೋಕೇ ಅಥೋ ಪತ್ತೆಯ್ಯತಾ ಸುಖಾ**

**ಸುಖಾ ಸಾಮಞ್ಞತಾ ಲೋಕೇ ಅಥೋ ಬ್ರಹ್ಮಞ್ಞತಾ ಸುಖಾ**[44]

ವಾಸ್ತವವಾಗಿ ಧಮ್ಮಪದದ ಇಡೀ ಕೊನೆಯ ಅಧ್ಯಾಯವನ್ನು **ಬ್ರಾಹ್ಮಣವಗ್ಗ**ವೆಂದೇ ಕರೆಯುತ್ತಾರೆ. ಈ ಅಧ್ಯಾಯವು ಬ್ರಾಹ್ಮಣನೆಂದರೆ ಯಾರು, ಆತನ ಲಕ್ಷಣಗಳೇನು ಎಂಬುದನ್ನು ಬಹಳ ಸ್ವಾರಸ್ಯವಾಗಿ ವಿವರಿಸುತ್ತದೆ. ಬುದ್ಧನ ಪ್ರಕಾರ ಬ್ರಾಹ್ಮಣನು ಅತಿಯಾದ ಭೋಗ ಮತ್ತು ಅತಿಯಾದ ದೇಹದಂಡನೆ – ಇವೆರಡೂ ಅತಿರೇಕಗಳಿಂದಲೂ ದೂರವಾಗಿರುತ್ತಾನೆ. ಆತನು ಎರಡು ಧರ್ಮಗಳಲ್ಲೂ ಎಂದರೆ ಆತ್ಮನಿಗ್ರಹ ಮತ್ತು ಆಧ್ಯಾತ್ಮಿಕ ಸಾಕ್ಷಾತ್ಕಾರ – ಇವೆರಡರಲ್ಲೂ ಪಾರಂಗತನಾಗಿರುತ್ತಾನೆ. ಆತನಿಗೆ ಯಾವ ಸಂಯೋಗಗಳೂ ಎಂದರೆ ಬಂಧನಗಳೂ, ಭಯವೂ ಇರುವುದಿಲ್ಲ. "ಧ್ಯಾನ ಮಾಡುವವನೂ, ನಿರ್ಮಲನೂ,

ದೋಷರಹಿತನೂ ಮತ್ತು ಆಸ್ರವಗಳಿಲ್ಲದಿರುವವನನ್ನೇ ನಾನು ಬ್ರಾಹ್ಮಣನೆಂದು ಕರೆಯುತ್ತೇನೆ" ಎಂದು ಬುದ್ಧನು ಸಾರುತ್ತಾನೆ. ಸೂರ್ಯನು ಹಗಲು ಬೆಳಗಿದರೆ ಚಂದ್ರನು ಇರುಳಿನಲ್ಲಿ ಬೆಳಗುತ್ತಾನೆ, ಕ್ಷತ್ರಿಯನು ಯುದ್ಧಸನ್ನದ್ಧನಾದಾಗ ಬೆಳಗುತ್ತಾನೆ, ಬ್ರಾಹ್ಮಣನಾದರೋ ಧ್ಯಾನ ಮಾಡುವಾಗ ಬೆಳಗುತ್ತಾನೆ. ಆದರೆ ಬುದ್ಧನು ಎಲ್ಲ ಕಾಲಗಳಲ್ಲೂ ತೇಜಸ್ಸಿನಿಂದ ಬೆಳಗುತ್ತಾನೆ ಎನ್ನುವಾಗ ಬ್ರಾಹ್ಮಣನಿಗೆ ಬುದ್ಧನಿಗೂ ವ್ಯತ್ಯಾಸವನ್ನು ತೋರಿಸಲಾಗಿದೆ. ಧ್ಯಾನ ಸಾಧನೆಯಲ್ಲಿ ತೊಡಗಿರುವವನು ಬ್ರಾಹ್ಮಣನಾದರೆ ಆ ಧ್ಯಾನದಲ್ಲಿ ಸಫಲತೆಯನ್ನು ಕಂಡವನು ಬುದ್ಧನಾಗುತ್ತಾನೆ.

**ಯದಾ ದ್ವಯೇಸು ಧಮ್ಮೇಸು ಪಾರಗು ಹೋತಿ ಬ್ರಾಹ್ಮಣೋ**

**ಅಥಸ್ಸ ಸಬ್ಬೇ ಸಂಯೋಗಾ ಅತ್ಥಜ್ ಗಚ್ಛಂತಿ ಜಾನತೋ**

**ಯಸ್ಸ ಪಾರಜ್ ಅಪಾರಜ್ ವಾ ಪಾರಾಪಾರಜ್ ನ ವಿಜ್ಜತಿ**

**ವೀತದ್ದರಜ್ ವಿಸಂಯುತ್ತಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**

**ಝಾಯಿಜ್ ವಿರಜಂ ಆಸೀನಜ್ ಕಟಕಿಚ್ಚಜ್ ಅನಾಸವಜ್**

**ಉತ್ತಮತ್ಥಜ್ ಅನುಪ್ಪತ್ತಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**

**ದಿವಾ ತಪತಿ ಆದಿಚ್ಚೋ ರತ್ತಿಜ್ ಆಭಾತಿ ಚಂದಿಮಾ**

**ಸನ್ನದ್ಧೋ ಖತ್ತಿಯೋ ತಪತಿ ಝಾಯೀ ತಪತಿ ಬ್ರಾಹ್ಮಣೋ** [45]

ಪಾಪಗಳನ್ನು ಬಹಿಷ್ಕರಿಸಿದವನು ಬ್ರಾಹ್ಮಣನೆಂದು ಬುದ್ಧನು ಸಾರುತ್ತಾನೆ. ಆತನ ಪ್ರಕಾರ ಬ್ರಾಹ್ಮಣನನ್ನು ಹೊಡೆಯಬಾರದು, ಹಾಗೆ ಹೊಡೆದವನ ಮೇಲೆ ಬ್ರಾಹ್ಮಣನು ಕೋಪಗೊಳ್ಳಬಾರದು. ಬುದ್ಧನು ಬ್ರಾಹ್ಮಣನನ್ನು ಹೊಡೆದವನಿಗೂ ಮತ್ತು ಹೊಡೆಯಲ್ಪಟ್ಟು ಕೋಪಗೊಂಡ ಬ್ರಾಹ್ಮಣನಿಗೂ ಧಿಕ್ಕಾರವನ್ನು ಹೇಳುತ್ತಾನೆ.

**ಬಾಹಿತಪಾಪೋ ತಿ ಬ್ರಾಹ್ಮಣೋ ಸಮಚರಿಯಾ ಸಮಣೋ ತಿ ವುಚ್ಚತಿ**

**ಪಬ್ಬಾಜಯತ್ತನೋ ಮಲಜ್ ತಸ್ಮಾ ಪಬ್ಬಜಿತೋ ತಿ ವುಚ್ಚತಿ**

**ನ ಬ್ರಾಹ್ಮಣಸ್ಸ ಪಹರೆಯ್ಯ ನಾಸ್ಸ ಮುಂಚೇಥ ಬ್ರಾಹ್ಮಣೋ**

**ಧೀ ಬ್ರಾಹ್ಮಣಸ್ಸ ಹಂತಾರಜ್ ತತೋ ಧಿ ಯಸ್ಸ ಮುಂಚತಿ**[46]

ತನಗಿಷ್ಟವಾದ ಪದಾರ್ಥಗಳನ್ನು ಮನಸ್ಸಿನಿಂದಲೂ ನಿಷೇಧಿಸುವವನೇ ನಿಜವಾದ ಬ್ರಾಹ್ಮಣ. ಅವನಲ್ಲಿ ಹಿಂಸೆ ಮಾಡಬೇಕೆಂಬ ಮಾನಸಿಕ ಪ್ರವೃತ್ತಿ ಇರುವುದಿಲ್ಲ. ತ್ರಿಕರಣಗಳನ್ನು (ಮಾತು, ಮನಸ್ಸು ಮತ್ತು ಶರೀರ) ಹತೋಟಿಯಲ್ಲಿಟ್ಟುಕೊಂಡು ದುಷ್ಕರ್ಮಗಳನ್ನು ಮಾಡದವನೇ ಬ್ರಾಹ್ಮಣ.

**ನ ಬ್ರಾಹ್ಮಣಸ್ಸೇತದ್ ಅಕಿಂಚಿ ಸೆಯ್ಯೋ**

**ಯದ್ ಆನಿಸೆಧೋ ಮನಸೋ ಪಿಯೇಹಿ**

**ಯತೋ ಯತೋ ಹಿಂಸಮನೋ ನಿವೃತ್ತತಿ**

**ತತೋ ತತೋ ಸಮ್ಮತಿ ಯೇವ ದುಕ್ಖಜ್**[47]

ಇಂತಹ ಬ್ರಾಹ್ಮಣನಿಂದಲೇ ಸಮ್ಯಕ್ ಸಂಬುದ್ಧನು ಉಪದೇಶಿಸಿರುವ ಧಮ್ಮವನ್ನು ತಿಳಿದುಕೊಳ್ಳಬೇಕು. ಒಬ್ಬನು ಬಾಹ್ಯಲಾಂಛನದಿಂದ ಬ್ರಾಹ್ಮಣನಲ್ಲವೆಂದು ಬುದ್ಧನು ಘಂಟಾಘೋಷವಾಗಿ ಸಾರುತ್ತಾನೆ. ಜಟೆಯಿಂದಾಗಲೀ, ಗೋತ್ರಗಳಿಂದಾಗಲೀ ಮತ್ತು ಜಾತಿಯಿಂದಾಗಲೀ ಒಬ್ಬನು ಬ್ರಾಹ್ಮಣನಾಗುವುದಿಲ್ಲ. ಯಾರಲ್ಲಿ ಸತ್ಯಧರ್ಮಗಳಿವೆಯೋ ಆ ಶುಚಿವಂತನೇ ಬ್ರಾಹ್ಮಣನು. ಇಲ್ಲಿ ಹುಟ್ಟು ಗೌಣವಾಗುತ್ತದೆ. ಬುದ್ಧನು ಹೊರಗಿನ ಬ್ರಾಹ್ಮಣರುಗಳನ್ನು ಹೀಗೆ ಟೀಕಿಸುತ್ತಾನೆ, "ಎಲೈ ಮೂಢನೇ ನಿನಗೆ ಜಟೆಗಳಿಂದ ಕೃಷ್ಣಾಜಿನ ಮತ್ತು ಶಾಟಿಯಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ನಿನ್ನೊಳಗೆ ರಾಗಾದಿ ಮಲಗಳು ತುಂಬಿವೆ. ನೀನು ಶುದ್ಧಿಮಾಡಿಕೊಳ್ಳುತ್ತಿರುವುದು ನಿನ್ನ ಬಾಹ್ಯ ಶರೀರವನ್ನು ಮಾತ್ರ". ಯಾರು ಚಿಂದಿ ವಸ್ತ್ರಗಳನ್ನು ಧರಿಸಿ ನಾಡಿಗಳು ಎದ್ದು ಕಾಣುವಂತೆ ಬಡಕಲು ಮೈಯುಳ್ಳವನಾಗಿ ಒಬ್ಬನೇ ಕಾಡಿನಲ್ಲಿ ಧ್ಯಾನವನ್ನು ಮಾಡುತ್ತಿರುವನೋ ಆತನೇ

ಬ್ರಾಹ್ಮಣನೆನ್ನುವಾಗ ದೇಹದಂಡಕನನ್ನು ಬ್ರಾಹ್ಮಣತ್ವದೊಡನೆ ಸಮೀಕರಿಸುವ ಯತ್ನವನ್ನು ಮಾಡಲಾಗಿದೆ.

**ಯಸ್ಸ ಕಾಯೇನ ವಾಚಾಯ ಮನಸಾ ನತ್ಥಿ ದುಕ್ಕತಜ್**

**ಸಂವುತಇ್ ತೀಹಿ ಠಾಣೇಹಿ ತಮಹಜ್ ಬ್ರೂಮಿ ಬ್ರಾಹ್ಮಣಜ್**

**ಯಮ್ಹಾ ಧಮ್ಮಜ್ ವಿಜಾನೆಯ್ಯ ಸಮ್ಮಾ ಸಂಬುದ್ಧದೇಸಿತಜ್**

**ಸಕ್ಕಚ್ಚಜ್ ತಜ್ ನಮಸ್ಸೆಯ್ಯ ಅಗ್ಗಿಹುತ್ತಜ್ ವ ಬ್ರಾಹ್ಮಣೋ**

**ನ ಜಟಾಹಿ ನ ಗೋತ್ತೇಮ ನ ಜಚ್ಚಾ ಹೋತಿ ಬ್ರಾಹ್ಮಣೋ**

**ಯಮ್ಹಿ ಸಚ್ಚಜ್ ಚ ಧಮ್ಮೋ ಚ ಸೊ ಸುಚೀ ಸೊ ಚ ಬ್ರಾಹ್ಮಣೋ**

**ಕಿಜ್ ತೇ ಜಟಾಹಿ ದುಮ್ಮೇಧ ಕಿಜ್ ತೇ ಅಜಿನಸಾಟಿಯಾ**

**ಅಬ್ಭಂತರಜ್ ತೇ ಗಹಣಜ್ ಬಾಹಿರಜ್ ಪರಿಮಜ್ಜಸಿ**

**ಪಜ್ಸುಕೂಲಧರಜ್ ಜಂತುಜ್ ಕಿಸಜ್ ಧಮ್ಮನಿಸಂಥತಜ್**

**ಏತಜ್ ವನಸ್ಮಿಜ್ ಝಾಯಂತಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**[48]

ಬ್ರಾಹ್ಮಣ ಯೋನಿಯಲ್ಲಿ ಎಂದರೆ ಬ್ರಾಹ್ಮಣ ತಾಯಿಯಲ್ಲಿ ಹುಟ್ಟಿದ ಮಾತ್ರಕ್ಕೆ ಒಬ್ಬನು ಬ್ರಾಹ್ಮಣನಾಗಲಾರ. ಆತನು **ಬೋವಾದಿ** ಎನಿಸಿಕೊಳ್ಳುವನು. ಬ್ರಾಹ್ಮಣರು ತಮಗಿಂತಲೂ ಕೆಳಗಿನವರನ್ನು ಅಥವಾ ಜೊತೆಯಾದವರನ್ನು **ಬೋ** ಎಂದು ಸಂಬೋಧಿಸುತ್ತಿದ್ದರು. ಬೌದ್ಧರಾದರೋ **'ಭಂತೆ'** ಎಂಬ ಶಬ್ದದಿಂದ ಸಂಬೋಧಿಸುತ್ತಾರೆ. ಭಂತೆ ಎಂದರೆ ದೊಡ್ಡವರು ಅಥವಾ ಒಡೆಯ ಎಂದರ್ಥ. ಬುದ್ಧನನ್ನು ಕೂಡ ಅತಿಯಾದ ಸಲುಗೆಯಿಂದ ಬೋ ಎಂದು ಸಂಬೋಧಿಸುವ ಅಹಂಕಾರಿಗಳಿಗೆ ಬೋವಾದಿಗಳೆಂದು ಕರೆಯುತ್ತಾರೆ. ಎಂದರೆ ನಾಮಮಾತ್ರ ಬ್ರಾಹ್ಮಣನು ಬೋವಾದಿಯೇ ಹೊರತು ನಿಜವಾದ ಅರ್ಥದಲ್ಲಿ ಬ್ರಾಹ್ಮಣನಲ್ಲ. ಅವನು ವಿಷಯಾಸಕ್ತನಾಗಿರುತ್ತಾನೆ. ಯಾರಿಗೆ ತನ್ನದೆಂಬುದು ಯಾವುದೂ

ಇಲ್ಲವೋ ಮತ್ತು ಯಾವುದೊಂದನ್ನು ತೆಗೆದುಕೊಳ್ಳುವ ಇಚ್ಛೆಯಿಲ್ಲವೋ ಆತನೇ ಬುದ್ಧನ ಪ್ರಕಾರ ನಿಜವಾದ ಬ್ರಾಹ್ಮಣ.

**ನ ಚಾಹಜ್ ಬ್ರಾಹ್ಮಣಜ್ ಬ್ರೂಮಿ ಯೋನಿಜಜ್ ಮತ್ತಿ ಸಂಭವಜ್**

**ಭೋವಾದಿ ನಾಮ ಸೊ ಹೋತಿ ಸಚೆ ಹೋತಿ ಸಕಿಂಚನೋ**

**ಅಕಿಂಚನಜ್ ಅನಾದಾನಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**[49]

ಆತನಿಗೆ ಯಾವುದರ ಭಯವೂ ಇರುವುದಿಲ್ಲ. ಆತನಲ್ಲಿ ಕ್ಷಮಾಗುಣವಿರುತ್ತದೆ. ಎಂದರೆ ಮತ್ತೊಬ್ಬರು ಮಾಡುವ ನಿಂದೆಯನ್ನು ಅಥವಾ ದುಷ್ಟ ವೃತ್ತಿಯನ್ನು ಮನಸ್ಸಿನಲ್ಲಿ ಅವನು ಇರಿಸಿಕೊಳ್ಳುವುದಿಲ್ಲ. ಪ್ರತೀಕಾರದ ಮನೋಭಾವವು ಆತನಿಗಿರುವುದಿಲ್ಲ. ಸಹನೆಯೇ ಆತನ ಬಲವಾಗಿರುತ್ತದೆ. ಆತನಿಗೆ ಸಿಟ್ಟು ಇರುವುದಿಲ್ಲ. ಆತನು ವ್ರತಿ, ಶೀಲವಂತ ಮತ್ತು ದಾಂತನಾಗಿರುತ್ತಾನೆ. ಅಂತಹ ಬ್ರಾಹ್ಮಣನಿಗೆ ಈ ಶರೀರವೇ ಕೊನೆಯ ಜನ್ಮವಾಗಿರುತ್ತದೆ ಮತ್ತು ಅವನಿಗೆ ಪುನರ್ಜನ್ಮವಿರುವುದಿಲ್ಲ. ಆತನು ಕಮಲದ ಎಲೆಯ ಮೇಲಿನ ನೀರಿನಂತೆ ಕಾಮಗಳಿಗೆ ಅಂಟಿಕೊಳ್ಳಲಾರ.

**ಅಕ್ಕೋಸಜ್ ವಧಬಂಧಂಚ ಅದಿಟ್ಠೋ ಯೋ ತಿತಿಕ್ಖತಿ**

**ಖಂತಿಬಲಜ್ ಬಲಾನೀಕಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**

**ಅಕ್ಕೋಧನಜ್ ವತವಂತಜ್ ಸೀಲವಂತಜ್ ಅನುಸ್ಸುತಜ್**

**ದಂತಜ್ ಅಂತಿಮಸಾರೀರಜ್ ತಮಹಜ್ ಬ್ರೂಮಿ ಬ್ರಾಹಣಜ್**

**ವಾರಿ ಪೊಕ್ಖರಪತ್ತೇ ವ ಆರಗ್ಗೇ ರಿವ ಸಾಸಪೋ**

**ಯೋ ನ ಲಿಪ್ಪತಿ ಕಾಮೇಸು ತಮಹಜ್ ಬ್ರೂಮಿ ಬ್ರಾಹ್ಮಣಜ್**[50]

**"ಇಲ್ಲಿಯೇ"** ಆತನು ತನ್ನ ದುಃಖ ನಾಶದ ರಹಸ್ಯವನ್ನು ತಿಳಿದುಕೊಂಡಿರುವನು ಎನ್ನುವಾಗ ವೇದಾಂತಿಗಳ ಜೀವನ್ಮುಕ್ತಿ ಪರಿಕಲ್ಪನೆ ಎದ್ದು ಕಾಣುತ್ತದೆ. ಎಂದರೆ ನಿಜವಾದ ಬ್ರಾಹ್ಮಣನು ನಿರ್ವಾಣವನ್ನು ತಲುಪಿರುವ ಜೀವನ್ಮುಕ್ತನೆಂದರ್ಥ.

**ಯೋ ದುಕ್ಖಸ್ಸ ಪಜಾನಾತಿ ಇಧೇನ ಖಯಂ ಅತ್ತನೋ**

**ಪನ್ನಭಾರಜ್ ವಿಸಜ್ಯುತ್ತಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**[51]

ಬ್ರಾಹ್ಮಣನಿಗೆ ಆಳವಾದ ಪ್ರಜ್ಞೆ, ಮಾರ್ಗಾಮಾರ್ಗಗಳ ವಿವೇಚನೆ ಇರುತ್ತದೆ. ಅವನಿಗೆ ಗೃಹಸ್ಥರಾಗಲೀ ಮತ್ತು ಮನೆಗಳಿಲ್ಲದ ಭಿಕ್ಷುಗಳಾಗಲೀ – ಇವರ ಸಂಸರ್ಗವಿರುವುದಿಲ್ಲ. ಅವನು ಮನೆ ಮನೆಗೆ ತಿರುಗುವುದಿಲ್ಲ. ಆತನು ಅಲ್ಪೇಚ್ಛೆಯುಳ್ಳವನಾಗಿರುತ್ತಾನೆ. ಚರಾಚರ ಪ್ರಾಣಿಗಳಲ್ಲಿ ಯಾವುದನ್ನೂ ಆತನು ಕೊಲ್ಲದೇ ಮತ್ತು ಕೊಲ್ಲಿಸುವುದಿಲ್ಲ.

**ನಿಧಾಯ ದಂಡಜ್ ಭೂತೇಸು ತಸೇಸು ಥಾವರೇಸು ಚ**

**ಯೋ ನ ಹಂತಿ ನ ಘಾತೇತಿ ತಮಹಜ್ ಬ್ರೂಮಿ ಬ್ರಾಹ್ಮಣಜ್**[52]

ರಾಗ, ದ್ವೇಷ, ಅಭಿಮಾನ, ಮತ್ಸರಗಳು ಯಾರಿಂದ – ದಬ್ಬಳದ ತುದಿಯಿಂದ ಸಾಸಿವೆ ಕಾಳು ಜಾರಿ ಬೀಳುವಂತೆ – ಜಾರಿ ಬೀಳುತ್ತವೋ ಅವನೇ ನಿಜವಾದ ಬ್ರಾಹ್ಮಣ.

**ಯಸ್ಸ ರಾಗೋ ಚ ದೋಸೋ ಚ ಮಾನೋ ಮಕ್ಖೋ ಚ ಪಾತಿತೋ**

**ಸಾಸಪೋ ರಿವ ಆರಗ್ಗಾ ತಮಹಜ್ ಬ್ರೂಮಿ ಬ್ರಾಹಣಜ್**[53]

ನಿಜವಾದ ಬ್ರಾಹ್ಮಣನ ಮಾತಿನಲ್ಲಿ ಸತ್ಯವಾದ ಮಾತು ಕರ್ಕಶವಿಲ್ಲದೇ ಬಿನ್ನಹ ರೂಪದಲ್ಲಿ ಬರುತ್ತದೆ. ಆತನ ಮಾತಿನಿಂದ ಯಾರಿಗೂ ನೋವುಂಟಾಗುವುದಿಲ್ಲ. ಮಾತಿನಲ್ಲಿ ಯಾರಿಗೂ ಹಿಂಸೆಯಿಲ್ಲ. ಆತನು ಮತ್ತೊಬ್ಬರಿಂದ ಸಣ್ಣದಿರಲಿ, ದೊಡ್ಡದಿರಲಿ ಯಾವುದೇ ವಸ್ತುವನ್ನು ಸ್ವೀಕರಿಸುವುದಿಲ್ಲ. ಎಂದರೆ "ಮತ್ತೊಬ್ಬರು ಕೊಡದಿರುವುದನ್ನು ಆತನು ತೆಗೆದುಕೊಳ್ಳುವುದಿಲ್ಲ" ಎನ್ನುವಾಗ ಆತನು ಕಳ್ಳನಲ್ಲ ಎಂಬ ಧ್ವನಿಯಿದೆ. ಕೊಡಲು ಇಚ್ಛೆಯಿರದ ಯಾರಿಂದಲೂ ಬ್ರಾಹ್ಮಣನು ಯಾವುದೇ ವಸ್ತುವನ್ನು ಸ್ವೀಕರಿಸುವುದಿಲ್ಲ. ಆತನಿಗೆ ಐಹಿಕ ಮತ್ತು ಆಮುಷ್ಮಿಕವಾದ ಯಾವ ಲೋಕದ ಬಯಕೆಯೂ ಇರುವುದಿಲ್ಲ. ಆತನು ವಾಸನಾರಹಿತನಾಗಿರುತ್ತಾನೆ. ಆತನಿಗೆ **ಆಲಯಗಳಿರುವುದಿಲ್ಲ** ಎನ್ನುವಾಗ ಆತನಿಗೆ

**ಆಸೆಗಳಿಲ್ಲವೆಂದರ್ಥ**. ತತ್ವವನ್ನು ಬಲ್ಲವನಾದ್ದರಿಂದ ಆತನು ಹೇಗೆ ಎಂಬ ಜಿಜ್ಞಾಸೆಗೆ ಹೋಗುವುದಿಲ್ಲ. ಆತನಿಗೆ ಅಮೃತದ ಎಂದರೆ ನಿರ್ವಾಣದ ಸುಖದ ಅವಗಾಹನವಾಗಿರುತ್ತದೆ.

**ಅಕಕ್ಕಸಜ್ ವಿಞ್ಞಾಫನಿಞ್ ಗಿರಜ್ ಸಚ್ಚಜ್ ಉದೀರಯೇ**

**ಯಾಾಯ ನಾಭಿಸಜೆ ಕಂಚಿ ತಮಹಜ್ ಬ್ರೂಮಿ ಬ್ರಾಹ್ಮಣಜ್**

**ಯೋಧ ದೀಘಜ್ ವಾ ರಸ್ಸಜ್ ವಾ ಅಣುಜ್ ಥೂಲಜ್ ಸುಭಾಸುಭಜ್**

**ಲೋಕೇ ಅದಿನ್ನಜ್ ನಾದಿಯತಿ ತಮಹಜ ಬ್ರೂಮಿ ಬ್ರಾಹ್ಮಣಜ್**

**ಆಸಾ ಯಸ್ಸ ನ ವಿಜ್ಜಂತಿ ಅಸ್ಮಿಜ್ ಲೋಕೇ ಪರಮ್ಹಿ ಚ**

**ನಿರಾಸಯಜ್ ವಿಸಞ್ಞುತ್ತಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**

**ಯಸ್ಸಾಲಯಾ ನ ವಿಜ್ಜಂತಿ ಅಞ್ಞಾಯ ಅಕತಂಕಥಿ**

**ಅಮತೋಗಧಜ್ ಅನುಪ್ಪತ್ತಜ್ ತಮಹಜ್ ಬ್ರೂಮಿ ಬ್ರಾಹ್ಮಣಜ್**[54]

ಆತನ ನಿರ್ಮಲತೆಯನ್ನು ಮುಸುಕಿಲ್ಲದ ಚಂದ್ರನಿಗೆ ಹೋಲಿಸಲಾಗಿದೆ. ಆತನು **ನಂದೀಭವ**ವನ್ನು ನಾಶಪಡಿಸಿಕೊಂಡಿರುತ್ತಾನೆ. ಎಂದರೆ ಬೌದ್ಧಧರ್ಮದ ಪ್ರಕಾರ ನಂದೀಭವ, ಕಾಮಭವ ಮತ್ತು ತೃಷ್ಣಾಭವಗಳು ಮನುಷ್ಯನ ಪುನರ್ಜನ್ಮಕ್ಕೆ ಕಾರಣವಾಗಿವೆ. ಆತನಿಗೆ ಕಾಮಭವವೂ ಇರುವುದಿಲ್ಲ ಮತ್ತು ತೃಷ್ಣಾಭವವೂ ಇರುವುದಿಲ್ಲ. ಕಾಮ ಮತ್ತು ತೃಷ್ಣೆ ಎಂಬ ಶಬ್ದಗಳ ಅರ್ಥಗಳು ಸ್ಪಷ್ಟವಾಗಿದ್ದರೂ ಇಲ್ಲಿ **ನಂದಿ** ಎಂಬ ಶಬ್ದದ ಅರ್ಥ ಅಷ್ಟು ಸ್ಪಷ್ಟವಿಲ್ಲ. ಪ್ರೊ.ಎಸ್.ರಾಧಾಕೃಷ್ಣನ್‌ರವರು ಇದನ್ನು "Joyance" ಎಂದು ಅರ್ಥೈಸುತ್ತಾರೆ.[55] ಆಚಾರ್ಯ ಬುದ್ಧರಖ್ಖಿತರು ಇದನ್ನು Delight in Existence ಎಂದು ಅರ್ಥೈಸುತ್ತಾರೆ. ಅವರು ಬ್ರಾಹ್ಮಣ ಶಬ್ದವನ್ನು Holyman ಎಂದೇ ಅನುವಾದಿಸುತ್ತಾರೆ.[56] ಪ್ರೊ.ಮ್ಯಾಕ್ಸ್‌ಮುಲ್ಲರ್‌ರವರು **ನಂದಿ** ಶಬ್ದವನ್ನು Gaiety ಎಂದು ಅರ್ಥೈಸುತ್ತಾರೆ.[57] ಪ್ರೊ.ಕೆ.ಆರ್.ನಾರ್ಮನ್‌ರವರು With Joy and Existence ಎಂದು ಅನುವಾದಿಸುತ್ತಾರೆ.[58]

ಈ ಅನುವಾದಗಳ ವೈವಿಧ್ಯತೆಯೇನೇ ಇರಲಿ, ಒಟ್ಟಾರೆ ಬ್ರಾಹ್ಮಣನಲ್ಲಿ ತೃಷ್ಣೆ ಕಾಮಗಳಿರುವುದಿಲ್ಲ. ಆತನು ದೈವಮಾನುಷ ಯೋಗಗಳನ್ನು ಮೀರಿಸುತ್ತಾನೆ. ಎಂದರೆ ಆತನು ಮಾನುಷ ಮತ್ತು ಅತಿಮಾನುಷವಾದ ಯಾವ ವಸ್ತುಗಳಿಗೂ ಅಂಟಿಕೊಳ್ಳುವುದಿಲ್ಲವೆಂದರ್ಥ. ಆತನಿಗೆ ಯಾವ ಯೋಗದಲ್ಲೂ ಆಸಕ್ತಿಯಿಲ್ಲ.

**ಚಂದಙ್ ವ ವಿಮಲಙ್ ಸುದ್ಧಙ್ ವಿಪ್ಪಸನ್ನಂ ಅನಾವಿಲಙ್**

**ನಂದೀಭವಪರಿಕ್ಖೀಣಙ್ ತಮಹಙ್ ಬ್ರೂಮಿ ಬ್ರಾಹಣಙ್**

**ಯೋ ಇಮಙ್ ಪಳಿಪಥಙ್ ದುಗ್ಗಙ್ ಸಂಸಾರಙ್ ಮೋಹಂ ಅಚ್ಚಗಾ**

**ತಿಣ್ಣೋ ಪಾರಗತೋ ಝಾಯೀ ಅನೇಜೋ ಅಕಥಂಕಥೀ**

**ಅನುಪಾದಾಯ ನಿಬ್ಬುತೋ ತಮಹಙ್ ಬ್ರೂಮಿ ಬ್ರಾಹ್ಮಣಙ್**

**ಯೋಧ ಕಾಮೇ ಪಹತ್ವಾನ ಅನಾಗಾರೋ ಪರಿಬ್ಬಜೇ**

**ಕಾಮಭವ ಪರಿಕ್ಖೀಣಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್**

**ಯೋಧ ತನ್ಹಙ್ ಪಹತ್ವಾನ ಅನಾಗರೋ ಪರಿಬ್ಬಜೇ**

**ತನ್ಹಾಭವ ಪರಿಕ್ಖೀಣಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್**

**ಹಿತ್ವಾ ಮಾನುಸಕಙ್ ಯೋಗಙ್ ದಿಬ್ಬಙ್ ಯೋಗಙ್ ಉಪಚ್ಚಗಾ**

**ಸಬ್ಬಯೋಗ ವಿಸಙ್ಯುತ್ತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್**[59]

ಇಲ್ಲಿ ಯೋಗವೆಂದರೆ ಅಂಟಿಕೊಳ್ಳುವುದೆಂದರ್ಥ. ಆತನಿಗೆ ಬೇಕು ಬೇಡಗಳಿಲ್ಲವೆಂಬುದು ಇಲ್ಲ. ಆತನು ಶಾಂತ ಸ್ವಭಾವವುಳ್ಳವನಾಗಿದ್ದು ಪುನರ್ಜನ್ಮಕ್ಕೆ ಕಾರಣವಾದ ಎಲ್ಲ ಮಲಗಳಿಂದಲೂ, ಕ್ಲೇಶಗಳಿಂದಲೂ ಮುಕ್ತನಾಗಿರುತ್ತಾನೆ. ಆತನಿಗೆ ಪ್ರಾಣಿಗಳ ಜನನಮರಣ ರಹಸ್ಯಗಳು ತಿಳಿದಿರುತ್ತವೆ. ಆತನು ಸುಗತ ಅಥವಾ ಬುದ್ಧನಲ್ಲದೇ ಬೇರೆ ಅಲ್ಲ. ಆತನ ರಹಸ್ಯವನ್ನು ದೇವತೆಗಳಾಗಲೀ, ಗಂಧರ್ವರಾಗಲೀ, ಮನುಷ್ಯರಾಗಲೀ ಅರಿಯರು.

**ಹಿತ್ವಾ ರತಿಙ್ ಚ ಆರತಿಙ್ ಚ ಸೀತಿ ಭೂತಙ್ ನಿರೂಪದಿಙ್**

**ಸಬ್ಬಲೋಕಾಭಿಭುಙ್ ವೀರಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್**

**ಚುತಿಙ್ ಯೋ ವೇದಿ ಸತ್ತಾನಙ್ ಉಪಸತ್ತಿಙ್ ಚ ಸಬ್ಬಸೋ**

**ಅಸತ್ತಙ್ ಸುಗತಙ್ ಬುದ್ಧಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್**

**ಯಸ್ಸ ಗತಿಙ್ ನ ಜಾನತಿ ದೇವ ಗಂಧಬ್ಬ ಮಾನುಸ**

**ಖೀನಾವಸಙ್ ಅರಹಂತಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್**[60]

ಆತನು ವೃಷಭನಂತೆ ನಿರ್ಭಯ. ಆತನಿಗೆ ಹಿಂದಿನ ಜನ್ಮದ ರಹಸ್ಯವೂ ತಿಳಿದಿರುತ್ತದೆ. ಸ್ವರ್ಗನರಕಗಳನ್ನು ಆತನು ಬಲ್ಲವನಾಗಿರುತ್ತಾನೆ. ಆತನು ಅಭಿಜ್ಞೆಯಲ್ಲಿ ಪಾರಾಯಣನಾಗಿರುತ್ತಾನೆ. ಎಂದರೆ ಆತನು ಪೂರ್ಣಜ್ಞಾನಿಯಾಗಿರುತ್ತಾನೆ. ಒಟ್ಟಾರೆ ಬದುಕಿನಲ್ಲಿ ಸಾಧಿಸಬೇಕಾದ ಎಲ್ಲವನ್ನೂ ಆತನು ಸಾಧಿಸಿರುತ್ತಾನೆ.

**ಪುಬ್ಬೇನಿವಾಸಙ್ ಯೋ ವೇದೀ ಸಗ್ಗಾಪಾಯಙ್ ಚ ಷಸ್ಸತಿ**

**ಅಥೋ ಜಾತಿಕ್ಖಯಙ್ ಪತ್ತೋ ಅಭಿಞ್ಞಾವೋಸಿತೋ ಮುನಿ**

**ಸಬ್ಬವೋಸಿತ ವೋಸಾನಙ್ ತಮಹಙ್ ಬ್ರೂಮಿ ಬ್ರಾಹ್ಮಣಙ್**[61]

ಹೀಗೆ ಬುದ್ಧ ಬ್ರಾಹ್ಮಣ ಶಬ್ದವನ್ನು ಪ್ರಯೋಗಿಸಿದರೂ ಸಾಮಾಜಿಕ ಅಸಮಾನತೆಗೆ ಕಾರಣವಾದ ಜಾತಿಯ ಅರ್ಥದಲ್ಲಿ ಆತನು ಈ ಶಬ್ದವನ್ನು ಪ್ರಯೋಗಿಸುವುದಿಲ್ಲ. ಬ್ರಾಹ್ಮಣನೆಂದರೆ ಅರ್ಹಂತ, ಬುದ್ಧ, ಸುಗತ, ಪರಿಪೂರ್ಣ ಜ್ಞಾನಿ ಮತ್ತು ನೈತಿಕ ಪರಿಪೂರ್ಣತೆಯನ್ನು ಸಾಧಿಸಿರುವವನೆಂದರ್ಥ. ಈ ಸಾತ್ವಿಕ ಅರ್ಥವನ್ನು ಹೊರತುಪಡಿಸಿ ಬುದ್ಧನು ಬ್ರಾಹ್ಮಣ ಶಬ್ದವನ್ನು ಇನ್ನಾವ ಸಂಕುಚಿತ ಅರ್ಥದಲ್ಲೂ ಬಳಸುವುದಿಲ್ಲ.

## ಅಡಿ ಟಿಪ್ಪಣಿಗಳು

1. ಗಾಥೆ 54
2. ಗಾಥೆ 63
3. Henry Thomas and Dana Lee Thomas, ***Living Biographies of Great Philosophers***, Bharatiya Vidya Bhavan, Bombay, 1993, ಪು.4
4. ಗಾಥೆಗಳು 64–65
5. ಗಾಥೆ 77
6. ಗಾಥೆಗಳು 80–82
7. ಗೀತೆ 2–56
8. William S. Sahakian, ***History of Philosophy***, Barnes and Noble, New York, 1968, ಪು.331
9. Prof.Hari Narake, ***Dr.Babasaheb Ambedkar: Writing and Speeches Vol.3,*** Dr.Ambedkar Foundation, Ministry of Justice And Empowerment, Govt. of India, New Delhi, 2014, ಪು.461
10. ಗಾಥೆ 76
11. ಗಾಥೆ 78
12. ಗಾಥೆ 9
13. ಗಾಥೆ 10
14. ಗಾಥೆಗಳು 184–185
15. ಗಾಥೆಗಳು 264–266
16. ಗಾಥೆಗಳು 68–70
17. ಗಾಥೆಗಳು 360–361
18. ಗಾಥೆ 363
19. ಗಾಥೆಗಳು 365–369
20. ಗಾಥೆಗಳು 370–376; ಗಾಥೆ 378
21. ಗಾಥೆ 382
22. ಗಾಥೆ 85–86
23. ಗಾಥೆ 89
24. ಗಾಥೆಗಳು 90–91
25. ಗಾಥೆಗಳು 93–95

26. ಗಾಥೆ 97
27. ಗಾಥೆಗಳು 98–99
28. ಗಾಥೆಗಳು 180–182
29. ಗಾಥೆ 187
30. ಗಾಥೆಗಳು 195–196
31. ಗಾಥೆಗಳು 197–200
32. ಗಾಥೆಗಳು 229–230
33. ಗಾಥೆಗಳು 351–352
34. ಗೀತೆ ಅಧ್ಯಾಯ 7
35. ಮಹಾಭಾರತ 12–109–14
36. ಬೃಹದಾರಣ್ಯಕೋಪನಿಷತ್ತು 2–5–11–2
37. ಕಠೋಪನಿಷತ್ತು 2–1–14
38. ಡಾ.ಎಚ್.ಎಲ್.ಚಂದ್ರಶೇಖರ, ***ದರ್ಶನಲೋಕ***, ನವಭಾರತೀ ಪ್ರಕಾಶನ, ಮೈಸೂರು, 2010, ಪು.104
39. ರಾಮಾಯಣ 2–102–1
40. ಡಾ.ಎಚ್.ಎಲ್.ಚಂದ್ರಶೇಖರ, ***ದರ್ಶನಲೋಕ***, ಪೂರ್ವೋಕ್ತ, ಪು.104–105
41. Pandharinath H.Prabhu, ***Hindu Social Organization***, Popular Prakashan, Bombay, 1961, ಪು.284–335
42. ಗಾಥೆ 294
43. S.Radhakrishnan, ***The Dhammapada***, Oxford University Press, London, 1950, ಪು.152–153
44. ಗಾಥೆ 332; S.Radhakrishnan, ***The Dhammapada,*** ಪೂರ್ವೋಕ್ತ, ಪು.63
45. ಗಾಥೆಗಳು 384–387
46. ಗಾಥೆಗಳು 389
47. ಗಾಥೆ 390
48. ಗಾಥೆಗಳು 391–395
49. ಗಾಥೆ 396
50. ಗಾಥೆಗಳು 399–401
51. ಗಾಥೆ 402
52. ಗಾಥೆ 405
53. ಗಾಥೆಗಳು 406–407

54. ಗಾಥೆಗಳು 408–411

55. S.Radhakrishnan, ***The Dhammapada,*** ಪೂರ್ವೋಕ್ತ, ಪು.185

56. Venerable Sri Acharya Buddharakkhita, ***Dhammapada***, Buddha Vacana Trust, Bangalore, 1986, ಪು.163

57. F.Max Muller, ***The Dhammapada***, Motilal Banarsidass Publishers, Delhi, 2013, ಪು.94

58. K.R.Norman, ***The Word of the Doctrine (Dhammapada)***, The Pali Text Society, Oxford, 2004, ಪು.59

59. ಗಾಥೆಗಳು 413–417

60. ಗಾಥೆಗಳು 418–420

61. ಗಾಥೆ 423

**********

# ಅಧ್ಯಾಯ–12

# ಉಪಸಂಹಾರ

# ಅಧ್ಯಾಯ–12

# ಉಪಸಂಹಾರ

ಒಟ್ಟಾರೆ ಧಮ್ಮಪದವು ಸುತ್ತಪಿಟಕದ ಖುದ್ಧಕ ನಿಕಾಯದ ಎರಡನೇ ಗ್ರಂಥ. 26 ಅಧ್ಯಾಯಗಳಿಂದ ಕೂಡಿದ ಈ ಪಾಳಿ ಗ್ರಂಥವು 423 ಗಾಥೆಗಳನ್ನು ಒಳಗೊಂಡಿದ್ದು ಅದರಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳು ಈ ತಾಂತ್ರಿಕ ಯುಗದಲ್ಲೂ ನಮ್ಮ ಬದುಕಿಗೆ ಬಹಳ ಹತ್ತಿರವಾಗಿವೆ.

ಸ್ವತಂತ್ರ ಛಂದಸ್ಸಿನ ಗ್ರಂಥವಾದ ಧಮ್ಮಪದದ ಗಾಥೆಗಳಿಗೆ ಛಂದಸ್ಸಿನ ಬದ್ಧತೆಯಿಲ್ಲ. ಗಾಥೆಗಳು ಎರಡರಿಂದ ಆರು ಸಾಲುಗಳನ್ನು ಹೊಂದಿವೆಯೆಂಬುದು ಗಮನಾರ್ಹ. ಅದು ಸತ್ಯವನ್ನು ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ಉಪಮೆ ದೃಷ್ಟಾಂತಗಳ ಮೂಲಕ ಹೇಳುವ ಕಲೆಯು ಬುದ್ಧನಿಗಿತ್ತು. ಇಡೀ ಧಮ್ಮಪದವು ಉಪಮೆಗಳ ಗ್ರಂಥವೆಂದರೆ ಅತಿಶಯೋಕ್ತಿಯಲ್ಲ. ಬುದ್ಧನು ತನ್ನ ಸಂದೇಶವನ್ನು ತಿಳಿಸಲು ಮನುಷ್ಯನ ಪರಿಸರವನ್ನು ಅಥವಾ ಅವನು ಬಳಸುವ ಪದಾರ್ಥಗಳನ್ನು ಬಳಸಿಕೊಳ್ಳುತ್ತಾನೆ. ಆತನ ಬೋಧನೆಗಳಲ್ಲಿ ಬಂಡಿ, ಬಂಡಿಯ ಗಾಲಿ, ಕುದುರೆ, ಬಿಲ್ಲು, ಬಾಣ ಹೀಗೆ ಅನೇಕ ವಸ್ತುಗಳು ಬಂದುಹೋಗುತ್ತವೆ. ವಾಸ್ತವವಾಗಿ ಆತನು ಬಳಸುವ ಉಪಮೆಗಳನ್ನು ಪಟ್ಟಿ ಮಾಡಿದರೆ ಅದೇ ಒಂದು ಸಣ್ಣಹೊತ್ತಿಗೆಯಾಗಬಲ್ಲದು. ವಿವಿಧ ಬೋಧನೆಗಳನ್ನು ವಿವರಿಸಲು ಒಂದೇ ಉಪಮೆಯನ್ನು ಅಥವಾ ಒಂದೇ ಬೋಧನೆಯನ್ನು ವಿವರಿಸಲು ಆತನು ಉಪಮಾ ವೈವಿಧ್ಯವನ್ನು ಬಳಸುತ್ತಾನೆ. ಉದಾಹರಣೆಗೆ ಶರೀರದ ನಶ್ವರತೆಯನ್ನು ವಿವರಿಸಲು ಆತನು ಸಮುದ್ರದ ನೊರೆ, ಕೊರಡು, ಮಣ್ಣಿನ ಗಡಿಗೆ ಮುಂತಾದ ದೃಷ್ಟಾಂತಗಳನ್ನು ನೀಡುತ್ತಾನೆ. ಈ ವಿಷಯದಲ್ಲಿ ಆತನ ಸಂವಹನ ಕೌಶಲ್ಯವು ಅದ್ಭುತ.

ಗ್ರಂಥದಲ್ಲಿ ಸಾಹಿತಿ, ಆರ್ಯ, ಉಪನಿಷ, ಗ್ರಂಥ, ಉಪಶಾಂತಿ, ನೈಷ್ಕರ್ಮ್ಯ, ಉಪಶಮ, ಅನುಶಾಸನ, ನಿಷ್ಪ್ರಪಂಚ ಇವೇ ಮುಂತಾದ ಸ್ವಾರಸ್ಯ ಪದಗಳ ಬಳಕೆಯಿದೆ. ಇವೆಲ್ಲವೂ ಬಹುತೇಕ ಉಪನಿಷತ್ತುಗಳಲ್ಲೂ ಬಳಕೆಯಾಗಿರುವುದು ಗಮನಾರ್ಹ. ಗ್ರಂಥದಲ್ಲಿ ಸ್ವರ್ಗ, ನರಕ, ದೇವತೆಗಳೇ ಮುಂತಾದ ಪೌರಾಣಿಕ ಭಾಷೆಯ ಬಳಕೆಯಾಗಿದ್ದರೂ ಬುದ್ಧನು ಹಾಗೆ ಮಾಡುವುದು ಜನರನ್ನು ಆ ಕಾಲದ ಭಾಷೆಯಲ್ಲಿ ಸ್ಪಂದಿಸಲು ಮಾತ್ರ. ಸಂದೇಶಗಳು ಕೆಲವೆಡೆ ಒಗಟಿನ ರೂಪದಲ್ಲೂ ಇವೆ. ಉದಾಹರಣೆಗೆ ಮನುಷ್ಯನು ವನವನ್ನು ಕತ್ತರಿಸಬೇಕೇ ಹೊರತು ಮರವನ್ನು ಕತ್ತರಿಸಬಾರದೆನ್ನಲಾಗಿದೆ. ಇಲ್ಲಿ ವನವೆಂದರೆ ರಾಗಾದಿಗಳೆಂದರ್ಥ. ಮರವನ್ನು ಕತ್ತರಿಸಬಾರದೆನ್ನುವಲ್ಲಿ ಮನುಷ್ಯನಿಗೆ ಅಗತ್ಯವಾಗಿರುವ ಪರಿಸರ ಪ್ರಜ್ಞೆಯು ಇಲ್ಲಿ ಸೂಚಿತವಾಗುತ್ತದೆ.

ಬುದ್ಧನ ಪ್ರಕಾರ ಸ್ವಾರ್ಥ ಬಯಕೆಗಳನ್ನು ತೃಪ್ತಿಪಡಿಸುವುದಾಗಲೀ, ಸಮಾಜದ ಗರಿಷ್ಠ ಸಂಖ್ಯೆಯ ಸದಸ್ಯರನ್ನು ಐಹಿಕವಾಗಿ ಸುಖವಾಗಿಸುವ ಕೆಲಸವಾಗಲೀ ಮೌಲ್ಯವಲ್ಲ. ಆತನ ದೃಷ್ಟಿಯಲ್ಲಿ ಮೌಲ್ಯವು ಒಂದು ಗುಣಾತ್ಮಕ ಪರಿಕಲ್ಪನೆ. ಗರಿಷ್ಠ ಸಂಖ್ಯೆಯಲ್ಲಿ ಐಹಿಕ ವಸ್ತುಗಳನ್ನು ಹೊಂದಿದ ಸಮಾಜವು ಲೌಕಿಕವಾಗಿ ಪ್ರಗತಿಪರವೆನಿಸಿದರೂ ನೈತಿಕವಾಗಿ ಅಲ್ಲ. ಈ ಅಂಶದಲ್ಲಿ ಬುದ್ಧನು ಚಾರ್ವಾಕ, ಪಾಶ್ಚಾತ್ಯ ಸುಖಧ್ಯೇಯವಾದಿ ಹಾಗೂ ಪ್ರಯೋಜನವಾದಿಗಳಿಗಿಂತ ಭಿನ್ನನಾಗುತ್ತಾನೆ. ಹಾಗೆಯೇ ಆತನು ಮೌಲ್ಯಗಳಿಗೋಸ್ಕರ ಮೌಲ್ಯವೆಂಬ ಕ್ಯಾಂಟನ ಸಿದ್ಧಾಂತದಿಂದಲೂ ಭಿನ್ನನಾಗುತ್ತಾನೆ. ಏಕೆಂದರೆ ಆತನ ಪ್ರಕಾರ ಮೌಲ್ಯಪಾಲನೆಗೂ ಒಂದು ಗುರಿಯಿದೆ. ಈ ಗುರಿಯು ಲೌಕಿಕವಾಗಿರದೇ ಆಧ್ಯಾತ್ಮಿಕವಾಗಿದೆ. ಆದರೆ ಈ ಆಧ್ಯಾತ್ಮಿಕ ಗುರಿಯು ವೇದಾಂತಿಯು ಹೇಳುವಂತೆ ದೈವದಲ್ಲಿನ ನಂಬಿಕೆಯನ್ನು ಒಳಗೊಂಡಿಲ್ಲ. ಧಮ್ಮಪದವು ದೈವಕೇಂದ್ರಿತವಲ್ಲದ ಆಧ್ಯಾತ್ಮವನ್ನು ಪ್ರತಿಪಾದಿಸುತ್ತದೆ. ವೇದಾಂತಿಗಳ ಪ್ರಕಾರ ಬ್ರಹ್ಮ ಅಥವಾ ಆತ್ಮಸಾಕ್ಷಾತ್ಕಾರವು ನೈತಿಕತೆಯ ಗುರಿಯಾದರೆ ಬುದ್ಧನ

ಪ್ರಕಾರ ನಿರ್ವಾಣವೇ ನೈತಿಕ ಮೌಲ್ಯಗಳ ಆತ್ಯಂತಿಕ ಗುರಿ. ನಿರ್ವಾಣವೆಂದರೆ ತೃಷ್ಣೆಯಿಲ್ಲದ ಒಂದು ಶಾಂತಸ್ಥಿತಿ ಎಂದರ್ಥ. ಹಾಗೆಯೇ ಬುದ್ಧನ ನೀತಿಯು ಮೀಮಾಂಸಕ ಹಾಗೂ ವೇದಾಂತಿಗಳಂತೆ ವೇದಾಧಾರಿತವಲ್ಲ. ವೇದ ಪ್ರಾಮಾಣ್ಯ ಅಥವಾ ಅಪ್ರಾಮಾಣ್ಯದ ಬಗ್ಗೆ ಧಮ್ಮಪದದಲ್ಲಿ ಎಲ್ಲೂ ನೇರ ಪ್ರಸ್ತಾಪವಿಲ್ಲ. ಬುದ್ಧನ ನೈತಿಕ ಪರಿಕಲ್ಪನೆಯು ಶುದ್ಧವಿಚಾರವನ್ನು ಆಧರಿಸಿದ್ದು ಅದು ಪ್ರಾಯೋಗಿಕವೂ ಹೌದು. **ಧಮ್ಮಪದವು ಒಂದು ಪ್ರಾಯೋಗಿಕ ನೀತಿಶಾಸ್ತ್ರವನ್ನು (Practical Ethics) ವೈಚಾರಿಕತೆಯ ಚೌಕಟ್ಟಿನೊಳಗೆ ಎಲ್ಲರಿಗೂ ಅರ್ಥವಾಗುವಂತೆ ನಮ್ಮ ಮುಂದಿಡುತ್ತದೆ**.

ಮನುಷ್ಯನ ನೈತಿಕ ಜೀವನವು ಅರ್ಥಪೂರ್ಣವಾಗುವುದು ಇಚ್ಛಾಸ್ವಾತಂತ್ರ್ಯವಿದ್ದಾಗ ಮಾತ್ರ. ಹೊರಗಿನ ಒತ್ತಡ, ಭಯ ಅಥವಾ ಹೇರಿಕೆಯಿಂದ ನಡೆಸಲ್ಪಡುವ ಬದುಕು ಬದುಕೇ ಅಲ್ಲ. ಬುದ್ಧನ ಪ್ರಕಾರ ನೈತಿಕತೆಯು ಮನುಷ್ಯನ ಆಂತರಿಕತೆಯಿಂದ ಹೊರಹೊಮ್ಮುವುದೇ ಹೊರತು ಬಾಹ್ಯಹೇರಿಕೆಯಿಂದಲ್ಲ. ಉದಾಹರಣೆಗೆ ಸಂಘದವರು ಎಲ್ಲಿ ಹೊರಹಾಕುವರೋ ಎಂಬ ಭಯದಿಂದ ಬ್ರಹಚರ್ಯೆಯನ್ನು ಆಚರಿಸಬಾರದೆಂದು ಬುದ್ಧನು ಹೇಳುತ್ತಾನೆ. ಸ್ವಇಚ್ಛೆಯಿಂದ ವಿವೇಚನಾಪೂರ್ವಕವಾಗಿ ಮಾಡಲ್ಪಡುವ ಕೆಲಸವೇ ಮೌಲ್ಯಯುತವಾದದ್ದು. ಮನುಷ್ಯನಾಗಿ ಹುಟ್ಟಿದ ಮೇಲೆ ಅವನು ಪುಣ್ಯಕರ್ಮಗಳನ್ನು ಮಾಡಲು ಸಾಧ್ಯವುಂಟೆಂದು ಬುದ್ಧನು ಸಾರುವಾಗ ಆತನ ಪ್ರಕಾರ ಮನುಷ್ಯನು ತನ್ನ ಇಚ್ಛಾ ಸ್ವಾತಂತ್ರ್ಯವನ್ನು ಧನಾತ್ಮಕ ರೀತಿಯಲ್ಲಿ ಬಳಸಿಕೊಳ್ಳಲು ಸಾಧ್ಯವುಂಟೆಂದರ್ಥ. ಏಕೆಂದರೆ **ಅವನು ತನಗೆ ತಾನೇ ಒಡೆಯ. ಅವನಲ್ಲದೇ ಅವನಿಗೆ ಬೇರಾರೂ ಒಡೆಯನಾಗಲು ಸಾಧ್ಯವಿಲ್ಲ**. ಇಚ್ಛಾಸ್ವಾತಂತ್ರ್ಯವುಳ್ಳವನಾಗಿ ಅವನು ಒಳ್ಳೆಯದನ್ನೂ ಮಾಡಬಲ್ಲ, ಕೆಟ್ಟದನ್ನೂ ಮಾಡಬಲ್ಲ. ಒಳಿತು–ಕೆಡುಕುಗಳೆರಡೂ ಅವನಿಂದಲೇ ಹೊರಹೊಮ್ಮುವುದು. ಆದ್ದರಿಂದ ಈ ಎರಡಕ್ಕೂ ಆತನೇ ಹೊಣೆಗಾರ. ಬುದ್ಧನ ಪ್ರಕಾರ ಪಾಪದಿಂದ ತನಗೇನೂ ಕೆಟ್ಟದ್ದಾಗಲಿಲ್ಲ ಮತ್ತು ಪುಣ್ಯದಿಂದ ತನಗೇನೂ

ಒಳ್ಳೆಯದಾಗಲಿಲ್ಲವೆಂಬ ಭ್ರಮೆಯನ್ನು ಮನುಷ್ಯನು ತ್ಯಜಿಸಬೇಕು. ಏಕೆಂದರೆ ಯಾರೂ ಕರ್ಮಫಲದಿಂದ ತಪ್ಪಿಸಿಕೊಳ್ಳಲಾರರು. ಪಾಪವು ಮನುಷ್ಯನನ್ನು ಅಶುದ್ಧಗೊಳಿಸಿ ಪುಣ್ಯವು ಅವನನ್ನು ಶುದ್ಧಿಗೊಳಿಸುತ್ತದೆ. ಒಟ್ಟಾರೆ ಶುದ್ಧಿ–ಅಶುದ್ಧಿಗಳೆರಡೂ ಮನುಷ್ಯನಿಗೆ ಸೇರಿವೆಯೇ ಹೊರತು ಒಬ್ಬನು ಮತ್ತೊಬ್ಬನನ್ನು ಶುದ್ಧಗೊಳಿಸಲಾರ.

ಈ ನಿಟ್ಟಿನಲ್ಲಿ ಬುದ್ಧನು ಆತ್ಮವಿಮರ್ಶೆಗೆ ಪ್ರಾಧಾನ್ಯ ನೀಡುತ್ತಾನೆ. ಆತನ ಪ್ರಕಾರ ಇತರರನ್ನು ಟೀಕಿಸುವ ಮೊದಲು ಒಬ್ಬನು ತನ್ನನ್ನು ತಾನು ವಿಮರ್ಶಿಸಿಕೊಳ್ಳಬೇಕಲ್ಲದೆ ಎಷ್ಟೇ ಕೆಟ್ಟದಿದ್ದರೂ ಮತ್ತೊಬ್ಬರ ಕೃತ್ಯಗಳನ್ನು ಟೀಕಿಸಬಾರದು. ಹಾಗೆಯೇ ತಾನು ಶುದ್ಧನಾಗದೇ ಅಥವಾ ನಿರ್ವಾಣವನ್ನು ಹೊಂದದೇ ಸಮಾಜವನ್ನು ತಿದ್ದಬಾರದು. ಇತರರಿಗೆ ಬೋಧಿಸುವಲ್ಲೂ ಮನುಷ್ಯನು ಅರ್ಹತೆಯನ್ನು ಸಂಪಾದಿಸಿಕೊಳ್ಳಬೇಕು. ಉಪದೇಶಕ್ಕೆ ಅರ್ಹತೆ ಬರುವುದು, ಮೊದಲು ಮಾನವನು ಆ ಉಪದೇಶದಂತೆ ನಡೆದಾಗ ಮಾತ್ರ. ಕೃತಿಯ ಮೂಲಕ ಉಪದೇಶ ಬುದ್ಧನ ಸಂದೇಶ.

ಅಲ್ಲದೇ ಬುದ್ಧನೊಬ್ಬ ಪ್ರಾಯೋಗಿಕ ಚಿಂತಕ. ಆತನ ಪ್ರಕಾರ ಬುದ್ಧಿವಂತನಾದವನು ತನ್ನ ಆಧ್ಯಾತ್ಮಿಕ ಏಳಿಗೆಯನ್ನು ಕಂಡುಕೊಂಡ ನಂತರವೇ ಇತರರ ಬಗ್ಗೆ ಚಿಂತಿಸಬೇಕು. ತನ್ನ ಪ್ರಯೋಜನಕ್ಕೆ ಧಕ್ಕೆ ತಂದುಕೊಂಡು ಇತರರ ಪ್ರಯೋಜನದ ಬಗ್ಗೆ ತಲೆಕೆಡಿಸಿಕೊಳ್ಳುವವನು ಮೂರ್ಖ.

ಹರಟೆಯು ಅಪಾಯಕಾರಿ. ಬುದ್ಧನ ಪ್ರಕಾರ ಬಹಳ ಮಾತನಾಡುವವನು ಧರ್ಮಜ್ಞನಲ್ಲ. ಒಬ್ಬನು ಬೌದ್ಧಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿರಬಹುದು. ಆದರೆ ಅದರಂತೆ ಆಚರಿಸದಿದ್ದರೆ ಅವನು ಮೂರ್ಖನಾಗುತ್ತಾನೆ. ಸ್ವಲ್ಪವೇ ಅರಿತಿದ್ದರೂ ಅದರಂತೆ ನಡೆಯುವವನೇ ಧರ್ಮಜ್ಞ. ವ್ಯರ್ಥವಾದ ಸಾವಿರಾರು ಮಾತುಗಳಿಗಿಂತಲೂ ಒಂದೇ ಒಂದು

ಅರ್ಥಪೂರ್ಣ ಮಾತು ಅಥವಾ ಗಾಥೆಯನ್ನು ಕೇಳಿ ಅದರಂತೆ ನಡೆಯುವವನೇ ಉಪಶಾಂತ.

ಬಾಹ್ಯಾಲಂಕಾರದಿಂದ ಒಬ್ಬನು ಸಾಧುವೆನಿಸುವುದಿಲ್ಲ. ಕಾಷಾಯವನ್ನು ಧರಿಸಿ ಪಾಪ ಮಾಡುವ ಅನೇಕ ಅಸಂಯಮಿಗಳುಂಟೆಂದು ಬುದ್ಧನು ಸಾರುತ್ತಾನೆ. ಬೆತ್ತಲೆ ಚಲಿಸುವುದು, ಜಟೆಗಳನ್ನು ಬಿಡುವುದು, ಉಪವಾಸ ಮಾಡುವುದು, ಬರಿಯ ನೆಲದ ಮೇಲೆ ಮಲಗುವುದು – ಇವುಗಳು ಮನುಷ್ಯನನ್ನು ಶ್ರೇಷ್ಠವಾಗಿಸಲಾರದು. ಯಾರಿಗೆ ಕ್ಷಮೆ, ದಾಂತಿ, ಬ್ರಹ್ಮಚರ್ಯೆ, ಅಹಿಂಸೆಯೆಂಬ ಗುಣಗಳಿವೆಯೋ ಆತನು ಮಾತ್ರ ಶ್ರೇಷ್ಠ, ಶ್ರಮಣ, ಭಿಕ್ಷು ಅಥವಾ ಬ್ರಾಹ್ಮಣ.

ಎಲ್ಲ ಮೌಲ್ಯಗಳಿಗೂ ಮೂಲಭೂತ ಮೌಲ್ಯವೆಂದರೆ **ಅಹಿಂಸೆ**. ಅಹಿಂಸೆಯನ್ನು ಪಾಲಿಸದೇ ಇತರ ಮೌಲ್ಯಗಳನ್ನು ಎಷ್ಟೇ ಕಟ್ಟುನಿಟ್ಟಾಗಿ ಪಾಲಿಸಿದರೂ ಅದು ವ್ಯರ್ಥ. ಬುದ್ಧನ ಪ್ರಕಾರ ಪ್ರತಿಯೊಬ್ಬನಿಗೂ ಸಾವಿನ ಅಂಜಿಕೆಯಿದೆ. ಎಲ್ಲರಿಗೂ ಬದುಕಬೇಕೆಂಬ ಆಸೆ ಇರುತ್ತದೆ. ತನ್ನಂತೆ ಇತರರು ಎಂಬುದನ್ನು ಅರಿತು ಯಾರೂ ಯಾರನ್ನೂ ಕೊಲ್ಲಬಾರದು, ಕೊಲ್ಲಿಸಲೂಬಾರದು. ಮಾತಿನಿಂದ ಯಾರನ್ನೂ ನೋಯಿಸಬಾರದು. ಆತನ ಪ್ರಕಾರ ನಿರ್ದೋಷಿಗಳನ್ನು ದಂಡಿಸುವ ದೊರೆಗಂತೂ ಈ ಮಾತು ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಅಹಿಂಸೆಯ ಆಧಾರದ ಮೇಲೆಯೇ ಬುದ್ಧನು ಮನುಷ್ಯನ ಶ್ರೇಷ್ಠತೆಯನ್ನು ಅಳೆಯುವುದು. ಯಾವ ಪ್ರಾಣಿಯನ್ನೂ ದಂಡಿಸದಿರುವವನೇ ನಿಜವಾದ ಭಿಕ್ಷು, ಆರ್ಯ. ವೈರಕ್ಕೆ ಪ್ರತಿವೈರ ಸಲ್ಲದು. ಬುದ್ಧನ ಪ್ರಕಾರ ಅವೈರತ್ವವೇ **ಸನಾತನ ಧರ್ಮ**. ಇದು ಭಾವಾತ್ಮಕ ಪ್ರೀತಿಯಿಂದ ಮಾತ್ರ ಸಾಧ್ಯ. ಅಹಿಂಸಾವ್ಯಾಪ್ತಿಯಲ್ಲಿ ಪ್ರಾಣಿಗಳಿರಲಿ ಸಸ್ಯಗಳೂ ಬರುತ್ತವೆಂಬುದು ಇಲ್ಲಿ ಗಮನಾರ್ಹ. ಬುದ್ಧನ ಪ್ರಕಾರ ಜೀವಿಗಳಾದ್ದರಿಂದ ಮರಗಳನ್ನು ಕತ್ತರಿಸಬಾರದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸ್ಪರ್ಧಾಮನೋಭಾವವು ಸರಿಯಲ್ಲವೆಂಬುದು ಬುದ್ಧನ ಸಂದೇಶ.

ಏಕೆಂದರೆ ಸ್ಪರ್ಧೆಯಲ್ಲಿ ಒಬ್ಬನು ಸೋಲುತ್ತಾನೆ, ಮತ್ತೊಬ್ಬನು ಗೆಲ್ಲುತ್ತಾನೆ. ಸೋಲುಗೆಲುವುಗಳಲ್ಲಿ ಗೆದ್ದವನು ಸೋತವನನ್ನು ಹೀನದೃಷ್ಟಿಯಿಂದ ನೋಡಿ, ಅವನಲ್ಲಿ ಹೀನತ್ವಬೀಜದ ಸಂಕೀರ್ಣತೆಯನ್ನು ಬಿತ್ತುತ್ತಾನೆ. ತಾನು ಹೆಚ್ಚಿನವನೆಂದು ತೋರಿಸಿಕೊಳ್ಳುವ ಮೂಲಕ ಇತರರಲ್ಲಿ ಹೀನಭಾವವನ್ನು ಬಿತ್ತುತ್ತಾನೆ.

ಮನುಷ್ಯನು ವೈರವನ್ನು ವೈರಕ್ಕೆ ಮೂಲ ಪ್ರೇರಣೆಗಳಾದ ಸಿಟ್ಟು, ಅಭಿಮಾನಗಳನ್ನು ತೊರೆಯಬೇಕು. ಕ್ರೋಧವನ್ನು **ಸಹನೆ**ಯಿಂದ ಗೆಲ್ಲಬೇಕು. ಇದಕ್ಕೆ ಅಗಾಧವಾದ ಸಂಕಲ್ಪ ಶಕ್ತಿಯು ಅಗತ್ಯ. ಈ ಸಂದರ್ಭದಲ್ಲಿ ಅಸೂಯಾಪರರಿಗೆ ಒಂದು ಸಂದೇಶವಿದೆ. ಅನ್ನಪಾನಗಳ ವಿಷಯಗಳಲ್ಲಿ ಇನ್ನೊಬ್ಬರ ಬಗ್ಗೆ ಅಸೂಯೆಪಡುವವನು ಸುಖಿಯಲ್ಲ. ಮನುಷ್ಯನು ರಾಗದ್ವೇಷಗಳನ್ನು ತೊರೆದು **ಶಾಂತಿತಿತಿಕ್ಷೆ**ಗಳೆಂಬ ಗುಣಗಳನ್ನು ಬೆಳೆಸಿಕೊಳ್ಳಬೇಕು. ಮನುಷ್ಯನಿಗೆ ಸೌಂದರ್ಯವು ಬರುವುದು ಆಂತರಿಕವಾಗಿ. ಬಾಹ್ಯಸೌಂದರ್ಯವು ಸೌಂದರ್ಯವಲ್ಲ. ವ್ಯಕ್ತಿಯು ಹೊರಗೆ ಎಷ್ಟೇ ಸುಂದರನಾಗಿದ್ದು ಒಳಗೆ ಅಸೂಯಾಪರನಾಗಿದ್ದರೆ ಅವನು ಸುಂದರನಲ್ಲ. ಸೌಂದರ್ಯವು ಒಂದು ಆಂತರಿಕ ಪರಿಕಲ್ಪನೆಯೆಂಬ ಧ್ವನಿ ಬುದ್ಧನ ಉಪದೇಶದಲ್ಲಿದೆ.

ಬುದ್ಧನು ಧಮ್ಮವನ್ನು ಬಿಟ್ಟು ಸುಳ್ಳನ್ನಾಡುವ ಮನುಷ್ಯನನ್ನು ಪ್ರಾಣಿಯೆಂದು ಹೀಗೆಳೆಯುತ್ತಾನೆ. ಆತನ ಪ್ರಕಾರ ಸುಳ್ಳುಗಾರನಿಗೆ ಮಾಡಲು ಉಳಿದಿರುವ ಪಾಪವೇ ಇಲ್ಲ. ಆದರೆ ಶಾಂತಿಮಾರ್ಗದ ಮೂಲಕ ಆತನ ಮನಸ್ಸನ್ನು ಪರಿವರ್ತಿಸಲು ಸಾಧ್ಯವುಂಟು.

ಬುದ್ಧನ ಪ್ರಕಾರ **ದಾನ**ವೆಂಬುದು ಮತ್ತೊಂದು ನೈತಿಕ ಮೌಲ್ಯ. ಜಿಪುಣನನ್ನು ದಾನದಿಂದ ಗೆಲ್ಲಬೇಕು ಎನ್ನುವಾಗ ದಾನದ ಮೂಲಕ ಜಿಪುಣನಲ್ಲಿ ಮಾರ್ಪಾಟು ತರಬಹುದೆಂದರ್ಥ. ಬುದ್ಧನು ದಾನವನ್ನು ಬೋಧಿಸುವಲ್ಲಿ ಪ್ರಾಯೋಗಿಕನೂ ಹೌದು.

ದಾನವನ್ನು ಸ್ವಇಚ್ಛೆಯಿಂದ, ಪ್ರೀತಿಯಿಂದ, ಸಂತೋಷದಿಂದ ನೀಡಬೇಕು. ಹೊರಗಿನ ಒತ್ತಡದಿಂದ ನೀಡಬಾರದು. ನಮ್ಮ ಬಳಿಯಿರುವ ಸ್ವಲ್ಪವನ್ನೇ ನೀಡಬೇಕು. ನಮ್ಮ ಯೋಗ್ಯತೆಗೆ ಮೀರಿ ದಾನ ಮಾಡುವುದು ಸರಿಯಲ್ಲ. ಪರಹಿಂಸೆ ಎಷ್ಟು ತಪ್ಪೋ ತನ್ನನ್ನು ಹಿಂಸಿಸಿಕೊಂಡು ದಾನ ಮಾಡುವುದೂ ಅಷ್ಟೇ ತಪ್ಪು. ಎಲ್ಲ ದಾನಗಳಿಗಿಂತಲೂ ಶ್ರೇಷ್ಠವಾದುದು ಧಮ್ಮ ದಾನ. ಎಂದರೆ ಯಾವುದು ಧಮ್ಮ ಮತ್ತು ಯಾವುದು ಅಧಮ್ಮ ಎಂಬುದನ್ನು ಜನರಿಗೆ ತಿಳಿಸುವುದು ಶ್ರೇಷ್ಠವಾದ ದಾನ.

ದಾನವೆಂಬುದು ಎಷ್ಟು ಮುಖ್ಯವೋ **ಅಪರಿಗ್ರಹವೂ** ಎಂದರೆ ಮತ್ತೊಬ್ಬರಿಂದ ಅನಗತ್ಯವಾಗಿ ಸ್ವೀಕರಿಸದಿರುವುದೂ ಅಷ್ಟೇ ಮುಖ್ಯ. ಬುದ್ಧನ ಪ್ರಕಾರ ಬದುಕಿನ ನಿರ್ವಹಣೆಗೆ ಬೇಕಾದುದಷ್ಟನ್ನು ಮಾತ್ರ ಒಬ್ಬನು ಸ್ವೀಕರಿಸಬೇಕು. ದುಶ್ಶೀಲನಿಂದ ಅನ್ನವನ್ನು ಸ್ವೀಕರಿಸಲೇಬಾರದು.

**ಕೌಟುಂಬಿಕ ಮೌಲ್ಯ**ಗಳಲ್ಲಿ ತಂದೆತಾಯಿಗಳ ಸೇವೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಪ್ರತಿನಿತ್ಯವೂ ವೃದ್ಧರ ಸೇವೆಯನ್ನು ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ತಂದೆತಾಯಿಗಳ ಸೇವೆ ಮತ್ತು ಸಮಾಜದಲ್ಲಿ ಸ್ನೇಹ ಸಹಕಾರಗಳಿಗೆ ಧಮ್ಮಪದವು ಆದ್ಯತೆಯನ್ನು ನೀಡುತ್ತದೆ.

ಮೋಕ್ಷವು ಪ್ರಾಪ್ಯವಲ್ಲವೆಂಬ ಬುದ್ಧನ ನಿಲುವು ಮೇಲ್ನೋಟಕ್ಕೆ ಮೋಕ್ಷವನ್ನು ಕುರಿತಂತೆ ಅದ್ವೈತದ ನಿಲುವನ್ನು ಹೋಲುವುದಾದರೂ ಅಪ್ರಾಪ್ಯತೆಯ ಅರ್ಥವು ಇವರೀರ್ವರಲ್ಲಿ ಬೇರೆಯಾಗಿದೆ. ಬುದ್ಧನ ಪ್ರಕಾರ ಅಪ್ರಾಪ್ಯತೆಯೆಂದರೆ ನಿರ್ವಾಣವನ್ನು ಸಾಧಿಸುವುದು ಅಷ್ಟು ಸುಲಭವಲ್ಲವೆಂದರ್ಥ. ಆದರೆ ಅದ್ವೈತದ ಪ್ರಕಾರ ಅಪ್ರಾಪ್ಯತೆಯೆಂದರೆ ಮೋಕ್ಷವು ಹೊಸದಾಗಿ ಹೊಂದುವಂತಹ ಸ್ಥಿತಿಯಲ್ಲವೆಂದರ್ಥ. ಏಕೆಂದರೆ ಅದ್ವೈತಿಯ ಪ್ರಕಾರ ಮೋಕ್ಷದ ವಸ್ತು ಆತ್ಮವಷ್ಟೆ. ಮೂಲತಃ ನಾವೇ ಆಗಿರುವ ವಸ್ತುವನ್ನು ನಾವು ಹೊಸದಾಗಿ ಹೊಂದುತ್ತೇವೆಂದು

ಹೇಳುವುದು ಹಾಸ್ಯಾಸ್ಪದ. ಮೋಕ್ಷದಲ್ಲಿ ನಾವಾಗಿರದ ಯಾವುದೋ ಒಂದು ವಸ್ತುವನ್ನು ನಾವು ಹೊಸದಾಗಿ ಹೊಂದುವುದಿಲ್ಲ. ಮೋಕ್ಷವೆಂದರೆ ಅವಿದ್ಯೆಯ ನಾಶವೆಂದರ್ಥ. ಆತ್ಮವನ್ನು ಕುರಿತ ಅವಿದ್ಯೆಯು ನಾಶವಾದಾಗ ಈಗಾಗಲೇ ಸಿದ್ಧವಾಗಿರುವ ಆತ್ಮದ ಸ್ವರೂಪವು ಪ್ರಕಟವಾಗುತ್ತದೆ. ಬುದ್ಧನಾದರೋ ಆತ್ಮವೇ ಮುಂತಾದ ಯಾವ ತಾತ್ತ್ವಿಕ ಚರ್ಚೆಗೂ ಹೋಗದೇ ನಿರ್ವಾಣವನ್ನು ಸಾಧಿಸುವುದು ಸುಲಭವಲ್ಲವೆಂದಷ್ಟೇ ಹೇಳುತ್ತಾನೆ. ಆತನ ಪ್ರಕಾರ ನಿರ್ವಾಣವು ಅಪ್ರಾಪ್ಯವೆಂಬುದರ ಅರ್ಥ ಇದೇ. ನಿರ್ವಾಣಕ್ಕೆ **ಯೋಗಕ್ಷೇಮ** ಮತ್ತು **ಅನುತ್ತರ**ವೆಂಬ ಎರಡು ವಿಶೇಷಣಗಳನ್ನು ನೀಡಲಾಗಿದೆ. ಯೋಗಕ್ಷೇಮವೆಂದರೆ ಮಂಗಳಕರವೆಂದರ್ಥ. ಅನುತ್ತರವೆಂದರೆ ಮಿಗಿಲಿಲ್ಲದ್ದು ಎಂದರ್ಥ. ಬುದ್ಧನ ಪ್ರಕಾರ ಮೋಕ್ಷಸಾಧನೆಯು ಯಾವ ಬಾಹ್ಯ ಅಂಶದಿಂದಲೂ ನಿರ್ಧಾರಿತವಾಗಿಲ್ಲ. ಮೋಕ್ಷವು ದೇವರಾಗಲೀ, ಗುರುವಾಗಲೀ – ಈ ಯಾವುದೇ ಹೊರಗಿನ ಅಂಶವನ್ನು ಅವಲಂಬಿಸಿಲ್ಲ. ನಮ್ಮ ಮೋಕ್ಷವನ್ನು ನಾವೇ ಕಂಡುಕೊಳ್ಳಬೇಕು. ಈಗ ನಮ್ಮ ಬಳಿಯಿಲ್ಲದ ನಿರ್ವಾಣವನ್ನು ನಮ್ಮ ಪ್ರಯತ್ನದಿಂದ ನಾವೇ ಸಾಧಿಸಿಕೊಳ್ಳುವುದು ಯೋಗ. ಅದು ನಮ್ಮಲ್ಲಿ ಸ್ಥಿರವಾಗಿರುವಂತೆ ನೋಡಿಕೊಳ್ಳುವುದೇ ಕ್ಷೇಮ.

ನಿರ್ವಾಣ ಪ್ರಾಪ್ತಿಗೆ ಮನುಷ್ಯನು ಆಶುಭಾನುಪಶ್ಯನಾಗಿರಬೇಕು. ಎಂದರೆ ಅವನಿಗೆ ದೇಹದಲ್ಲಿ ತುಚ್ಛ ಬುದ್ಧಿ ಬರಬೇಕು. ದೇಹವು ಶಾಶ್ವತವೆಂದು ತಿಳಿದು ಅಳತೆ ಮೀರಿ ಊಟ ಮಾಡುವ ಸೋಮಾರಿಗೆ ಭವಿಷ್ಯವಿಲ್ಲವೆಂಬುದು ಬುದ್ಧನ ಸಂದೇಶ. ಆದರೆ ನಿರ್ವಾಣ ಸಾಧನೆಗೆ ಉಪಯುಕ್ತವಾಗುವಷ್ಟರ ಮಟ್ಟಿಗೆ ಆಹಾರವು ಅಗತ್ಯವೆಂದು ಬುದ್ಧನ ಇಂಗಿತ. ಬುದ್ಧನೆಂದಿಗೂ ಉಪವಾಸವನ್ನು ಉತ್ತೇಜಿಸಲಿಲ್ಲ. ಯಾವುದು ಮನುಷ್ಯನ ಬದುಕಿಗೆ ಉಪಯುಕ್ತವೋ – ಅದು ಭೌತಿಕ, ಮಾನಸಿಕ, ಆಧ್ಯಾತ್ಮಿಕ ಹಂತದಲ್ಲಿರಲಿ ಅದೇ ಮೌಲ್ಯ.

ಆಧ್ಯಾತ್ಮಿಕ ಬದುಕಿನಲ್ಲಿ ಬುದ್ಧನು **ಭೌತಿಕ ಮೌಲ್ಯ**ಗಳನ್ನು ಕಡೆಗಣಿಸುವುದಿಲ್ಲ. ಆಧ್ಯಾತ್ಮಿಕ ಸಾಧನೆಗೆ ಅಗತ್ಯವಾದುದರ ಮಟ್ಟಿಗೆ ಈ **ಭೌತಿಕ ಮೌಲ್ಯ**ಗಳ ಸಂಪಾದನೆಯನ್ನು ವಿಧಿಸಲಾಗಿದೆ. ಆದರೆ ಊಟ ನಿದ್ರೆ ಭೋಗಗಳಲ್ಲಿ ಸಾಧಕನು ಮಿತವಾಗಿರಬೇಕು. ಬುದ್ಧನೆಂದಿಗೂ ಹಣ ಸಂಪಾದನೆಯನ್ನು ತಿರಸ್ಕರಿಸಲಿಲ್ಲ. ಮೌಲ್ಯಗಳ ಚೌಕಟ್ಟಿನಲ್ಲಿ ಧಮ್ಮ ಮತ್ತು ನಿರ್ವಾಣಗಳು ಎಷ್ಟು ಪ್ರಮುಖವೋ ಅರ್ಥ ಕಾಮಗಳು ಅಷ್ಟೇ ಮುಖ್ಯ. ಈ ಅರ್ಥ ಕಾಮಗಳನ್ನು ಧಮ್ಮದಿಂದ ಸಂಪಾದಿಸಬೇಕೆಂದು ಬುದ್ಧನು ನಮಗೆ ನೆನಪಿಸುತ್ತಾನೆ. ಆತನ ಪ್ರಕಾರ ಬ್ರಹ್ಮಚರ್ಯವನ್ನು ಮಾಡದೇ ಮತ್ತು ಯೌವ್ವನದಲ್ಲಿ ಹಣವನ್ನು ಸಂಪಾದಿಸದೇ ಇರುವವರು ಮೀನುಗಳಿಲ್ಲದ ಕೊಳದಲ್ಲಿರುವ ಮುದಿ ಬಕಗಳಂತೆ. ಆದರೆ ಒಂದು ವಿಷಯವಂತೂ ಸ್ಪಷ್ಟ. ಅರ್ಥ ಕಾಮಗಳು ಧಮ್ಮದಿಂದ ನಿಯಂತ್ರಿತವಾಗಿರಬೇಕು. ಧಮ್ಮವಿಲ್ಲದ ಈ ಮೌಲ್ಯಗಳಿಂದ ಮನುಷ್ಯನಿಗೆ ಸುಖವಿಲ್ಲ. ಚಿನ್ನದ ಮಳೆಯೇ ಸುರಿದರೂ ಮನುಷ್ಯನಿಗೆ ತೃಪ್ತಿಯಿಲ್ಲ. ಕಾಮತೃಪ್ತಿಯು ತಾತ್ಕಾಲಿಕವಾದುದು. ಮನುಷ್ಯನಿಗೆ ಹಣವು ಅವನ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುವಷ್ಟು ಮಾತ್ರ ಸಂಪಾದಿಸಲ್ಪಡಬೇಕು. ಈ ಮಿತಿಯ ಆಚೆ ಹಣಕ್ಕೆ ಯಾವ ಮೌಲ್ಯವೂ ಇಲ್ಲ. ಆದ್ದರಿಂದ ಬುದ್ಧನು ಲೋಭವನ್ನು ತುಚ್ಛವಾಗಿ ಕಾಣುತ್ತಾನೆ. ವಿಶೇಷವೆಂದರೆ ಬುದ್ಧನು ತನ್ನ ಉಪದೇಶಗಳಲ್ಲಿ ಎಷ್ಟು ಪ್ರಾಯೋಗಿಕನಾಗಿದ್ದನೆಂದರೆ ಆತನು ಮೌಲ್ಯಗಳ ಆಯ್ಕೆಯ ಹಿನ್ನೆಲೆಯಲ್ಲಿರುವ ತತ್ತ್ವವನ್ನು ನಮ್ಮ ಮುಂದಿಟ್ಟನು. ಆತನ ಪ್ರಕಾರ ನಾವು ಸಣ್ಣ ಸುಖವನ್ನು ಬಿಟ್ಟು ಹೆಚ್ಚಿನ ಸುಖವನ್ನು ಆಯ್ದುಕೊಳ್ಳಬೇಕಾಗುತ್ತದೆ. ಈ ಹೆಚ್ಚಿನ ಸುಖವೇ ನಿರ್ವಾಣ.

**ಇಂದ್ರಿಯನಿಗ್ರಹ** ಮತ್ತು **ಮನೋನಿಗ್ರಹಕ್ಕೆ** ವಿಶೇಷವಾದ ಒತ್ತನ್ನು ನೀಡಲಾಗಿದೆ. ಮನುಷ್ಯನು ಯುದ್ಧದಲ್ಲಿ ಸಾವಿರಾರು ಮಂದಿಯನ್ನು ಜಯಿಸುವುದಕ್ಕಿಂತಲೂ ತನ್ನನ್ನು ತಾನು ಜಯಿಸುವುದು ಉತ್ತಮ. ಆತ್ಮನಿಗ್ರಹವಿರುವವನೇ ಶ್ರೇಷ್ಠ. ಆತನಿಗೆ ನಿರ್ವಾಣವು

ಹತ್ತಿರವಾಗಿರುತ್ತದೆ. ನಾವು ಮಾಡುವ ಯಾವುದೇ ಕೆಲಸಕ್ಕೆ ಮನಸ್ಸೇ ಮುಂದಾಳು. ಎಲ್ಲ ಧರ್ಮಗಳಿಗೂ ಮನಸ್ಸೇ ಒಡೆಯ. ಮನುಷ್ಯನ ಸುಖದುಃಖಗಳು ಮನುಷ್ಯನ ಮನಸ್ಸನ್ನು ಅವಲಂಬಿಸಿವೆ. ಮನಸ್ಸನ್ನು ನಿಗ್ರಹಿಸಿದವನನ್ನು ಮೇಧಾವಿ ಎಂದು ಕರೆಯಲಾಗಿದೆ. ಬುದ್ಧನ ಪ್ರಕಾರ ಮನಸ್ಸಿಗೆ ಚಲನಶಕ್ತಿಯಿದೆ. ಈ ಚಲನಶೀಲಚಿತ್ತವನ್ನು ನಿಯಂತ್ರಿಸುವುದು ಮನುಷ್ಯನಿಗೆ ಒಂದು ದೊಡ್ಡ ಸವಾಲೇ ಸರಿ. ತಾನಿರುವ ಸ್ಥಳದಿಂದಲೇ ಬೇರೆಲ್ಲೋ ಇರುವ ವಸ್ತುಗಳನ್ನು ಮನುಷ್ಯನು ತಿಳಿಯಲು ಕಾರಣ ಮನಸ್ಸಿನ ಈ ಚಲನಶಕ್ತಿ. ಆದ್ದರಿಂದಲೇ ಧಮ್ಮಪದವು ಮನಸ್ಸನ್ನು "ದೂರಕ್ಕೆ ಹೋಗಬಲ್ಲ, ತಾನೊಂದೇ ಸಂಚರಿಸಬಲ್ಲ ಮತ್ತು ಯಾವ ಶರೀರವೂ ಇಲ್ಲದ" ಎಂದು ವರ್ಣಿಸುತ್ತದೆ.

ಮನೋನಿಗ್ರಹಕ್ಕೆ ಮನುಷ್ಯನು **ಅಪ್ರಮಾದ**ವೆಂಬ ಮೌಲ್ಯವನ್ನು ಬೆಳೆಸಿಕೊಳ್ಳಬೇಕು. ಅಪ್ರಮಾದವೆಂದರೆ ಎಚ್ಚರಿಕೆಯಿಂದಿರುವುದೆಂದರ್ಥ. ಕೆಟ್ಟಮಾರ್ಗಕ್ಕೆ ಬೀಳದಂತೆ ಧಮ್ಮಮಾರ್ಗದಲ್ಲೇ ಸತತವಾಗಿ ನಡೆಯಲು ಎಚ್ಚರವಹಿಸುವುದೇ ಅಪ್ರಮಾದ. ಈ ಅಪ್ರಮಾದದ ಬಗ್ಗೆ ಧಮ್ಮಪದದಲ್ಲಿ ಒಂದು ಅಧ್ಯಾಯವೇ ಮೀಸಲಾಗಿದೆ. ಮನಸ್ಸನ್ನು ಎತ್ತಲೋ ಬಿಟ್ಟು ವ್ಯವಹರಿಸುವುದು ಪ್ರಮಾದ. ಅಪ್ರಮಾದಿಯು ಸ್ಮೃತಿವಂತನಾಗಿರುತ್ತಾನೆ. ವಸ್ತುಸ್ಥಿತಿಯ ಸರಿಯಾದ ತಿಳುವಳಿಕೆಯೇ **ಸ್ಮೃತಿ**. ಈ ಸ್ಮೃತಿಯು ಕಾಯಗತ, ಬುದ್ಧಗತ, ಧರ್ಮಗತ ಮತ್ತು ಸಂಘಗತ ಎಂದು ನಾಲ್ಕು ರೀತಿಯದು. ಶರೀರದ ಕ್ಷಣಿಕತೆಯನ್ನು ತಿಳಿಯುವುದು **ಕಾಯಗತ ಸ್ಮೃತಿ**. ಬುದ್ಧನ ಕಲ್ಯಾಣಗುಣಗಳನ್ನು ಸ್ಮರಿಸುವುದು **ಬುದ್ಧಗತ ಸ್ಮೃತಿ**. ಬೌದ್ಧಧರ್ಮದ ಸತ್ವವನ್ನು ಅರಿತುಕೊಳ್ಳುವುದು **ಧರ್ಮಗತ ಸ್ಮೃತಿ**. ಸಂಘದ ಉತ್ತಮ ಗುಣಗಳನ್ನು ಸ್ಮರಿಸಿಕೊಳ್ಳುವುದು **ಸಂಘಗತ ಸ್ಮೃತಿ**.

ಮನುಷ್ಯನ ಒಂಟಿತನಕ್ಕೆ, ಕೆಡುಕಿಗೆ ಕಾರಣ ಅವಿದ್ಯೆ. ಅಶಾಶ್ವತವಾದುದನ್ನು ಶಾಶ್ವತವೆಂದು ತಪ್ಪು ತಿಳಿಯುವುದೇ ಅವಿದ್ಯೆ. ಸರ್ವದುಃಖಗಳಿಗೂ ಮೂಲ ಕಾರಣ ಅವಿದ್ಯೆ ಎಂಬುದನ್ನು ಸುಭಾಷಿತದ ರೂಪದಲ್ಲಿ ಒತ್ತಿ ನುಡಿಯಲಾಗಿದೆ. ಎಲ್ಲ ಮಲಗಳಿಗಿಂತಲೂ ದೊಡ್ಡ ಮಲವೆಂದರೆ ಅವಿದ್ಯೆ. ಬದುಕನ್ನು ಕಾಡುವ ಅತ್ಯಂತ ದೊಡ್ಡ ಸಮಸ್ಯೆಯೆಂದರೆ ಸಾವು. ಈ ಸಾವೆಂಬ ವಾಸ್ತವತೆಯ ಅರಿವೇ ಬುದ್ಧನನ್ನು ಬದುಕಿನ ರಹಸ್ಯವನ್ನು ಭೇದಿಸಲು ಪ್ರಚೋದಿಸಿದ್ದು.

ಬುದ್ಧನ ಪ್ರಕಾರ ಸಂಸಾರವು ನಶ್ವರವೆಂಬ ವಾಸ್ತವತೆಯನ್ನು ಅರಿಯದಿರುವುದು ಮಾನವ ಬದುಕಿನ ದುರಂತ. ಮನುಷ್ಯನು ಅವಿವೇಕಿಯಾದರೂ ತಾನು ಪಂಡಿತನೆಂದು ಭ್ರಮಿಸುತ್ತಾನೆ. ಅವನಿಗೆ ತನ್ನ ಅಜ್ಞಾನದ ಅರಿವು ಇರುವುದಿಲ್ಲ. ತನಗೆ ಹೆಂಡತಿ ಮಕ್ಕಳು ಹಣವಿರುವುದೆಂಬ ಮಿಥ್ಯಾರಕ್ಷಣಾಭಾವವು ಅವನಲ್ಲಿರುತ್ತದೆ. ಆದರೆ ವಾಸ್ತವವಾಗಿ ಯಾವುದರಲ್ಲಿ ಅವನು ಸುಖವನ್ನು ಅರಸುವನೋ ಮತ್ತು ಯಾರು ತನ್ನನ್ನು ಪ್ರೀತಿಸುವರೆಂದು ಅವನು ತಿಳಿಯುತ್ತಾನೋ ಅವರೇ ಅವನನ್ನು ಏಕಾಂಗಿಗಳನ್ನಾಗಿ ಎಂದರೆ ಪರಾವಲಂಬಿಗಳನ್ನಾಗಿ ಮಾಡುವುದು. ತಾನೇ ತನಗಿಲ್ಲ, ಇನ್ನೆಲ್ಲಿಯ ಮಕ್ಕಳು ಬಂಧುಗಳೆಂದು ಬುದ್ಧನು ಪ್ರಶ್ನಿಸುತ್ತಾನೆ. ಆದ್ದರಿಂದ ಮನುಷ್ಯನು ತಾನು ತನ್ನದೆಂಬ ಅಭಿಮಾನವನ್ನು ನಿರ್ದಾಕ್ಷಿಣ್ಯವಾಗಿ ಕಿತ್ತೊಗೆಯಬೇಕು. ಬಂಧು ಬಾಂಧವರು ತನಗಿರುವರೆಂಬ ಭಾವನೆ ಒಂದು ಭ್ರಮೆ. ಬುದ್ಧನ ಪ್ರಕಾರ ನಾವು ನಮ್ಮ ಜೀವನವನ್ನು ಬದುಕಿನ ನಶ್ವರತೆಯ ಅರಿವಿನಲ್ಲಿ ನಡೆಸಬೇಕು. ನಮ್ಮ ಬದುಕಿನ ಮೌಲ್ಯಮಾಪನವು ಆಗುವುದು ನಾವು ಸತ್ತ ನಂತರವೇ.

ಅವಿದ್ಯೆಯು ತೃಷ್ಣೆಗೆ ಎಡೆಮಾಡಿಕೊಡುತ್ತದೆ. ತೃಷ್ಣೆಯ ಅಪಾಯವನ್ನು ಒತ್ತಿ ನುಡಿಯುವಲ್ಲಿ ಬುದ್ಧನು ಒಬ್ಬ ಅದ್ಭುತ ಮನೋವಿಜ್ಞಾನಿಯಾಗಿದ್ದನು. ಮಾನವ ವ್ಯಕ್ತಿತ್ವವನ್ನು

ಅದ್ಭುತವಾಗಿ ವಿಶ್ಲೇಷಿಸಿದ ಆತನು ಮಾನವನಲ್ಲಿ ಮನೆಮಾಡಿಕೊಂಡಿರುವ ಅಲ್ಪ ಭಾವನೆಗಳನ್ನು ಎತ್ತಿ ತೋರಿಸಿದನು. ಆದರೆ ತೃಷ್ಣೆಯ ನಾಶ ಅಷ್ಟು ಸುಲಭವಲ್ಲ. ಮನುಷ್ಯನು ಅದನ್ನು ಗೆಲ್ಲಲು ಎಷ್ಟೇ ಪ್ರಯತ್ನಿಸಿದರೂ ಅದು ಪುನಃ ಬೇರೊಂದು ರೂಪದಲ್ಲಿ ಕಾಣಿಸುತ್ತಲೇ ಇರುತ್ತದೆ.

ತೃಷ್ಣೆಯ ತೃಪ್ತಿಗೆ ಮನುಷ್ಯನು ಕರ್ಮವನ್ನು ಆಚರಿಸುತ್ತಾ, ದುಃಖವನ್ನು ಅನುಭವಿಸುತ್ತಾನೆ. ಪಾಪಕರ್ಮವನ್ನು ಕೃಷ್ಣಧರ್ಮವೆಂದು ಮತ್ತು ಪುಣ್ಯವನ್ನು ಶುಕ್ಲಧರ್ಮವೆಂದು ಕರೆಯುತ್ತಾರೆ. ಇಲ್ಲಿ ಕೃಷ್ಣಧರ್ಮವು ತ್ಯಾಜ್ಯವಾಗಿ ಶುಕ್ಲಧರ್ಮವು ಸ್ವೀಕೃತವಾಗುತ್ತದೆ. ಬುದ್ಧನ ಪ್ರಕಾರ ಬುದ್ಧ, ಧಮ್ಮ, ಸಂಘಗಳೆಂಬ ರತ್ನತ್ರಯವನ್ನು ಮೊರೆಹೋಗುವ, ಚತುರಾರ್ಯ ಸತ್ಯಗಳನ್ನು ಕಂಡುಕೊಳ್ಳುವ ಮತ್ತು ಆರ್ಯ ಅಷ್ಟಾಂಗಿಕ ಮಾರ್ಗವನ್ನು ಪಾಲಿಸುವ ವ್ಯಕ್ತಿಗೆ ಮಾತ್ರ ದುಃಖವು ನಾಶವಾಗುತ್ತದೆ.

ಅವಿದ್ಯೆಯ ನಾಶಕ್ಕೆ ಮದ್ದು ವೈರಾಗ್ಯ. ಪ್ರಪಂಚವನ್ನು ತೊರೆದು ಓಡಿ ಹೋಗುವುದೇ ವೈರಾಗ್ಯವಲ್ಲ. ಹಾಗೆ ಪ್ರಪಂಚವನ್ನು ಬಿಟ್ಟು ಒಬ್ಬನು ಬದುಕಲು ಸಾಧ್ಯವಿಲ್ಲ. ವೈರಾಗ್ಯವೆಂದರೆ ಪ್ರಪಂಚದಲ್ಲಿದ್ದು ಅದಕ್ಕೆ ಅಂಟಿಕೊಳ್ಳದಿರುವುದು. ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ ಎಂದು ತಿಳಿದು ವ್ಯವಹರಿಸುವುದೇ ವೈರಾಗ್ಯ. ನಶ್ವರತೆಯ ಅರಿವು ಮನುಷ್ಯನಲ್ಲಿ ಸಹಜವಾಗಿಯೇ ವೈರಾಗ್ಯವನ್ನು ಮೂಡಿಸುತ್ತದೆ. ಈ ಅರಿವಿನಿಂದಲೇ, ಈ ವಾಸ್ತವತೆಯ ಭಯದಿಂದಲೇ ಅವನು ಪುಣ್ಯಕರ್ಮಗಳನ್ನು ಮಾಡುವುದು. ಹೀಗೆ ವೈರಾಗ್ಯವು ಪ್ರಜ್ಞೆ ಅಥವಾ ವಿವೇಕದಿಂದ ಉಗಮವಾಗುತ್ತದೆ.

ಬುದ್ಧನು ಬದುಕಿನ ಕಪ್ಪು ಛಾಯೆಯನ್ನು ಎತ್ತಿ ತೋರಿಸುವನಾದರೂ ಆತನ ನಿಲುವು ನಿರಾಶಾವಾದದಲ್ಲೇ ಅಂತ್ಯಗೊಳ್ಳುವುದಿಲ್ಲ. ಆತನು ಕತ್ತಲೆಯಲ್ಲೇ ಬೆಳಕನ್ನು ಅರಸಲು ನಮಗೆ

ಬೋಧಿಸುತ್ತಾನೆ. ಪಾಪವನ್ನೇ ಜೇನೆಂದು ಬಯಸುವ ಮೂರ್ಖನ ಬಗ್ಗೆ ಬುದ್ಧನಿಗೆ ವಿಷಾದವಿದೆ. ಇಂತಹ ತಿಳಿಗೇಡಿಯು ತನಗೆ ಯೋಗ್ಯತೆ ಇಲ್ಲದಿದ್ದರೂ ತಾನು ಮಾಡಿದ್ದೇ ಸರಿಯೆಂಬ ಮನ್ನಣೆಯನ್ನು ಜನರಿಂದ ನಿರೀಕ್ಷಿಸುತ್ತಾನೆ.

ಬುದ್ಧನ ಪ್ರಕಾರ ಯಾರು ತನಗೇನೂ ತಿಳಿಯದೆಂದು ತಿಳಿದಿರುವನೋ ಅವನೇ ಪಂಡಿತ, ಸಾತ್ತ್ವಿಕ. ಅವನ ಸಾತ್ತ್ವಿಕತೆಯ ಪರಿಮಳವು ಎಲ್ಲೆಲ್ಲೂ ಪಸರಿಸುತ್ತದೆ. ತಾನು ಪಂಡಿತನೆಂದುಕೊಳ್ಳುವವನು ತಿಳಿಗೇಡಿ. ಬುದ್ಧನ ಈ ನಿಲುವು ಕೇನೋಪನಿಷತ್ತಿನಲ್ಲಿ ಮತ್ತು ಸಾಕ್ರಟೀಸನ ಹೇಳಿಕೆಯಲ್ಲೂ ಕಂಡು ಬರುತ್ತದೆ. ಇಂತಹ ಸತ್ಪುರುಷನ ಅಥವಾ ಪಂಡಿತನ ಸಹವಾಸವು ಜೀವನದಲ್ಲಿ ಮುಖ್ಯ. ಆದರೆ ತಿಳಿಗೇಡಿಯಾದವನು ಪಂಡಿತರ ಸಂಸರ್ಗದಲ್ಲಿದ್ದರೂ ಅವರ ಪ್ರಭಾವವು ಅವನಿಗೆ ಸ್ವಲ್ಪವೂ ಬರುವುದಿಲ್ಲ.

ಧರ್ಮಸ್ಥನ ಚಿತ್ತವು ಪ್ರಸನ್ನತೆಯಿಂದ ಕೂಡಿರುತ್ತದೆ. ಗಾಳಿಗೆದುರಾಗುವ ದೊಡ್ಡ ಬಂಡೆಯಂತೆ ಆತನು ನಿಂದನೆ ಹೊಗಳಿಕೆಗಳಿಗೆ ಸುಖದುಃಖಗಳಿಗೆ ವಿಚಲಿತನಾಗದೇ ಇರುತ್ತಾನೆ. ಆತನು ತನಗೋಸ್ಕರ ಏನನ್ನೂ ಬಯಸುವುದಿಲ್ಲ. ಆತನ ಮಾತಿನಲ್ಲಿ ಸ್ವಾರ್ಥತೆಯಿರುವುದಿಲ್ಲ. ಅವನು ಯಾವುದೇ ವಿಷಯವನ್ನು ಕುರಿತು ಅದು ಹೀಗೆಯೇ ಎಂದು ತಕ್ಷಣವೇ ತೀರ್ಮಾನಿಸಿ ಬಿಡುವುದಿಲ್ಲ. ವಿಷಯದ ಬಗ್ಗೆ ಆತನು ತನ್ನ ತೀರ್ಮಾನವನ್ನು ತಡೆಹಿಡಿಯುತ್ತಾನೆ.. ಇತರರನ್ನು ತಿದ್ದುವಾಗ ಒತ್ತಾಯ ಮಾಡದೇ ಭಯದ ಹೇರಿಕೆಯಿಲ್ಲದೇ ಉಪಾಯವಾಗಿ, ನಯವಾಗಿ ತಿದ್ದುವುದು ಸತ್ಪುರುಷನ ಮತ್ತೊಂದು ಲಕ್ಷಣ. ಇದು ಅವನ ಸಾಮಾಜಿಕ ಕಳಕಳಿಯನ್ನು ಸೂಚಿಸುತ್ತದೆ. ಈ ವಿಷಯದಲ್ಲೇ ಡಾ.ಅಂಬೇಡ್ಕರ್‌ರವರು ಬುದ್ಧನನ್ನು ಮಾರ್ಕ್ಸ್‌ಗಿಂತಲೂ ಅತ್ಯುನ್ನತ ಸ್ಥಾನದಲ್ಲಿರಿಸುವುದು. ಅವರ ಪ್ರಕಾರ ಬುದ್ಧನು ಬದಲಾವಣೆಯನ್ನು ಎತ್ತಿಹಿಡಿದನಾದರೂ ಈ ಬದಲಾವಣೆಯು ಮಾರ್ಕ್ಸಗೆ ವಿರುದ್ಧವಾಗಿ

ಹಿಂಸೆಒತ್ತಾಯಗಳಿಂದ ಹೇರಲ್ಪಟ್ಟುದ್ದಾಗಿರಲಿಲ್ಲ. ಏನೇ ಮಾಡಿದರೂ ಮನುಷ್ಯನು ಅದನ್ನು ಸ್ವಇಚ್ಛೆಯಿಂದ ಮಾಡುವಂತಿರಬೇಕೇ ಹೊರತು ಹೊರಗಿನ ಅಧಿಕಾರದಿಂದಾಗಲೀ ಹೇರಿಕೆಯಿಂದಾಗಲೀ ಮಾಡಬಾರದೆಂಬುದು ಬುದ್ಧನ ನಿಲುವಾಗಿತ್ತು. ಆತನ ವಿಧಾನ ಜನರ ಸ್ವಭಾವವನ್ನು ಆಂತರಿಕವಾಗಿ ಬದಲಾಯಿಸುವುದಾಗಿತ್ತೇ ಹೊರತು ಅವರನ್ನು ಒತ್ತಡಕ್ಕೆ ಸಿಲುಕಿಸುವುದಾಗಿರಲಿಲ್ಲ. ಸ್ವಇಚ್ಛೆಯಿಂದ ಮೌಲ್ಯಗಳ ಪಾಲನೆ ಧಮ್ಮವಾದರೆ ಹೇರಿಕೆಯಿಂದಾಗಿ ಮೌಲ್ಯಗಳನ್ನು ಪಾಲಿಸುವುದು ಅಧಮ್ಮ.

ಸತ್ಪುರುಷನು ಶ್ರಮಣನೆನಿಸುತ್ತಾನೆ. ಶ್ರಮಣನು ಕಾಷಾಯ ವಸ್ತ್ರವನ್ನು ಧರಿಸಿರುತ್ತಾನೆ. ಆದರೆ ರಾಗದ್ವೇಷಾದಿಗಳನ್ನು ಹೊರಹಾಕದೇ ಈ ವಸ್ತ್ರವನ್ನು ಧರಿಸಲು ಯೋಗ್ಯನಲ್ಲ. ಶಾಂತಿ, ದಾಂತಿ, ಅಹಿಂಸೆಗಳನ್ನು ಪಾಲಿಸುವವನೇ ನಿಜವಾದ ಭಿಕ್ಷು, ಶ್ರಮಣ, ಅರಿಹಂತ. ಬುದ್ಧನ ಪ್ರಕಾರ ಕೇವಲ ಬಾಹ್ಯಲಕ್ಷಣಗಳಿಂದ ಒಬ್ಬನು ಶ್ರಮಣನಲ್ಲ. ಸುಳ್ಳಾಡುವವನು ಮತ್ತು ಇಚ್ಛಾಲೋಭಗಳಿಂದ ಕೂಡಿರುವವನು ಕೇವಲ ಕೇಶಮಂಡನದಿಂದ ಶ್ರಮಣನೆನಿಸುವುದಿಲ್ಲ. ಎಲ್ಲ ಪಾಪಗಳನ್ನೂ ಶಮನ ಮಾಡಿಕೊಂಡಿರುವವನೇ ಶ್ರಮಣ. ಬೇರೆ ನಿಯಮಗಳನ್ನು ಅನುಸರಿಸಿದರೂ ಮತ್ತೊಬ್ಬರನ್ನು ಹಿಂಸಿಸುವುದರಿಂದ ಒಬ್ಬನು ಭಿಕ್ಷುವಾಗಲಾರ. ಭಿಕ್ಷುಜೀವನಕ್ಕೆ ಅಹಿಂಸಾಪಾಲನೆ ಬಹಳ ಮುಖ್ಯ. ಅವನು ಇನ್ನೊಬ್ಬರ ಹಿಂಸೆಯನ್ನು ಸಹಿಸಿಕೊಳ್ಳುವನೇ ಹೊರತು ಮತ್ತೊಬ್ಬನನ್ನು ಹಿಂಸಿಸುವುದಿಲ್ಲ. ಭಿಕ್ಷುವಿಗೆ ಮನಸ್ಸು ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳ ನಿಗ್ರಹವಿರುತ್ತದೆ. ಆತನ ಮಾತಿನಲ್ಲಿ ಸಂಯಮವಿದೆ, ಮೃದುತ್ವವಿದೆ. ಆತನು ಮತ್ತೊಬ್ಬರ ವಸ್ತುಗಳಿಗೆ ಆಸೆಪಡುವುದಿಲ್ಲ. ತನಗೆ ದೊರಕಿದ್ದಷ್ಟರಲ್ಲೇ ತೃಪ್ತನಾಗಿರುತ್ತಾನೆ. ಆತನಿಗೆ ನಾನು ನನ್ನದು ಎಂಬ ಮಮಕಾರವಿಲ್ಲ, ಎಲ್ಲರಲ್ಲೂ ಮೈತ್ರಿ ಭಾವನೆ ಇರುತ್ತದೆ. ಸೋಮಾರಿಯಲ್ಲದ ಆತನಲ್ಲಿ ಸತ್ಕಾರಬುದ್ಧಿ ಇರುತ್ತದೆ. ಹಾಗೆಯೇ ಸ್ಕಂದಗಳ ಹುಟ್ಟು ನಾಶಗಳ ರಹಸ್ಯದ ಅರಿವೂ ಆತನಿಗಿರುತ್ತದೆ. ಈತನನ್ನು ಅರಿಹಂತ, ಸಮ್ಯಕ್ ಸಂಬುದ್ಧ, ಬುದ್ಧನೆಂದು

ಅನೇಕ ವಿಧವಾಗಿ ಕರೆಯುವರು. ಈತನು ತನ್ನ ಸಾಧನೆಗಳನ್ನೆಲ್ಲಾ ಮುಗಿಸಿರುತ್ತಾನೆ. ಈತನಿಗೆ ಯಾವ ಶೋಕವೂ ಇಲ್ಲ. ಎಲ್ಲ ಬಗೆಯ ಅಡಚಣೆಗಳಿಂದಲೂ ಮುಕ್ತನಾಗಿ ಅವನು ಸಂಸಾರದ ಸರ್ವಗ್ರಂಥಗಳನ್ನೂ, ಸಂಧಿಗಳನ್ನೂ ಕತ್ತರಿಸಿರುತ್ತಾನೆ. ಆತನಿರುವ ಪರಿಸರಕ್ಕೆ ಒಂದು ಸೌಂದರ್ಯವು ಬರುತ್ತದೆ. ಪರಿಸರಕ್ಕೆ ಸೌಂದರ್ಯವು ಅರಿಹಂತನ ಸಾನ್ನಿಧ್ಯದಿಂದ ಬರುತ್ತದೆಂಬ ವಿಶೇಷ ನಿಲುವನ್ನು ಧಮ್ಮಪದದಲ್ಲಿ ನಾವು ಕಾಣುತ್ತೇವೆ. ಪರಿಸರಕ್ಕೆ ಸೌಂದರ್ಯದ ಆಂತರಿಕ ಮುದ್ರೆಯುಂಟಾಗುವುದು ಅರ್ಹಂತರ ಸಾನ್ನಿಧ್ಯದಿಂದ ಮಾತ್ರ. ಪರಿಸರದ ಸಮತೋಲನವು ನಿಂತಿರುವುದು, ಪರಿಸರಕ್ಕೆ ದಿವ್ಯತೆಯು ಬರುವುದು ನಮ್ಮ ಆಧ್ಯಾತ್ಮಿಕ ಸಾಧನೆಯಿಂದ ಎಂಬ ಧ್ವನಿ ಇಲ್ಲಿದೆ. ನಮ್ಮೆಲ್ಲಾ ಪರಿಸರದ ಸಮಸ್ಯೆಗಳಿಗೂ ಧಮ್ಮಪದವು ಪರಿಹಾರ ನೀಡುತ್ತದೆ. ಬುದ್ಧನು ಹೀಗೆ ಹೇಳುತ್ತಾನೆ, "ಊರಿನಲ್ಲಾಗಲೀ, ಕಾಡಿನಲ್ಲಾಗಲೀ, ತಗ್ಗಿನಲ್ಲಾಗಲೀ, ತಿಟ್ಟಿನಲ್ಲಾಗಲೀ ಎಲ್ಲಿ ಅರಿಹಂತರು ಓಡಾಡುತ್ತಿರುವರೋ ಆ ಭೂಮಿಯೇ ರಮಣೀಯ".

ಒಮ್ಮೆ ಮುಕ್ತನಾದ ಇವನಿಗೆ ಪುನಃ ಬಂಧನವಿಲ್ಲ. ಆತನು ಚಿನ್ನದ ನಾಣ್ಯದಂತೆ ಪರಿಶುದ್ಧನಾಗಿರುತ್ತಾನೆ. ಅಂಜದಿರುವಿಕೆಯು ಅವನ ಲಕ್ಷಣ. ಬೌದ್ಧಗ್ರಂಥಗಳನ್ನು ಚೆನ್ನಾಗಿ ವಿವರಿಸಿ ಹೇಳಬಲ್ಲ ನಿಪುಣನಾದ ಆತನು ಅಂತಿಮ ಶರೀರನೂ ಮತ್ತು ಮಹಾಪ್ರಾಜ್ಞನೆನಿಸುವನು.

ಧಮ್ಮಪದದಲ್ಲಿ ಸ್ತ್ರೀಯರ ಸ್ಥಾನಮಾನ ಮತ್ತು ಶಿಕ್ಷಣ ಪದ್ಧತಿಗಳ ಬಗ್ಗೆ ವಿಸ್ತಾರವಾದ ವಿವರಣೆ ಇಲ್ಲದಿದ್ದರೂ, ಬುದ್ಧನು ಜಾತ್ಯಾತೀತ ಆದರ್ಶಗಳನ್ನು ಪ್ರತಿಪಾದಿಸಿದನಾದರೂ ಬ್ರಾಹ್ಮಣಶಬ್ದವನ್ನು ಪದೇ ಪದೇ ಪ್ರಯೋಗಿಸುವುದು ಗಮನಾರ್ಹವಾದುದು. ಆದರೆ ಆತನ ಪ್ರಕಾರ ಒಬ್ಬನು ಹುಟ್ಟಿನಲ್ಲಿ ಬ್ರಾಹ್ಮಣನಲ್ಲ. ಬ್ರಾಹ್ಮಣತ್ವವೆಂದರೆ ಮನುಷ್ಯನು ತಲುಪಬೇಕಾದ

ಒಂದು ಆತ್ಯಂತಿಕ ಆದರ್ಶ. ನಿರ್ವಾಣವನ್ನು ಹೊಂದಿದ ಅರಿಹಂತನೇ ಬ್ರಾಹ್ಮಣ. ವಾಸ್ತವವಾಗಿ ಧಮ್ಮಪದದ ಇಡೀ ಕೊನೆಯ ಅಧ್ಯಾಯವನ್ನು ಬ್ರಾಹ್ಮಣವಗ್ಗವೆಂದೇ ಕರೆಯುವುದು. ಬುದ್ಧನ ಪ್ರಕಾರ ಬ್ರಾಹ್ಮಣನು ಅತಿಯಾದ ಭೋಗ ಮತ್ತು ಅತಿಯಾದ ದೇಹದಂಡನೆಗಳೆಂಬ ಎರಡು ಅತಿರೇಕಗಳಿಂದ ದೂರವಾಗಿರುತ್ತಾನೆ. ಆತ್ಮನಿಗ್ರಹ ಮತ್ತು ನಿರ್ವಾಣ ಸಾಕ್ಷಾತ್ಕಾರಗಳು ಬ್ರಾಹ್ಮಣನ ಲಕ್ಷಣ.

ಬ್ರಾಹ್ಮಣನಲ್ಲಿ ವೈರಾಗ್ಯವಿರುತ್ತದೆ. ಹಿಂಸಿಸಬೇಕೆಂಬ ಮಾನಸಿಕ ಪ್ರವೃತ್ತಿ ಇರುವುದಿಲ್ಲ. ಆತನ ತ್ರಿಕರಣಗಳು ಹತೋಟಿಯಲ್ಲಿರುತ್ತದೆ. ಇಂತಹ ಬ್ರಾಹ್ಮಣನಿಂದಲೇ ಸಂಯಕ್ ಸಂಬುದ್ಧನು ಉಪದೇಶಿಸಿರುವ ಧಮ್ಮವನ್ನು ತಿಳಿದುಕೊಳ್ಳಬೇಕು. ಒಬ್ಬನು ಜಟೆ, ಕೃಷ್ಣಾಜಿನಗಳೇ ಮುಂತಾದ ಬಾಹ್ಯ ಲಾಂಛನದಿಂದ ಬ್ರಾಹ್ಮಣನಲ್ಲವೆಂದು ಬುದ್ಧನು ಘಂಟಾಘೋಷವಾಗಿ ಸಾರುತ್ತಾನೆ. ಒಬ್ಬನು ಬ್ರಾಹ್ಮಣ ಯೋನಿಯಲ್ಲಿ ಹುಟ್ಟಿದ ಮಾತ್ರಕ್ಕೆ ಬ್ರಾಹ್ಮಣನೆನಿಸುವುದಿಲ್ಲ. ಏಕೆಂದರೆ ಅವನಲ್ಲಿ ರಾಗಾದಿ ಮಲಗಳು ತುಂಬಿರುತ್ತವೆ. ಯಾರಿಗೆ ತನ್ನದೆಂಬುದು ಇಲ್ಲವೋ ಮತ್ತು ಮತ್ತೊಬ್ಬರು ಕೊಡದಿರುವ ಏನನ್ನೂ ತೆಗೆದುಕೊಳ್ಳುವ ಇಚ್ಛೆಯಿಲ್ಲವೋ ಅವನೇ ನಿಜವಾದ ಬ್ರಾಹ್ಮಣ. ಅವನಿಗೆ ಯಾವುದರ ಭಯವೂ ಇರುವುದಿಲ್ಲ. ಆತನಲ್ಲಿ ಕ್ಷಮಾಗುಣವಿರುತ್ತದೆ. ಪ್ರತೀಕಾರದ ಮನೋಭಾವವಿರುವುದಿಲ್ಲ. ಆತನಿಗೆ ತೃಷ್ಣೆಕಾಮಗಳಿರುವುದಿಲ್ಲ. ಆತನು ನುಡಿಯುವ ಸತ್ಯದಲ್ಲಿ ಒರಟುತನವಿರುವುದಿಲ್ಲ. ಮಾತಿನಲ್ಲಿ ಯಾರಿಗೂ ಅವನು ಹಿಂಸಿಸುವುದಿಲ್ಲ. ನಿಜವಾದ ಬ್ರಾಹ್ಮಣನು ಜೀವನ್ಮುಕ್ತನಾಗಿರುತ್ತಾನೆ. ಚರಾಚರ ಪ್ರಾಣಿಗಳಲ್ಲಿ ಯಾವುದನ್ನು ಕೊಲ್ಲದೇ ಮತ್ತು ಕೊಲ್ಲಿಸದೇ ಇರುವವನೇ ಬ್ರಾಹ್ಮಣ. ಅವನು ವಿರೋಧಿಗಳಲ್ಲಿ ವಿರೋಧವಿಲ್ಲದೇ, ವಿಷಯಾಸಕ್ತರ ಮಧ್ಯದಲ್ಲಿ ಆಸಕ್ತಿಯಿಲ್ಲದಿರುವವನಾಗಿರುತ್ತಾನೆ. ತತ್ತ್ವವನ್ನು ಬಲ್ಲವನಾದ್ದರಿಂದ ಆತನು ಯಾರೊಡನೆಯೂ ವಾದಕ್ಕಿಳಿಯುವುದಿಲ್ಲ. ಆತನು ಎಲ್ಲ ಮಲಗಳಿಂದಲೂ, ಕ್ಲೇಶಗಳಿಂದಲೂ ಮುಕ್ತನಾಗಿರುತ್ತಾನೆ.

ಒಟ್ಟಾರೆ ಬುದ್ಧನು ಧಮ್ಮಪದದಲ್ಲಿ ಬ್ರಾಹ್ಮಣ ಶಬ್ದವನ್ನು ಪ್ರಯೋಗಿಸಿದರೂ ಶ್ರೇಣೀಕೃತ ಸಮಾಜಕ್ಕೆ ಕಾರಣವಾದ ಜಾತಿಯ ಅರ್ಥದಲ್ಲಿ ಆತನು ಈ ಶಬ್ದವನ್ನು ಪ್ರಯೋಗಿಸುವುದಿಲ್ಲ. ಆತನ ಪ್ರಕಾರ ಬ್ರಾಹ್ಮಣನೆಂದರೆ ಅರ್ಹಂತ, ಬುದ್ಧ, ಸುಗತ, ಜ್ಞಾನಿ ಮತ್ತು ನೈತಿಕ ಪರಿಪೂರ್ಣತೆಯನ್ನು ಸಾಧಿಸಿದವನೆಂದರ್ಥ. ಈ ಸಾತ್ವಿಕ ಅರ್ಥವನ್ನು ಹೊರತುಪಡಿಸಿ ಬ್ರಾಹ್ಮಣಶಬ್ದಕ್ಕೆ ಧಮ್ಮಪದದಲ್ಲಿ ಇನ್ನಾವ ಅರ್ಥವೂ ಇಲ್ಲ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಬುದ್ಧಿಭಾವಗಳ ಅದ್ಭುತ ಸಮನ್ವಯದ ಪ್ರತೀಕವಾದ ಬುದ್ಧನ ಧಮ್ಮಪದದಲ್ಲಿ ಆಧ್ಯಾತ್ಮಿಕ ವೈರಾಗ್ಯ, ಉದಾತ್ತ ಆದರ್ಶ ಮತ್ತು ಮನುಕುಲವನ್ನು ಕುರಿತ ಕಳಕಳಿ – ಈ ಮೂರು ಅಂಶಗಳ ಸಮನ್ವಯವೇ ಎದ್ದು ಕಾಣುವುದು. ಅಸಮಾನತೆ, ರಾಗದ್ವೇಷಗಳಿಂದ ಕೂಡಿದ ಇಂದಿನ ಯುಗದಲ್ಲಿ ಧಮ್ಮಪದದಲ್ಲಿ ಪ್ರತಿಪಾದಿತವಾಗಿರುವ ಸಾರ್ವತ್ರಿಕ ಮೌಲ್ಯಗಳು ಬಹಳ ಪ್ರಸ್ತುತವಾಗಿವೆ. ಧಮ್ಮಪದವು ಸುಲಭವಾಗಿ ಆಚರಿಸಬಹುದಾದ ಮೌಲ್ಯಗಳನ್ನು ನಮ್ಮ ಮುಂದಿಡುತ್ತದೆ. ಅನಂತರದ ಬೌದ್ಧಧರ್ಮದಲ್ಲಿ ಕಾಣಬರುವ ತರ್ಕವಿತರ್ಕಗಳಾಗಲೀ, ಪೂರ್ವಪಕ್ಷ – ಸಿದ್ಧಾಂತಗಳಾಗಲೀ, ಅನ್ಯಮತಗಳ ಖಂಡನೆಯಾಗಲೀ ಧಮ್ಮಪದದಲ್ಲಿ ನಮಗೆ  ಕಾಣಸಿಗುವುದಿಲ್ಲ. ಇಲ್ಲಿ ಯಾವುದೇ ನಿರ್ದಿಷ್ಟ ಪಂಥ ಅಥವಾ ಧರ್ಮದ ಬಗ್ಗೆ ಟೀಕೆಯಿಲ್ಲ. ದೇವರ ಪ್ರಸ್ತಾಪವಿಲ್ಲದಿರುವುದರಿಂದ ಈ ಗ್ರಂಥವು ನಾಸ್ತಿಕನಿಂದ ಹಿಡಿದು ಆಸ್ತಿಕರವರೆಗೆ, ವಿದ್ವಾಂಸರಿಂದ ಹಿಡಿದು ಜನಸಾಮಾನ್ಯರವರೆಗೆ, ಶ್ರಮಣರಿಂದ ಹಿಡಿದು ಶ್ರಾವಕರವರೆಗೆ, ಬೌದ್ಧಧರ್ಮೀಯರಿಂದ ಹಿಡಿದು ಬೌದ್ಧಧರ್ಮೇತರ ವ್ಯಕ್ತಿಗಳವರೆಗೆ ಎಲ್ಲರಿಗೂ ಮಾನ್ಯವಾಗಿದೆ. ಈ ಗ್ರಂಥದ ಮೇಲಿರುವ ನೂರಾರು ಅನುವಾದ ವ್ಯಾಖ್ಯಾನಗಳೇ ಇದರ ಜನಪ್ರಿಯತೆಗೆ ಸಾಕ್ಷಿ.

# ಗ್ರಂಥಋಣ

## ಗ್ರಂಥಋಣ

### ಕನ್ನಡ ಗ್ರಂಥಗಳು


1. ಅನೀಶ್ ಬೋಧ್ : **ಬುದ್ಧರ ಗಾಥಾ ಪ್ರಸಂಗಗಳು ಸಂಪುಟ–1 ಮತ್ತು 2** ಬುದ್ಧವಚನ ಟ್ರಸ್ಟ್, ಬೆಂಗಳೂರು, ಜುಲೈ, 2009

2. ಪ್ರೊ. ಎ.ಡಿ.ಕೃಷ್ಣಯ್ಯ (ಅನು) : **ಬುದ್ಧ ಮತ್ತು ಆತನ ಧಮ್ಮ** ಪ್ರಸಾರಾಂಗ, ಮೈಸೂರು, 2006

3. ಡಾ.ಎಚ್.ಎಲ್.ಚಂದ್ರಶೇಖರ : **ದರ್ಶನಲೋಕ** ಭಾರತೀ ಪ್ರಕಾಶನ, ಮೈಸೂರು, 2010

4. ಡಾ.ಎಚ್.ಎಲ್.ಚಂದ್ರಶೇಖರ : **ತತ್ತ್ವಮಂಥನ** ನಿಶಾಂತ್ ಎಂಟರ್‌ಪ್ರೈಸಸ್ ಮೈಸೂರು, 2013

5. ಮೂಲ: ಜ್ಞಾನತಿಲೋಕ ಮಹಾಥೇರ ಅನು: ಕೆ.ಬಿ.ಚಿಕ್ಕನಾರಾಯಣಪ್ಪ : **ಬುದ್ಧವಾಣಿ** ಮಹಾಬೋಧಿ ಸೊಸೈಟಿ, ಬೆಂಗಳೂರು 2004

6. ದೇಜಗೌ (ಸಂ) : **ಪ್ರೊ.ಜಿ.ಹನುಮಂತರಾವ್ ಅವರ ಆಯ್ದ ಲೇಖನಗಳು** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2010

7. ಡಾ.ದೇವಿಪ್ರಸಾದ ಚಟ್ಟೋಪಾಧ್ಯಾಯ : **ಭಾರತೀಯ ದರ್ಶನಗಳು** ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ. ಬೆಂಗಳೂರು

8. ವೈ.ಬಿ.ನಂದನ : **ಬುದ್ಧ ಧಮ್ಮ ಸಾಹಿತ್ಯ ಪರಿಚಯ** ಬುದ್ಧ ವಚನ ಟ್ರಸ್ಟ್, ಬೆಂಗಳೂರು, 2004

9. ವೈ.ಬಿ.ನಂದನ : **ಬುದ್ಧಚರಿತೆ ಮತ್ತು ಧಮ್ಮಸಾರ** ಮಹಾಬೋಧಿ ಸೊಸೈಟಿ, ಬೆಂಗಳೂರು 2004

10. ವೈ.ಬಿ.ನಂದನ : **ಬೌದ್ಧ ನಿತ್ಯಾಚರಣೆಗಳು**
ಮಹಾಬೋಧಿ ಸೊಸೈಟಿ, ಬೆಂಗಳೂರು
2000

11. ಎಸ್.ವಿ.ಪರಮೇಶ್ವರ ಭಟ್ಟ : **ಕನ್ನಡ ಬುದ್ಧ ಚರಿತೆ**
ಶಾರದಾ ಛಾಪಖಾನೆ,
ಮಂಗಳೂರು, 1974

12. ಪ್ರೊ.ಎಂ.ಮರಿಸ್ವಾಮಿ : **ಜೀವನ ಕಲೆ ಸಂಕ್ಷಿಪ್ತ ಧಮ್ಮಪದ**
ವಿಜಯಲಕ್ಷ್ಮೀ ಪ್ರಕಾಶನ, ಮೈಸೂರು.

13. ಡಾ.ಮೂಡ್ನಾಕೂಡು ಚಿನ್ನಸ್ವಾಮಿ : **ಮರಳಿ ಮನೆಗೆ**
ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ
ಮತ್ತು
ವಿಸ್ತರಣಾ ಕೇಂದ್ರ, ಮೈಸೂರು, 2006

14. ಮೊಳಕಾಲ್ಮೂರು ಶ್ರೀನಿವಾಸಮೂರ್ತಿ : **ಬೌದ್ಧಧರ್ಮದ ಮೂಲ ಭೋಧನೆಗಳು**
ಬುದ್ಧವಚನ ಟ್ರಸ್ಟ್, ಬೆಂಗಳೂರು, 2008

15. ಸಿ.ಎಚ್.ರಾಜಶೇಖರ್ : **ಬುದ್ಧ ತನ್ನ ತಾಗೆದ್ದವನೇ ಸಂಗ್ರಾಮ ವಿಜೀತನೆಂದ ಮತ್ತು ಇತರರು ಬೆಳಕಿನ ಕಥೆಗಳು**
ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು,
2010

16. ಸಿ.ಎಚ್.ರಾಜಶೇಖರ : **ಯುದ್ಧ ಮತ್ತು ಪ್ರಜ್ಞೆ**
ಸೌಮ್ಯಶ್ರೀ ಪ್ರಕಾಶನ, ಬೆಂಗಳೂರು,
2012

17. ಡಾ.ರಾಜಾನಂದಮೂರ್ತಿ : **ಬೌದ್ಧ ಸಂಸ್ಕೃತಿ ಮತ್ತು ಮೌಲ್ಯಗಳು**
ಮಹಾಬೋಧಿ ಸೊಸೈಟಿ, ಬೆಂಗಳೂರು,
2004

18. ಬಿ.ವಿ.ರಾಜಾರಾಂ (ಅನು) : **ಧಮ್ಮಪದ**
ಮಹಾಬೋಧಿ ಸೊಸೈಟಿ, ಬೆಂಗಳೂರು,
2004

19. ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ : **ಶಿಶುನಾಳ ಶರೀಫ ಸಾಹೇಬರ ಗೀತೆಗಳು**
ಕ್ಷಮಾ ಪ್ರಕಾಶನ, ಬೆಂಗಳೂರು,

20. ವಿಜಯ ಮಹೇಶ : **ಬೌದ್ಧಧಮ್ಮ ಸ್ವೀಕರಿಸಿದ್ದು ಯಾಕೆ?**
ಪ್ರಬುದ್ಧ ಪ್ರಕಾಶನ, ಮೈಸೂರು, 2012

21. ಡಾ.ವಿದ್ವಾನ್ ಅನಂತ ನಾಗೇಂದ್ರಭಟ್ಟ : **ಭಾರತೀಯ ತತ್ತ್ವಶಾಸ್ತ್ರ**
ತಳಗವಾದಿ ಪ್ರಕಾಶನ, ಮೈಸೂರು
2006

22. ಸ್ವಾಮಿ ಆದಿದೇವಾನಂದ : **ಶ್ರೀಮದ್ಭಗವದ್ಗೀತಾ**
ಶ್ರೀರಾಮಕೃಷ್ಣ ಆಶ್ರಮ
ಮೈಸೂರು, 2001

23. ಸಂಪಾದಿತ : **ಸುಭಾಷಿತ ಮಂಜರೀ**
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು, 2005

24. ಡಾ.ಕೆ.ಶ್ರೀಧಮ್ಮಾನಂದ : **ಯಾವುದು ಈ ಧಮ್ಮ?**
ಮಹಾಬೋಧಿ ಸೊಸೈಟಿ, ಬೆಂಗಳೂರು,
2006

25. ಎಂ.ಹಿರಿಯಣ್ಣ : **ಭಾರತೀಯ ತತ್ತ್ವಶಾಸ್ತ್ರದ ಮೂಲಾಂಶಗಳು**
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
1971

## ಆಂಗ್ಲ ಗ್ರಂಥಗಳು


26. Venerable Sri Acharya Buddharakkhita : **Dhammapada**
Buddha Vacana Trust
Bangalore, 1986

27. Dr.B.R.Ambedkar : **The Buddha and His Dhamma**
Buddha Bhoomi Publication
Nagpur, 1997

28. Ananda K Coomaraswamy And I B Horner : **The Living Thoughts of Gowthama Buddha**
Rupa Company
New Delhi, 2003

29. Dr. H.L.Chandrashekara : **Shri Annamacharya A Philosophical Study**
Vidya Shankara Prakashana
Mysore, 1990

30. S.Dhammika : **A Guide to Buddhism A to Z**
The Buddha Dhamma Mandala Society
Singapore, 2007

31. Sir Edwin Arnold : **Light of Asia**
Buddhist Cultural Centre
Dehiwala, Srilanka, 1998

32. Swami Gambhirananda (Tr.) : **Eight Upanisads (Vol. I, II)**
Advaita Ashrama
Kolkata, 2008

33. J.Graf (Tr.) : **The Dhammapada**
American Mission Press
Rangoon, 1881

34. Prof. Hari Narake : **Dr. Babasaheb Ambedkar: Writing and Speeches Vol.3**
Dr.Ambedkar Foundation
Ministry of Justice and

Empowerment
Govt. of India, New Delhi, 2014

35. Henry Thomas And Dana Lee Thomas : **Living Biographies of Great Philosophers** Bharatiya Vidya Bhavan Bombay, 1993

36. M.Hiriyanna : **Indian Conception of Values** Kavyalaya Publishers Mysore, 1975

37. M.Hiriyanna : **Outlines of Indian Philosophy** George Allen and Unwin Private Limited Bombay, 1976

38. Iring Babbitt (Tr.) : **The Dhammapada** Oxford University Press New York, 1965

39. K.N.Jayatilleke : **Dhamma Man and Law** Buddhist Cultural Centre Dehiwala, Srilanka, 2000

40. Khantipalo (Tr.) : **The Dhammapada** Buddha Educational Trust Taiwan, 1962

41. Ven. Dr. Kotawila Sri Pemaloka Thera : **The Buddha As in Early Buddhism** Aloka Buddhist Center Singapore, 2006

42. C.Kunchan Raja (Tr.) : **The Dhammapada** Theosophical Publishing House, Adyar, 1956

43. P.Lal (Tr. From Pali) : **The Dhammapada** Farrar Straus and Giroux New York, 1967

44. Max Muller (Tr.) : **The Dhammapada**
Motilal Banarasidass, Delhi
1965

45. Mukunda Rao : **The Buddha**
Harper Collins Publishers
Noida, India, 2017

46. K.R.Norman : **The Word of the Doctrine (Dhammapada)**
The Pali Text Society
Oxford, 2004

47. Pandharinath H. Prabhu : **Hindu Social Organization**
Popular Prakashan,
Bombay, 1961

48. Swami Prabhavananda : **The Spiritual Heritage of Inida**
Sri Ramakrishna Math
Madras, 1977

49. S.Radhakrishnan : **The Dhammapada**
Oxford University Press,
Madras, 1977

50. Radhakrishnan : **Indian Philosophy (Vol. I)**
George Allen And Unwin
Ltd., London, 1958

51. Richard Livingstone : **Some Tasks for Education**
Oxford University Press
London, 1959

52. Captain T.Roggens R.E (Tr.) : **The Dhammapada**
Alok Publication,
New Delhi, 1977

53. Satischandra Chatterjee And Dhirendramohan Datta : **An Introduction to Indian Philosophy**
Rupa Publications India Pvt.
Ltd., New Delhi, 2012

54.K.R.Sreenivasa Iyengar : **The Metaphysics of Value (Vol.I)**
University of Mysore
1942

55.Dr.G.Srinivasan : **Recent Trends in Western Philosophy**
The Bangalore Printing And Publishing Co., Ltd.,
Bangalore, 1981

56.Stephen Batchelor (Tr.) : **A Guide to the Bodhisattava's Way of Life**
The Library of Tibetan Works and Archives,
Dharamsala, New Delhi,
2012

57. H.G.Wells : **The Outline of History**
Cassel and Company Ltd.
London, 1956

58.William S. Sahakian : **History of Philosophy**
Barnes and Noble
New York, 1968

## Journal

Theresa Der-lan Yeh, ***The Way to Peace: A Buddhist Perspective***, International Journal of Peace Studies, Volume 11, Number 1, Spring/ Summer 2006

## Journals from Website

1. Bhikku Bodhi, ***The Living Message of the Dhammapada***, https://www.accesstoinsight.org/lib/authors/bodhi/bl129.html
2. Colin Dale, Middle Way, ***Which Dhammapada?*** (Volume 68:4 p. 215) February 1994 http://www.andrew may.com/ zendynamics/ dhammapada.html

3. L.Duncan M.Derrett, ***The Epistle of James and the Dhammapada Commentary***, https://journals.lub.lu.se/STK/article/download/6585/5676
4. Jan Willis, ***Buddhism and Peace***, www.g6bpeoplessummit.org
5. L.Lisa Kemmerer, ***Buddhist Ethics: Compassion for All***, February 2009, https://www.all-creatures.org/articles/an-tpr-buddhist.html
6. Sylvia Swain, ***Dhammapada Studies***, https://beingtrulyhuman.org/articles /8-dhammapada-studies

***************